ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬುಲೆಟ್ ರೈಲು: ಮಹತ್ವದ ಘಟ್ಟದತ್ತ



ಗುಜರಾತ್‌ನ ಅಂಬಿಕಾ ನದಿಯ ಮೇಲೆ ನಿರ್ಮಾಣ ಮಾಡಿರುವ ಎತ್ತರಿಸಿದ ರೈಲು ಮಾರ್ಗ

ಆಧಾರ/ಚಿತ್ರ: ನ್ಯಾಷನಲ್ ಹೈ ಸ್ಪೀಡ್ ರೈಲ್ ಕಾರ್ಪೊರೇಷನ್ ಪತ್ರಿಕಾ ಪ್ರಕಟಣೆ

ಆಳ–ಅಗಲ
ಅಬಕಾರಿ ಶುಲ್ಕ ದುಪ್ಪಟ್ಟು ಪರಿಣಾಮವೇನು?

3 ವರ್ಷ ವಕೀಲಿಕೆ ಕಡ್ಡಾಯ: ಸುಪ್ರೀಂ ಕೋರ್ಟ್ 4B

ಪರಿಶಿಷ್ಟರಿಗೆ ಬಹಿಷ್ಕಾರ; ದಾಖಲಾಗದ ಪ್ರಕರಣ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,186	24,683	₹98,410 (ಬೆಂಗಳೂರು)	₹1 ಲಕ್ಷ (ಬೆಂಗಳೂರು)	85.58

ಕಾಂಗ್ರೆಸ್‌ನ 'ಸಮರ್ಪಣೆ ಸಂಕಲ್ಪ' ಸಮಾವೇಶ ● ಮಳೆ ಮಧ್ಯೆ ಹೊಸಪೇಟೆಗೆ ಹರಿದುಬಂದ ಜನಸಾಗರ

ಭೂಹಕ್ಕು: 'ಕೈ' 6ನೇ ಗ್ಯಾರಂಟಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಎರಡು ವರ್ಷ ಪೂರೈಸಿದ ಸಂಭ್ರಮಾಚರಣೆಯಲ್ಲಿ ಅರ್ಹರಿಗೆ ಭೂಮಿ ಹಕ್ಕು ಪತ್ರ ನೀಡುವ 'ಭೂ ಗ್ಯಾರಂಟಿ' ಯೋಜನೆಗೆ ಮಂಗಳವಾರ ಚಾಲನೆ ನೀಡಲಾಯಿತು. ಹೊಸ 'ಗ್ಯಾರಂಟಿ'ಯನ್ನು ನೆರೆದಿದ್ದ ಭಾರಿ ಜನಸ್ತೋಮ ಹರ್ಷೋದ್ಗಾರದಿಂದ ಬರಮಾಡಿಕೊಂಡಿತು.

'ಪ್ರಗತಿಯತ್ತ ಕರ್ನಾಟಕ–ಸಮರ್ಪಣೆ ಸಂಕಲ್ಪ' ಘೋಷ ವಾಕ್ಯದಡಿ ಪುನೀತ್ ರಾಜ್‌ಕುಮಾರ್ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರನೇ ಗ್ಯಾರಂಟಿ ಜಾರಿಯ ಕ್ಷಣಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಾಕ್ಷಿಯಾದರು.

6ನೇ ಪುಟ ನೋಡಿ

ಹೊಸಪೇಟೆಯಲ್ಲಿ ಮಂಗಳವಾರ ನಡೆದ 'ಸಮರ್ಪಣೆ ಸಂಕಲ್ಪ' ಸಮಾವೇಶದಲ್ಲಿ ಅರ್ಹರಿಗೆ ಭೂಮಿಯ ಹಕ್ಕು ಪತ್ರಗಳನ್ನು ವಿತರಿಸಲಾಯಿತು. ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ, ರಾಹುಲ್ ಗಾಂಧಿ, ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನುಡಿದಂತೆ ನಡೆದಿದ್ದೇವೆ. ಕೇಂದ್ರ ಸರ್ಕಾರ ನುಡಿದಂತೆ ನಡೆದಿಲ್ಲ. ಜನ ಇದೆಲ್ಲವನ್ನೂ ಗಮನಿಸುತ್ತಿದ್ದಾರೆ. ಮುಂದಿನ ಚುನಾವಣೆಗಳಲ್ಲಿ ತಕ್ಕ ಉತ್ತರ ಕೊಡುತ್ತಾರೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೇಂದ್ರ ಸರ್ಕಾರವು ಬರೀ ಭರವಸೆಗಳನ್ನು ನೀಡುತ್ತಿದೆಯೇ ಹೊರತು ಜನಪರ ಯೋಜನೆ ಅನುಷ್ಠಾನಕ್ಕೆ ತಂದಿಲ್ಲ. ಬಡ, ಜನಸಾಮಾನ್ಯರ ಬಗ್ಗೆ ಕಾಳಜಿಯೂ ಇಲ್ಲ

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

ಈಗ 2,000 ಕಂದಾಯ ಗ್ರಾಮ ಗುರುತಿಸಲಾಗಿದೆ. ಇನ್ನೂ 500 ಕಂದಾಯ ಗ್ರಾಮ ಗುರುತಿಸುವುದು ಬಾಕಿ ಇದೆ. ಅದನ್ನು 6 ತಿಂಗಳೊಳಗೆ ಪೂರ್ಣಗೊಳಿಸಲಾಗುವುದು

ರಾಹುಲ್ ಗಾಂಧಿ
ವಿರೋಧ ಪಕ್ಷದ ನಾಯಕ, ಲೋಕಸಭೆ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ರಾಜ್ಯದಾದ್ಯಂತ ವರುಣನ ಅಬ್ಬರ

ಪ್ರಜಾವಾಣಿ ವಾರ್ತೆ

ಮಂಗಳೂರು/ಮೈಸೂರು: ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಸೇರಿದಂತೆ ರಾಜ್ಯದ ಬಹುತೇಕ ಎಲ್ಲ ಭಾಗಗಳಲ್ಲಿ ಮಂಗಳವಾರ ನಸುಕಿನಿಂದಲೇ ಎಡೆ ಬಿಡದೆ ಮಳೆಯಾಗಿದ್ದು, ಮಳೆಗಾಲದ ವಾತಾವರಣ ಸೃಷ್ಟಿಯಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಮವಾರ ತಡರಾತ್ರಿ ಪ್ರಾರಂಭವಾದ ಮಳೆ ಮಂಗಳವಾರ ಬೆಳಗಿನವರೆಗೂ ಎಡೆಬಿಡದೆ ಸುರಿದರೆ, ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಬೆಳಿಗ್ಗೆ 3 ಗಂಟೆ ಬಿರುಸಿನ ಮಳೆ ಆಗಿದೆ.

ಕೆಲವೆಡೆ ರಸ್ತೆಗಳು, ತಗ್ಗು ಪ್ರದೇಶಗಳು ಜಲಾವೃತವಾಗಿದ್ದರೆ, ಹಲವೆಡೆ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದ ವರದಿಯಾಗಿದೆ.

5ನೇ ಪುಟ ನೋಡಿ

ಸಿಡಿಲು: ಐವರ ಸಾವು

ಕಲಬುರಗಿ/ಹುಬ್ಬಳ್ಳಿ: ಐವರು ಸಿಡಿಲು ಬಡಿದು ಮಂಗಳವಾರ ಮೃತಪಟ್ಟಿದ್ದಾರೆ. ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮದ ರೈತ ನಬಿಲಾಲ ಚೌಧರಿ(70) ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಮೃತಪಟ್ಟಿದ್ದಾರೆ.

ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಸಮೀಪದ ಲಿಂಗದಹಳ್ಳಿ ಗ್ರಾಮದಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದಾಗ ದೇವಕಿ ಮ್ಯಾಗೇರಿ (40), ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಹಿರೇನೇರ್ತಿ ಗ್ರಾಮದ ಹೊರವಲಯದ ಕೆರೆಯಲ್ಲಿ ಎತ್ತುಗಳ ಮೈ ತೊಳೆಯಲು ಹೋಗಿದ್ದ ಹಿರೇಹರಕುಣಿ ಗ್ರಾಮದ ಮೈಲಾರಪ್ಪ ಬಸವರಾಜ ಉಣಕಲ್ (18) ಸಿಡಿಲು ಬಡಿದು ಮೃತಪಟ್ಟರು.

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ಕೋಳೂರು ಗ್ರಾಮದ ಹೊಲದಲ್ಲಿ ಕೆಲಸ ಮಾಡುತ್ತಿದ್ದ ರೈತ ಬಸನಗೌಡ ಲಕ್ಷ್ಮಣಗೌಡ ಬಿರಾದಾರ (63), ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲ್ಲೂಕಿನ ದೇವಲಾಪುರ ಗ್ರಾಮದಲ್ಲಿ ಕುರಿ ಕರಿಬಸಪ್ಪ ಕುರಿ ಮೂರ್ತಿ (23) ಮೃತಪಟ್ಟಿದ್ದಾರೆ. ಹೊಲದಲ್ಲಿದ್ದ ಎಮ್ಮೆ ಮತ್ತು ಕರು ಪ್ರಾಣ ಬಿಟ್ಟಿವೆ. ದೇವರಹಿಪ್ಪರಗಿ ತಾಲ್ಲೂಕಿನ ಚಿಕ್ಕರೂಗಿ ಗ್ರಾಮದ ಹೊರವಲಯದಲ್ಲಿ ಸಿಡಿಲು ಬಡಿದು 6 ಕುರಿಗಳು ಸತ್ತಿವೆ.

Toyota i-CONNECT | Toyota Mobility Service Conversion | Fleet | Leasing | TOYOTA U TRUST Buy | Sell | Exchange - Used car | TOYOTA FINANCIAL SERVICES

Bharat Toyota
Bangalore: [Domlur]: 9741357683, 08047950000

Nandi Toyota
Bangalore: [Banashankari, Banaswadi, Bannerghatta, Bommanahalli, Whitefield]: 7022340713
Hosur Road: 9945255800
Kanakapura Rd: 9731369995
Queens Rd: 9741310066

Ravindu Toyota
Bangalore: [K R Puram, Magadi Rd, Marathahalli, Rajajinagar, Victoria Rd, Yeshwantpur]: 8058245555
Kolar: 9606090040
Tumkur: 9379189796

Viva Toyota
Bangalore: [Hebbal, Vidyaranyapura]: 9900027736
[Airport Rd, Kogilu]: 9900030617
Mysore Rd: 9900030620

Shodha Toyota
Bagalkot: 8147599463
Belgaum: Shahapur: 8147599461
Poona-Bangalore Road: 7899305505, 7760963774
Bijapur: 9606484983
Davangere: 9008952277
Hubli: 7204818810, 8123047553

Palace Toyota
Hunsur: 9663709743
Kodagu, Madikeri: 7022671919
Mandya: 9538874907
Mysore:
Hootagalli: 9538874906
Krishnamurthy Puram: 9538874936

Shakti Toyota
Chikkamagaluru, Hassan, Kadur, Shivamogga: 9686652728
Sagara: 08183200402

United Toyota
Mangalore: [Bunt's Hostel, Padil]: 9686687581
Udupi: 9686687581

Karuna Toyota
Gulbarga: 7829990010
Raichur: 7829990021

BJS Toyota
Bellary:
Hospet: 7829927943

ಸುಧಾ, ಮಯೂರ ಓದಿರಿ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
(ಭಾರತ ಸರ್ಕಾರದ ಅಧೀನ ಸಂಸ್ಥೆ – ಅಣುಶಕ್ತಿ ಇಲಾಖೆ)
ರೇರ್ ಅರ್ಥ್ಸ್ ಡಿವಿಜನ್, ಕೇರಳ
ಫೋನ್: 0484–2545064 ಎಕ್: 211/259, ಇ–ಮೇಲ್: hrm-red@irel.co.in
ಐಎಸ್‌ಒ 9001, 14001 & 45001 ಕಂಪನಿ

ಅಪ್ರೆಂಟೈಸ್‌ಗಳ ನಿಯೋಜನೆ
ಕೇರಳ ರಾಜ್ಯದ ಎರ್ನಾಕುಲಂ ಜಿಲ್ಲೆಯ ಉದ್ಯೋಗಮಂಡಲ–683501 ವಿಳಾಸದಲ್ಲಿರುವ ರೇರ್ ಅರ್ಥ್ಸ್ ಡಿವಿಜನ್‌ನಲ್ಲಿ, ಅಪ್ರೆಂಟೈಸಸ್ ಆಕ್ಟ್, 1961ರ ಕಾಯ್ದೆ ಅಡಿಯಲ್ಲಿ ಅಪ್ರೆಂಟಸ್‌ಗಳನ್ನು ತೊಡಗಿಸಿಕೊಳ್ಳುವುದಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೊನೆಯ ದಿನಾಂಕ 31/05/2025. ವಿವರಗಳಿಗಾಗಿ ದಯವಿಟ್ಟು www.irel.co.in ವೆಬ್‌ಸೈಟ್‌ನಲ್ಲಿರುವ **'ಕರಿಯರ್'** ಪುಟವನ್ನು ಪರಿಶೀಲಿಸಿರಿ.
CBC 48145/12/0002/2526 ಸಹಿ/– ಜಿಎಂ & ಮುಖ್ಯಸ್ಥರು, ಆರ್‌ಇಡಿ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
(ಭಾರತ ಸರ್ಕಾರದ ಅಧೀನ ಸಂಸ್ಥೆ–ಅಣುಶಕ್ತಿ ಇಲಾಖೆ)
ಮನವಲಕುರಿಚಿ, ತಮಿಳುನಾಡು, ಇ–ಮೇಲ್: purchase-mk@irel.co.in
ಐಎಸ್‌ಒ 9001, 14001 & 45001 ಪ್ರಮಾಣೀಕೃತ ಘಟಕ, ಫೋನ್: 04651–200402
ಸಿಐಎನ್: U15100MH1950GOI008187
ಉಲ್ಲೇಖ: ಎಂಕೆ/ಪಿ.ಜಾಹೀ/2025–26/02 ದಿನಾಂಕ: 20.05.2025
ಟೆಂಡರ್ ಪ್ರಕಟಣೆ
ಐಆರ್‌ಇಎಲ್ ಮನವಲಕುರಿಚಿ ಘಟಕ ಇವರು ಕೆಳಕಂಡ ಟೆಂಡರ್ ಆಹ್ವಾನಿಸಿದ್ದಾರೆ:

ಟೆಂಡರ್ ನಂ.	ವಿವರ
ಜಿಇಎಂ/2025/ಬಿ/6225790	ಇಂಡ್ಯೂಸ್ಡ್ ರೋಲ್ ಮ್ಯಾಗ್ನೆಟಿಕ್ ಸೆಪ್ಯಾರೇಟರ್ ಪೂರೈಕೆ ಮತ್ತು ಅಳವಡಿಕೆ ಮೇಲ್ವಿಚಾರಣೆ
ಐಆರ್‌ಇಎಲ್/ಎಂಕೆ/ಇಟಿ/03/2025	ಇಂಜಿನಿಯರಿಂಗ್ ಪ್ರೊಕ್ಯೂರ್‌ಮೆಂಟ್ ಕನ್‌ಸ್ಟ್ರಕ್ಷನ್ (ಇಪಿಸಿ) ಆಧಾರದ ಮೇರೆಗೆ ಹೆಚ್‌ಯುಎಸ್ (ಎಂಕೆ ಯೂನಿಟ್) ನಲ್ಲಿ ಡಿ–ಸ್ಲಿಮ್ಮಿಂಗ್ ಸಿಸ್ಟಮ್ ಅಳವಡಿಕೆಗೆ ಸಂಸ್ಥೆಗಳ ಆಯ್ಕೆಗಾಗಿ ಪ್ರಸ್ತಾವಣೆಗೆ (ಆರ್‌ಎಫ್‌ಪಿ) ಮನವಿ.

ಆಸಕ್ತಿಯುಳ್ಳ ಬಿಡ್‌ದಾರರು https://gem.gov.in, https://www.irelc.co.in ಮತ್ತು ಸಿಪಿಪಿ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮೇಲ್ಕಂಡ ಟೆಂಡರ್‌ಗೆ ಸಂಬಂಧಿತ ಯಾವುದೇ ತಿದ್ದುಪಡಿ / ಮಾರ್ಪಾಡು ಸೂಚನೆಗಳನ್ನು ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
CBC 48147/12/0003/2526 ಸಿಜಿಎಂ & ಮುಖ್ಯಸ್ಥರು, ಎಂ.ಕೆ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ (ವಾಣಿಜ್ಯ) ಇಲಾಖೆ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ,
ಕೆ..ಹೆಚ್.ರಸ್ತೆ, ಬೆಂಗಳೂರು–560027 ದೂರವಾಣಿ ಸಂಖ್ಯೆ: 080 22537575
ವೆಬ್‌ಸೈಟ್ : www.mybmtc.com ಇ–ಮೇಲ್ : ctmc@mybmtc.com
ಸಂಖ್ಯೆ:ಬೆಂಮಸಾಸಂ/ಕೇಕ/ಸಂ/ವಾ1813/748/2025–26 ದಿನಾಂಕ: 20.05.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–07/2025–26 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಿವಿಧ ಬಸ್ ನಿಲ್ದಾಣಗಳಲ್ಲಿನ ಸಾಮಾನ್ಯ ಮಳಿಗೆಗಳು (ಕಟ್ಟಿದ), ಉಪಹಾರ ಗೃಹ ಹಾಗೂ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಫ್ಲಾಟ್‌ಗೆ ಪರವಾನಗಿದಾರರ ಆಯ್ಕೆಗಾಗಿ ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಂದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಬಿಡ್‌ಗಳನ್ನು ಆಹ್ವಾನಿಸಿದೆ. ಬಿಡ್ ಸಲ್ಲಿಸುವ ಕೊನೆಯ **ದಿನಾಂಕ: 30.05.2025 ರಂದು 17:00 ಗಂಟೆಯವರೆಗೆ.** ತಾಂತ್ರಿಕ ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ:02.06.2025 ರಂದು 11:30 ಗಂಟೆಗೆ.** ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ, ವಿಸ್ತೀರ್ಣ ಹಾಗೂ ಇನ್ನಿತರ ಮಾಹಿತಿಗಾಗಿ **www.kppp.karnataka.gov.in** ಗೆ ಲಾಗಿನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 080–46010000; 23010901; 22371090; 22340060; 22340948 ಅಥವಾ 7760997519 & 7760991222 ಇ–ಮೇಲ್: **ctmc@mybmtc.com** ಗೆ ಸಂಪರ್ಕಿಸಬಹುದು.
ಸಹಿ/–
ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ)
(ಟೆಂಡರ್ ಕರೆಯುವ ಪ್ರಾಧಿಕಾರಿ)

ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ: ನಿಷೇಧಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕ ಸೇವಾ ಆಯೋಗವು (ಯುಪಿಎಸ್‌ಸಿ) ನಡೆಸುವ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಯು ಮೇ 25ರಂದು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಆದೇಶಿಸಿದ್ದಾರೆ.

ನಗರದ 86 ಪರೀಕ್ಷಾ ಕೇಂದ್ರಗಳಲ್ಲಿ ಪೂರ್ವಭಾವಿ ಪರೀಕ್ಷೆ ನಡೆಯಲಿದೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹಾಗೂ ಪರೀಕ್ಷೆಯು ಸುಗಮವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ಪ್ರದೇಶವನ್ನು ನಿಷೇಧಿತ ಸ್ಥಳವೆಂದು ಘೋಷಿಸಲಾಗಿದೆ. ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿ, ಕಂಪ್ಯೂಟರ್ ಸೆಂಟರ್ ಮುಚ್ಚುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ರಾಷ್ಟ್ರೀಯ ವಿದ್ಯುತ್ ತರಬೇತಿ ಸಂಸ್ಥೆ
ಇಂಧನ ಸಚಿವಾಲಯ, ಭಾರತ ಸರ್ಕಾರ
ಎನ್‌ಪಿಟಿಐ ಕಾಂಪ್ಲೆಕ್ಸ್, ಸೆಕ್ಟರ್–33, ಫರಿದಾಬಾದ್–121003, ಹರ್ಯಾಣ, ಭಾರತ
एन पी टी आई NPTI
ಪ್ರವೇಶಾತಿ ಪ್ರಾರಂಭವಾಗಿದೆ
ಪೋಸ್ಟ್ ಗ್ರಾಜುಯೇಶನ್ ಡಿಪ್ಲೋಮಾ ಕೋರ್ಸ್‌ಗಳು
- ಪವರ್ ಪ್ಲಾಂಟ್ ಇಂಜಿನಿಯರಿಂಗ್ (01 ವರ್ಷ) — ಫರಿದಾಬಾದ್ । ನಾಗಪುರ । ನೆಯ್ವೆಲಿ । ದುರ್ಗಾಪುರ । ಅಲಪ್ಪುಜಾ । ಶಿವಪುರಿ
- ರಿನ್ಯೂಯೇಬಲ್ ಎನರ್ಜಿ & ಗ್ರಿಡ್ ಇಂಟರ್‌ಫೇಸ್ ಟೆಕ್ನಾಲಜೀಸ್ (01 ವರ್ಷ) — ಬೆಂಗಳೂರು । ನೆಯ್ವೆಲಿ । ಗುವಾಹಟಿ । ನವದೆಹಲಿ (ಎನ್‌ಐಎಸ್‌ಇ ಸಹಯೋಗದಲ್ಲಿ)
- ಹೈಡ್ರೊ ಪವರ್ ಪ್ಲಾಂಟ್ ಇಂಜಿನಿಯರಿಂಗ್ (09 ತಿಂಗಳು) — ನಾಂಗಲ್
- ಟ್ರಾನ್ಸ್‌ಮಿಷನ್ & ಡಿಸ್ಟ್ರಿಬ್ಯೂಷನ್ ಸಿಸ್ಟಮ್ಸ್ (06 ತಿಂಗಳು) — ಬೆಂಗಳೂರು । ಗುವಾಹಟಿ
- ಪವರ್ ಡಿಸ್ಟ್ರಿಬ್ಯೂಷನ್ & ಎಮರ್ಜನ್ಸಿ ಟೆಕ್ನಾಲಜೀಸ್ (01 ವರ್ಷ) — ನವದೆಹಲಿ (ಬಿಎಸ್‌ಇಸ್ ಸಹಯೋಗದಲ್ಲಿ)

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ–21ನೇ ಜುಲೈ, 2025
ಅರ್ಜಿ ಶುಲ್ಕ – ರೂ. 500 (ಜಿಎಸ್‌ಟಿ ಸೇರಿದಂತೆ)
ಹಿಂದಿನ ಬ್ಯಾಚ್‌ಗಳಲ್ಲಿ 100% ಪ್ಲೇಸ್‌ಮೆಂಟ್ ದಾಖಲೆ
ಮಹಿಳಾ ಅರ್ಜಿದಾರರಿಗೆ ಟ್ಯೂಷನ್ ಶುಲ್ಕದಲ್ಲಿ 10% ಸಡಿಲಿಕೆ ಲಭ್ಯ
ಇಲ್ಲಿ ಅರ್ಜಿ ಸಲ್ಲಿಸಿ https://bit.ly/NPTIPGDC25-26
ಸ್ಕ್ಯಾನ್ & ಅಪ್ಲೈ
ನಮ್ಮ ಕೆಲವು ಪ್ಲೇಸ್‌ಮೆಂಟ್ ಪಾಲುದಾರರು
JSW BSES KPMG pwc adani tcs HCL Infosys GMR ESSAR wipro SUZLON BAJAJ vedanta RELIANCE Power
8218228896, 8826048899, 9999670968, 9781392002 nptipgdcadmissions@gmail.com www.npti.gov.in
CBC 34107/12/0002/2526

ನಗರದಲ್ಲಿ ಮಂಗಳವಾರ ನಡೆದ ಮಕ್ಕಳ ರಂಗ ಹಬ್ಬದಲ್ಲಿ ಉತ್ತರ ಕನ್ನಡ ಜಿಲ್ಲೆಯ ಮಂಚಿಕೆರೆ ಬಳಿಯ ಕಾಡಿನ ಹಾಡಿ ಮಕ್ಕಳು 'ಕಾಡಿನ ಕಥೆ' ನಾಟಕ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಕರ್ನಾಟಕ ನಾಟಕ ಅಕಾಡೆಮಿಯಿಂದ 'ಮಕ್ಕಳ ರಂಗ ಹಬ್ಬ'

7 ನಾಟಕ ಪ್ರದರ್ಶಿಸಿದ ಚಿಣ್ಣರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐವತ್ತು ವರ್ಷಗಳ ಹಿಂದೆ ಕಾಕನಕೋಟೆ ನಾಟಕವನ್ನು ಇದೇ ವೇದಿಕೆಯಲ್ಲಿ ನಟಿಸಿ, ಸೈ ಅನಿಸಿ ಕೊಂಡಿದ್ದೆ. ಅಭಿನಯ ನನಗೆ ಎಲ್ಲವನ್ನೂ ಕೊಟ್ಟಿದೆ. ಮನೆ, ಮಕ್ಕಳು, ಸಂಸಾರ, ದೊಡ್ಡ ಕಲಾ ಕುಟುಂಬ ಹೀಗೆ. ಕಲಾವಿದೆಯಾಗಿ ಬದುಕು ತೃಪ್ತಿ ಕೊಟ್ಟಿದೆ' ಎಂದು ನಟಿ ಗಿರಿಜಾ ಲೋಕೇಶ್ ಹರ್ಷ ವ್ಯಕ್ತಪಡಿಸಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಮಂಗಳವಾರ ಆಯೋಜಿಸಿದ್ದ ಮಕ್ಕಳ ರಂಗ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಟ 'ಮುಖ್ಯಮಂತ್ರಿ' ಚಂದ್ರು ಮಾತನಾಡಿ, 'ಮಕ್ಕಳೇ ಇಂಥ ರಂಗ ಉತ್ಸವಗಳ ಉದ್ಘಾಟನಾ ಭಾಷಣ ಮಾಡಬೇಕು. ವೇದಿಕೆ ಮೇಲೆಯೂ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಗಣ್ಯರಾಗಿ ಭಾಗವಹಿಸಬೇಕು. ಇಂಥದ್ದೊಂದು ವಾತಾವರಣ ಮಕ್ಕಳಿಗಾಗಿ ಕಲ್ಪಿಸಿಕೊಡಬೇಕು' ಎಂದು ಸಲಹೆ ನೀಡಿದರು.

ನಾಟಕ ಅಕಾಡೆಮಿಯ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, 'ಕನ್ನಡ ರಂಗಭೂಮಿ ಅದರಲ್ಲೂ 'ಮಕ್ಕಳ ರಂಗಭೂಮಿ' ದೇಶಕ್ಕೆ ಮಾದರಿಯಾಗಿ ಬೆಳೆಯುತ್ತಿದೆ. ಮಕ್ಕಳ ರಂಗಭೂಮಿ 13 ಜಿಲ್ಲೆಗಳಲ್ಲಿ ಬಲಿಷ್ಠವಾಗಿದೆ. ಕಾಡಿನ ಹಾಡಿಯ ಮಕ್ಕಳು ರಂಗಭೂಮಿ ಮೂಲಕ ಸಂಸ್ಕೃತಿ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಕೆಲವರು ಭಾರತೀಯ ಸಂಸ್ಕೃತಿ ಎಂದರೆ ಕೇವಲ ವೈದಿಕ ಸಂಸ್ಕೃತಿ ಎನ್ನುವ ರೀತಿ ವರ್ತಿಸುತ್ತಿದ್ದಾರೆ. ಆದರೆ, ಹಾಡಿಯ ಜನರು ಬಹುತ್ವ ಭಾರತ ಕಟ್ಟಿದ್ದಾರೆ. ಬಹುತ್ವದ ಸಂಸ್ಕೃತಿ ಉಳಿಸಬೇಕು' ಎಂದರು.

ಉತ್ಸವಕ್ಕೆ ರಂಗು

ಬೆಳಿಗ್ಗೆ 10.30ರಿಂದ ರಾತ್ರಿ 7.30ರವರೆಗೆ ಮಕ್ಕಳು ಏಳು ನಾಟಕ ಪ್ರದರ್ಶಿಸಿದರು. ನಾಟಕದ ಜತೆ ಪರಿಸರ ಗೀತೆಗಳ ಗಾಯನ, ನೃತ್ಯಗಳು ಉತ್ಸವಕ್ಕೆ ರಂಗು ನೀಡಿದವು.

ಉತ್ತರ ಕನ್ನಡ ಜಿಲ್ಲೆಯ ಮಂಚಿಕೇರಿ ಬಳಿ ಕಾಡಿನ ಹಾಡಿ ಮಕ್ಕಳು 'ಕಾಡಿನ ಕಥೆ', ಕೋಲಾರದ ಆದಿಮ ಸಾಂಸ್ಕೃತಿಕ ಕೇಂದ್ರದ 'ಹೊಸ್ಲಾಬು' ಹಾಗೂ ಬೆಂಗಳೂರಿನ ಅಭಯಾಶ್ರಮದ ವಾತ್ಸಲ್ಯ ಮಕ್ಕಳು 'ಮೈಲಾರ ಮಹದೇವ', 'ಸಂಪಿಗೆ ರಾಣಿ', 'ತಾಯಿಯ ಕಣ್ಣು', 'ಕತ್ತೆ ತಂದ ಭಾಗ್ಯ' ಮತ್ತು 'ಅರ್ಧಾಥ' ನಾಟಕಗಳನ್ನು ಪ್ರದರ್ಶಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ನಾಟಕ ವಿಭಾಗದ ಮುಖ್ಯಸ್ಥ ಡಾ. ಕೆ. ರಾಮಕೃಷ್ಣಯ್ಯ, ಅಭಯಾಶ್ರಮ ಅಧ್ಯಕ್ಷೆ ನಾಗರತ್ನ ಸತೀಶ್, ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ನಾಟಕ ಅಕಾಡೆಮಿ ಸದಸ್ಯ ಜಿ.ಪಿ.ಓ ಚಂದ್ರು ಹಾಜರಿದ್ದರು.

ಕಾಂಗ್ರೆಸ್ ಸರ್ಕಾರದ ಲೋಪದೋಷಗಳ ಭಿತ್ತಿಪತ್ರವನ್ನು ಬಿಜೆಪಿಯ ವೆಂಕಟೇಶ್ ದೊಡ್ಡೇರಿ, ರಾಮಕೃಷ್ಣಪ್ಪ, ಜಗದೀಶ್‌ಚೌಧರಿ ಬಿಡುಗಡೆ ಮಾಡಿದರು

ಹಗರಣಗಳ ಸಮಾವೇಶ: ವಾಗ್ದಾಳಿ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಅಗತ್ಯ ವಸ್ತುಗಳ ಬೆಲೆ ಏರಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ವಾಲ್ಮೀಕಿ ನಿಗಮದ ಹಗರಣಗಳೇ ಕಾಂಗ್ರೆಸ್ ಸರ್ಕಾರದ ಸಾಧನೆ ಎಂದು ಬಿಜೆಪಿ ರಾಜ್ಯ ವಕ್ತಾರ ವೆಂಕಟೇಶ್ ದೊಡ್ಡೇರಿ ತಿಳಿಸಿದರು.

'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ₹52 ಸಾವಿರ ಕೋಟಿಯಲ್ಲಿ ₹ 40ಸಾವಿರ ಕೋಟಿ ಹಣವನ್ನು ಸರ್ಕಾರ ಗ್ಯಾರಂಟಿಗೆ ಬಳಕೆ ಮಾಡಿಕೊಂಡು ಪರಿಶಿಷ್ಟರಿಗೆ ಅನ್ಯಾಯ ಮಾಡಿದೆ. ಸುಪ್ರೀಂ ಕೋರ್ಟ್ ಅದೇಶ ಉಲ್ಲಂಘಿಸಿ ಧರ್ಮ ಆಧರಿತ ಮೀಸಲಾತಿ ಜಾರಿ ಸೇರಿದಂತೆ ಭ್ರಷ್ಟಾಚಾರದಲ್ಲಿ ರಾಜ್ಯ ಸರ್ಕಾರ ಮುಳುಗಿದೆ. ಎರಡು ಸಾವಿರ ರೈತರ ಆತ್ಮಹತ್ಯೆ, ಒಂದು ಸಾವಿರಕ್ಕೂ ಹೆಚ್ಚು ಬಾಣಂತಿಯರ ಸಾವು ಆಗಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಜಗದೀಶ್ ಚೌಧರಿ ಮಾತನಾಡಿ, 'ಸಮಾವೇಶ ಹೆಸರಿನಲ್ಲಿ ಜನಸಾಮಾನ್ಯರ ತೆರಿಗೆ ಹಣವನ್ನು ಪೋಲು ಮಾಡುತ್ತಿದೆ. ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಒಳ ಚರಂಡಿ, ಕುಡಿಯುವ ನೀರು, ಬಸ್ ನಿಲ್ದಾಣ, ಕೆರೆಗಳ ಅಭಿವೃದ್ಧಿಯಾಗಿಲ್ಲ' ಎಂದರು.

ಬಿಜೆಪಿ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ರಾಮಕೃಷ್ಣಪ್ಪ, ಮಾಜಿ ಶಾಸಕ ಎಂ.ವಿ.ನಾಗರಾಜು, ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್. ಮಲ್ಲಯ್ಯ, ಮಾಜಿ ಸದಸ್ಯ ರಮೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಪ್ರಕಾಶ್, ಬಿಜೆಪಿ ರಾಜ್ಯ ಮಾಧ್ಯಮ ಸಹ ಸಂಚಾಲಕ ಶ್ರೀನಾಥ್, ಪುರಸಭೆ ಮಾಜಿ ಅಧ್ಯಕ್ಷ ರವಿ, ಎಸ್‌ಟಿ ಮೋರ್ಚಾ ತಾಲ್ಲೂಕು ಘಟಕದ ಅಧ್ಯಕ್ಷ ಕೆಂಪರಾಮಯ್ಯ, ಅರಿಶಿನಕುಂಟೆ ಶಕ್ತಿ ಕೇಂದ್ರ ಅಧ್ಯಕ್ಷ ಉಮೇಶ್, ಮುಖಂಡ ಸಪ್ತಗಿರಿಶಂಕರ್ ನಾಯಕ್ ಇದ್ದರು.

ಬಾಲಕಿ ಸಾವು: ಮರು ತನಿಖೆ ನಡೆಸುವಂತೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡದಿ ಹೋಬಳಿಯ ಭದ್ರಾಪುರದ ಹಕ್ಕಿಪಿಕ್ಕಿ ಕಾಲೊನಿಯಲ್ಲಿ ಮೇ 12ರಂದು ರೈಲು ಹಳಿಯ ಬಳಿ ಶವವಾಗಿ ಪತ್ತೆಯಾಗಿದ್ದ 15 ವರ್ಷದ ಬಾಲಕಿಯ ಪ್ರಕರಣವನ್ನು ಮರು ತನಿಖೆ ನಡೆಸಬೇಕು' ಎಂದು 'ನಾವೆದ್ದು ನಿಲ್ಲದಿದ್ದರೆ–ಕರ್ನಾಟಕ' ಸಂಘಟನೆ ಆಗ್ರಹಿಸಿದೆ.

'ಈ ಪ್ರಕರಣದ ಎಫ್‌ಐಆರ್ ದಾಖಲಿಸುವ ಸಂದರ್ಭದಲ್ಲಿ ಹಲವು ಸಮಸ್ಯೆಗಳು ಉಂಟಾಗಿದ್ದವು. ಪೊಲೀಸರು ಬಾಲಕಿಯ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆಯುವಲ್ಲಿಯೂ ವಿಳಂಬ ನೀತಿ ಅನುಸರಿಸಿದ್ದಾರೆ. ತನಿಖೆಯ ಪ್ರಗತಿಯ ಬಗ್ಗೆ ಯಾವುದೇ ಪ್ರಶ್ನೆಗಳಿಗೆ ಸರಿಯಾಗಿ ಸ್ಪಂದಿಸದೇ, ಯಾವುದೇ ರೀತಿಯ ಮಾಹಿತಿಯನ್ನು ಹಂಚಿಕೊಂಡಿಲ್ಲ' ಎಂದು ತಿಳಿಸಿದೆ.

'ರಾಮನಗರ ಜಿಲ್ಲೆಯ ಎಸ್‌ಪಿ ಅವರು ಮೇ 17ರಂದು ಸುದ್ದಿಗೋಷ್ಠಿ ನಡೆಸಿ, ಎಫ್‌ಎಸ್‌ಎಲ್ ವರದಿಯ ಪ್ರಕಾರ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆದಿಲ್ಲ. ಬಾಲಕಿ ರೈಲು ಹಳಿ ದಾಟುತ್ತಿದ್ದ ಸಂದರ್ಭದಲ್ಲಿ ರೈಲುಗೆ ಸಿಲುಕಿ ಸ್ಥಳದಲ್ಲಿ ಮೃತಪಟ್ಟಿದ್ದಾಳೆ. ಇದು ರೈಲ್ವೆ ಪೊಲೀಸರು ನೀಡಿದ ಸಿಸಿಟಿವಿ ದೃಶ್ಯಾವಳಿಯಲ್ಲಿದೆ ಎಂದು ತಿಳಿಸಿದ್ದಾರೆ. ಆದರೆ, ಈ ಪ್ರಕರಣದ ತನಿಖೆಯೂ ಹಲವು ಲೋಪದೋಷಗಳಿಂದ ಕೂಡಿದ್ದು, ಕೂಡಲೇ ಈ ಪ್ರಕರಣವನ್ನು ಸ್ವತಂತ್ರವಾಗಿ ಮರುತನಿಖೆ ನಡೆಸಬೇಕು' ಎಂದು ಪ್ರಕಟಣೆಯಲ್ಲಿ ಒತ್ತಾಯಿಸಲಾಗಿದೆ.

ನಗರದಲ್ಲಿ ಇಂದು

ಕೆ. ಕಸ್ತೂರಿರಂಗನ್ ಸ್ಮರಣೆ: ಭಾಗವಹಿಸುವವರು: ಕಿರಣ್ ಕುಮಾರ್, ತರುಣ್ ಸೌರದೀಪ್, ಪಿ. ಬಾಲರಾಮ್, ವಿ.ಎಸ್. ರಾಮಮೂರ್ತಿ, ಗಣೇಶ್ ಪಿಳ್ಳೈ, ಜಯರಾಮ್ ಚೆಂಗಲೂರ್, ಆಯೋಜನೆ: ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್, ಸ್ಥಳ: ಆರ್‌ಆರ್‌ಐ ಲಾನ್, ಸದಾಶಿವನಗರ, ಬೆಳಿಗ್ಗೆ 10ರಿಂದ

'ಕಲಾಪರ್ವ' ಅಂತರ ಕಾಲೇಜು ಸಾಂಸ್ಕೃತಿಕ ಹಬ್ಬ: ಅತಿಥಿಗಳು: ಬಿ.ಎಚ್. ರಾಗಿಣಿ ನಾರಾಯಣ, ಕಿಶನ್ ಬಿಲಗಲಿ, ಪಿ. ದಯಾನಂದ್ ಪೈ, ಅವಿರಾಮ್ ಶರ್ಮ, ರಾಘವನ್ ಆರ್.ಎ., ಆಯೋಜನೆ: ಬಿ.ಎಂ.ಎಸ್. ಕಾಲೇಜ್ ಫಾರ್ ವುಮೆನ್, ಸ್ಥಳ: ಬಿ.ಎಂ.ಎಸ್. ಕಾಲೇಜ್ ಆಫ್ ಎಂಜಿನಿಯರಿಂಗ್, ಬಸವನಗುಡಿ, ಬೆಳಿಗ್ಗೆ 10

ಮಾವು-ಹಲಸು ಮತ್ತು ಹುಣಸೆ ಹಣ್ಣು ಮಾರಾಟ ಮೇಳ–2025: ಉದ್ಘಾಟನೆ: ಎಸ್.ಎಸ್. ಮಲ್ಲಿಕಾರ್ಜುನ್, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಅತಿಥಿಗಳು: ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಬಿ.ಡಿ. ಭೂಕಾಂತ್, ಶಮ್ಲಾ ಇಕ್ಬಾಲ್, ರಮೇಶ್ ಡಿ.ಎಸ್., ಆಯೋಜನೆ ಮತ್ತು ಸ್ಥಳ: ತೋಟದ ಬೆಳೆಗಾರರ ಸಹಕಾರಿ ಮಾರಾಟ, ಸಂಸ್ಕರಣ ಸಂಘದ ಪ್ರಧಾನ ಕಚೇರಿ, ಲಾಲ್‌ಬಾಗ್, ಡಾ.ಎಂ. ಎಚ್. ಮರೀಗೌಡ ರಸ್ತೆ, ಬೆಳಿಗ್ಗೆ 11

'ಬಿ.ವಿ. ಕಾರಂತ–90' ನೆನಪಿನ ರಾಜ್ಯಮಟ್ಟದ ನಾಟಕೋತ್ಸವ: 'ಹೀಗಾದ್ರೆ ಹೇಗೆ?' ನಾಟಕ ಪ್ರದರ್ಶನ: ತಂಡ: ವಾಸ್ಪ್ ಥಿಯೇಟರ್, ನಿರ್ದೇಶನ: ವಿನಯ್ ಶಾಸ್ತ್ರಿ, ಆಯೋಜನೆ: ಭಾಗವತರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.10

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಖರ್ಗೆ ಸೈನಿಕರ ಕ್ಷಮೆ ಕೇಳಲಿ: ರವಿಕುಮಾರ್

ಬೆಂಗಳೂರು: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ದೇಶದ ಸೇನೆ ನಡೆಸಿದ ಯುದ್ಧವನ್ನು 'ಚುಟ್‌-ಪುಟ್ ಯುದ್ಧ' ಎಂದು ಹೇಳಿದ್ದು, ಈ ಹೇಳಿಕೆ ಅವರ ಸ್ಥಾನಕ್ಕೆ ಶೋಭೆ ತರುವುದಿಲ್ಲ' ಎಂದು ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಟೀಕಿಸಿದ್ದಾರೆ.

ರವಿಕುಮಾರ್

'ಸೇನೆ ನಡೆಸಿದ ಆಪರೇಷನ್ ಸಿಂಧೂರ ಬಗ್ಗೆ ಹಗುರವಾಗಿ ಮಾತನಾಡಿರುವ ಮಲ್ಲಿಕಾರ್ಜುನ ಖರ್ಗೆಯವರು ತಕ್ಷಣವೇ ಸೇನೆ ಮತ್ತು ನಾಗರಿಕರ ಕ್ಷಮೆಯಾಚಿಸ-ಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ನಿಮ್ಮ ರೀತಿಯಲ್ಲೇ ನಿಮ್ಮ ಪಕ್ಷದ ಸಚಿವರು, ಶಾಸಕರು ದೇಶದ ಸೈನ್ಯ ಮತ್ತು ಸೈನಿಕರ ಬಗ್ಗೆ ಪ್ರತಿ ನಿತ್ಯ ಟೀಕೆ ಮಾಡುತ್ತಿದ್ದಾರೆ. ಇದು ದೇಶದ ಬಗ್ಗೆ ಇರುವ ನಿಮ್ಮ ಪಕ್ಷದ ಮನಸ್ಥಿತಿಯನ್ನು ಎತ್ತಿ ತೋರಿಸುತ್ತದೆ' ಎಂದಿದ್ದಾರೆ.

'ಕಾಂಗ್ರೆಸ್ ನಾಯಕರು ಇಂತಹ ಕ್ಷುಲ್ಲಕ ಹೇಳಿಕೆಗಳಿಂದ ದೇಶದ ಸಶಸ್ತ್ರ ಪಡೆಗಳ ಧೈರ್ಯ ಮತ್ತು ಸಾಹಸಕ್ಕೆ ಅಪಮಾನ ಮಾಡಿದ್ದಾರೆ' ಎಂದಿದ್ದಾರೆ.

'ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿ-ದ್ದಾಗ, ಹೇಡಿ ಪಾಕಿಸ್ತಾನ ಮತ್ತು ಉಗ್ರರ ಬಗ್ಗೆ ಮೃದು ಧೋರಣೆ ಅನುಸರಿಸಿತ್ತು. ಹೀಗಾಗಿಯೇ ಆಪರೇಷನ್ ಸಿಂಧೂರ ನಂತಹ ಕಾರ್ಯಾಚರಣೆ ಮಾಡುವ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಗಿದೆ. ಇದಕ್ಕೆ ಕಾಂಗ್ರೆಸ್ ಪಕ್ಷವೇ ಹೊಣೆ' ಎಂದು ರವಿಕುಮಾರ್ ತಿಳಿಸಿದ್ದಾರೆ.

'ಹಸಿರು ನಿಲ್ದಾಣವಾಗಿ ನಿರ್ಮಿಸಿ'

ಕಂಟೋನ್ಮೆಂಟ್: ವಾಣಿಜ್ಯ ಕೇಂದ್ರ ನಿರ್ಮಾಣಕ್ಕಾಗಿ 368 ಮರಗಳ ಕಡಿತಕ್ಕೆ ನಾಗರಿಕರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ 368 ಮರ ಕಡಿಯಲು ಸಾರ್ವಜನಿಕರಿಂದ ವಿರೋಧ ವ್ಯಕ್ತಪಡಿಸಿದ್ದು, ಇಲ್ಲಿನ ನಿಲ್ದಾಣವನ್ನು 'ಹಸಿರು ನಿಲ್ದಾಣ', ಜೈವಿಕ ಉದ್ಯಾನವನ್ನಾಗಿ ನಿರ್ಮಿಸಬೇಕು ಎಂದು ಆಗ್ರಹಿಸಿದರು.

ರೈಲ್ವೆ ಇಲಾಖೆ ವಸಂತನಗ-ರದಲ್ಲಿರುವ ದಂಡು ಪ್ರದೇಶದ ಬಳಿಯ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಕೇಂದ್ರ ಅಭಿವೃದ್ಧಿಗೆ 368 ಮರ ತೆರವುಗೊಳಿಸುವ ಸಂಬಂಧ ನಾಗರಿಕರೊಂದಿಗೆ ಬಿಬಿಎಂಪಿ ಮಂಗಳವಾರ ಆಯೋಜಿಸಿದ್ದ ಸಭೆಯಲ್ಲಿ, ಮರ ತೆರವಿಗೆ ಪರಿಸರ ಕಾರ್ಯಕರ್ತರಿಂದ ಸಾಕಷ್ಟು ವಿರೋಧ ವ್ಯಕ್ತವಾಯಿತು.

'ವಾಣಿಜ್ಯ ಕಟ್ಟಡವನ್ನು ಅತಿಹೆಚ್ಚು ಖಾಲಿ ಪ್ರದೇಶ ಹೊಂದಿರುವ ಬೈಯ-ಪ್ಪನಹಳ್ಳಿಗೆ ಸ್ಥಳಾಂತರಿಸಬೇಕು. ಅಲ್ಲಿ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದ್ದು, ಈ ಪಾರಂಪರಿಕ ಮರಗಳನ್ನು ಉಳಿಸಬೇಕು' ಎಂದು ಆಗ್ರಹಿಸಿದರು.

'ಪರಿಸರಕ್ಕಾಗಿ ನಾವು' ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಮಾತನಾಡಿ, 'ಬೆಂಗಳೂರಿನಲ್ಲಿ 1873ರಲ್ಲಿ ಶೇಕಡಾ 70ರಷ್ಟು ಹಸಿರು ಹೊದಿಕೆ ಇತ್ತು. ಇದು 2023ರಲ್ಲಿ ಶೇ 3ಕ್ಕೆ ಇಳಿದಿದೆ. ಕೆನಡಾದಲ್ಲಿ ಪ್ರತಿ ವ್ಯಕ್ತಿಗೆ 10,163 ಮರಗಳಿವೆ. ಆಸ್ಟ್ರೇಲಿಯಾದಲ್ಲಿ 3,266, ಅಮೆರಿಕದಲ್ಲಿ 699 ಮರಗಳಿವೆ. ಆದರೆ ಭಾರತದಲ್ಲಿ ಪ್ರತಿ ವ್ಯಕ್ತಿಗೆ ಸರಾಸರಿ ಕೇವಲ 28 ಮರಗಳಿವೆ' ಎಂದು ಹೇಳಿದರು.

ಮಂಗಳವಾರ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಪರಿಸರ ಕಾರ್ಯಕರ್ತರು

'ನಗರದಲ್ಲಿ ಹೆಚ್ಚು ಗಿಡಗಳನ್ನು ನೆಟ್ಟು, ಮರಗಳನ್ನಾಗಿ ಬೆಳೆಸಬೇಕು. ಇರುವ ಮರಗಳನ್ನು ಉಳಿಸಿಕೊಳ್ಳುವುದು ಅರಣ್ಯ ಇಲಾಖೆಯ ಕರ್ತವ್ಯವಾಗ-ಬೇಕು. ಮರಗಳನ್ನು ಕಡಿದು ವಾಣಿಜ್ಯ ಕಟ್ಟಡಗಳನ್ನು ಕಟ್ಟಲು ಅವಕಾಶ ನೀಡಬಾರದು. ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿರುವ ಮರಗಳನ್ನು ಕಡಿದು ವಾಣಿಜ್ಯ ಅಭಿವೃದ್ಧಿ ಯೋಜನೆ ಅನುಷ್ಠಾನಗೊಳಿಸುವುದು ಬೇಡ. ಈ ಯೋಜನೆಯನ್ನು ಬೇರೆ ಕಡೆಗೆ ಸ್ಥಳಾಂತ-ರಿಸಬೇಕು' ಎಂದು ಆಗ್ರಹಿಸಿದರು.

ಪತ್ರಕರ್ತ ಇಂದೂಧರ ಹೊನ್ನಾಪುರ ಮಾತನಾಡಿ, 'ಬೆಂಗಳೂರು ನಗರ ಈಗಾಗಲೇ ಹಲವು ಗಂಭೀರ ಪರಿಸರ ಸಮಸ್ಯೆಗಳಿಗೆ ಸಿಲುಕಿ ನಲುಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ವಾಣಿಜ್ಯ ಅಭಿವೃದ್ಧಿ ಯೋಜನೆ ಉದ್ದೇಶಕ್ಕೆ ಮರಗಳನ್ನು ಕಡಿಯುವುದು ಸರಿಯಲ್ಲ. ಅರಣ್ಯ ಇಲಾಖೆಯ ಕೆಲಸ ಕೆಲವೇ ಬಂಡವಾಳ ಶಾಹಿಗಳಿಗೆ ಅನುಕೂಲ ಮಾಡುವುದಲ್ಲ. ಸಾಮಾನ್ಯ ಜನರಿಗೆ ಅನುಕೂಲ ಆಗುವಂತೆ ಅರಣ್ಯ ಇಲಾಖೆ ನಡೆದು-ಕೊಳ್ಳಬೇಕು. ಸಾಮಾಜಿಕ ನ್ಯಾಯದ ಮಾತನಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಬೇಕು' ಎಂದರು.

> **ಬೆಂಗಳೂರಿನಲ್ಲಿ ವಾಯುಮಾಲಿನ್ಯ ವಿಪರೀತ ಹೆಚ್ಚಿದೆ. ಇದಕ್ಕೆ ದೂಳಿನ ಕೊಡುಗೆ ಶೇ 51 ರಷ್ಟಿದೆ. ಮರಗಳು ಕಡಿಮೆಯಾದ ಪರಿಣಾಮ ದೂಳಿನ ಸಮಸ್ಯೆ ಹೆಚ್ಚಾಗಿದೆ**
> **ಎ.ಟಿ.ರಾಮಸ್ವಾಮಿ,** 'ಪರಿಸರಕ್ಕಾಗಿ ನಾವು' ಸಂಘಟನೆಯ ಅಧ್ಯಕ್ಷ

ನೂರಕ್ಕೂ ಹೆಚ್ಚು ಜನ ಸಾರ್ವಜನಿಕ ಸಮಾಲೋಚನಾ ಸಭೆಯಲ್ಲಿ ಹಾಜರಿದ್ದರು. ಮರಗಳನ್ನು ಕಡಿಯದಂತೆ ಒಕ್ಕೊರಲಿನಿಂದ ಒತ್ತಾಯ ಮಾಡಿದರು.

'ಪರಿಸರಕ್ಕಾಗಿ ನಾವು' ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ಪಾರ್ವತಿ ಶ್ರೀರಾಮ್, ಸಂಘಟನಾ ಕಾರ್ಯದರ್ಶಿ ಸಿಕಂದರ್ ಸಿ.ಎಚ್., ಕಾರ್ಯದರ್ಶಿಗ-ಳಾದ ವೇಣುಗೋಪಾಲ್, ಮನೋಜ್, ರೋಖಡೆ, ಖಜಾಂಚಿ ಗೌಡಯ್ಯ ಹಾಗೂ ನಮ್ಮ ಬೆಂಗಳೂರು ಫೌಂಡೇಶನ್‌ನ ವಿನೋದ್, ಅಲೆಕ್ಸಾಂಡರ್, ಜೋಸೆಫ್ ಹೂವರ್, ವಿಜಯ್, ಪ್ರಿಯಾ ಚೆಟ್ಟಿ ಭಾಗವಹಿಸಿದ್ದರು.

ಬಿಬಿಎಂಪಿ ಅರಣ್ಯ ವಿಭಾಗದ ಡಿಸಿಎಫ್ ಬಿ.ಎಲ್.ಜಿ. ಸ್ವಾಮಿ, ರೈಲ್ವೆ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಆಯುಕ್ತಗೆ ಲೋಕಾಯುಕ್ತ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿನ ಅವ್ಯವಸ್ಥೆಗೆ ಸಂಬಂಧಿಸಿದಂತೆ ಖುದ್ದು ಹಾಜರಾಗಿ ಉತ್ತರ ನೀಡುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ಉಪ ಲೋಕಾಯುಕ್ತರು ಸಮನ್ಸ್ ಜಾರಿ ಮಾಡಿದ್ದಾರೆ.

2022ರ ಸೆಪ್ಟೆಂಬರ್ 22ರಂದು ಲೋಕಾಯುಕ್ತ ತಂಡ ಆಸ್ಪತ್ರೆಗೆ ಭೇಟಿ ನೀಡಿದ ವೇಳೆ ವೈದ್ಯರು, ಸಿಬ್ಬಂದಿ ಗೈರಾಗಿರುವುದು, ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡದಿರುವುದು, ಕೆಲ ವೈದ್ಯರು ಮತ್ತು ಸಿಬ್ಬಂದಿ ಚಿಕಿತ್ಸೆ ನೀಡಲು ರೋಗಿಗಳಿಂದ ಹಣಕ್ಕೆ ಬೇಡಿಕೆ ಸಲ್ಲಿಸಿರುವುದು ಕಂಡು ಬಂದಿತ್ತು.

ಈ ಸಂಬಂಧ ಪ್ರಧಾನ ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ವರದಿ ನೀಡುವಂತೆ ನೋಟಿಸ್ ನೀಡಲಾಗಿತ್ತು. ಆದರೂ ನೋಟಿಸ್‌ಗೆ ಉತ್ತರ ನೀಡಿರಲಿಲ್ಲ. ಹಾಗಾಗಿ ಜೂನ್ 26ರಂದು ಖುದ್ದು ಹಾಜರಾಗಿ ವರದಿಗೆ ಉತ್ತರ ನೀಡುವಂತೆ ಸಮನ್ಸ್ ಜಾರಿ ಮಾಡಲಾಗಿದೆ. ಈ ಸಮನ್ಸ್‌ಗೂ ಅವರು ಪ್ರತಿಕ್ರಿಯಿಸದಿದ್ದಲ್ಲಿ ವಾರಂಟ್ ನೀಡುವುದು ಅನಿವಾರ್ಯ ಎಂದು ಲೋಕಾಯುಕ್ತ ತಿಳಿಸಿದೆ.

ಕರ್ನಾಟಕ ರಾಜ್ಯ ಸವಿತಾ ಸಮಾಜ ಹೋರಾಟ ಸಮಿತಿಯಿಂದ ಸಾಧಕರಿಗೆ ಗೌರವ

ಹತ್ತು ಮಂದಿಗೆ 'ಗ್ಯಾರಂಟಿ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಸವಿತಾ ಸಮಾಜ ಹೋರಾಟ ಸಮಿತಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ನಾದಸ್ವರ ಕಲಾವಿದರು ಸೇರಿ ಹತ್ತು ಮಂದಿಗೆ 'ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎಂಟನೇ ವರ್ಷಕ್ಕೆ ಪದಾರ್ಪಣೆ ಮಾಡಿರುವುದು ಹಾಗೂ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಎರಡು ವರ್ಷಗಳನ್ನು ಪೂರೈಸಿದ ಸಂಭ್ರಮದ ಪ್ರಯುಕ್ತ ಸಮಿತಿ ಈ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಪುರಭವನದ ಮುಂಭಾಗ ಮಂಗಳವಾದ್ಯವನ್ನು ನುಡಿಸಿ, ಬಳಿಕ ಅಲ್ಲಿಂದ ಕನ್ನಡ ಭವನದ ನಯನ ಸಭಾಂಗಣದವರೆಗೆ ಮೆರವಣಿಗೆ ಮಾಡಲಾಯಿತು.

ನಾದಸ್ವರ ವಿದ್ವಾಂಸ ವಿ. ನಾರಾಯಣಸ್ವಾಮಿ, ಕ್ರೀಡಾಪಟು ಟಿ.ಆರ್. ತಾರಾಬಾಯಿ, ಡೋಲು ಕಲಾವಿದ ವಿ. ಗಜೇಂದ್ರ, ಕಲಾವಿದರಾದ ನಾರಾಯಣಸ್ವಾಮಿ, ವಿ. ನಾದ ನಾರಾಯಣಸ್ವಾಮಿ, ನಾದಸ್ವರ ಕಲಾವಿದರಾದ ಎನ್. ದಕ್ಷಿಣಾಮೂರ್ತಿ, ವಿ. ಮಂಜುನಾಥ್, ಡೋಲು ಕಲಾವಿದ ಆರ್. ನಾಗರಾಜು, ತಿರುಮಲ ತಿರುಪತಿ ದೇವಸ್ಥಾನದ ವಿದ್ವಾಂಸ ಬಿ. ಗೋಪಿನಾಥ್ ಹಾಗೂ ಸವಿತಾ ಸಮಾಜದ ಹೋರಾಟಗಾರ ಜಿ.ಪ್ರಕಾಶ್ ಅವರಿಗೆ 'ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಸವಿತಾ ಸಮಾಜದ ಮುಖಂಡ ಹಾಗೂ ಕೆಪಿಸಿಸಿ ಸಂಯೋಜಕ ಎಂ.ಎಸ್. ಮುತ್ತುರಾಜ್, 'ಸಮುದಾಯದವರು ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಮುಂದೆ ಬರುತ್ತಿಲ್ಲ. ಸಿಕ್ಕ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಬೇಕು' ಎಂದರು.

'ಯಾವುದೇ ಕೆಲಸದಲ್ಲಿ ಮೇಲು, ಕೀಳು ಎಂಬುದಿಲ್ಲ. ಎಲ್ಲ ಧರ್ಮ, ಜಾತಿಯವರಿಗೆ ಕ್ಷೌರಿಕರು ಅತ್ಯಗತ್ಯ. ಮನುಷ್ಯ ಸುಂದರವಾಗಿ ಕಾಣಬೇಕಾದರೆ ಕ್ಷೌರಿಕರ ಸಹಕಾರ ಬೇಕಾಗುತ್ತದೆ. ಸಮಾಜವು ಕ್ಷೌರಿಕರನ್ನು ನೋಡುವ ದೃಷ್ಟಿ ಇತ್ತೀಚೆಗೆ ಬದಲಾಗುತ್ತಿದೆ. ನಾವೆಲ್ಲರು ಸರ್ಕಾರಿ ಸೌಲಭ್ಯ ಪಡೆದು-ಕೊಳ್ಳಬೇಕು' ಎಂದು ಹೇಳಿದರು.

ಮಹಿಳಾ ಕಲಾವಿದರು ನಾದಸ್ವರ ವಾದನ ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರ

ASHA SCHOOL
(CENTRE FOR DIFFERENTLY ABLED CHILDREN), BANGALORE

Applications are invited from eligible candidates for filling up the post of **01 x Special Educator, and 01 x Music Teacher** of ASHA School, C/o HQ Karnataka & Kerala Sub Area, Cubbon Road, Bangalore - 01. Candidates who fulfill the following criteria may apply :

Ser No	Post	No of Post	Qualification/ Experience	Age Limit	Honorarium per month
(a)	Special Educator	01	Degree/ Diploma in Special Education registered with the Rehabilitation Council of India (RCI) with Min 3-5 yrs work experience in special school.	25-54 yrs	Rs 24,000/-
(b)	Music Teacher	01	Diploma/ Certificate in Music Therapy with experience in working with special children preferably 3 days a week.	25-54 yrs	Rs 15,000/-

2. Candidates who fulfill the above criteria may forward their applications with Bio Data on email : ashaschoolblr@gmail.com and hard a copy via post by **26 May 2025.**
3. Contact address - **OIC, ASHA School, HQ Karnataka & Kerala Sub Area Cubbon Road, Bangalore - 560 001**
No : 080-25591999, Ph No : 9065522781

ಕನ್ನಡದಲ್ಲಿ ಮಾತನಾಡಲು ಮಹಿಳಾ ಮ್ಯಾನೇಜರ್ ನಕಾರ

ಕನ್ನಡಕ್ಕಾಗಿ ಬ್ಯಾಂಕ್‌ನಲ್ಲಿ ಜಗಳ!

ಪ್ರಜಾವಾಣಿ ವಾರ್ತೆ

ಆನೇಕಲ್: ಕನ್ನಡ ಮಾತನಾಡುವ ವಿಚಾರಕ್ಕೆ ಚಂದಾಪುರ ಸೂರ್ಯಸಿಟಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಶಾಖೆಯ ಮಹಿಳಾ ಮ್ಯಾನೇಜರ್ ಮತ್ತು ಕೆಆರ್‌ಎಸ್ ಪಕ್ಷದ ಮಹೇಶ್ ನಡುವೆ ಮಂಗಳವಾರ ಮಾತಿನ ಚಕಮಕಿ ನಡೆದಿದೆ.

ಸೂರ್ಯಸಿಟಿ ಎಸ್‌ಬಿಐ ಬ್ಯಾಂಕ್‌ಗೆ ಹೋಗಿದ್ದ ಕೆಆರ್‌ಎಸ್ ಪಕ್ಷದ ಮಹೇಶ್ ಬೆಳಗ್ಗೆ 10.30 ಆದರೂ ಸಿಬ್ಬಂದಿ ಏಕೆ ಕೆಲಸ ಮಾಡುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ. ಈ ವಿಷಯಕ್ಕೆ ಆರಂಭವಾದ ಮಾತಿನ ಚಕಮಕಿ ವಿಕೋಪಕ್ಕೆ ತಿರುಗಿದೆ.

ಮಾತುಕತೆ ವೇಳೆ ಬ್ಯಾಂಕ್ ಮ್ಯಾನೇಜರ್ ಹಿಂದಿಯಲ್ಲಿ ಮಾತನಾಡಲು ಆರಂಭಿಸಿದ್ದಾರೆ. ಆಗ ಮಹೇಶ್, ಕನ್ನಡದಲ್ಲಿ ಮಾತನಾಡುವಂತೆ ಒತ್ತಾಯಿಸಿದ್ದಾರೆ. 'ಕಡ್ಡಾಯವಾಗಿ ಕನ್ನಡದಲ್ಲಿ ಮಾತನಾಡಬೇಕು ಎಂದು ಎಲ್ಲಿಯೂ ಹೇಳಿಲ್ಲ' ಎಂದ ಮ್ಯಾನೇಜರ್, 'ಕನ್ನಡ ಮಾತನಾಡುವುದಿಲ್ಲ' ಎಂದು ವಾದ ಮಾಡಿದ್ದಾರೆ.

'ಇದು ಕರ್ನಾಟಕ. ಹಾಗಾಗಿ ಕನ್ನಡ ಮಾತನಾಡಿ' ಎಂದು ಮಹೇಶ್ ಹೇಳಿದ್ದಾರೆ. ಆಗ ಮ್ಯಾನೇಜರ್, 'ಇದು ಭಾರತ, ಹಾಗಾಗಿ ಕನ್ನಡ ಮಾತನಾಡುವುದಿಲ್ಲ' ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಮಹಿಳಾ ಸಿಬ್ಬಂದಿ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಆಯಾ ರಾಜ್ಯಗಳಲ್ಲಿ ಸ್ಥಳೀಯ ಭಾಷೆ ಮಾತನಾಡುವಂತೆ ಆರ್‌ಬಿಐ ತಿಳಿಸಿದೆ. ಹಾಗಾಗಿ ಬ್ಯಾಂಕ್ ಸಿಬ್ಬಂದಿ ಕಡ್ಡಾಯವಾಗಿ ಕನ್ನಡ ಮಾತನಾಡಬೇಕು. ಆದರೆ ಚಂದಾಪುರ ಎಸ್‌ಬಿಐ ಶಾಖೆಯ ಮ್ಯಾನೇಜರ್ ಕನ್ನಡ ಮಾತನಾಡುವುದಿಲ್ಲ ಎಂದು ಹೇಳಿರುವುದು ಖಂಡನೀಯ ಮಹೇಶ್ ಆಕ್ಷೇಪ ಎತ್ತಿದ್ದಾರೆ.

ಕರವೇ ಪ್ರತಿಭಟನೆ ಇಂದು

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಚಂದಾಪುರ ಶಾಖೆಯ ವ್ಯವಸ್ಥಾಪಕಿ ಕನ್ನಡದಲ್ಲಿ ವ್ಯವಹರಿಸಲು ನಿರಾಕರಿಸಿರುವುದನ್ನು ಕರ್ನಾಟಕ ರಕ್ಷಣಾ ವೇದಿಕೆ ಖಂಡಿಸಿದ್ದು, ಬುಧವಾರ(ಮೇ 21) ಬೆಳಿಗ್ಗೆ ಎರಡು ಪ್ರತ್ಯೇಕ ಪ್ರತಿಭಟನೆಯನ್ನು ಹಮ್ಮಿಕೊಂಡಿದೆ.

ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ ಬ್ಯಾಂಕ್‌ನ ಪ್ರಧಾನ ಕಚೇರಿಗೆ ಬೆಳಿಗ್ಗೆ 11 ಗಂಟೆಗೆ ಕರವೇ ಬೆಂಗಳೂರು ನಗರ ಘಟಕದ ಕಾರ್ಯಕರ್ತರು ಭೇಟಿ ನೀಡಿ, ವ್ಯವಸ್ಥಾಪಕಿ ವಿರುದ್ಧ ಕ್ರಮಕ್ಕೆ ಆಗ್ರಹಿಸಲಿದ್ದಾರೆ. ಇದೇ ವೇಳೆ ಕರವೇ ವೇದಿಕೆ ಮಹಿಳಾ ಘಟಕವು ಚಂದಾಪುರದ ಶಾಖೆಗೆ ಮುತ್ತಿಗೆ ಹಾಕಲಿದೆ ಎಂದು ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ತಿಳಿಸಿದ್ದಾರೆ.

ಜಿಬಿಎ: ಜನಾಭಿಪ್ರಾಯ

'ಜಿಬಿಎ ರಚನೆಯ ನಂತರ ಮುಂದೇನಾಗಬೇಕು'– ಈ ಪ್ರಶ್ನೆಗೆ ಸಾರ್ವಜನಿಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿವೆ.

ಮೂಲಸೌಕರ್ಯ ಮತ್ತು ಸ್ವಚ್ಛತೆಗೆ ಜಿಬಿಎ ಪರಿಹಾರವಾಗಲಿ. ಬೆಂಗಳೂರು ನಗರ ಎಲ್ಲ ಕ್ಷೇತ್ರಗಳಲ್ಲಿ ವೇಗವಾಗಿ ಬೆಳೆಯುತ್ತಿದೆ. ಅದಕ್ಕೆ ತಕ್ಕಂತೆ ಮೂಲಸೌಕರ್ಯ ಅಭಿವೃದ್ಧಿಗೆ ವೇಗ ನೀಡಲು ಜಿಬಿಎ ಸಹಕಾರಿ ಆಗಲಿದೆ. ನಗರದ ರಸ್ತೆಗಳು, ಕಸದ ವಿಲೇವಾರಿ ಸಮಸ್ಯೆಗಳಿಗೆ ಪರಿಹಾರ ನೀಡಬೇಕಿದೆ. ಬೇಸಿಗೆಯಲ್ಲಿ ನಗರದಲ್ಲಿ ಉಂಟಾಗುವ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು.

ಕೆ.ಎಸ್. ನಾಗರಾಜ್, ಹನುಮಂತನಗರ

ಜಿಬಿಎ ಮಾಡುವ ಸರ್ಕಾರದ ನಿರ್ಧಾರ ಸರಿಯಾಗಿದೆ. ಇದರಿಂದ ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ಸಿಗಲಿದೆ. ಮಳೆಗಾಲದಲ್ಲಿ ಉಂಟಾಗುವ ಪ್ರವಾಹ ಪರಿಸ್ಥಿತಿಗೆ ಇದರಿಂದಾದರೂ ಮುಕ್ತಿ ಸಿಗಲಿ. ಮಳೆ ನೀರು ರಸ್ತೆಯಲ್ಲಿ ಸಂಗ್ರಹವಾಗದಂತೆ ಕ್ರಮ ಕೈಗೊಳ್ಳಬೇಕು. ಶುದ್ಧ ಕುಡಿಯುವ ನೀರು, ಕಸ ವಿಲೇವಾರಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ನಗರದ ಜನಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿ ಮಾಡಲು ಯೋಜನೆ ರೂಪಿಸಬೇಕು.

ದಿವ್ಯಶ್ರೀ ವಿ., ವಿದ್ಯಾರ್ಥಿ

ಗ್ರೇಟರ್ ಬೆಂಗಳೂರಿಗೆ ಮೊದಲು ಚುನಾವಣೆ ಆಗಬೇಕು. ಹೊಸ ಯೋಜನೆಗಳನ್ನು ಕನಿಷ್ಠ ಮುಂದಿನ 50 ವರ್ಷಗಳಿಗೆ ಬೇಕಾಗುವಂತೆ ಯೋಜನೆಗಳನ್ನು ರೂಪಿಸಬೇಕು. ಸಮಸ್ಯೆಗಳು ಬಂದಾಗ ಅದನ್ನು ಪರಿಹರಿಸುವ ಮುನ್ನ ಮೊದಲೇ ಪೂರ್ವಸಿದ್ಧತೆ ಮಾಡಿಕೊಳ್ಳಬೇಕು. ಬೆಂಗಳೂರಿನ ಎಲ್ಲ ಕಡೆಗೆ ಮೆಟ್ರೊ ಜಾಲವನ್ನು ವಿಸ್ತರಿಸಬೇಕು. ಪ್ರತಿಯೊಬ್ಬರು ಸಾರ್ವಜನಿಕ ಸಾರಿಗೆಯನ್ನು ಉಪಯೋಗಿಸಬೇಕು. ಒಬ್ಬರೇ ಮೇಯರ್ 5 ವರ್ಷ ಇರಬೇಕು. ಆಗ ಆಡಳಿತ ಸಂಪೂರ್ಣ ಹಿಡಿತದಲ್ಲಿ ಇರುತ್ತದೆ. ಪಾರ್ಕಿಂಗ್, ಹೊಸಕಟ್ಟಡ, ಸಂಚಾರ ನಿಯಮ, ಪೊಲೀಸ್ ವ್ಯವಸ್ಥೆಯಲ್ಲಿ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕು.

ಬಸವರಾಜು ಎಂ.ಎನ್., ರಾಜರಾಜೇಶ್ವರಿ ನಗರ

ಜಿಬಿಎ ಮಾಡುವ ಸರ್ಕಾರದ ನಿರ್ಧಾರ ಸರಿಯಾಗಿದೆ. ಆದರೆ ಅದು ಕಾರ್ಯ ರೂಪಕ್ಕೆ ಬರಲು ಸಮಯ ತೆಗೆದುಕೊಳ್ಳಲಿದೆ. 2003ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಬಿಡಿಎ ನಿವೇಶನ ಪಡೆದುಕೊಂಡು ಮನೆಗಳನ್ನು ನಿರ್ಮಿಸಿಕೊಂಡಿದ್ದೇವೆ. ಆದರೂ ಬಿಬಿಎಂಪಿ ಈ ಬಡಾವಣೆಯ ನಿರ್ವಹಣೆ ಮಾಡುತ್ತಿಲ್ಲ. ಮೂಲಸೌಕರ್ಯ ಅಭಿವೃದ್ಧಿ ಮಾಡುವಂತೆ ನಿತ್ಯ ಬಿಡಿಎಗೆ ಅಲೆಯಬೇಕಾಗಿದೆ. ಆದ್ದರಿಂದ ಸರ್ಕಾರ ಬಿಬಿಎಂಪಿಯನ್ನು ಜಿಬಿಎ ಮಾಡಿದರೆ ಈ ಸಮಸ್ಯೆಗಳಿಗೆ ಪರಿಹಾರ ಸಿಗುವ ಭರವಸೆ ಇದೆ.

ಸಿ.ಎನ್.ಭಂಡಾರೆ, ವಿಶ್ವೇಶ್ವರಯ್ಯ ಬಡಾವಣೆ, ಕೆಂಗೇರಿ ಉಪನಗರ

ಜಿಬಿಎ ಆಯ್ತು: ಮುಂದೇನಾಗಬೇಕು

'ಗ್ರೇಟರ್ ಬೆಂಗಳೂರು ಪ್ರದೇಶ' ಘೋಷಣೆಯಾಗಿದೆ. ಮುಂದೆ ಏನಾಗಬೇಕು? ಪ್ರತಿಕ್ರಿಯಿಸಿ. ಮಾಹಿತಿ ಸಂಕ್ಷಿಪ್ತವಾಗಿರಲಿ.ಜೊತೆಗೆ ವಿಳಾಸ, ಭಾವಚಿತ್ರವಿರಲಿ.

9606038256

'ಗ್ರೇಟರ್ ಬೆಂಗಳೂರಿಗೆ ಕನ್ನಡದ ಹೆಸರಿಡಿ'

ಬೆಂಗಳೂರು: 'ಸಾರ್ವಜನಿಕರಿಂದ ಸಲಹೆ ಪಡೆದು ಗ್ರೇಟರ್ ಬೆಂಗಳೂರಿಗೆ ಕನ್ನಡದ ಹೆಸರಿಡಿ' ಎಂದು ಸರ್ಕಾರಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.

ಪುರುಷೋತ್ತಮ ಬಿಳಿಮಲೆ

'ನಾಲ್ಕು ದಿಕ್ಕುಗಳಲ್ಲಿ ಅತಿ ವೇಗವಾಗಿ ವಿಸ್ತರಣೆಯಾಗುತ್ತಿರುವ ಬೆಂಗಳೂರು ನಗರದ ಆಡಳಿತವನ್ನು ಸಮರ್ಪಕವಾಗಿ ನಿರ್ವಹಿಸಲು ಸರ್ಕಾರವು ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿರುವುದು ಸ್ವಾಗತಾರ್ಹ. ಆದರೆ, 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' ಎನ್ನುವ ಹೆಸರು ಹೆಚ್ಚಾಗಿ ಆಂಗ್ಲ ಭಾಷೆಯನ್ನು ಪ್ರತಿಬಿಂಬಿಸುತ್ತಿದ್ದು, ಇದಕ್ಕೆ ಇನ್ನಷ್ಟು ಕನ್ನಡತನದ ಅವಶ್ಯವಿದೆ. ಈ ಅಂಶವನ್ನು ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರ ಗಮನಕ್ಕೆ ತರಲಾಗಿದೆ' ಎಂದು ತಿಳಿಸಿದ್ದಾರೆ.

'ಈ ಪ್ರಾಧಿಕಾರಕ್ಕೆ ಕನ್ನಡ ಪದ ಬಳಸುವ ನಿಟ್ಟಿನಲ್ಲಿ ಸರ್ಕಾರವು ಗಂಭೀರವಾಗಿ ಆಲೋಚಿಸಬೇಕಿದ್ದು, ಸಾರ್ವಜನಿಕರಿಂದ ಸೂಕ್ತ ಹೆಸರನ್ನು ಸೂಚಿಸಲು ಸಲಹೆಗಳನ್ನು ಆಹ್ವಾನಿಸಬೇಕು. ಜನರು ಸೂಚಿಸಿದ ಹೆಸರಲ್ಲಿ ಅತ್ಯುತ್ತಮವಾದ ಹೆಸರನ್ನು ಉದ್ದೇಶಿತ ಪ್ರಾಧಿಕಾರಕ್ಕೆ ಇಡುವ ಮೂಲಕ ಕನ್ನಡಿಗರ ಹೆಮ್ಮೆಯ ಸಂಸ್ಥೆಯಾಗಿ ಉಳಿಸುವಲ್ಲಿ ಕ್ರಮವಹಿಸ-ಬೇಕು' ಎಂದು ಮನವಿ ಮಾಡಿದ್ದಾರೆ.



ತಂತ್ರಜ್ಞಾನ





ಕೃತಕ ಭ್ರೂಣ ಚೀಲ

ಕೊಳ್ಳೇಗಾಲ ಶರ್ಮ

ಭ್ರೂಣವು ಒಣಗದಂತೆ ಕಾಯುವ ಚೀಲವನ್ನು ಕೃತಕವಾಗಿ ಸೃಷ್ಟಿಸಬಹುದೇ?

ಮನುಷ್ಯನ ಹುಟ್ಟೇ ವಿಚಿತ್ರ. ಒಂದು ಪುಟ್ಟ ಜೀವಕೋಶದಿಂದ ಆರಂಭಿಸಿ, ಕೋಟ್ಯಂತರ ಸಂಖ್ಯೆಯ ಜೀವಿಯಾಗಿ ಬೆಳೆಯುವುದಲ್ಲದೆ, ನೂರಾರು ಬಗೆಯ ಕೋಶಗಳೂ ಹುಟ್ಟುವ ಕ್ರಿಯೆ ಇದೆ. ಒಂಬತ್ತು ತಿಂಗಳ ಕಾಲ ನಡೆಯುವ ಈ ಕ್ರಿಯೆ ನೂರಾರು ಅಡ್ಡಿ, ಆತಂಕಗಳನ್ನು ದಾಟಿ ಬಂದ ಮೇಲೆಷ್ಟೆ ಹೆರಿಗೆ ಅಥವಾ ಹುಟ್ಟು ಆಗುತ್ತದೆ. ಆರಂಭದಲ್ಲಿ ಬೆಳೆಯುತ್ತಿರುವ ಭ್ರೂಣವನ್ನು ಅಡ್ಡಿ-ಆತಂಕಗಳಿಂದ ಕಾಯುವ ಭ್ರೂಣಚೀಲದ ಮಾದರಿಯನ್ನು ಈಗ ಕೃತಕವಾಗಿಯೂ ಬೆಳೆಸಬಹುದಂತೆ.

ಇಂಗ್ಲೆಂಡಿನ ಫ್ರಾನ್ಸಿಸ್ ಕ್ರಿಕ್ ಸಂಶೋಧನಾಲಯದಲ್ಲಿ ಸ್ಟೆಮ್ ಸೆಲ್ ಸಂಶೋಧನೆಯಲ್ಲಿ ತೊಡಗಿರುವ ಬೋರ್ಜೋ ಘರೀಬಿ ಮತ್ತು ಸಿಲ್ವಿಯಾ ಸಾಲ್ವೋಸ್ ಭ್ರೂಣಗಳಿಂದ ಹೆಕ್ಕಿದ ಆಕರಕೋಶ ಅಥವಾ ಸ್ಟೆಮ್ ಸೆಲ್‌ಗಳನ್ನು ಬಳಸಿಕೊಂಡು ಮನುಷ್ಯರ ಭ್ರೂಣದ ಹೊರಗೆ ಇರುವ ಪಾರದರ್ಶಕವಾದ ಆದರೆ ಜೀವಂತವಾದ ಪೊರೆಯಂಥದ್ದೇ ಪೊರೆಯನ್ನು ಬೆಳೆಸಿದ್ದಾರಂತೆ. ಒಂದು ತಿಂಗಳ ಗರ್ಭಾವಸ್ಥೆಯಲ್ಲಿ ಕಾಣುವ ಭ್ರೂಣದ ಚೀಲವನ್ನೇ ಹೋಲುವ ಪೊರೆ ಇದು. ಹಾಗೂ ಇಷ್ಟು ಬೆಳೆದ ಪೊರೆಯನ್ನು ಇದುವರೆವಿಗೂ ತಾಯಿಯ ಗರ್ಭದಿಂದ ಹೊರಗೆ ಬೆಳೆಸಲು ಸಾಧ್ಯವೇ ಆಗಿರಲಿಲ್ಲ ಎನ್ನುವುದು ವಿಶೇಷ. 'ಆಮ್ನಿಯಾನ್' ಎಂದು ವಿಜ್ಞಾನಿಗಳು ಹೆಸರಿಸುವ ಈ ಪೊರೆ ಗರ್ಭದಲ್ಲಿ, ಭ್ರೂಣವನ್ನು ಆವರಿಸಿಕೊಂಡು ಬೆಳೆಯುತ್ತದೆ. ಸಂಪೂರ್ಣ ಪಾರದರ್ಶಕವಾಗಿರುವ ಇದು ಭ್ರೂಣವು ಬೆಳೆಯುತ್ತಿದ್ದಂತೆ, ಅದರೊಟ್ಟಿಗೇ ಬಲೂನಿನಂತೆ ಉಬ್ಬುತ್ತಾ ಹೋಗುತ್ತದೆ. ಬಲೂನಿನೊಳಗೆ ಭ್ರೂಣದಿಂದ ಸುರಿದ ಮೂತ್ರ, ಶ್ವಾಸಕೋಶದಿಂದ ಹೊಮ್ಮಿದ ಲೋಳೆ ಮೊದಲಾದ ರಸಗಳು ಸಂಗ್ರಹವಾಗುತ್ತವೆ. ಒಂಬತ್ತು ತಿಂಗಳ ಕಾಲ ಈ ದ್ರವದಲ್ಲಿಯೇ ಮುಳುಗಿ ಭ್ರೂಣ ಬೆಳೆಯುತ್ತದೆ. ಈ ದ್ರವ ಹಾಗೂ ಚೀಲ ಭ್ರೂಣಕ್ಕೆ ಏಟು ಬೀಳದಂತೆ ಕಾಪಾಡುವುದಲ್ಲದೆ, ತಾಯಿಯ ಗರ್ಭಕೋಶ ಹಾಗೂ ಭ್ರೂಣದ ನಡುವಿನ ಸೇತುವೆಯಾಗಿಯೂ ಇರುತ್ತವೆ. ಭ್ರೂಣವು ರೂಪುಗೊಳ್ಳುವ ಮೊದಲ ಎರಡು ವಾರಗಳಲ್ಲಿ, ಅದಕ್ಕೆ ಆಹಾರವನ್ನೂ ಚೀಲದ ಅಂಗವೇ ಒದಗಿಸುತ್ತದೆ.

ಇಷ್ಟೊಂದು ಪ್ರಮುಖವಾದ ಅಮ್ನಿಯಾನಿನ ಬಗ್ಗೆ ನಮಗೆ ತಿಳಿದಿರುವುದು ಕಡಿಮೆ ಎಂದೇ ಹೇಳಬೇಕು. ಆದರೆ ಇದು ಬೆಳೆಯುತ್ತಿರುವ ಬಸಿರಿನ ಆರೋಗ್ಯವನ್ನು ಸೂಚಿಸುವ ವಸ್ತು ಕೂಡ. ಅಮ್ನಿಯಾನಿನಲ್ಲಿರುವ ದ್ರವದ ಪ್ರಮಾಣ, ಸ್ವರೂಪವನ್ನು ಅಂದಾಜಿಸಿ, ಭ್ರೂಣದ ಬೆಳವಣಿಗೆ ಸರಿಯಾಗಿದೆಯೋ ಇಲ್ಲವೋ ಎಂದು ವೈದ್ಯರು ಪತ್ತೆ ಮಾಡುವುದುಂಟು. ಇದಕ್ಕಾಗಿಯೇ ಬಸುರಿನ ವಿವಿಧ ಹಂತಗಳಲ್ಲಿ ಅಲ್ಟ್ರಾ ಸೌಂಡ್ ಸ್ಕ್ಯಾನ್ ಮಾಡುತ್ತಾರೆ. ಅಮ್ನಿಯಾನಿನೊಳಗೆ ಇರುವ ದ್ರವದಲ್ಲಿ ತೇಲಾಡುವ ಜೀವಕೋಶಗಳು ಭ್ರೂಣದಲ್ಲಿ ಇರಬಹುದಾದ ಆನುವಂಶಿಕ ಕಾಯಿಲೆಗಳನ್ನು ಮುಂದಾಗಿಯೇ ತಿಳಿಸಬಲ್ಲುವು.

ಅಮ್ನಿಯಾನು ಜೀವಕೋಶಗಳ ಎರಡು ಪದರಗಳಿರುವ ಚೀಲ. ಎರಡು ಪದರಗಳಲ್ಲಿ ಒಳಗಿನದು ಭ್ರೂಣದ ಚರ್ಮದ ಮೂಲವಾದ ಕೋಶಗಳಿಂದ ಬೆಳೆಯುತ್ತದೆ. ಮತ್ತೊಂದು ಭ್ರೂಣದ ಹೊರಗಿರುವ ಕೆಲವು ಜೀವಕೋಶಗಳಿಂದ ಜನಿಸುತ್ತದೆ. ಹೀಗಾಗಿ ಇದನ್ನು ಭ್ರೂಣದ ಅಂಗವೆಂದು ವಿಜ್ಞಾನಿಗಳು ಪರಿಗಣಿಸುವುದಿಲ್ಲ. ಆದರೆ ಈ ಪೊರೆಗಳ ಜನನ ಹೇಗಾಗುತ್ತದೆ ಎಂದು ತಿಳಿಯಲು ಸಾಕಷ್ಟು ಪ್ರಯತ್ನಗಳು ನಡೆದಿವೆ. ಪೊರೆಯಲ್ಲಿ ಕಂಡಂತಹ ವಿವಿಧ ಜೀವಕೋಶಗಳನ್ನು ಬೆರೆಸಿ, ಅವು ಪೊರೆಯಾಗುತ್ತವೆಯೋ ಎಂಬ ಪ್ರಯೋಗಗಳು ಅಲ್ಪ ಯಶಸ್ಸು ಕಂಡಿದ್ದುವು. ಒಂದು ಅಥವಾ ಎರಡು ವಾರಗಳಷ್ಟು ಬೆಳೆದ ಭ್ರೂಣಗಳಲ್ಲಿ ಕಾಣುವ ಪೊರೆಗಳಂತಹ ಪೊರೆಗಳನ್ನು ಬೆಳೆಸಲಾಗಿತ್ತು. ಆದರೆ ಅವು ಯಾವುವೂ ಬಲೂನಿನಂತೆ ಚೀಲದ ರೂಪದಲ್ಲಿರಲಿಲ್ಲ. ಬಹುಮಟ್ಟಿಗೆ ತೆಳುಹಾಳೆಗಳಂತಹ ಪೊರೆಗಳನ್ನು ಹುಟ್ಟಿಸಿದ್ದುವು.

ಘರೀಬಿ ಅವರ ತಂಡ ಈಗ ಚೆಂಡಿನಂತೆಯೇ ಇರುವ ಪುಟ್ಟ ಚೀಲಗಳನ್ನು ಬೆಳೆಸಿದೆ. ಸಾಮಾನ್ಯವಾಗಿ ಹಾಳೆಗಳಲ್ಲದ ಆಕಾರದಲ್ಲಿ ಅಂಗಗಳನ್ನು ಬೆಳೆಸಬೇಕೆಂದರೆ ಕೃತಕವಾದ ಹಂದರವೊಂದನ್ನು ಬಳಸುತ್ತಾರೆ. ಚಪ್ಪರವನ್ನು ಆತುಕೊಂಡು ಬಳ್ಳಿಗಳು ಬೆಳೆಯುವ ಹಾಗೆ, ಈ ಹಂದರದ ಆಸರೆಯಲ್ಲಿ ಜೀವಕೋಶಗಳು ಸಂಖ್ಯೆಯಲ್ಲಿ ಬೆಳೆಯುತ್ತಾ, ವಿವಿಧ ಆಕಾರದ ಅಂಗಗಳಾಗುತ್ತವೆ. ಆದರೆ ಘರೀಬಿ ಅವರ ತಂಡ ರೂಪಿಸಿರುವ ತಂತ್ರದಲ್ಲಿ, ಜೀವಕೋಶಗಳು ತಮ್ಮಂತಾವೇ ಚೀಲವಾಗಿ ರೂಪಿಸಿಕೊಂಡು ಬಿಡುತ್ತವೆ. ಇದು ಕೇವಲ ಆಕಸ್ಮಿಕವಲ್ಲ. ಇಂತಹ ಚೀಲಗಳನ್ನು ಎಷ್ಟು ಬೇಕಿದ್ದರೂ ತಯಾರಿಸಬಹುದು ಎಂದು ಘರೀಬೀ ತಂಡ ನಿರೂಪಿಸಿದೆ. ಇದಕ್ಕಾಗಿ ಇವರು ಭ್ರೂಣಗಳಲ್ಲಿ ಇರುವ ಆಕರಕೋಶಗಳನ್ನು ಹೆಕ್ಕಿ, ಅವನ್ನು ಪ್ರಯೋಗಾಲಯದಲ್ಲಿ ಬೆಳೆಸಿದರು. ಮೊದಲು ಅವನ್ನು 'ಬಿಎಂಪಿ 4' ಎನ್ನುವ ನಿರ್ದಿಷ್ಟವಾದೊಂದು ರಾಸಾಯನಿಕದಿಂದ ಪ್ರಚೋದಿಸಿ, ಒಂದು ದಿನದ ಮಟ್ಟಿಗೆ ಬೆಳೆಯಲು ಬಿಟ್ಟರು. ನಂತರ 'ಸಿಎಚ್‌ಐಆರ್' ಎನ್ನುವ ಮತ್ತೊಂದು ರಾಸಾಯನಿಕದಿಂದ ಪ್ರಚೋದಿಸಿದರು. ಈ ರಾಸಾಯನಿಕಗಳನ್ನು ಘಟಕಗಳು ಎನ್ನುತ್ತಾರೆ. ಇವು ಬೆಳೆಯುತ್ತಿರುವ ಕೋಶಗಳಲ್ಲಿ ನಿರ್ದಿಷ್ಟ ಗುಣಗಳನ್ನು ಉಂಟುಮಾಡುತ್ತವೆ. ಎರಡೇ ದಿನಗಳಲ್ಲಿ ಈ ಜೀವಕೋಶಗಳು ಎರಡು ಪದರಗಳಾಗಿ ಒಟ್ಟಿಗೇ ಬೆಳೆದುವಲ್ಲದೆ, ಒಳಭಾಗದಲ್ಲಿ ಸ್ವಲ್ಪ ದ್ರವವನ್ನೂ ಕೂಡಿಸಿಕೊಂಡಿದ್ದುವು.

ಇಂತಹ ಪುಟ್ಟ ಚೀಲಗಳ ಬೆಳವಣಿಗೆಯ ರೀತಿಯನ್ನು ಘರೀಬೀ ತಂಡ ಹಲವು ವಾರಗಳ ಕಾಲ ಗಮನಿಸಿತು. ಚೀಲದೊಳಗೆ ಕೂಡಿಕೊಂಡ ದ್ರವದಲ್ಲಿರುವ ಪ್ರೋಟೀನು ಹಾಗೂ ಇತರೆ ವಸ್ತುಗಳನ್ನು ವಿಶ್ಲೇಷಿಸಿತು. ಪದರಕೋಶಗಳಲ್ಲಿ ನಡೆಯುತ್ತಿರುವ ವಿವಿಧ ರಾಸಾಯನಿಕ ಚಟುವಟಿಕೆಗಳನ್ನೂ ಗುರುತಿಸಿತು. ಇವೆಲ್ಲವೂ ಸುಮಾರು ಒಂದು ತಿಂಗಳ ವಯಸ್ಸಿನ ಭ್ರೂಣವನ್ನು ಆವರಿಸಿರುವ ಭ್ರೂಣಚೀಲದಂತೆಯೇ ಇದ್ದುವು ಎನ್ನುತ್ತಾರೆ, ಘರೀಬೀ. ಇಷ್ಟು ವಯಸ್ಸಿನ ಭ್ರೂಣಚೀಲಗಳನ್ನು ಹೀಗೆ ಕೃತಕವಾಗಿ ಬೆಳೆಸಿದ್ದು ಇದೇ ಮೊದಲ ಬಾರಿ.

ಹಾಗಿದ್ದರೆ, ಇನ್ನೂ ಭ್ರೂಣಗಳನ್ನು ಗರ್ಭಾಶಯದ ಹೊರಗೇ ಬೆಳೆಸುವುದು ಸಾಧ್ಯವಾಗಬಹುದೇ? ಬಹುಶಃ ಈಗಲೇ ಅದು ಆಗಲಿಕ್ಕಿಲ್ಲ. ಏನಿದ್ದರೂ ಈ ಪುಟ್ಟ ಚೀಲಗಳು ಅಮ್ನಿಯಾನ್ ಪದರ ಹೇಗೆ ಬೆಳೆಯುತ್ತದೆ ಎನ್ನುವುದನ್ನು ಕೂಲಂಕಷವಾಗಿ ಅರ್ಥ ಮಾಡಿಕೊಳ್ಳಲು ನೆರವಾಗಬಹುದು. ಇದುವೂ ಮುಖ್ಯವೇ. ಏಕೆಂದರೆ, ಈ ಪೊರೆ ಇಲ್ಲದೇ ಇದ್ದರೆ ಬಹುಶಃ ಯಾವ ಭೂಜೀವಿಯ ಭ್ರೂಣವೂ ಬದುಕಿ ಉಳಿಯುತ್ತಿರಲಿಲ್ಲ; ಒಣಗಿ ನಷ್ಟವಾಗಿಬಿಡುತ್ತಿತ್ತು. ಹಾಗೆ ಮಾಡದೆ ಕಾಯುವ ಅಮ್ನಿಯಾನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು, ಪುಟ್ಟದಾದ ಈ ಕೃತಕ ಪೊರೆ ನೆರವಾಗಲಿದೆ ಎನ್ನುತ್ತದೆ, ಈ ಶೋಧದ ವಿವರಗಳನ್ನು ಪ್ರಕಟಿಸಿರುವ 'ಸೆಲ್' ಪತ್ರಿಕೆ. ❖

ವೈಫೈ ಉಚಿತ ಅಪಾಯ ಖಚಿತ

ಪಬ್ಲಿಕ್ ವೈಫೈ ಸಂಪರ್ಕಗಳು ಆ ಕ್ಷಣಕ್ಕೆ ಒಂದಿಷ್ಟು ಹಣವನ್ನು ಉಳಿತಾಯ ಮಾಡಬಹುದು. ಆದರೆ, ಮುಂದೆ ಆಗಬಹುದಾದ ನಷ್ಟದ ಪ್ರಮಾಣವನ್ನು ಊಹಿಸಲಾಗದು. ಹೀಗಾಗಿ ಆನ್‌ಲೈನ್‌ನಲ್ಲಿ ಇರುವಾಗ ಎಚ್ಚರವಾಗಿರಿ.

ಅವಿನಾಶ್ ಬಿ.

ಉಚಿತ ಸಿಗುತ್ತದೆ ಎಂದರೆ ಎಲ್ಲವೂ ಇರಲಿ ಎಂಬ ಮನಃಸ್ಥಿತಿ ಅವಸರದ ಈ ಯುಗದಲ್ಲಿ ಬಹುತೇಕರಲ್ಲಿದೆ. ಸಾರ್ವಜನಿಕ ಸ್ಥಳಗಳಲ್ಲಿ ಉಚಿತವಾಗಿ ವೈಫೈ ಇಂಟರ್ನೆಟ್ ಸಂಪರ್ಕ ವ್ಯವಸ್ಥೆ ಸಿಗುತ್ತದೆ ಎಂದರೆ ಯಾರಿಗೆ ಬೇಡ? ಈ ರೀತಿಯ ವೈಫೈ ಸೌಕರ್ಯ ಇರುವಲ್ಲಿಗೇ ಹೋಗಿ, ಅಲ್ಲಿ ಸಾಕಷ್ಟು ಮೂವಿಗಳನ್ನು ನೋಡುವುದೋ, ಡೌನ್‌ಲೋಡ್ ಮಾಡುವುದೋ... ಅಂತರ್ಜಾಲ ಜಾಲಾಡುವುದೋ – ಹೀಗೆ ಎಲ್ಲವನ್ನೂ ಮಾಡಿಕೊಂಡು ಮನೆಗೆ ಮರಳುವವರೂ ಇದ್ದಾರೆ. ವಿಶೇಷವಾಗಿ ಈಗಿನ ಮೊಬೈಲ್‌ಪ್ರಿಯ ಪೀಳಿಗೆಯ ಯುವಜನರಿಗೆ ತಾವಿರುವ ತಾಣಗಳ ಸುತ್ತಮುತ್ತ ಎಲ್ಲೆಲ್ಲ ಉಚಿತ ವೈಫೈ ಸೌಕರ್ಯ ಸಿಗುತ್ತದೆ ಎಂಬುದು ಬಹುತೇಕ ತಿಳಿದೇ ಇರುತ್ತದೆ.

ಆದರೆ, ಉಚಿತವಾಗಿ ಸಿಗುವುದು ಅಪಾಯಕಾರಿ! ನಾವು ಎಚ್ಚರಿಕೆ ವಹಿಸದಿದ್ದರೆ ಮುಂದೆ ಪಶ್ಚಾತ್ತಾಪ ಪಡುವುದಕ್ಕೆ ಸಮಯವೂ ಇಲ್ಲದಾಗಬಹುದು. ಕಷ್ಟಪಟ್ಟು ಸಂಪಾದಿಸಿದ ಹೆಸರು, ಹಣ, ಖಾಸಗಿ ಮಾಹಿತಿಗಳೆಲ್ಲವೂ ಕೆಲವೇ ಕ್ಷಣಗಳಲ್ಲಿ ಮಣ್ಣುಪಾಲಾಗಬಹುದು.

ಕೆಫೆ, ಮಾಲ್‌ಗಳು, ರೈಲು ನಿಲ್ದಾಣಗಳು, ಬಸ್ ನಿಲ್ದಾಣಗಳು, ವಿಮಾನ ನಿಲ್ದಾಣ ಮುಂತಾದವುಗಳಲ್ಲಿ ಉಚಿತ ವೈಫೈ ಸಂಪರ್ಕ ಸಿಗುತ್ತದೆ. ನಮ್ಮ ಮೊಬೈಲ್ ಡೇಟಾಕ್ಕಿಂತ ವೇಗವಾಗಿಯೂ, ಅದಕ್ಕೂ ಮೇಲಾಗಿ ಉಚಿತವಾಗಿಯೂ ದೊರೆಯುತ್ತಿರುವುದರಿಂದ ಖುಷಿಯೂ ಆಗುತ್ತದೆ. ಮತ್ತು ಅಮೂಲ್ಯ ಮಾಹಿತಿಗಳ ಆಗರವಾಗಿರುವ ನಮ್ಮ ಮೊಬೈಲ್ ಫೋನ್ ಅಥವಾ ಲ್ಯಾಪ್‌ಟಾಪ್ ಅನ್ನು ಸಂಪರ್ಕಿಸುತ್ತೇವೆ. ಆದರೆ ಆ ಖುಷಿ ಕ್ಷಣಿಕವಾಗಬಹುದು.

ಏನಾಗಬಹುದು?

- ಸರಿಯಾದ ಟೂಲ್ ಹೊಂದಿರುವ, ತಂತ್ರಜ್ಞಾನದ ಅರಿವಿರುವ ಯಾರೇ ಆದರೂ ನಿಮ್ಮ ಖಾಸಗಿ ಮಾಹಿತಿಗಳನ್ನೆಲ್ಲ ಕದಿಯಬಹುದಾಗಿದೆ.
- ಸಾರ್ವಜನಿಕ ವೈಫೈ ವ್ಯವಸ್ಥೆಗಳು ಬಹುತೇಕ ಅಸುರಕ್ಷಿತವಾಗಿದ್ದು, ನಮ್ಮ ಡಿಜಿಟಲ್ ಸಾಧನಗಳಿಗೆ ಸುಲಭವಾಗಿ ಮಾಲ್‌ವೇರ್‌ಗಳು (ಕುತಂತ್ರಾಂಶಗಳು) ಸ್ವಯಂಚಾಲಿತವಾಗಿ ಅಳವಡಿಕೆಯಾಗಬಹುದು.
- ನಿರ್ದಿಷ್ಟ ಕಂಪನಿಗಳು ಸೇವಾ ರೂಪದಲ್ಲಿ ಅವುಗಳನ್ನು ಒದಗಿಸಿರುತ್ತವೆಯಾದರೂ, ನಮ್ಮ ಸಾಧನದ ಸುರಕ್ಷತೆಗೆ ನಾವೇ ಜವಾಬ್ದಾರರು.
- ವಂಚಕರು ಆ ಸ್ಥಳದ ಹೆಸರನ್ನೇ ಹೋಲುವಂತಹ ಸಾರ್ವಜನಿಕ ವೈಫೈ ಹಾಟ್‌ಸ್ಪಾಟ್‌ಗಳನ್ನು ತಮ್ಮ ಸಾಧನಗಳಲ್ಲೇ ತೆರೆಯಬಲ್ಲರು. ಅಂದರೆ ಉಚಿತ ಏರ್‌ಪೋರ್ಟ್ ವೈಫೈ, ಉಚಿತ ಕೆಫೆ ವೈಫೈ, ಉಚಿತ ಹೋಟೆಲ್ ವೈಫೈ ಮುಂತಾದ ಹೆಸರುಗಳಲ್ಲಿ ವೈಫೈ ಹಾಟ್‌ಸ್ಪಾಟ್ ಆನ್ ಮಾಡಿಕೊಂಡು, ನಿಮ್ಮ ಸಾಧನಗಳ ಸರ್ಚ್‌ಗೆ ಸಿಗುವಂತೆ ಮಾಡಿ, ವಂಚನೆಯ ಬಲೆಗೆ ಯಾರು ಬೀಳುತ್ತಾರೆ ಅಂತ ಗಾಳ ಹಿಡಿದು ಕಾದು ಕೂತಿರಬಹುದು.
- ವಿವಿಧ ಖಾತೆಗಳಿಗೆ ನಾವು ಬಳಸುವ ಪಾಸ್‌ವರ್ಡ್‌ಗಳು, ಇ-ಮೇಲ್‌ಗಳು, ಕ್ರೆಡಿಟ್ ಕಾರ್ಡ್ ಮಾಹಿತಿ, ವಿಳಾಸ, ಹೆಸರು, ಜನ್ಮದಿನಾಂಕ, ಫೋನ್ ನಂಬರ್ ಮುಂತಾದವೆಲ್ಲವೂ ಇಲ್ಲಿ ಸೋರಿಹೋಗಬಹುದು. ಅವುಗಳನ್ನೆಲ್ಲ ಸಂಗ್ರಹಿಸುವ ಕು-ತಂತ್ರಾಂಶಗಳಿರುತ್ತವೆ ಮತ್ತು ವಂಚಕರ ಕೈಯಲ್ಲಿರುವುದೇ ಇಂಥ ಅತ್ಯಾಧುನಿಕ 'ತಂತ್ರಜ್ಞಾನ' ಎಂಬುದು ನೆನಪಿರಲಿ.
- ಮಾಲ್‌ವೇರ್‌ಗಳು ಸ್ವಯಂಚಾಲಿತವಾಗಿ ಅಥವಾ ಆಕಸ್ಮಿಕ ಕ್ಲಿಕ್ ಮೂಲಕವೂ ನಮ್ಮ ಸಾಧನಗಳಿಗೆ ಡೌನ್‌ಲೋಡ್ ಮಾತ್ರವಷ್ಟೇ ಅಲ್ಲ, ಇನ್‌ಸ್ಟಾಲ್ ಕೂಡ ಆಗಬಲ್ಲವು.
- ವೈಫೈಗೆ ಸಂಪರ್ಕಿತವಾಗಿರುವ ಸಾಧನಗಳಿಂದ ಹೆಸರು, ಪಾಸ್‌ವರ್ಡ್‌ಗಳು, ಕ್ರೆಡಿಟ್ ಕಾರ್ಡ್ ಮಾಹಿತಿ, ಬ್ಯಾಂಕ್ ಖಾತೆ ವಿವರ, ವಿಳಾಸ ಮುಂತಾದವುಗಳನ್ನೆಲ್ಲ ಈ ಕುತಂತ್ರಾಂಶಗಳು ಕಲೆಹಾಕಿ ತಮ್ಮ ಒಡೆಯನಿಗೆ ರವಾನಿಸುತ್ತವೆ.
- ಪರಿಣಾಮಗಳು: ನಮ್ಮ ಐಡೆಂಟಿಟಿಗೆ ಅಪಾಯ, ಬ್ಯಾಂಕ್ ಅಕೌಂಟ್ ಖಾಲಿಯಾಗುವ ಸಾಧ್ಯತೆ, ಸಾಮಾಜಿಕ ಖಾತೆಗಳೇ ಲಾಕೌಟ್ ಆಗುವ ಆತಂಕ, ನಮ್ಮದೇ ಹೆಸರಿನಲ್ಲಿ ಮತ್ತೊಂದು ಖಾತೆ ಸೃಷ್ಟಿಸಿ ಸ್ನೇಹಿತರಲ್ಲಿ ಹಣಕ್ಕಾಗಿ ಕೋರಿಕೆ, ಡಿಜಿಟಲ್ ಅರೆಸ್ಟ್, ಜೊತೆಗೆ, ನಮ್ಮ ಅಂತರ್ಜಾಲದ ಮಾಹಿತಿಯನ್ನು ಕಾಪಿಡುವ 'ಕುಕೀಸ್'ಗಳ ಜಾಡು ಹಿಡಿದು, ಬ್ಲ್ಯಾಕ್‌ಮೇಲ್ – ಇವೆಲ್ಲವೂ ಪೀಡೆಯಾಗಿ ಕಾಡಬಹುದು.

ಏನು ಮಾಡಬಹುದು?

1. ಸಾಧನದ 'ವೈಫೈ ಆಟೋ ಕನೆಕ್ಟ್' ವೈಶಿಷ್ಟ್ಯ ಆಫ್ ಮಾಡುವುದು

2. ವೈಫೈ ನೆಟ್‌ವರ್ಕ್ ಸಾಚಾ ಇದೆಯೋ ಎಂದು ಆ ಸ್ಥಳದ ಸಿಬ್ಬಂದಿಯಿಂದ ಖಚಿತಪಡಿಸಿಕೊಳ್ಳುವುದು

3. ವರ್ಚುವಲ್ ಪ್ರೈವೇಟ್ ನೆಟ್‌ವರ್ಕ್ (ವಿಪಿಎನ್‌ಆ್ಯಪ್ ಉಪಯೋಗಿಸಿ ಇಂಟರ್ನೆಟ್ ಬಳಸುವುದು (ಶುಲ್ಕ ತೆರಬೇಕಾಗಬಹುದು). ಕೆಲವು ಅತ್ಯಾಧುನಿಕ ಮೊಬೈಲ್ ಸಾಧನಗಳಲ್ಲಿ ಅಂತರ್-ನಿರ್ಮಿತವಾಗಿ ಈ ಸೌಕರ್ಯ ಇರುತ್ತದೆ.

4. ಸಾರ್ವಜನಿಕ ವೈಫೈ ಬಳಸಲೇಬೇಕಿದ್ದರೆ, ಆನ್‌ಲೈನ್ ಬ್ಯಾಂಕಿಂಗ್ ಅಥವಾ ಹಣಕಾಸು ವಹಿವಾಟು, ಶಾಪಿಂಗ್, ಲಾಗಿನ್ ಮುಂತಾದವನ್ನು ಮಾಡದಿರುವುದು.

5. ಅಪರಿಚಿತ ಲಿಂಕುಗಳನ್ನು ತಪ್ಪಿಯೂ ಕ್ಲಿಕ್ ಮಾಡದಿರುವುದು (ಇ-ಮೇಲ್, ವಾಟ್ಸ್‌ಆ್ಯಪ್, ಎಸ್‌ಎಂಎಸ್ ಮೂಲಕವೂ ಬಂದಿರಬಹುದು)

ಪಬ್ಲಿಕ್ ವೈಫೈ ಸಂಪರ್ಕಗಳು ಆ ಕ್ಷಣಕ್ಕೆ ಒಂದಿಷ್ಟು ಹಣವನ್ನು ಉಳಿತಾಯ ಮಾಡಬಹುದು. ಆದರೆ, ಮುಂದೆ ಆಗಬಹುದಾದ ನಷ್ಟದ ಪ್ರಮಾಣವನ್ನು ಊಹಿಸಲಾಗದು. ಹೀಗಾಗಿ ನೀವು ಅನುಸರಿಸಬೇಕಾದ ಏಕೈಕ ಎಚ್ಚರಿಕೆ: ಆನ್‌ಲೈನ್ ಆಗಿರುವಾಗ ಸುರಕ್ಷಿತವಾಗಿರಿ. ಹಿರಿಯರಿಗೂ ಮಕ್ಕಳಿಗೂ ಇದನ್ನು ಮನದಟ್ಟು ಮಾಡಿಸಿ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಬಹುಪದೋಕ್ತಿಗಳು

ಅಭ್ಯಾಸ 2.2

1) ಈ ಕೆಳಗಿನ ವರ್ಗ ಬಹುಪದೋಕ್ತಿಗಳ ಶೂನ್ಯತೆಗಳನ್ನು ಕಂಡುಹಿಡಿಯಿರಿ ಮತ್ತು ಸಹಗುಣಕಗಳ ನಡುವಿನ ಸಂಬಂಧವನ್ನು ತಾಳೆ ನೋಡಿ ದ ಸಹಗುಣಕ

(i) $x^2 - 2x - 8$ (ii) $4s^2 - 4s + 1$ (iii) $6x^2 - 3 - 7x$

(iv) $4u^2 + 8u$ (v) $t^2 - 15$ (vi) $3x^2 - x - 4$

ಪರಿಹಾರ:– **(ii) $4s^2–4s+1$**

$\Rightarrow 4s^2–2s–2s+1 = 2s(2s–1)–1(2s-1) = (2s–1)(2s–1)$

ಆದ್ದರಿಂದ,

$4s^2–4s+1$ ರ ಶೂನ್ಯತೆಗಳು (1/2, 1/2)

ಆದ್ದರಿಂದ ಶೂನ್ಯತೆಗಳ ಮೊತ್ತ $= (½)+(1/2) = 1 = -(-4)/4$

= –(S ದ ಸಹಗುಣಕ)/ s^2 ದ ಸಹಗುಣಕ

ಶೂನ್ಯತೆಗಳ ಗುಣಲಬ್ಧ= $(1/2)\times(1/2) = 1/4$

= (ಸ್ಥಿರಾಂಕ/ s^2 ದ ಸಹಗುಣಕ)

(iii) $6x^2–3–7x$

$\Rightarrow 6x^2–7x–3 = 6x^2 – 9x + 2x – 3$

$= 3x(2x – 3) +1(2x – 3)$

$= (3x+1)(2x-3)$

ಆದ್ದರಿಂದ,

$6x^2–3–7x$ ರ ಶೂನ್ಯತೆಗಳು (-1/3, 3/2)

ಆದ್ದರಿಂದ ಶೂನ್ಯತೆಗಳ ಮೊತ್ತ = -(1/3)+(3/2) = (7/6)

$= \frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ = $-(1/3)\times(3/2) = -(3/6)$

$= \frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

(iv) $4u^2+8u$ $\Rightarrow 4u(u+2)$

ಆದ್ದರಿಂದ, $4u^2 + 8u$ ರ ಶೂನ್ಯತೆಗಳು (0, -2).

ಆದ್ದರಿಂದ ಶೂನ್ಯತೆಗಳ ಮೊತ್ತ = 0+(-2) = -2 = -(8/4)

= –(uದ ಸಹಗುಣಕ)/ u^2 ದ ಸಹಗುಣಕ

ಶೂನ್ಯತೆಗಳ ಗುಣಲಬ್ಧ = $0\times-2 = 0 = 0/4$

= (ಸ್ಥಿರಾಂಕ/ u^2 ದ ಸಹಗುಣಕ)

(v) $t^2–15$ $\Rightarrow t^2 = 15$ or $t = \pm\sqrt{15}$

ಆದ್ದರಿಂದ,

$t^2 –15$ ರ ಶೂನ್ಯತೆಗಳು ($\sqrt{15}$, $-\sqrt{15}$)

ಆದ್ದರಿಂದ ಶೂನ್ಯತೆಗಳ ಮೊತ್ತ $=\sqrt{15}+(-\sqrt{15}) = 0 = -(0)/1$

= –(tದ ಸಹಗುಣಕ)/ t^2ದ ಸಹಗುಣಕ)

ಶೂನ್ಯತೆಗಳ ಗುಣಲಬ್ಧ = $\sqrt{15}\times(-\sqrt{15}) = -15 = -15/1$

= (ಸ್ಥಿರಾಂಕ/ t^2 ದ ಸಹಗುಣಕ)

(vi) $3x^2–x–4$

$\Rightarrow 3x^2–4x+3x–4 = x(3x-4)+1(3x-4) = (3x – 4)(x + 1)$

ಆದ್ದರಿಂದ, $3x^2 – x – 4$ ರ ಶೂನ್ಯತೆಗಳು (4/3, -1)

ಆದ್ದರಿಂದ ಶೂನ್ಯತೆಗಳ ಮೊತ್ತ = (4/3)+(-1) = (1/3)= -(-1/3)

$= \frac{-(x \text{ ದ ಸಹಗುಣಕ})}{x^2 \text{ ದ ಸಹಗುಣಕ}}$

ಶೂನ್ಯತೆಗಳ ಗುಣಲಬ್ಧ = $(4/3)\times(-1) = (-4/3)$

$= \frac{\text{ಸ್ಥಿರಾಂಕ}}{x^2 \text{ ದ ಸಹಗುಣಕ}}$

2. ಈ ಕೆಳಗಿನವುಗಳನ್ನು ಕ್ರಮವಾಗಿ ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧವನ್ನಾಗಿ ಹೊಂದಿರುವ ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

(i) $\frac{1}{4}, -1$ (ii) $\sqrt{2}, \frac{1}{3}$ (iii) $0, \sqrt{5}$

(iv) 1, 1 (v) $-\frac{1}{4}, \frac{1}{4}$ (vi) 4, 1

i) 1/4 , -1

ಪರಿಹಾರ:– ಶೂನ್ಯತೆಗಳ ಮೊತ್ತ = $\alpha+\beta$

ಶೂನ್ಯತೆಗಳ ಗುಣಲಬ್ದ= $\alpha \beta$

∴ ಶೂನ್ಯತೆಗಳ ಮೊತ್ತ = $\alpha+\beta = 1/4$

ಶೂನ್ಯತೆಗಳ ಗುಣಲಬ್ದ= $\alpha \beta = -1$

∴ α ಮತ್ತು βಗಳು P(x) ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ P(x)ಅನ್ನು ಹೀಗೆ ಬರೆಯಬಹುದು

$x^2–(\alpha+\beta)x +\alpha\beta = 0$

$x^2–(1/4)x +(-1) = 0$

$4x^2–x-4 = 0$

ಹೀಗಾಗಿ $4x^2–x–4$ ಇದು ವರ್ಗ ಬಹುಪದೋಕ್ತಿಯಾಗಿದೆ.

(ii)$\sqrt{2}$, 1/3

ಪರಿಹಾರ:– ಶೂನ್ಯತೆಗಳ ಮೊತ್ತ = = $\alpha + \beta = \sqrt{2}$

ಶೂನ್ಯತೆಗಳ ಗುಣಲಬ್ದ= = $\alpha \beta = 1/3$

∴ α ಮತ್ತು βಗಳು P(x) ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ P(x)ಅನ್ನು ಹೀಗೆ ಬರೆಯಬಹುದು

$x^2–(\alpha+\beta)x +\alpha\beta = 0$

$x^2 –(\sqrt{2})x + (1/3) = 0$

$3x^2-3\sqrt{2}x+1 = 0$

ಹೀಗಾಗಿ $3x^2-3\sqrt{2}x+1$ ಇದು ವರ್ಗ ಬಹುಪದೋಕ್ತಿಯಾಗಿದೆ.

(iii) 0, $\sqrt{5}$

ಪರಿಹಾರ:– ಶೂನ್ಯತೆಗಳ ಮೊತ್ತ = = $\alpha + \beta = 0$

ಶೂನ್ಯತೆಗಳ ಗುಣಲಬ್ದ= = $\alpha \beta = \sqrt{5}$

∴ α ಮತ್ತು β ಗಳು P(x) ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ P(x)ಅನ್ನು ಹೀಗೆ ಬರೆಯಬಹುದು

$x^2–(\alpha+\beta)x +\alpha\beta = 0$

$x^2–(0)x +\sqrt{5}= 0$

ಹೀಗಾಗಿ, $x^2+\sqrt{5}$ ಇದು ವರ್ಗ ಬಹುಪದೋಕ್ತಿಯಾಗಿದೆ.

(iv) 1, 1

ಪರಿಹಾರ:– ಶೂನ್ಯತೆಗಳ ಮೊತ್ತ = = $\alpha + \beta = 1$

ಶೂನ್ಯತೆಗಳ ಗುಣಲಬ್ದ= = $\alpha \beta = 1$

∴ α ಮತ್ತು βಗಳು P(x) ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ P(x)ಅನ್ನು ಹೀಗೆ ಬರೆಯಬಹುದು

$x^2–(\alpha+\beta)x +\alpha\beta = 0$

$x^2–x+1 = 0$

ಹೀಗಾಗಿ,, $x^2–x+1$ ಇದು ವರ್ಗ ಬಹುಪದೋಕ್ತಿಯಾಗಿದೆ

(v) -1/4, 1/4

ಪರಿಹಾರ:– ಶೂನ್ಯತೆಗಳ ಮೊತ್ತ = $\alpha + \beta = -1/4$

ಶೂನ್ಯತೆಗಳ ಗುಣಲಬ್ದ= $\alpha \beta = ¼$

∴ α ಮತ್ತು β ಗಳು P(x) ವರ್ಗ ಬಹುಪದೋಕ್ತಿಯ ಶೂನ್ಯತೆಗಳಾದರೆ, ಬಹುಪದೋಕ್ತಿ P(x)ಅನ್ನು ಹೀಗೆ ಬರೆಯಬಹುದು

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

PUC - CHEMISTRY

Types of Solutions

12) Explain why on addition of 1 mole of NaCl to 1 litre of water, the boiling point of water increases, while addition of 1 mole of methyl alcohol to one litre of water decreases its boiling point

Ans:- Sodium chloride (NaCl) is a non-volatile solute. When added to water taken in a beaker, the solute occupies some surface area. As a result, the vapour pressure decreases and the boiling point of solution increases. On the other hand, methyl alcohol is more volatile than water. The addition of methyl alcohol to water increases the total vapour pressure of the solution. The boiling point of the solution decreases.

13) **Components of a binary mixture of two liquids A and B were separated by distillation. After some time separation of components stopped and the composition of the vapour phase became the same as that of the liquid phase. Both the components started coming in the distillate. Explain why this happened.**

Ans: When the composition of a binary mixture of two liquids A and B in the liquid state and in the vapour phase is the same, the mixture is known as an azeotropic mixture. In any azeotropic mixture, liquids are boils at the same temperature without undergoing any change in composition.

14) When two perfect solutions with volume V each are combined, What is the volume of the solution as a result?

Ans:- 2V (When two perfect solutions are mixed, there is no change in volume.)

15) What is an example of camphor in N2 gas?

Ans:- Solid in gas solution

Solid in gaseous solution is an example of camphor in N2 gas. Gaseous solution refers to a solution in which the solvent is gaseous. Other gaseous solutions include air (O2 + N2), iodine vapors in air, humidity in air, and so on.

16) What type of furnace is used (1) Calcination (2) Smelting

Ans:- Calcination - Reverberatory furnace

Smelting - Blast furnace

17) What happens when a solute crystal is added to a supersaturated solution?

Ans:- The solute precipitates out of the solution

Solute particles leave the solution and form a crystalline precipitate when a solute crystal is added to a supersaturated solution. Seeding refers to the addition of the solute crystal.

18) Concentration terms such as mass percentage, ppm, mole fraction and molality are independent of temperature; however molarity is a function of temperature. Explain.

Ans. By definition, molarity takes into account the volume of the solution which changes with change in temperature. All other terms, for expressing the concentration of a solution involve the mass of the solvent which is not influenced by the temperature.

19) What is the significance of Henry's Law constant K_H?

Ans:- Henry's Law constant (K_H) helps in comparing the relative solubilities of different gases in the same solvent (e.g. water). In general, lesser the value of K_H, more is the solubility of a gas.

20) Why are aquatic species more comfortable in cold water in comparison to warm water?

Ans:- For breathing, aquatic species need oxygen. In general the solubility of a gas in water or any other solvent decreases with the rise in temperature. Therefore, oxygen is more soluble in cold water than in warm water. As a result, aquatic species feel more comfortable in cold water compared to warm water.

21) Why is vapour pressure of an aqueous solution of glucose lower than that of water?

Ans:- Evaporation of liquid is a surface phenomenon. More the surface area available, more is the evaporation of the liquid. Now glucose is a non-volatile solute. It occupies certain surface area of water. This means evaporation of water from the surface gets reduced and its vapour presence also gets lowered.

22) How does sprinkling of salt help in clearing the snow covered roads in hilly areas? Explain the phenomenon involved in the process.

Ans:- The phenomenon involved in the melting of snow in snow covered roads is the depression in freezing point which is caused by the addition of non-volatile impurities to a liquid. Addition of salt (sodium chloride) lowers the freezing point temperature of water and thus, helps in the melting of snow.

23) How can the hard calcium carbonate layer of the egg be removed without damaging its semipermeable membrane? Can this egg be inserted into a bottle with a narrow neck without distorting its shape? Explain the process involved.

Ans:- The hard layer of egg white in colour, consists of calcium carbonate.

It can be removed by placing the egg in dilute hydrochloric acid for sometime. It dissolves calcium carbonate, leaving behind the egg without damaging its soft semipermeable membrane. The size of the egg can be reduced or it shrinks by placing in saline water (contains Na*Cl*) for sometime. The fluid from the egg slowly escapes and passes into saline water which is at higher osmotic pressure (hypertonic in nature). Now, the egg with reduced size can be inserted in a bottle with narrow neck. If the bottle contains water, the egg will regain its original shape and size due to osmosis of water (hypotonic) through the semipermeable membrane.

ಮುಂದುವರಿದ ಮಳೆ ಆರ್ಭಟ; ತಗ್ಗದ ಸಂಕಷ್ಟ

ಮಂಗಳವಾರ ನಸುಕಿನಲ್ಲಿ ಅಬ್ಬರಿಸಿದ ಮಳೆ; ಮುಂಜಾನೆಯಿಂದ ಮಧ್ಯಾಹ್ನದವರೆಗೆ ವಾಹನ ಸವಾರರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಭಾಗಗಳಲ್ಲಿ ಮಂಗಳವಾರ ನಸುಕಿನಿಂದ ಮಧ್ಯಾಹ್ನದವರೆಗೆ ಮಳೆಯ ಆರ್ಭಟ ಹೆಚ್ಚಾಗಿದ್ದು, ಜಲಾವೃತ ಪ್ರದೇಶಗಳಲ್ಲಿ ಮತ್ತಷ್ಟು ನೀರು ಸೇರಿಕೊಂಡಿದೆ.

ಮಂಗಳವಾರ ನಸುಕಿನ 3 ಗಂಟೆಗೆ ಆರಂಭವಾದ ಮಳೆ ಮುಂಜಾನೆ 8ರವರೆಗೆ ಸುರಿಯಿತು. ಮಧ್ಯಾಹ್ನದವರೆಗೂ ಮೋಡ ಕವಿದ ವಾತಾವರಣವಿದ್ದು, ಮಧ್ಯಾಹ್ನ ಮತ್ತೆ ಬಿರುಸಾಗಿ ಮಳೆ ಸುರಿಯಿತು.

ಎರಡು ದಿನಗಳಿಂದ ಮಳೆಯಿಂದ ತತ್ತರಿಸಿದ್ದ ಜನರಿಗೆ ಮಂಗಳವಾರ ಸುರಿದ ಮಳೆ ಮತ್ತಷ್ಟು ಸಂಕಷ್ಟ ತಂದೊಡ್ಡಿತು. ಮಹದೇವಪುರದ ಸಾಯಿ ಲೇಔಟ್‌ನಲ್ಲಿ ಮಳೆ ನೀರು ತಗ್ಗಲಿಲ್ಲ. ಹಲವು ಪ್ರಮುಖ ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡಿದರು.

ಮಂಗಳವಾರ ಮಧ್ಯಾಹ್ನ ಪುಲಕೇಶಿನಗರ ವ್ಯಾಪ್ತಿಯಲ್ಲಿ ಅತಿಹೆಚ್ಚು (3.2 ಸೆಂ.ಮೀ) ಮಳೆಯಾಯಿತು. ಹಂಪಿನಗರ, ಬಸವೇಶ್ವರನಗರ, ಕಾಟನ್‌ಪೇಟೆ, ಪೀಣ್ಯ, ನಾಯಂಡಹಳ್ಳಿ, ಹೇರೋಹಳ್ಳಿ, ಯಲಹಂಕ, ಬಾಣಸವಾಡಿ, ರಾಜರಾಜೇಶ್ವರಿ ನಗರದಲ್ಲಿ ತಲಾ 2 ಸೆಂ.ಮೀ ಮಳೆಯಾಯಿತು.

ಪರಿಶೀಲನೆ: 'ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ರಾಜಕಾಲುವೆ ಪುನರ್ ನವೀಕರಣ ಕಾಮಗಾರಿಯನ್ನು ಕೈಗೊಂಡು, ಜಲಾವೃತವಾಗದಂತೆ ಕ್ರಮ ಕೈಗೊಳ್ಳಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜಕಾಲುವೆ ಹಾಗೂ ಮೆಟ್ರೊ ಕಾಮಗಾರಿಯಿಂದಾಗಿ ನೀರಿನ ಹರಿವು ಸರಿಯಾಗಿ ಹೋಗಲು ಜಾಗ ಇಲ್ಲದ ಕಾರಣ ರಸ್ತೆ ಜಲಾವೃತ-ವಾಗುತ್ತಿರುವ ಬಗ್ಗೆ ಸಚಿವ ರಾಮಲಿಂಗಾರೆಡ್ಡಿ ಅವರೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಅವರು ಮಾತನಾಡಿದರು. 'ರಾಜಕಾಲುವೆಯಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಾಗಿರುವುದರಿಂದ ಸಿಲ್ಕ್ ಬೋರ್ಡ್ ಜಂಕ್ಷನ್ ಜಲಾವೃತವಾಗಿದೆ. ಜಂಕ್ಷನ್‌ನಲ್ಲಿ ರಾಜಕಾಲುವೆಯ ಪುನರ್ ನವೀಕರಣ ಕಾಮಗಾರಿ ಕೈಗೆತ್ತಿಕೊಳ್ಳಬೇಕಿದೆ. ಬಿಎಂಆರ್‌ಸಿಎಲ್ ಅಗತ್ಯ ಕ್ರಮಗಳನ್ನು ಕೈಗೊಂಡು ಜಲಾವೃತವಾಗುವುದನ್ನು ತಪ್ಪಿಸಬೇಕು' ಎಂದು ಅಧಿಕಾರಿಗಳಗೆ ಸೂಚಿಸಿದರು.

'ಕೆಎಎಸ್ ಆಫೀಸರ್ಸ್ ಲೇಔಟ್‌ನಲ್ಲಿ ಕಾಲುವೆ ನಿರ್ಮಿಸ-ಬೇಕಿದ್ದು, ಭೂಸ್ವಾಧೀನ ಮಾಡಿಕೊಳ್ಳಬೇಕಿದೆ. ಈ ಸಂಬಂಧ ವಿಪತ್ತು ನಿರ್ವಹಣೆ ಅಡಿ ತಾತ್ಕಾಲಿಕವಾಗಿ ನೀರು ಹರಿದು ಹೋಗುವಂತೆ ವ್ಯವಸ್ಥೆ ಮಾಡಿ, ನಂತರ ಶಾಶ್ವತ ಕಾಲುವೆ ನಿರ್ಮಾಣ ಮಾಡಬೇಕು' ಎಂದು ಅಧಿಕಾರಿಗಳಿಗೆ ಹೇಳಿದರು.

ಕೇಂದ್ರ ರೇಷ್ಮೆ ಮಂಡಳಿ (ಸೆಂಟ್ರಲ್ ಸಿಲ್ಕ್ ಬೋರ್ಡ್) ಮೆಟ್ರೊ ನಿಲ್ದಾಣದ ಒಳಗೆ ಮಳೆನೀರು ನುಗ್ಗಿತ್ತು ಪ್ರಜಾವಾಣಿ ಚಿತ್ರ

ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ವಲಯ ಅಧಿಕಾರಿಗಳೊಂದಿಗೆ ಮಂಗಳವಾರ ಮಧ್ಯಾಹ್ನ ವರ್ಚುವಲ್ ಸಭೆ ನಡೆಸಿ, ಮಳೆಯಿಂದ ಉಂಟಾಗಿರುವ ಸಂಕಷ್ಟ ಪರಿಹಾರಕ್ಕೆ ಅಗತ್ಯ ನಿರ್ದೇಶನಗಳನ್ನು ನೀಡಿದರು.

'ನಿಯಂತ್ರಣ ಕೊಠಡಿಗಳಿಗೆ ಬಂದಂತಹ ದೂರುಗಳಿಗೆ ತಕ್ಷಣ ಸ್ಪಂದಿಸಿ, ಸಮಸ್ಯೆಗಳನ್ನು ಬಗೆಹರಿಸಬೇಕು. ಪಾಲಿಕೆಯ ಎಲ್ಲ ಎಂಟು ವಲಯಗಳಲ್ಲಿ ಅಗ್ನಿಶಾಮಕ ಠಾಣೆಗಳೊಂದಿಗೆ ವಲಯ ಆಯುಕ್ತರು ಸದಾ ಸಂಪರ್ಕದಲ್ಲಿದ್ದು, ತುರ್ತು ಸಂದರ್ಭಗಳಲ್ಲಿ ಅಗ್ನಿ ಶಾಮಕ ಸಿಬ್ಬಂದಿ ಹಾಗೂ ವಾಹನಗಳನ್ನು ಬಳಸಿಕೊಳ್ಳಬೇಕು' ಎಂದು ಸೂಚಿಸಿದರು.

ಸಾಯಿ ಲೇಔಟ್‌ನಲ್ಲಿ ಜಲಾವೃತಗೊಂಡ ಪ್ರದೇಶದ ಜನರಿಗೆ ಅಗತ್ಯ ಆಹಾರ ಸಾಮಗ್ರಿಗಳನ್ನು ಬಿಬಿಎಂಪಿ ಸಿಬ್ಬಂದಿ ಜೆಸಿಬಿ ಮೂಲಕ ವಿತರಿಸಿದರು ಚಿತ್ರ: ಪ್ರಶಾಂತ್ ಎಚ್‌.ಜಿ.

ಸಾಯಿಲೇಔಟ್‌ನಲ್ಲಿ ಆರೋಗ್ಯ ಶಿಬಿರ

ಮಹದೇವಪುರ ವಲಯದ ಸಾಯಿ ಲೇಔಟ್ ಜಲಾವೃತವಾಗಿರುವುದರಿಂದ ನಿವಾಸಿಗಳಿಗಾಗಿ ಪಾಲಿಕೆಯ ಆರೋಗ್ಯ ವಿಭಾಗದಿಂದ ಮಂಗಳವಾರ 'ಆರೋಗ್ಯ ಶಿಬಿರ'ವನ್ನು ಆಯೋಜಿಸಿ, ಔಷಧಗಳನ್ನು ಉಚಿತವಾಗಿ ವಿತರಿಸಲಾಯಿತು.

ವಲಯ ಆಯುಕ್ತ ರಮೇಶ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. 'ಸಾಯಿ ಲೇಔಟ್‌ನಲ್ಲಿ ನೀರಿನ ಪ್ರಮಾಣ ಶೇ 80ರಷ್ಟು ಕಡಿಮೆಯಾಗಿದ್ದು, ಮಂಗಳವಾರ ರಾತ್ರಿ ಮಳೆ ಬರದಿದ್ದರೆ ಸಂಪೂರ್ಣವಾಗಿ ನೀರು ಹೊರಹೋಗಲಿದೆ. ನೀರು ರಸ್ತೆ ಬದಿಯಿರುವ ಎಲ್ಲ ಚರಂಡಿಗಳಲ್ಲಿ ಸ್ಲ್ಯಾಬ್ ತೆಗೆದು ಜೆಸಿಬಿ ಹಾಗೂ ಸಿಬ್ಬಂದಿ ಮೂಲಕ ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಲಾಗಿದೆ' ಎಂದು ತಿಳಿಸಿದರು.

'ಪಾಲಿಕೆ ಅಧಿಕಾರಿಗಳು ಖುದ್ದು ಸ್ಥಳದಲ್ಲಿದ್ದು, ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಸ್ಥಳದಲ್ಲಿ ಒಂದು ಜೆಸಿಬಿ, 2 ಟ್ರ್ಯಾಕ್ಟರ್, 2 ಪಂಪ್ ಸೆಟ್‌ಗಳಿದ್ದು, 16 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಣ್ಣ ಅವಧಿಯಲ್ಲಿ ಅಧಿಕ ಮಳೆಯಾದ ಪರಿಣಾಮ ಸಮಸ್ಯೆಯಾಗಿದ್ದು, ಮಳೆ ಕಡಿಮೆಯಾದರೆ ನೀರಿನ ಮಟ್ಟ ಕ್ರಮೇಣ ಕಡಿಮೆಯಾಗಲಿದೆ. ಸ್ಥಳೀಯ ನಿವಾಸಿಗಳಿಗೆ ದಿನದ ತಿಂಡಿ, ಊಟ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ' ಎಂದರು.

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಎಚ್‌ಎಸ್‌ಆರ್– ಅನುಗ್ರಹ ಲೇಔಟ್‌ನಲ್ಲಿ ಜಲಾವೃತವಾಗಿದ್ದ ಪ್ರದೇಶಗಳಲ್ಲಿ ಪಂಪ್ ಸೆಟ್‌ಗಳನ್ನು ಅಳವಡಿಸಿ ನೀರು ತೆರವು ಮಾಡಲಾಗಿದೆ.

ಪಶ್ಚಿಮ ವಲಯ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಅವರು ಕೆ.ಆರ್ ಮಾರುಕಟ್ಟೆ ಹಾಗೂ ಬೇಲಿಮಠದ ರಸ್ತೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. 'ಕೆ.ಆರ್. ಮಾರುಕಟ್ಟೆ ಪಾರ್ಕಿಂಗ್ ಸ್ಥಳದಲ್ಲಿ ನೀರು ನಿಂತಿದ್ದು, ಅದನ್ನು ತೆರವುಗೊಳಿಸಬೇಕು. ರಸ್ತೆಗಳಲ್ಲಿ ಜಲಾವೃತವಾಗುವ ಪ್ರದೇಶಗಳ ಮೇಲೆ ಹೆಚ್ಚು ನಿಗಾವಹಿಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಆರ್.ಆರ್. ನಗರ ವಲಯದ ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿರುವ ಜನನಿ ಶಾಲೆಯ ಬಳಿ ತಡೆಗೋಡೆ ಕುಸಿದಿದೆ. ವಿದ್ಯುತ್ ಕಂಬ ಕೂಡ ಬಿದ್ದಿದೆ. ಈ ಸಂಬಂಧ ಮಾಲೀಕರಿಗೆ ಶೋಕಾಸ್ ನೋಟೀಸ್ ನೀಡಲಾಗುತ್ತದೆ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಜವರೇಗೌಡನದೊಡ್ಡಿ ಸುತ್ತಮುತ್ತಲಿನ ಪ್ರದೇಶಗಳು ರಸ್ತೆಗಳ ಸೈಡ್ ಡ್ರೈನ್‌ಗಳಲ್ಲಿ ಹೂಳು ತುಂಬಿದ್ದರಿಂದ ಜಲಾವೃತವಾಗಿವೆ. ರಸ್ತೆ ಭಾಗ ಕತ್ತರಿಸಿ ನೀರು ಹರಿದು ಹೋಗಲು ವ್ಯವಸ್ಥೆ ಮಾಡಲಾಗಿದೆ. ಸೈಡ್‌ಡ್ರೈನ್‌ಗಳ ಸ್ವಚ್ಛತಾ ಕಾರ್ಯ ಮಾಡಲಾಗುತ್ತಿದೆ.

ಸಾಯಿಲೇಔಟ್‌ನಲ್ಲಿ ಜಲಾವೃತಗೊಂಡ ಪ್ರದೇಶದಲ್ಲಿ ಸ್ಥಳೀಯ ನಿವಾಸಿಗಳು ಸಾಕು ನಾಯಿಗಳೊಂದಿಗೆ ಸಾಗಿದರು ಪ್ರಜಾವಾಣಿ ಚಿತ್ರ

ಎಲ್ಲೆಲ್ಲಿ ಹೆಚ್ಚು ಮಳೆ? (ಸೆಂ.ಮೀನಲ್ಲಿ) (ಮಂಗಳವಾರ ನಸುಕಿನಿಂದ ಮುಂಜಾನೆವರೆಗೆ)

ರಾಜರಾಜೇಶ್ವರಿನಗರ	15
ಜ್ಞಾನಭಾರತಿ	15
ಕೆಂಗೇರಿ	14.4
ಬಸವನಗುಡಿ	13.5
ವಿದ್ಯಾಪೀಠ	13.5
ಕುಮಾರಸ್ವಾಮಿ ಲೇಔಟ್	13.5
ನಾಯಂಡಹಳ್ಳಿ	13.2
ದೊರೆಸಾನಿಪಾಳ್ಯ	9.85
ಸಾರಕ್ಕಿ	9.85
ಕೋಣನಕುಂಟೆ	9.85
ಬಿಳೇಕಹಳ್ಳಿ	9.8
ಬಿಟಿಎಂ ಲೇಔಟ್	9.8
ಗಾಳಿ ಆಂಜನೇಯ ದೇವಸ್ಥಾನ	9.25
ಹಂಪಿ ನಗರ	9.25
ಎಚ್.ಗೊಲ್ಲಹಳ್ಳಿ	7.1
ಮಾರುತಿ ಮಂದಿರ	6.95
ನಾಗರಬಾವಿ	6.3
ಹೆಮ್ಮಿಗೆಪುರ	6.3
ಹೇರೋಹಳ್ಳಿ	6.3
ಉತ್ತರಹಳ್ಳಿ	6.1
ಪಟ್ಟಾಭಿರಾಮನಗರ	6.1
ಲಕ್ಕಸಂದ್ರ	6.1
ಬೊಮ್ಮನಹಳ್ಳಿ	5.45
ಕೋರಮಂಗಲ	5.45
ಅರಕೆರೆ	5.3
ಸಂಪಂಗಿರಾಮನಗರ	5.1
ಚಾಮರಾಜಪೇಟೆ	5.1

ಬಿಬಿಎಂಪಿಯಿಂದ ಮುಂಜಾಗ್ರತಾ ಕ್ರಮ

- 2024-25ನೇ ಸಾಲಿನಲ್ಲಿ ಸರ್ಕಾರ 'ಕರ್ನಾಟಕ ಜಲ ಭದ್ರತೆ ಮತ್ತು ವಿಪತ್ತು ಸ್ಥಿತಿ ಸ್ಥಾಪಕತ್ವ' ಯೋಜನೆಯಡಿ ₹2,000 ಕೋಟಿಯನ್ನು ಪಾಲಿಕೆಗೆ ಅನುದಾನವಾಗಿ ಒದಗಿಸುತ್ತಿದೆ. ಇದರಡಿ, ಬಾಕಿ ಇರುವ ಎಲ್ಲ 173.90 ಕಿ.ಮೀ. ಉದ್ದ ಮಣ್ಣಿನ ಕಾಲುವೆಗಳಿಗೆ ಆರ್.ಸಿ.ಸಿ ತಡೆಗೋಡೆ ನಿರ್ಮಾಣ
- ಕೆಎಸ್‌ಎನ್‌ಡಿಎಂಸಿ ಸಂಸ್ಥೆಯ ವತಿಯಿಂದ ಹೆಚ್ಚುವರಿಯಾಗಿ ವೈಜ್ಞಾನಿಕ ಕ್ರಮ
- ಬೃಹತ್ ನೀರುಗಾಲುವೆ ಒತ್ತುವರಿಗಳನ್ನು ಪರಿಣಾಮಕಾರಿಯಾಗಿ ತೆರವುಗೊಳಿಸಲು ಕ್ರಮ
- ಬೆಂಗಳೂರು ನಗರದಲ್ಲಿರುವ ಕೆರೆಗಳಿಗೆ ತೂಬುಕಾಲುವೆಗಳನ್ನು ಅಳವಡಿಸಿ ಕೆರೆಗಳನ್ನು ಪ್ರವಾಹ ತಡೆಗಟ್ಟುವುದು

3 ಕ್ವಿಂಟಲ್ ರಾಗಿ ನೀರು ಪಾಲು

ರಾಜರಾಜೇಶ್ವರಿನಗರ: ವೃಷಭಾವತಿ ರಾಜಕಾಲುವೆ ಸಮೀಪದ ವಸತಿ ಸಮುಚ್ಚಯದ ಸೆಲ್ಲರ್‌ಗೆ ಮಳೆ ನೀರು ನುಗ್ಗಿ 20 ಕ್ಕೂ ಹೆಚ್ಚು ಕಾರುಗಳಿಗೆ ಹಾನಿಯಾಗಿದೆ. ಕೃಷ್ಣಪ್ಪ ಲೇಔಟ್‌ನ ಗಿರಣಿಗೆ (ರಾಗಿ ಮಿಲ್) ಚರಂಡಿ ನೀರು ನುಗ್ಗಿ ಮೂರು ಕ್ವಿಂಟಲ್ ರಾಗಿ ನೀರು ಪಾಲಾಗಿದೆ.

ಆರ್.ಆರ್.ನಗರದ ಶಕ್ತಿ ಹಿಲ್ಸ್ ರೆಸಾರ್ಟ್ ತಡೆಗೋಡೆ ಕುಸಿದು ಬಿದ್ದಿದೆ. ವೃಷಾಭವತಿ ರಾಜಕಾಲುವೆ ಬಳಿಯ ಎರಡು ಮನೆ ಹಾಗೂ ಜವರೇಗೌಡನ ದೊಡ್ಡಿಯ ಮೂರು ಮನೆಗಳಿಗೆ ನೀರು ನುಗ್ಗಿದೆ.

ಬಿಬಿಎಂಪಿ ವಲಯ ಆಯುಕ್ತ ಡಾ.ಬಿ.ಸಿ.ಸತೀಶ್, ಜಂಟಿ ಆಯುಕ್ತೆ ಡಾ.ಆರತಿ ಆನಂದ್, ಕಾರ್ಯಪಾಲಕ ಎಂಜಿನಿಯರ್ ಪಾಪರೆಡ್ಡಿ ಅವರು ಸ್ಥಳಕ್ಕೆ ಭೇಟಿ ನೀಡಿ, ಜೆಸಿಬಿ ಸಹಾಯದಿಂದ ಮಳೆ ನೀರು ಹೊರ ಹಾಕಿಸಿದರು.

ಅನಿಲ್ ಕುಂಬ್ಳೆ ವೃತ್ತದಲ್ಲಿ ಮಳೆನೀರು ಚರಂಡಿಗೆ ಹೋಗಲು ಬಿಬಿಎಂಪಿ ಕಾರ್ಮಿಕರು ದುರಸ್ತಿ ಕಾರ್ಯ ನಡೆಸಿದರು ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಧಾರಾಕಾರ ಮಳೆಯಿಂದಾಗಿ ಹೊಸೂರು ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು ಚಿತ್ರ: ರಂಜು ಪಿ

40 ಕೆರೆ ಬಹುತೇಕ ಪೂರ್ಣ

ನಗರದಲ್ಲಿ ಮೂರು ದಿನದಿಂದ ಬಿರುಸಾದ ಮಳೆಯಾಗುತ್ತಿರುವುದರಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿರುವ 63 ಕೆರೆ ಪೂರ್ಣ ಭರ್ತಿಯಾಗಿದ್ದು, ಕೋಡಿಹರಿಯುತ್ತಿವೆ. 40 ಕೆರೆಗಳು ಬಹುತೇಕ ತುಂಬಿವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 183 ಕೆರೆಗಳಿದ್ದು, ಅತಿ ಹೆಚ್ಚು ಕೆರೆಗಳನ್ನು ಹೊಂದಿರುವ ಮಹದೇವಪುರ ವಲಯದಲ್ಲಿ 13 ಕೆರೆಗಳು ತುಂಬಿ ಹರಿಯುತ್ತಿವೆ. ಯಲಹಂಕ ವಲಯದಲ್ಲಿ 19 ಕೆರೆಗಳು, ರಾಜರಾಜೇಶ್ವರಿ ನಗರ ವಲಯದಲ್ಲಿ 16 ಕೆರೆಗಳು, ಬೊಮ್ಮನಹಳ್ಳಿ ವಲಯದಲ್ಲಿ 7 ಕೆರೆಗಳು ತುಂಬಿವೆ. ಈ ಮೂರೂ ವಲಯದಲ್ಲಿ ಮೂರು ದಿನಗಳಿಂದ ಹೆಚ್ಚು ಮಳೆಯಾಗಿದೆ.

'ಕೆರೆಗಳ ಬಳಿಯ ತೂಬುಗಳ ಬಳಿ ಸ್ವಚ್ಛತಾ ಕಾರ್ಯ ಕೈಗೊಂಡಿದ್ದು, ಕಾಲುವೆಗಳಲ್ಲಿ ತುಂಬಿರುವ ಕಸ-ಕಡ್ಡಿ, ಪ್ಲಾಸ್ಟಿಕ್ ಸೇರಿದಂತೆ ಇನ್ನಿತರೆ ತ್ಯಾಜ್ಯವನ್ನು ಸ್ವಚ್ಛಗೊಳಿಸಲಾಗುತ್ತಿದೆ' ಎಂದು ಬಿಬಿಎಂಪಿ ಕೆರೆ ವಿಭಾಗದ ಎಂಜಿನಿಯರ್‌ಗಳು ತಿಳಿಸಿದರು.

ನಗರದಲ್ಲಿ ಸೋಮವಾರ ಸುರಿದ ಮಳೆಯಿಂದಾಗಿ 25 ಮರಗಳು, 44 ಮರದ ರೆಂಬೆ/ಕೊಂಬೆಗಳು ಧರೆಗುರುಳಿರುಳಿವೆ. 10 ಮರಗಳು ಹಾಗೂ 25 ಮರದ ರೆಂಬೆ/ಕೊಂಬೆಗಳನ್ನು ತೆರವುಗೊಳಿಸಲಾಗಿದೆ. ಉಳಿದ ಮರ, ಮರದ ರೆಂಬೆ/ಕೊಂಬೆಗಳ ತೆರವು ಕಾರ್ಯಾಚರಣೆಯಲ್ಲಿ ಮರ ತೆರವುಗೊಳಿಸುವ ತಂಡ ಕಾರ್ಯನಿರತವಾಗಿದೆ ಎಂದು ಬಿಬಿಎಂಪಿ ಅರಣ್ಯ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

ಕೆರೆಗಳ ನೀರಿನ ಮಟ್ಟ

ವಲಯ	25%	50%	75%	99%	100%
	ರವರೆಗೆ ನೀರು				ನೀರು
ಪೂರ್ವ	1	0	0	1	2
ದಕ್ಷಿಣ	1	0	1	1	4
ಪೂರ್ವ	0	0	1	1	0
ಬೊಮ್ಮನಹಳ್ಳಿ	4	7	12	15	7
ದಾಸರಹಳ್ಳಿ	1	3	4	0	2
ಮಹದೇವಪುರ	3	8	10	17	13
ಯಲಹಂಕ	2	0	5	2	19
ಒಟ್ಟು	18	20	42	40	63

ತಗ್ಗು ಪ್ರದೇಶಗಳಲ್ಲಿ ನೆಲಮಾಳಿಗೆ ನಿರ್ಮಾಣ ನಿಷೇಧ: ಡಿಕೆಶಿ

ಬೆಂಗಳೂರಿನ ಎಂ.ಎಸ್. ಪಾಳ್ಯದಲ್ಲಿ ವಿದ್ಯುತ್ ಅವಘಡದಿಂದ ಮೃತಪಟ್ಟ ಮನಮೋಹನ್ ಕಾಮತ್, ದಿನೇಶ್ ಅವರ ಕುಟುಂಬದ ಸದಸ್ಯರನ್ನು ಮಂಗಳವಾರ ಭೇಟಿ ಮಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್ ಸಾಂತ್ವನ ಹೇಳಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಗಳ ಹತ್ತಿರ ಹಾಗೂ ತಗ್ಗು ಪ್ರದೇಶಗಳಲ್ಲಿ ನೆಲಮಾಳಿಗೆ ನಿರ್ಮಾಣ ಮಾಡಿ ವಾಹನ ನಿಲ್ದಾಣಕ್ಕೆ ಅವಕಾಶ ನೀಡದಂತೆ ಕಾನೂನು ರೂಪಿಸಲಾಗುವುದು. ಮಳೆ ಕಡಿಮೆಯಾದ ನಂತರ ಕಾರ್ಯಸೂಚಿ ಬಿಡುಗಡೆ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿ ಸೋಮವಾರ ರಾತ್ರಿ ವಿದ್ಯುತ್ ಅವಘಡ ನಡೆದ ಬಿಟಿಎಂ 2ನೇ ಹಂತದ ಡಾಲರ್ಸ್ ಕಾಲೊನಿ ಬಳಿಯ ಎಂ.ಎಸ್. ಪಾಳ್ಯಕ್ಕೆ ಭೇಟಿ ನೀಡಿ, ಮೃತರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ ನಂತರ ಮಾತನಾಡಿದ ಅವರು, ಎತ್ತರದ ಪ್ರದೇಶಗಳ ಪ್ರತಿ ಮನೆಯ ನೆಲಮಾಳಿಗೆಯಲ್ಲೇ ವಾಹನಗಳ ನಿಲುಗಡೆ ಕಡ್ಡಾಯಗೊಳಿಸಲು ಯೋಜನೆ ರೂಪಿಸಲಾಗುವುದು ಎಂದರು.

ನೆಲಮಹಡಿಯಲ್ಲಿ ಸಿಲುಕಿದ್ದ ನೀರನ್ನು ಈಗಾಗಲೇ ಪಂಪ್ ಮೂಲಕ ಹೊರಹಾಕಲಾಗಿದೆ. ಪೊಲೀಸರು ಹಾಗೂ ಸಹಾಯ ಮಾಡಲು ಬಂದ ಅಧಿಕಾರಿಗಳೂ ವಿದ್ಯುತ್ ಸ್ಪರ್ಶದಿಂದ ತೊಂದರೆ ಅನುಭವಿಸಿದ್ದಾರೆ. ಮಳೆಯಿಂದ ಮೃತಪಟ್ಟ ನಾಗರಿಕರ ಕುಟುಂಬಗಳಿಗೆ ತಲಾ ₹5 ಲಕ್ಷ ಪರಿಹಾರ ನೀಡಲಾಗುವುದು ಎಂದು ಹೇಳಿದರು.

'ಬಿಬಿಎಂಪಿ ಹಾಗೂ ಬೆಂಗಳೂರು ನಗರ ನೀರು ಸರಬರಾಜು ಮಂಡಳಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಆರೋಪ ಸರಿಯಲ್ಲ. 1.40 ಕೋಟಿ ಜನಸಂಖ್ಯೆ ಇದೆ. ಎಲ್ಲರೂ ಒಂದು ತಂಡವಾಗಿ ಯುದ್ಧೋಪಾದಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಪರಿಸ್ಥಿತಿಯನ್ನು ಅವಲೋಕಿಸಿ, ನೆರವು ನೀಡಲಾಗುತ್ತಿದೆ. ಕೆಲವರು ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ' ಎಂದು ಆರೋಪಿಸಿದರು.

ಸಂತ್ರಸ್ತರ ಬವಣೆ ಆಲಿಸಿದ ಬಿಜೆಪಿ ನಾಯಕರು

ಜನರ ಸಂಕಷ್ಟಕ್ಕೆ ಇಲ್ಲ ಸ್ಪಂದನೆ; ಹೊಸಪೇಟೆಯಲ್ಲಿ ಮೋಜು: ಬಿ.ವೈ.ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ದಿನಗಳಿಂದ ಸುರಿದ ಭಾರಿ ಮಳೆಯಿಂದಾಗಿ ಜಲಾವೃತವಾಗಿರುವ ಪ್ರದೇಶಕ್ಕೆ ಬಿಜೆಪಿ ನಾಯಕರ ನಿಯೋಗವು ಮಂಗಳವಾರ ಭೇಟಿ ನೀಡಿ, ಸಂತ್ರಸ್ತರ ಬವಣೆಯನ್ನು ಆಲಿಸಿತು. ಮಳೆ ಮತ್ತು ಪ್ರವಾಹ ತಂದ ಅವಾಂತರವನ್ನು ವೀಕ್ಷಿಸಿ, ಅಂತಿಮವಾಗಿ ಸರ್ಕಾರದ ವಿರುದ್ಧ ಟೀಕಾ ಪ್ರಹಾರ ಮಾಡಿದರು.

ಸಿಲ್ಕ್‌ಬೋರ್ಡ್, ಜಯನಗರದ ಬಿಸ್ಮಿಲ್ಲಾನಗರ, ಸಾಯಿಬಡಾವಣೆ, ಪದ್ಮನಾಭನಗರ, ಡಾಲರ್ಸ್ ಕಾಲೊನಿಯ ಮಧುವನ ಅಪಾರ್ಟ್‌ಮೆಂಟ್ ಸೇರಿ ಇತರೆಡೆ ಭೇಟಿ ನೀಡಿದರು. ಮಳೆಯಿಂದ ಮೃತಪಟ್ಟವರ ಮನೆಗಳಿಗೂ ಭೇಟಿ ನೀಡಿ ಸಾಂತ್ವನ ಹೇಳಿದರು.

ರಸ್ತೆಗಳು, ಮನೆಗಳು ಮತ್ತು ವಿವಿಧ ಕಟ್ಟಡಗಳಲ್ಲಿ ನೀರು ತುಂಬಿಕೊಂಡಿದ್ದು, ಅದನ್ನು ತೆರವುಗೊಳಿಸಲಾಗದೆ ಸಾರ್ವಜನಿಕರು ತೊಂದರೆಗೆ ಸಿಲು-ಕಿರುವುದನ್ನು ಗಮನಿಸಿ, ಅವರ ಅಹವಾಲುಗಳನ್ನು ಆಲಿಸಿದರು. ಇದೇ ಸಂದರ್ಭದಲ್ಲಿ ಬಿಜೆಪಿ ನಾಯಕರು 'ಬ್ರ್ಯಾಂಡ್ ಬೆಂಗಳೂರು ಅಲ್ಲ, ಬ್ಯಾಡ್ ಬೆಂಗಳೂರು' ಎಂಬ ಪೋಸ್ಟರ್ ಅನ್ನು ಪ್ರದರ್ಶಿಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಿಲ್ಕ್‌ಬೋರ್ಡ್ ಜಂಕ್ಷನ್‌ನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಬೆಂಗಳೂರು ಸೇರಿ ರಾಜ್ಯದ ಹಲವು ಜಿಲ್ಲೆಗಳು ಮಳೆಯಿಂದ ತತ್ತರಿಸಿವೆ. ನಾಗರಿಕರು ಕಂಗೆಟ್ಟು ಹೋಗಿದ್ದಾರೆ. ಆದರೆ, ಕಾಂಗ್ರೆಸ್ ಸರ್ಕಾರಕ್ಕೆ ಎರಡು ವರ್ಷ ತುಂಬಿದೆ ಎಂದು ಹೊಸಪೇಟೆಯಲ್ಲಿ ಮೋಜು ಮಾಡಿದೆ. ಇದು ಅಕ್ಷಮ್ಯ ಎಂದರು.

ಮಳೆಯಿಂದ ತೊಂದರೆಗೀಡಾದ ಪ್ರದೇಶಕ್ಕೆ ಭೇಟಿ ನೀಡಿದ ಬಿಜೆಪಿ ನಾಯಕರು ಮಳೆ ನೀರಿನಿಂದ ಕೊಚ್ಚಿ ಹೋದ ಮೋರಿಯ ಬಳಿ 'ಬ್ರ್ಯಾಂಡ್ ಬೆಂಗಳೂರು ಅಲ್ಲ ಬ್ಯಾಡ್' ಬೆಂಗಳೂರು ಎಂಬ ಪೋಸ್ಟರ್ ಪ್ರದರ್ಶಿಸಿದರು

'ಬೆಂಗಳೂರಿನಲ್ಲಿ ಜನ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದರೆ, ಕಾಂಗ್ರೆಸ್‌ನವರು ಮೋಜಿನ ಅಮಲಿನಲ್ಲಿ ತೇಲಾಡಿದ್ದಾರೆ. ಈ ಅಯೋಗ್ಯ ಸರ್ಕಾರಕ್ಕೆ ಮರ್ಯಾದೆ ಯಾವುದೂ ಇಲ್ಲ' ಎಂದರು.

'ಕೆಲವೇ ಕೆಲವು ಗಂಟೆ ಮಳೆ ಬಂದಿದ್ದು, ಇಡೀ ಬೆಂಗಳೂರೇ ಜಲಾವೃತವಾಗಿದೆ. ಐವರು ಪ್ರಾಣ ಕಳೆದುಕೊಂಡಿದ್ದಾರೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಗ್ರೇಟರ್ ಬೆಂಗಳೂರು ಬಗ್ಗೆ ಮಾತನಾಡುತ್ತಾರೆ. ಗ್ರೇಟರ್ ಹೆಸರು ಇಟ್ಟ ತಕ್ಷಣ ಗ್ರೇಟ್ ಆಗುವುದಿಲ್ಲ. ಬೆಂಗಳೂರು ಸಮಸ್ಯೆ ನೀಗಿಸಲು ಮತ್ತು ಅಭಿವೃದ್ಧಿಗೆ ಎಷ್ಟು ಹಣ ಕೊಟ್ಟಿದ್ದೀರಿ' ಎಂದು ವಿಜಯೇಂದ್ರ ಪ್ರಶ್ನಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಾವಿರಾರು ಕೋಟಿ ಅನುದಾನ ನೀಡಲಾಗಿತ್ತು. ಅನೇಕ ಕಾಮಗಾರಿಗಳು ನಡೆಯುತ್ತಿದ್ದವು. ಆ ಗುತ್ತಿಗೆದಾರರಿಗೆ ಹಣ ಪಾವತಿಸದ ಕಾರಣ ಅಭಿವೃದ್ಧಿ ಕಾರ್ಯಗಳು ನಿಂತು ಹೋಗಿವೆ ಎಂದು ಹೇಳಿದರು.

'ಮಳೆಯಿಂದ ಪ್ರವಾಹ ಸೃಷ್ಟಿ ಆದ ಮೇಲೆ ಹೂಳು ತೆಗೆಯುವಂತೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂ-ತ್ರಿಯವರು ಅಧಿಕಾರಿಗಳಿಗೆ ಹೇಳಿದ್ದಾರೆ. ಮಳೆ ಬರುವುದು ಇವರಿಗೆ ಗೊತ್ತಿಲ್ಲವೇ? ಮೊದಲೇ ಏಕೆ ಕೆಲಸ ಮಾಡಿಲ್ಲ' ಎಂದು ಪ್ರಶ್ನಿಸಿದರು.

ನಿಯೋಗದಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ.ಮೋಹನ್, ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ಶಾಸಕ ಸತೀಶ್ ರೆಡ್ಡಿ, ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ಮತ್ತು ಶಾಸಕ ಸಿ.ಕೆ. ರಾಮಮೂರ್ತಿ ಮತ್ತು ಪಕ್ಷದ ಮುಖಂಡರು ಇದ್ದರು.

'ಸಾವಿನ ಮೇಲೆ ಕಾಂಗ್ರೆಸ್ ಸಾಧನೆ ಸಮಾವೇಶ'

'ಬಿಜೆಪಿ ಸರ್ಕಾರದ ಅವಧಿಯಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ₹1,600 ಕೋಟಿ ನೀಡಲಾಗಿತ್ತು. ಕಾಂಗ್ರೆಸ್ ಸರ್ಕಾರ ಆ ಕಾಮಗಾರಿಗಳನ್ನು ರದ್ದು ಮಾಡಿದೆ. ಆ ಕಾಮಗಾರಿಗಳು ನಡೆದಿದ್ದರೆ ಈಗ ಪ್ರವಾಹದ ಸ್ಥಿತಿ ಬರುತ್ತಿರಲಿಲ್ಲ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇಡೀ ಬೆಂಗಳೂರು ಮಳೆಯಿಂದ ಮುಳುಗುತ್ತಿದ್ದು, ಜನರು ಪರದಾಡುತ್ತಿದ್ದಾರೆ. ಐದು ಮಂದಿ ಸತ್ತಿದ್ದಾರೆ. ಈ ಸಾವಿನ ಮೇಲೆ ಕಾಂಗ್ರೆಸ್ ಸಾಧನೆಯ ಸಮಾವೇಶ ಮಾಡಿದೆ. ಸರ್ಕಾರಕ್ಕೆ ಸೂಕ್ಷ್ಮತೆ, ಮಾನವೀಯತೆ ಇದ್ದಿದ್ದರೆ ಸಮಾವೇಶ ಮುಂದೂಡಬೇಕಿತ್ತು. ಕಾಂಗ್ರೆಸ್ ಸರ್ಕಾರದ ತಪ್ಪಿನಿಂದಾಗಿಯೇ ಈ ಸಾವು ಸಂಭವಿಸಿದೆ' ಎಂದು ತಿಳಿಸಿದರು.

ಗ್ರೀನ್ ಪ್ಯಾರಡೈಸ್ ಬಡಾವಣೆಗೆ ಕಂಟಕ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಕಿತ್ತಗನೂರಿನ ಗ್ರೀನ್ ಪ್ಯಾರಡೈಸ್ ಬಡಾವಣೆಯ 20ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ.

ಕಿತ್ತಗನೂರು ಮೂಲಕ ಬಿದರಹಳ್ಳಿ ಕಡೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಗೆ ಹೊಂದಿಕೊಂಡಿರುವ ರಾಜಕಾಲುವೆಗೆ ಸೇತುವೆ ನಿರ್ಮಿಸದ ಕಾರಣ, ಎಲೆಮಲ್ಲಪ್ಪಶೆಟ್ಟಿ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯ ನೀರು ಬಡಾವಣೆಯ ಮನೆಗಳಿಗೆ ನುಗ್ಗಿದೆ.

ರಾಂಪುರ ಕೆರೆ ತುಂಬಿ ಹರಿದು ಪಕ್ಕದ ಗ್ರೀನ್ ಪ್ಯಾರಡೈಸ್ ಬಡಾವಣೆ ಜಲಾವೃತಗ-ಗೊಂಡಿದ್ದು, ನಿವಾಸಿಗಳು ಹೊರಬರಲು ಪರದಾಡುವಂತಾಗಿದೆ.

'ರಾಜಕಾಲುವೆಗೆ ಸೇತುವೆ ನಿರ್ಮಾಣ ಮಾಡದೆ ಇರುವುದರಿಂದ ಪ್ರತಿ ವರ್ಷ ಸಮಸ್ಯೆ ಆಗುತ್ತಿದೆ. ರಾಜಕಾಲುವೆ ನೀರು ಮನೆಗಳಿಗೆ ನುಗ್ಗಿದ್ದು, ವಿಷ ಜಂತುಗಳು ಸೇರಿವೆ. ಊಟ, ನೀರು ಇಲ್ಲದೆ ತೊಂದರೆ ಅನುಭವಿಸಿದ್ದೇವೆ' ಎಂದು ಬಡಾವಣೆ ನಿವಾಸಿಗಳು ದೂರಿದರು.

ಕೆ.ಆರ್. ಮಾರುಕಟ್ಟೆ ಜಲಾವೃತ

ಬೆಂಗಳೂರು: ನಗರದಲ್ಲಿ ಮಂಗಳವಾರ ನಸುಕಿನಲ್ಲಿ ಸುರಿದ ಮಳೆಗೆ ಕೆ.ಆರ್. ಮಾರುಕಟ್ಟೆ ಸಂಪೂರ್ಣವಾಗಿ ಜಲಾವೃತ್ತಗೊಂಡಿತ್ತು. ಇದರಿಂದ ವ್ಯಾಪಾರ–ವಹಿವಾಟು ಸಂಪೂರ್ಣವಾಗಿ ಸ್ಥಗಿತ-ಗೊಂಡಿತ್ತು. ಮಾರುಕಟ್ಟೆಯ ನೆಲಮಾಳಿ-ಗೆಯಲ್ಲಿ ಎರಡು ಅಡಿಗೂ ಹೆಚ್ಚು ಮಳೆ ನೀರು ಸಂಗ್ರಹಗೊಂಡಿತ್ತು.

'ಕೆ.ಆರ್. ಮಾರುಕಟ್ಟೆಯ ಆವರಣ ಕೆರೆಯಂತಾಗಿ ಮಾರ್ಪಟ್ಟಿತ್ತು. ಸಾವಿರಾರೂ ರೂಪಾಯಿ ಮೌಲ್ಯದ ಹೂವು, ಹಣ್ಣು ತರಕಾರಿಗಳು ನೀರಿನಲ್ಲಿ ಕೊಚ್ಚಿಕೊಂಡು ಹೋದವು. ಪ್ರತಿಬಾರಿ ಮಳೆ ಬಂದಾಗ ಪರಿಸ್ಥಿತಿ ಇದೇ ರೀತಿಯಾಗಿ ನಿರ್ಮಾಣವಾಗುತ್ತದೆ. ಆದರೆ ಇದುವರೆಗೂ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಿಕ್ಕಿಲ್ಲ' ಎಂದು ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದರು.

ಕೆ.ಆರ್. ಮಾರುಕಟ್ಟೆಯ ರಸ್ತೆಯಲ್ಲಿ ಸಂಗ್ರಹಗೊಂಡ ಮಳೆ ನೀರಿನಲ್ಲಿ ವ್ಯಾಪಾರಿಯೊಬ್ಬರು ಹೂವಿನ ಬುಟ್ಟಿಗಳನ್ನು ಇಟ್ಟಿಕೊಂಡಿದ್ದರು ಚಿತ್ರ: ಮೇಧಾ ರಾಜೀವ್

ನ್ಯಾಯಾಧೀಶ ಹುದ್ದೆ: ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ನ್ಯಾಯಪೀಠದಿಂದ ಮಹತ್ವದ ತೀರ್ಪು

‘3 ವರ್ಷ ವಕೀಲಿಕೆ ಕಡ್ಡಾಯ: ಸುಪ್ರೀಂ ಕೋರ್ಟ್’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಕಾನೂನು ಪದವೀಧರರು ನ್ಯಾಯಾಧೀಶರಾಗಬೇಕು ಎಂದಾದರೆ, ಕಡ್ಡಾಯವಾಗಿ ಕನಿಷ್ಠ ಮೂರು ವರ್ಷ ವಕೀಲರಾಗಿ ಕೆಲಸ ಮಾಡಿರಬೇಕು’ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದೆ.

ಅಖಿಲ ಭಾರತೀಯ ನ್ಯಾಯಾಧೀಶರ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿಗಳಾದ ಆಗಸ್ಟೀನ್ ಜಾರ್ಜ್ ಮಸೀಹ್ ಮತ್ತು ಕೆ. ವಿನೋದ್ ಚಂದ್ರನ್ ಅವರಿದ್ದ ತ್ರಿಸದಸ್ಯ ಪೀಠ ಈ ತೀರ್ಪು ನೀಡಿದೆ.

‘ಪುಸ್ತಕ ಜ್ಞಾನವಷ್ಟೇ ಸಾಲದು’

ಕಾನೂನು ಪದವಿ ಮುಗಿಸುತ್ತಿದ್ದಂತೆಯೇ ನ್ಯಾಯಾಧೀಶರಾಗಿ ನೇಮಕವಾಗುತ್ತಾರೆ. ಅಧಿಕಾರ ವಹಿಸಿಕೊಂಡ ಮೊದಲ ದಿನದಿಂದಲೇ ಆಸ್ತಿ, ಸ್ವಾತಂತ್ರ್ಯ, ಜೀವನ... ಹೀಗೆ ನಾನಾ ವಿಚಾರಗಳಿಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಸಬೇಕಾಗುತ್ತದೆ. ಪುಸ್ತಕದ ಜ್ಞಾನದಿಂದ ಮಾತ್ರವೇ ಈ ಎಲ್ಲ ಪ್ರಕರಣಗಳಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ಅನುಭವಿ ವಕೀಲರೊಂದಿಗೆ ಕೆಲಸ ಮಾಡಿ, ಅವರಿಗೆ ಸಹಾಯ ಮಾಡಿ, ನ್ಯಾಯಾಂಗದ ಕುರಿತು ಕಲಿಯಬೇಕಾಗುತ್ತದೆ

ಸುಪ್ರೀಂ ಕೋರ್ಟ್ ಪೀಠ

‘ಎಲ್ಲ ರಾಜ್ಯ ಸರ್ಕಾರಗಳು ಈ ಬಗ್ಗೆ ನಿಯಮಗಳಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕು. ಕಾನೂನು ಪದವೀಧರರು 3 ವರ್ಷ ವಕೀಲರಾಗಿ ಕಾರ್ಯನಿರ್ವಹಿಸಿದ ಬಗ್ಗೆ ಕನಿಷ್ಠ 10 ವರ್ಷದಿಂದ ವಕೀಲಿಕೆ ಮಾಡುತ್ತಿರುವವರು ಪ್ರಮಾಣಪತ್ರ ನೀಡಬೇಕು’ ಎಂದು ಪೀಠ ಹೇಳಿದೆ.

ನ್ಯಾಯಾಲಯಗಳಲ್ಲಿ ಗುಮಾಸ್ತ ಹುದ್ದೆಯಲ್ಲಿದ್ದವರೂ ನ್ಯಾಯಾಧೀಶ-ರಾಗಲು ಪರೀಕ್ಷೆ ಬರೆಯುವುದಾದರೆ, ಅವರ ಉದ್ಯೋಗದ ಅವಧಿಯನ್ನೂ ಗಣನೆಗೆ ತೆಗೆದುಕೊಳ್ಳಲಾಗುವುದು. ಆದರೆ, ಇವರು ನ್ಯಾಯಾಧೀಶರಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲು ಒಂದು ವರ್ಷ ತರಬೇತಿ ಪಡೆದು-ಕೊಳ್ಳಬೇಕು’ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

‘ಈಗಾಗಲೇ ನೇಮಕಾತಿ ಪ್ರಕ್ರಿಯೆ ಆರಂಭಗೊಂಡಿದ್ದರೆ, ಅಲ್ಲಿ ಈ ನಿಯಮ ಪಾಲಿಸಬೇಕಾಗಿಲ್ಲ. ಆದರೆ, ಮುಂದಿನ ಬಾರಿಯ ನೇಮಕಾತಿ ಪ್ರಕ್ರಿಯೆಯಿಂದ ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು’ ಎಂದು ಹೇಳಿದೆ.

‘ವಕೀಲರಾಗಿ ಯಾವ ದಿನದಿಂದ ಕಾರ್ಯನಿರ್ವಹಿಸಲು ಆರಂಭಿಸಲಾಗುತ್ತದೆಯೇ ಆ ದಿನದಿಂದ ಮೂರು ವರ್ಷದ ಅವಧಿಯನ್ನು ಲೆಕ್ಕ ಹಾಕಲಾಗುತ್ತದೆ. ಅಖಿಲ ಭಾರತ ವಕೀಲಿಕೆ ಪರೀಕ್ಷೆಯನ್ನು (ಎಐಬಿಇ) ಪಾಸು ಮಾಡಿದ ದಿನದಿಂದ ಲೆಕ್ಕ ಹಾಕುವುದಿಲ್ಲ’ ಎಂದು ತೀರ್ಪಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ಪ್ರಕರಣದ ಇತಿಹಾಸ ಏನು?

2002ರಲ್ಲಿ ನ್ಯಾಯಾಂಗ ಸೇವೆಗಳ ನಿಯಮಗಳಿಗೆ ತಿದ್ದುಪಡಿ ಮಾಡಿದ್ದ ಮಧ್ಯಪ್ರದೇಶದ ಹೈಕೋರ್ಟ್, ಮೂರು ವರ್ಷ ವಕೀಲ ವೃತ್ತಿಯನ್ನು ಕಡ್ಡಾಯ ಮಾಡಿತ್ತು. ಈ ತಿದ್ದುಪಡಿಯನ್ನು ಪ್ರಶ್ನಿಸಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು.

ಆದರೆ, ಮಧ್ಯಪ್ರದೇಶ ಹೈಕೋರ್ಟ್‌ನ ಈ ತಿದ್ದುಪಡಿಯನ್ನು ಕೆಲವು ರಾಜ್ಯಗಳಲ್ಲಿ ಮಾತ್ರವೇ ಅಳವಡಿಸಿಕೊಳ್ಳಲಾಗಿದೆ. ಆದ್ದರಿಂದ ದೇಶದಾದ್ಯಂತ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಾದ ನೇಮಕಾತಿ ನಿಯಮಗಳಿವೆ. ಸುಪ್ರೀಂ ಕೋರ್ಟ್‌ನ ಈ ತೀರ್ಪಿನಿಂದ ಎಲ್ಲ ರಾಜ್ಯಗಳಲ್ಲಿಯೂ ಈಗ ಒಂದೇ ರೀತಿಯ ನಿಯಮ ಜಾರಿಯಾಗಲಿದೆ.

ಈ ತಿದ್ದುಪಡಿಗೆ ಕಾನೂನು ಪದವೀಧರರು ಮತ್ತು ಶಿಕ್ಷಣ ತಜ್ಞರು ವಿರೋಧ ವ್ಯಕ್ತಪಡಿಸಿದ್ದರು. ‘ಇದು ಕಾನೂನು ಪದವೀಧರರ ಸಮಾನ ಅವಕಾಶದ ಹಕ್ಕನ್ನು ನಿರಾಕರಿಸುತ್ತದೆ. ಇದು ಸಂವಿಧಾನ ನೀಡಿರುವ ಅವಕಾಶವನ್ನೂ ಮೀರುವ ವರ್ತನೆಯಾಗುತ್ತದೆ. ಇದರಿಂದ ಯುವಕರು ಈ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲು ಹಿಂಜರಿಯುವಂತಾಗುತ್ತದೆ’ ಎಂದು ವಾದಿಸಿದ್ದರು.

ಅಮೃತಸರದ ಅಟ್ಟಾರಿ–ವಾಘಾ ಗಡಿಯಲ್ಲಿ ಮಂಗಳವಾರ ಬಿಎಸ್‌ಎಫ್ ಯೋಧರು ಬೀಟಿಂಗ್ ರಿಟ್ರೀಟ್ ನಡೆಸಿದರು ಎಎಫ್‌ಪಿ ಚಿತ್ರ

ಬೀಟಿಂಗ್ ರಿಟ್ರೀಟ್ ಪುನರಾರಂಭ

ಅಮೃತಸರ(ಪಿಟಿಐ): ‘ಆಪರೇಷನ್ ಸಿಂಧೂರ’ ಬಳಿಕ ಪಂಜಾಬ್‌ನ ಗಡಿಯ ಮೂರೂ ಚೆಕ್‌ಪೋಸ್ಟ್‌ಗಳಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದ ಧ್ವಜ ಇಳಿಸುವ ಬೀಟಿಂಗ್ ರಿಟ್ರೀಟ್ (ಕವಾಯತು) ಸಮಾರಂಭ ಬುಧವಾರದಿಂದ ಆರಂಭವಾಗಲಿದೆ ಎಂದು ಬಿಎಸ್‌ಎಫ್ ಹೇಳಿದೆ.

ಅಮೃತಸರದ ಅಟ್ಟಾರಿ–ಪಾಕಿಸ್ತಾನದ ವಾಘಾ ಗಡಿ, ಫಿರೋಜ್‌ಪುರದ ಹುಸೇನಿವಾಲಾ ಮತ್ತು ಫಾಜಿಲ್ಕಾ ಜಿಲ್ಲೆಯ ಸಾದ್ಕಿಯಲ್ಲಿನ ಜಂಟಿ ಚೆಕ್ ಪೋಸ್ಟ್‌ಗಳಲ್ಲಿ ಧ್ವಜ ಇಳಿಸುವ ಕಾರ್ಯಕ್ರಮವೇ ಬೀಟಿಂಗ್ ರಿಟ್ರೀಟ್ ಆಗಿದೆ. ‘ಆಪರೇಷನ್ ಸಿಂಧೂರ’ದಿಂದ ಮೇ 9ರಂದು ಸಂಜೆ 6ರಿಂದ ಇದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಬುಧವಾರ ಸಂಜೆ 6 ಗಂಟೆಗೆ ಇದು ಪುನರಾರಂಭವಾಗಲಿದೆ. ಬುಧವಾರದಿಂದ ಸಾರ್ವಜನಿಕರ ವೀಕ್ಷಣೆಗೂ ಮುಕ್ತವಾಗಲಿದೆ.

ಆದಾಗ್ಯೂ, ಬಿಎಸ್‌ಎಫ್ ಪಡೆಗಳು ಪಾಕಿಸ್ತಾನದ ರೇಂಜರ್‌ಗಳೊಂದಿಗೆ ಹಸ್ತಲಾಘವ ನೀಡುವುದಿಲ್ಲ ಮತ್ತು ಈ ಹಿಂದೆ ಘೋಷಿಸಿದಂತೆ ಧ್ವಜವನ್ನು ಕೆಳಕ್ಕೆ ಇಳಿಸುವ ಪ್ರಕ್ರಿಯೆ ವೇಳೆ ಗಡಿಯ ಗೇಟು ತೆರೆಯುವುದಿಲ್ಲ. ಹಾಗಾಗಿ, ಸಮಾರಂಭದ ಅವಧಿ ತಗ್ಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುರಕ್ಷತೆ ದೃಷ್ಟಿಯಿಂದ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು ಎಂದು ತಿಳಿಸಿದ್ದಾರೆ.

‘ಸ್ವರ್ಣ ಮಂದಿರಕ್ಕೆ ರಕ್ಷಣಾ ವ್ಯವಸ್ಥೆ ನಿಯೋಜಿಸಿರಲಿಲ್ಲ’

ಅಮೃತಸರ(ಪಿಟಿಐ): ‘ಆಪರೇಷನ್ ಸಿಂಧೂರ’ದ ವೇಳೆ ಸ್ವರ್ಣ ಮಂದಿರದ ಆವರಣದಲ್ಲಿ ಯಾವುದೇ ವಾಯು ರಕ್ಷಣಾ ಫಿರಂಗಿಗಳನ್ನು ಅಥವಾ ವಾಯು ರಕ್ಷಣಾ ವ್ಯವಸ್ಥೆಯ ಸೌಲಭ್ಯಗಳನ್ನು ನಿಯೋಜಿಸಿರಲಿಲ್ಲ’ ಎಂದು ಭಾರತೀಯ ಸೇನೆ ಮಂಗಳವಾರ ತಿಳಿಸಿದೆ.

ಪಾಕಿಸ್ತಾನದ ಡ್ರೋನ್, ಕ್ಷಿಪಣಿಗಳ ಸಂಭವನೀಯ ದಾಳಿ ಎದುರಿಸಲು ಸ್ವರ್ಣ ಮಂದಿರದ ಆಡಳಿತವು ಆವರಣದೊಳಗೆ ವಾಯು ರಕ್ಷಣಾ ಫಿರಂಗಿಗಳನ್ನು ನಿಯೋಜಿಸಲು ಸೇನೆಗೆ ಅವಕಾಶ ನೀಡಿದೆ ಎಂಬ ಮಾಧ್ಯಮ ವರದಿಗಳ ನಂತರ ಸೇನೆಯು ಈ ಸ್ಪಷ್ಟನೆ ನೀಡಿದೆ.

ಸ್ವರ್ಣ ಮಂದಿರದಲ್ಲಿ ವಾಯು ರಕ್ಷಣಾ ಫಿರಂಗಿಗಳನ್ನು ನಿಯೋಜಿಸಲು ಭಾರತೀಯ ಸೇನೆಗೆ ಯಾವುದೇ ಅನುಮತಿ ನೀಡಿಲ್ಲ ಎಂದು ಮಂದಿರದ ಹೆಚ್ಚುವರಿ ಪ್ರಧಾನ ಅರ್ಚಕ ಗ್ಯಾನಿ ಅಮರ್ಜೀತ್ ಸಿಂಗ್ ಮತ್ತು ಸಿಖ್ಖರ ಪ್ರಮುಖ ಧಾರ್ಮಿಕ ಸಂಸ್ಥೆಯಾದ ಶಿರೋಮಣಿ ಗುರುದ್ವಾರ ಪ್ರಬಂಧಕ ಕಮಿಟಿ ಅಧ್ಯಕ್ಷ ಹರ್ಜಿಂದರ್ ಸಿಂಗ್ ಧಾಮಿ ಕೂಡ ಸ್ಪಷ್ಟನೆ ನೀಡಿದ್ದಾರೆ.

ಉದ್ವಿಗ್ನತೆಯ ಸಂದರ್ಭ ಸೇನೆ ಮತ್ತು ದೇಶವು ವಹಿಸಿದ ಪಾತ್ರ ಶ್ಲಾಘನೀಯವಾದುದು. ಆದರೆ, ಸಿಖ್ಖರ ಪ್ರಮುಖ ಧಾರ್ಮಿಕ ಸ್ಥಳದ ಬಗ್ಗೆ ಇಂತಹ ಸುಳ್ಳನ್ನು ಹರಡುವುದು ಆಘಾತಕಾರಿಯಾದುದು. ಸರ್ಕಾರ ಕೂಡ ಸ್ಪಷ್ಟನೆ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಮಂದಿರದಲ್ಲಿ ಧಾರ್ಮಿಕ ವಿಧಿವಿಧಾನ ಪಾಲಿಸುವ ಸ್ಥಳಗಳಲ್ಲಿನ ದೀಪಗಳನ್ನು ನಂದಿಸಿರಲಿಲ್ಲ ಮತ್ತು ಧಾರ್ಮಿಕ ಸ್ಥಳದ ಪಾವಿತ್ರ್ಯವನ್ನು ಸಂಪೂರ್ಣ ಜವಾಬ್ದಾರಿಯಿಂದ ಕಾಪಾಡಿಕೊಳ್ಳಲಾಗಿದೆ ಎಂದು ಗ್ಯಾನಿ ಅಮರ್ಜೀತ್ ಸಿಂಗ್ ಹೇಳಿದ್ದಾರೆ.

ಮಂದಿರದ ಪ್ರಧಾನ ಮುಖ್ಯಸ್ಥ ಗ್ಯಾನಿ ರಘ್‌ಬೀರ್ ಸಿಂಗ್, ಸ್ವರ್ಣ ಮಂದಿರದಲ್ಲಿ ಈ ರೀತಿಯ ಘಟನೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

3 ನಿಯೋಗಗಳಿಗೆ ಮಿಸ್ರಿ ಮಾಹಿತಿ

ಪಾಕಿಸ್ತಾನದ ಭಯೋತ್ಪಾದನೆ ಮನವರಿಕೆ ಮಾಡಿಕೊಡಲು ವಿದೇಶಗಳಿಗೆ ಭೇಟಿ

ನವದೆಹಲಿ (ಪಿಟಿಐ): ಪಾಕಿಸ್ತಾನವು ಭಾರತದಲ್ಲಿ ಗಡಿಯಾಚೆಯಿಂದ ಭಯೋತ್ಪಾದನೆಯನ್ನು ದೀರ್ಘಕಾಲದಿಂದ ಯಾವ ರೀತಿ ಪ್ರಾಯೋಜಿಸಿಕೊಂಡು ಬಂದಿದೆ ಮತ್ತು ತನ್ನ ನೆಲದಲ್ಲಿ ಯಾವುದೇ ಭಯೋತ್ಪಾದಕ ಕೃತ್ಯ ನಡೆದರೆ ಅದಕ್ಕೆ ಭಾರತವು ಹೇಗೆ ಪ್ರತಿಕ್ರಿಯಿಸಲು ದೃಢವಾಗಿ ನಿರ್ಧರಿಸಿದೆ ಎಂಬುದರ ಬಗ್ಗೆ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಮಂಗಳವಾರ ಸರ್ವಪಕ್ಷಗಳ ಏಳು ನಿಯೋಗಗಳ ಪೈಕಿ, ಮೂರು ನಿಯೋಗಗಳಿಗೆ ಮಾಹಿತಿ ನೀಡಿದರು.

ವಿಕ್ರಮ್ ಮಿಸ್ರಿ

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಮತ್ತು ‘ಆಪರೇಷನ್ ಸಿಂಧೂರ’ದ ನಂತರ ಭಾರತವು, ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯ ಮುಖವನ್ನು ವಿಶ್ವದ ಮುಂದೆ ತೆರೆದಿಡಲು ರಾಜತಾಂತ್ರಿಕ ಕಾರ್ಯಾಚರಣೆಯ ಹೆಜ್ಜೆ ಇರಿಸಿ, ಇದಕ್ಕಾಗಿ ಸರ್ವಪಕ್ಷಗಳ ಸಂಸದರ ನೇತೃತ್ವದಲ್ಲಿ ಏಳು ನಿಯೋಗಗಳನ್ನು ಪ್ರಮುಖ ಪಾಲುದಾರ ರಾಷ್ಟ್ರಗಳಿಗೆ ಕಳುಹಿಸಿಕೊಡುತ್ತಿದೆ.

ಈ ನಿಯೋಗಗಳು ವಿದೇಶಗಳಿಗೆ ಭೇಟಿ ನೀಡುವ ಮೊದಲು ನಿಯೋಗದ ಸದಸ್ಯರಿಗೆ ಮಿಸ್ರಿ ಅವರು ಅಗತ್ಯ ಮಾಹಿತಿ ನೀಡುತ್ತಿದ್ದಾರೆ.

ಮೂಲಗಳ ಪ್ರಕಾರ, ಭಾರತದ ಕ್ರಮವು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕ ತಾಣಗಳ ವಿರುದ್ಧ ನಿರ್ದೇಶಿಸಲ್ಪಟ್ಟಿತ್ತು. ಪಾಕಿಸ್ತಾನದ ಮಿಲಿಟರಿ ಮತ್ತು ನಾಗರಿಕ ಸೌಲಭ್ಯಗಳನ್ನು ಗುರಿಯಾಗಿಸಿರಲಿಲ್ಲ. ಭಾರತದ ಮಿಲಿಟರಿ ನೆಲೆಗಳು ಮತ್ತು ನಾಗರಿಕರ ಮೇಲೆ ಪಾಕಿಸ್ತಾನ ದಾಳಿಗೆ ಪ್ರಯತ್ನಿಸಿದ ನಂತರವೇ ಭಾರತವು ಪ್ರತಿದಾಳಿ ನಡೆಸಿತು ಎಂದು ಸಂಸದರು ಮತ್ತು ನಿಯೋಗದ ಇತರ ಸದಸ್ಯರಿಗೆ ಮಿಸ್ರಿ ಮಾಹಿತಿ ನೀಡಿದರು.

ಜೆಡಿಯುನ ಸಂಜಯ್ ಝಾ, ಶಿವಸೇನಾದ ಶ್ರೀಕಾಂತ್ ಶಿಂಧೆ, ಡಿಎಂಕೆಯ ಕನಿಮೊಳಿ ಅವರ ನೇತೃತ್ವದ ನಿಯೋಗದ ಸದಸ್ಯರು ಈ ಸಭೆಯಲ್ಲಿ ಭಾಗವಹಿಸಿದ್ದರು. ಕನಿಮೊಳಿ ಅವರು ಸಭೆಯಲ್ಲಿ ಭಾಗವಹಿಸಿರಲಿಲ್ಲ.

ತಮ್ಮ ಸಂಸದ ಯೂಸುಫ್ ಪಠಾಣ್ ಅವರನ್ನು ಆಯ್ಕೆ ಮಾಡಿದ ಸರ್ಕಾರದ ಏಕಪಕ್ಷೀಯ ನಿರ್ಧಾರವನ್ನು ಟಿಎಂಸಿ ಪ್ರತಿಭಟಿಸಿದ ನಂತರ ಕೊನೆಯ ಗಳಿಗೆಯಲ್ಲಿ ನಿಯೋಗಕ್ಕೆ ಸೇರ್ಪಡೆಯಾದ ಟಿಎಂಸಿಯ ಅಭಿಷೇಕ್ ಬ್ಯಾನರ್ಜಿ ಕೂಡ ಸಭೆಯಲ್ಲಿ ಪಾಲ್ಗೊಂಡಿದ್ದರು. ಬ್ಯಾನರ್ಜಿ ಅವರು ಝಾ ನೇತೃತ್ವದ ನಿಯೋಗದಲ್ಲಿದ್ದಾರೆ.

ಪಾಕಿಸ್ತಾನದ ಕಳ್ಳಾಟ ಬಿಚ್ಚಿಡುತ್ತೇವೆ: ಝಾ

ಭಯೋತ್ಪಾದನೆಯ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಪಾಕಿಸ್ತಾನದ ಮಾತನ್ನು ಭಾರತ ನಂಬಿದ್ದಾಗಲೆಲ್ಲಾ ಅದು ಕಳ್ಳಾಟ ಆಡಿದೆ. ಕಳ್ಳನೊಬ್ಬ ತನ್ನ ಅಪರಾಧವನ್ನು ತನಿಖೆ ನಡೆಸುವಂತೆ ಕೇಳುವ ರೀತಿಯಲ್ಲಿ ಅದು ಕೇಳುತ್ತದೆ. ಇದೆಲ್ಲ, ಸಾಕಾಗಿದೆ ಎನ್ನುವ ಸಂದೇಶವನ್ನು ನಾವು ವಿಶ್ವ ನಾಯಕರಿಗೆ ನೀಡಲಿದ್ದೇವೆ’ ಎಂದು ಸಂಜಯ್ ಝಾ ಹೇಳಿದರು.

‘ಪಾಕ್ ಮಂಡಿಯೂರಿಸಿದ ಸೇನೆ’

ಪ್ರಜಾವಾಣಿ ವಾರ್ತೆ

ಲಖನೌ: ‘ಪಾಕಿಸ್ತಾನದಲ್ಲಿ ನೆಲೆ ಹೊಂದಿರುವ ಉಗ್ರರ ತಾಣ ಗುರಿಯಾಗಿಸಿ ಭಾರತದ ಸೇನೆ ನಡೆಸಿದ ನಿರ್ದಿಷ್ಟ ದಾಳಿಯು, ತಜ್ಞ ವೈದ್ಯರು ನಡೆಸುವ ‘ಸರ್ಜರಿ’ಯಂತೆ ಇತ್ತು. ಇದು, ಈ ಹೊತ್ತಿನ ಅಗತ್ಯವು ಆಗಿತ್ತು’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಮಂಗಳವಾರ ಇಲ್ಲಿ ವ್ಯಾಖ್ಯಾನಿಸಿದರು.

ಇಲ್ಲಿ ನಡೆದ ಖಾಸಗಿ ಆಸ್ಪತ್ರೆಯೊಂದರ ಬೆಳ್ಳಿ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ‘ಹಲವು ರೀತಿಯಲ್ಲಿ ಯೋಧರು, ವೈದ್ಯರು ಒಂದೇ. ಇಬ್ಬರೂ ಜನರ ರಕ್ಷಣೆಗಾಗಿಯೇ ಇದ್ದಾರೆ’ ಎಂದರು.

ಭಾರತದ ಯೋಧರು ನೀಡಿದ ತಕ್ಕ ಉತ್ತರ ಪಾಕಿಸ್ತಾನ-ವನ್ನು ಮಂಡಿಯೂರಿಸಿತು ಎಂದು ಸಚಿವರು ಹೇಳಿದರು.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಭವಿಷ್ಯದಲ್ಲಿ ಪಾಕಿಸ್ತಾನವನ್ನು ಭಯೋತ್ಪಾದನೆಯೇ ನುಂಗಿ ಹಾಕಲಿದೆ ಎಂದು ಹೇಳಿದರು.

ಸೋಫಿಯಾ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ತನಿಖೆಗೆ ಎಸ್‌ಐಟಿ

ಭೋಪಾಲ್ (ಪಿಟಿಐ): ಕರ್ನಲ್ ಸೋಫಿಯಾ ಖುರೇಷಿ ಅವರ ವಿರುದ್ಧ ಮಧ್ಯಪ್ರದೇಶದ ಸಚಿವ ವಿಜಯ್ ಶಾ ಆಡಿದ್ದ ಆಕ್ಷೇಪಾರ್ಹ ಹೇಳಿಕೆ ಕುರಿತ ತನಿಖೆಗೆ ರಾಜ್ಯ ಪೊಲೀಸ್ ಇಲಾಖೆ ವಿಶೇಷ ತನಿಖಾ ತಂಡ ರಚಿಸಿದೆ.

ವಿಜಯ್ ಶಾ

ಸುಪ್ರೀಂ ಕೋರ್ಟ್ ಆದೇಶದ ಅನುಸಾರ ಈ ತಂಡ ರಚಿಸಲಾಗಿದೆ. ಐಜಿಪಿ ಪ್ರಮೋದ್ ವರ್ಮಾ, ಡಿಐಜಿ ಕಲ್ಯಾಣ್ ಚಕ್ರವರ್ತಿ ಮತ್ತು ಎಸ್‌ಪಿ ವಾಹಿನಿ ಸಿಂಗ್ ಅವರು ಈ ತಂಡದಲ್ಲಿ-ದ್ದಾರೆ ಎಂದು ಹೇಳಿಕೆ ತಿಳಿಸಿದೆ.

ವಿಜಯ್ ಶಾ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ಸಚಿವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಮಂಗಳವಾರ ಬೆಳಿಗ್ಗೆ 10 ಗಂಟೆಯೊಳಗೆ ಎಸ್‌ಐಟಿ ರಚಿಸಬೇಕು ಎಂದೂ ನಿರ್ದೇಶಿಸಿತ್ತು. ಹೀಗಾಗಿ, ರಾಜ್ಯ ಪೊಲೀಸ್ ಮಹಾನಿರ್ದೇಶಕರು ಎಸ್‌ಐಟಿ ರಚನೆ ಬಗ್ಗೆ ಆದೇಶ ಹೊರಡಿಸಿ ದ್ದಾರೆ. ತನಿಖಾ ತಂಡವು ಮೇ 28ರ ಒಳಗೆ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ.

ಮಂಗಳವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಗೆ ವಿಜಯ್ ಶಾ ಹಾಜರಾಗಿರಲಿಲ್ಲ.

‘1 ವರ್ಷ ಜೈಲಿನಲ್ಲಿರಬೇಕು ಎಂಬ ನಿಯಮವಿಲ್ಲ’

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಆರೋಪಿಯು ಜಾಮೀನು ಪಡೆಯಲು ಒಂದು ವರ್ಷ ಜೈಲಿನಲ್ಲಿ ಇರಬೇಕು ಎಂಬ ನಿಯಮ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿ ಅಭಯ್ ಎಸ್.ಓಕಾ ಮತ್ತು ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠವು, ₹2,000 ಕೋಟಿ ಮದ್ಯ ಹಗರಣ ಪ್ರಕರಣದಲ್ಲಿ ಉದ್ಯಮಿ ಅನ್ವರ್ ಧೇಬರ್ ಅವರಿಗೆ ಜಾಮೀನು ನೀಡಿತು. ಈ ಸಂದರ್ಭದಲ್ಲಿ ಆರೋಪಿಯು ಜಾಮೀನು ಪಡೆಯಲು ಒಂದು ವರ್ಷ ಜೈಲಿನಲ್ಲಿರಬೇಕು ಎಂಬ ನಿಯಮ ಇಲ್ಲ ಎಂದು ಸ್ಪಷ್ಟಪಡಿಸಿತು.

‘ಆರೋಪಕ್ಕೆ ಗರಿಷ್ಠ ಏಳು ವರ್ಷ ಜೈಲು ಶಿಕ್ಷೆ ವಿಧಿಸಬಹುದು. ಅನ್ವರ್ ಅವರ ಪ್ರಕರಣದ ವಿಚಾರಣೆಯು ಶೀಘ್ರವೇ ಆರಂಭವಾಗುವ ಸೂಚನೆಗಳಿಲ್ಲ. ಹೀಗಾಗಿ ಷರತ್ತುಬದ್ಧ ಜಾಮೀನು ಮಂಜೂರು ಮಾಡಲಾಗುತ್ತಿದೆ. ಅನ್ವರ್ ಅವರು ತಮ್ಮ ಪಾಸ್‌ಪೋರ್ಟ್ ಅನ್ನು ನ್ಯಾಯಾಲಯಕ್ಕೆ ಒಪ್ಪಿಸಬೇಕು’ ಎಂದು ಕೋರ್ಟ್ ತಿಳಿಸಿತು.

ಅನ್ವರ್ ಅವರನ್ನು ಕಳೆದ ವರ್ಷ ಆಗಸ್ಟ್‌ನಲ್ಲಿ ಬಂಧಿಸಿದ್ದು, 9 ತಿಂಗಳಿನಿಂದ ಜೈಲಿನಲ್ಲಿದ್ದಾರೆ.

ಅಬ್ಬಾಬ್ಬಾ ಸೆಕೆ...

ರಾಜಸ್ಥಾನದ ಬಡಿ ಚೌಪಾರ್‌ನಲ್ಲಿ ಮಂಗಳವಾರ ಕೃತಕ ತುಂತುರು ಹನಿಗಳ ಸಿಂಚನ ಮಾಡಿದ್ದರಿಂದ ಬೇಸಿಗೆಯಿಂದ ಕಂಗೆಟ್ಟಿದ್ದ ಜನರು ಕುಣಿದು ಕುಪ್ಪಳಿಸಿದರು ಪಿಟಿಐ ಚಿತ್ರ

ತರೂರ್ ಪ್ರತಿಕ್ರಿಯೆ ಕೇಳಿದ ಕೋರ್ಟ್

ನವದೆಹಲಿ (ಪಿಟಿಐ): ಬಿಜೆಪಿ ನಾಯಕ ರಾಜೀವ್ ಚಂದ್ರಶೇಖರ್ ಅವರು ದಾಖಲಿಸಿರುವ ಮಾನನಷ್ಟ ಮೊಕದ್ದಮೆ ಪ್ರಕರಣದ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಕಾಂಗ್ರೆಸ್ ನಾಯಕ ಶಶಿ ತರೂರ್ ಅವರಿಗೆ ದೆಹಲಿ ಹೈಕೋರ್ಟ್ ಮಂಗಳವಾರ ಸೂಚಿಸಿದೆ.

ಚಂದ್ರಶೇಖರ್ ಅವರ ಅರ್ಜಿಯನ್ನು ವಜಾಗೊಳಿಸಿದ್ದ ಮ್ಯಾಜಿಸ್ಟ್ರೀರಿಯಲ್ ಕೋರ್ಟ್ ಆದೇಶದ ವಿರುದ್ಧ ಸಲ್ಲಿಸಿದ್ದ ಪರಿಷ್ಕೃತ ಅರ್ಜಿ ವಿಚಾರಣೆ ನಡೆಸಿದ ನ್ಯಾ. ರವೀಂದರ್ ಡುಡೇಜಾ ಅವರು, ‘ಪ್ರಕರಣದಲ್ಲಿ ಪ್ರತಿವಾದಿಯ ಪ್ರತಿಕ್ರಿಯೆ ಅಗತ್ಯವಿದೆ’ ಎಂದು ತರೂರ್ ಅವರಿಗೆ ನೋಟಿಸ್ ಜಾರಿ ಮಾಡಿದರು. ಸುದ್ದಿ ವಾಹಿನಿಯಲ್ಲಿ ತರೂರ್ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ರಾಜೀವ್ ಕೋರ್ಟ್ ಮೊರೆಹೋಗಿದ್ದರು.

‘ಪಾಕಿಸ್ತಾನದ ಸೇನಾ ನೆಲೆಗಳು ಧ್ವಂಸ’

‘ಆಪರೇಷನ್ ಸಿಂಧೂರ’ ಕುರಿತು ಮಾಹಿತಿ ನೀಡಿದ ಸೇನೆಯ ಅಧಿಕಾರಿಗಳು

ತಂಗದರ್ (ಜಮ್ಮು ಮತ್ತು ಕಾಶ್ಮೀರ) (ಪಿಟಿಐ): ‘ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ಲೀಪಾ ಕಣಿವೆಯಲ್ಲಿ ಇರುವ ಸೇನಾ ನೆಲೆಗಳನ್ನು ಭಾರತೀಯ ಸೇನೆಯು ಸಂಪೂರ್ಣವಾಗಿ ನಾಶ ಮಾಡಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯ ತಂಗದರ್‌ನಲ್ಲಿನ ಎಲ್‌ಒಸಿ ಬಳಿ ಪಿಟಿಐ ಸುದ್ದಿ ಸಂಸ್ಥೆಯ ಪ್ರತಿನಿಧಿ ಭೇಟಿ ನೀಡಿ ಪರಿಶೀಲಿಸಿದ್ದು, ಪಾಕಿಸ್ತಾನ ಸೇನಾ ನೆಲೆಗಳು ನಾಶವಾಗಿರುವುದು ಕಂಡುಬಂದಿದೆ. ಭಾರತೀಯ ಸೇನೆಯ ಚಿನಾರ್ ಕೋರ್ ಪಡೆಯು ಪಾಕ್ ಸೇನಾ ನೆಲೆಗಳ ಮೇಲೆ ಮೇ ತಿಂಗಳ ಎರಡನೇ ವಾರ ‘ಆಪರೇಷನ್ ಸಿಂಧೂರ’ ವೇಳೆ ದಾಳಿ ನಡೆಸಿದೆ.

ಲೀಪಾ ಕಣಿವೆಯಲ್ಲಿ ಪಾಕಿಸ್ತಾನದ ಹಲವು ಸೇನಾ ನೆಲೆಗಳು ಇದ್ದವು. ಆದರೆ, ಅತಿ ಹೆಚ್ಚು ಹಾನಿ ಉಂಟು ಮಾಡುವ ಉದ್ದೇಶದಿಂದ ಹೆಚ್ಚು ಹಾನಿ ಉಂಟಾಗಬಲ್ಲ ನೆಲೆಗಳನ್ನೇ ಭಾರತೀಯ ಸೇನೆಯು ಆಯ್ದುಕೊಂಡು ನಿರ್ದಿಷ್ಟ ದಾಳಿ ನಡೆಸಿದೆ.

‘ಪಾಕ್‌ನ ಮೂರು ಸೇನಾ ನೆಲೆಗಳನ್ನು ನಾವು ಸಂಪೂರ್ಣ ನಾಶ ಮಾಡಿದ್ದೇವೆ. ಜೊತೆಗೆ, ಶಸ್ತ್ರಾಸ್ತ್ರ ಸಂಗ್ರಹಾಗಾರ, ತೈಲ ಸಂಗ್ರಹ ಘಟಕ ಸೇರಿ ಹಲವು ಸ್ಥಳಗಳ ಮೇಲೆ ದಾಳಿ ನಡೆಸಿ ನಾಶ ಮಾಡಿದ್ದೇವೆ. ನಮ್ಮ ದಾಳಿಯ ತೀವ್ರತೆ ಎಷ್ಟಿತ್ತೆಂದರೆ, ತನ್ನ ನೆಲೆಗಳನ್ನು ಪುನಃ ಕಟ್ಟಿಕೊಳ್ಳಲು ಪಾಕಿಸ್ತಾನಕ್ಕೆ ಕನಿಷ್ಠ 8ರಿಂದ12 ತಿಂಗಳು ಬೇಕಾಗಬಹುದು’ ಎಂದು ಸೇನೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ನಾವೇ ಅಭಿವೃದ್ಧಿಪಡಿಸಿದ ಆಕಾಶ ದೀಪ ರೇಡಾರ್ ವ್ಯವಸ್ಥೆಯು ಅತ್ಯುತ್ತಮ ವಾಗಿ ಕಾರ್ಯ ನಿರ್ವಹಿಸಿದೆ. ನಮ್ಮ ವಾಯು ಪ್ರದೇಶ ರಕ್ಷಣಾ ವ್ಯವಸ್ಥೆಯು ಪಾಕ್‌ನ ವಾಯು ದಾಳಿಯನ್ನು ಸದೃಢವಾಗಿ ಎದುರಿಸಿತು. ನಮ್ಮ ಯಾವುದೇ ಸೇನಾ ಸೌಕರ್ಯಗಳಿಗೆ ಹಾನಿಯಾಗಿಲ್ಲ. ಆದರೆ, ನಮ್ಮ ಶತ್ರುಗಳ ನೆಲೆಗಳು ನಾಶವಾದವು’ ಎಂದು ಮತ್ತೊಬ್ಬ ಅಧಿಕಾರಿ ವಿವರಿಸಿದರು.

‘ಮೊದಲು ಜೀವ ಉಳಿಸಿಕೊಳ್ಳಿ ಎಂದಿದ್ದರು’

‘ನಮ್ಮ ದಾಳಿಯು ಎಷ್ಟು ತೀವ್ರವಾಗಿತ್ತೆಂದರೆ, ಪಾಕಿಸ್ತಾನ ಸೇನಾ ಪಡೆಗಳು ತಮ್ಮ ಜೀವಗಳನ್ನು ಉಳಿಸಿಕೊಳ್ಳಲು ಮುಂದಾದರು. ಆಸ್ತಿ ಹಾನಿಯ ಕುರಿತು ತಲೆ ಕೆಡಿಸಿಕೊಳ್ಳಲಿಲ್ಲ. ‘ಮೊದಲು ನಿಮ್ಮ ಜೀವ ಉಳಿಸಿಕೊಳ್ಳಿ’ ಎಂದು ಪಾಕಿಸ್ತಾನ ಸೇನಾ ಕಮಾಂಡರ್ ಹೇಳಿದ್ದರು’ ಎಂದು ಚಿನಾರ್ ಕೋರ್‌ನ ಅಧಿಕಾರಿಗಳು ಮಾಹಿತಿ ನೀಡಿದರು.

ಮೇ 7ರಂದು ಮುಜಾಫರಾಬಾದ್ ಮೇಲೆ 25 ನಿಮಿಷಗಳವರೆಗೆ ನಡೆಸಿದ ‘ಆಪರೇಷನ್ ಸಿಂಧೂರ’ದ ಕುರಿತು ವಿವರಿಸಿದರು.

ಪಾಕ್: ಸೇನಾ ಮುಖ್ಯಸ್ಥ ಮುನೀರ್‌ಗೆ ಬಡ್ತಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಸೇನೆಯ ಮುಖ್ಯಸ್ಥ ಜನರಲ್ ಅಸೀಂ ಮುನೀರ್ ಅವರಿಗೆ ಫೀಲ್ಡ್ ಮಾರ್ಷಲ್ ಸ್ಥಾನಕ್ಕೆ ಸರ್ಕಾರ ಬಡ್ತಿ ನೀಡಿದೆ.

‘ಭಾರತದೊಟ್ಟಿಗಿನ ಇತ್ತೀಚಿನ ಸಂಘರ್ಷದಲ್ಲಿ ಸೇನೆಯನ್ನು ಯಶಸ್ವಿಯಾಗಿ ಮುನ್ನಡೆಸಿದ್ದ-ಕ್ಕಾಗಿ ಬಡ್ತಿ ನೀಡಲಾಗಿದೆ’ ಎಂದು ಸರ್ಕಾರದ ಅಧಿಕೃತ ಮಾಧ್ಯಮ ‘ಪಿಟಿವಿ’ ವರದಿ ಮಾಡಿದೆ.

ಪ್ರಧಾನಿ ಶೆಹಬಾಜ್ ಷರೀಫ್ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯು ಈ ತೀರ್ಮಾನ ಕೈಗೊಂಡಿದೆ.

ಪರಮಾಣು ವಿಜ್ಞಾನಿ ಶ್ರೀನಿವಾಸನ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ದೇಶದ ಅಣು ಶಕ್ತಿ ಯೋಜನೆಯಲ್ಲಿ ಪ್ರಮುಖ ಪಾತ್ರವಹಿಸಿದ, ಈ ಯೋಜನೆಯ ಪಿತಾಮಹ ಹೋಮಿ ಜಹಾಂಗೀರ್ ಭಾಭಾ ಮತ್ತು ವಿಕ್ರಂ ಸಾರಾಭಾಯ್ ಅವರಂಥ ವಿಜ್ಞಾನಿಗಳೊಂದಿಗೆ ಕೆಲಸ ಮಾಡಿದ ಪರಮಾಣು ವಿಜ್ಞಾನಿ ಬೆಂಗಳೂರಿನ ಎಂ.ಆರ್. ಶ್ರೀನಿವಾಸನ್ (95) ಅವರು ಮಂಗಳವಾರ ಬೆಳಗಿನ ಜಾವ 4ರ ಸುಮಾರಿಗೆ ತಮಿಳುನಾಡಿನ ಉದಕಮಂಡಲದಲ್ಲಿ ನಿಧನರಾದರು.

ಮಾಲೂರು ರಾಮಸ್ವಾಮಿ ಶ್ರೀನಿವಾಸನ್ ಅವರಿಗೆ ಪತ್ನಿ, ಮಗಳು ಇದ್ದಾರೆ. ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಅವರನ್ನು ಉದಕ ಮಂಡಲದ ಆಸ್ಪತ್ರೆಯೊಂದಕ್ಕೆ ದಾಖಲು ಮಾಡಲಾಗಿತ್ತು. ಶ್ರೀನಿವಾಸನ್ ಅವರ ನಿಧನದ ಕುರಿತು ಅವರ ಕುಟುಂಬವು ಹೇಳಿಕೆ ಬಿಡುಗಡೆ ಮಾಡಿದೆ.

ಅದು 1955. ಮುಂಬೈನಲ್ಲಿರುವ ‘ಡಿಪಾರ್ಟ್‌ಮೆಂಟ್ ಆಫ್ ಅಟಾಮಿಕ್ ಎನರ್ಜಿ’ಯನ್ನು ಸೇರಿಕೊಂಡ ಶ್ರೀನಿವಾಸನ್ ಅವರಿಗೆ ಕೇವಲ 25 ವಯಸ್ಸು. ಶ್ರೀನಿವಾಸನ್ ಅವರಿಗೆ ಹೋಮಿ ಭಾಭಾ ಮತ್ತು ವಿಕ್ರಂ ಸಾರಾಭಾಯ್ ಅವರ ಪರಿಚಯ, ಅವರೊಂದಿಗಿನ ಒಡನಾಟ ಆರಂಭವಾದದ್ದು ಇಲ್ಲಿಯೇ.



ಅಧ್ಯಯನ

ಶ್ರೀನಿವಾಸನ್ ಅವರು ಮೈಸೂರಿನಲ್ಲಿ ವಿಜ್ಞಾನ ವಿಭಾಗದಲ್ಲಿ ಪಿಯುಸಿ ಶಿಕ್ಷಣವನ್ನು ಪಡೆದಿದ್ದಾರೆ. ಭೌತಶಾಸ್ತ್ರವು ಅವರ ನೆಚ್ಚಿನ ವಿಷಯವಾದರೂ ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರು ಸ್ಥಾಪಿಸಿದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಂಜಿನಿಯರಿಂಗ್‌ಗೆ ಸೇರಿಕೊಂಡರು. 1950ರಲ್ಲಿ ಅವರು ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಮುಗಿಸಿದರು. 1952ರಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿದ ಅವರು, 1954ರಲ್ಲಿ ಕೆನಡಾದ ಮೆಕ್‌ಗಿಲ್ ವಿಶ್ವವಿದ್ಯಾಲಯದಿಂದ ಟರ್ಬೈನ್ ತಂತ್ರಜ್ಞಾನ ವಿಷಯದಲ್ಲಿ ಪಿಎಚ್.ಡಿ ಪಡೆದುಕೊಂಡರು.

ಅಣುಶಕ್ತಿ ಶಕ್ತಿ ಆಯೋಗದ (ಎಇಸಿ) ಅಧ್ಯಕ್ಷರಾಗಿ, ಅಣುಶಕ್ತಿ ಶಕ್ತಿ ವಿಭಾಗದ ಕಾರ್ಯದರ್ಶಿಯಾಗಿ ಇವರ ಕೊಡುಗೆ ಮಹತ್ವದ್ದು. ಭಾರತೀಯ ಅಣು ಶಕ್ತಿ ನಿಗಮವನ್ನು (ಎನ್‌ಪಿಸಿಐಎಲ್) ಹುಟ್ಟುಹಾಕಿದ ಶ್ರೇಯ ಕೂಡ ಶ್ರೀನಿವಾಸನ್ ಅವರಿಗೆ ಸಲ್ಲುತ್ತದೆ.

ಭಾರತದ ಮೊದಲ ಪರಮಾಣು ಸಂಶೋಧನಾ ರಿಯಾಕ್ಟರ್ ‘ಅಪ್ಸರಾ’ವನ್ನು ಸ್ಥಾಪಿಸುವಲ್ಲಿಯೂ ಶ್ರೀನಿವಾಸನ್ ಅವರು ಪ್ರಮುಖ ಪಾತ್ರ ವಹಿಸಿದ್ದರು. ಹೋಮಿ ಭಾಭಾ ಮತ್ತು ವಿಕ್ರಮ್ ಸಾರಾಭಾಯ್ ಅವರ ನಾಯಕತ್ವದ ಬಳಿಕ ಅಣು ಶಕ್ತಿ ಯೋಜನೆಯಲ್ಲಿ ಶ್ರೀನಿವಾಸನ್ ಅವರ ನಾಯತ್ವ ಎದ್ದು ಕಾಣುತ್ತದೆ.

ಶ್ರೀನಿವಾಸನ್ ಅವರ ಕೊಡುಗೆಗಳನ್ನು ಪರಿಗಣಿಸಿ ಅವರಿಗೆ 1984ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಲಾಗಿತ್ತು. ಬಳಿಕ 1990ರಲ್ಲಿ ಪದ್ಮಭೂಷಣ ಮತ್ತು 2015ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ನೀಡಲಾಗಿತ್ತು.

ನಿರ್ವಹಿಸಿದ ಪ್ರಮುಖ ಸ್ಥಾನ

- **1959:** ಭಾರತದ ಮೊದಲ ಅಣುಶಕ್ತಿ ಘಟಕ ನಿರ್ಮಾಣದ ಪ್ರಧಾನ ಪ್ರಾಜೆಕ್ಟ್ ಎಂಜಿನಿಯರ್ ಆಗಿ ನೇಮಕ
- **1967:** ಮದ್ರಾಸ್ ಅಣು ಶಕ್ತಿ ಘಟಕದ ಮುಖ್ಯ ಪ್ರಾಜೆಕ್ಟ್ ಎಂಜಿನಿಯರ್ ಆಗಿ ನೇಮಕ
- **1974:** ‘ಡಿಪಾರ್ಟ್‌ಮೆಂಟ್ ಆಫ್ ಅಟಾಮಿಕ್ ಎನರ್ಜಿ’ ಶಕ್ತಿ ಯೋಜನೆಗಳ ಎಂಜಿನಿಯರಿಂಗ್ ವಿಭಾಗಕ್ಕೆ ನಿರ್ದೇಶಕರಾಗಿ ನೇಮಕ
- **1984:** ಅಣು ಶಕ್ತಿ ಮಂಡಳಿಯ ಮುಖ್ಯಸ್ಥರಾಗಿ ನೇಮಕ
- **1987:** ಅಣು ಶಕ್ತಿ ಆಯೋಗದ ಮುಖ್ಯಸ್ಥ ಹುದ್ದೆಗೆ ಮತ್ತು ಅಣು ಶಕ್ತಿ ವಿಭಾಗದ ಕಾರ್ಯದರ್ಶಿ ಹುದ್ದೆಗೆ ನೇಮಕ. ಇದೇ ವರ್ಷವೇ ಎನ್‌ಪಿಸಿಐಎಲ್‌ನ ಸಂಸ್ಥಾಪಕ ಮುಖ್ಯಸ್ಥ

ಎನ್‌ಪಿಸಿಐಎಲ್‌ನ ಮುಖ್ಯಸ್ಥರಾಗಿದ್ದ ಶ್ರೀನಿವಾಸನ್ ಅವರು ಹಲವು ಮಹತ್ವದ ಕಾರ್ಯಗಳನ್ನು ಮಾಡಿದ್ದಾರೆ. ಇವರ ನೇತೃತ್ವದಲ್ಲಿ 18 ಅಣು ಸ್ಥಾವರಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇವುಗಳಲ್ಲಿ 7 ಸ್ಥಾವರಗಳು ಕಾರ್ಯನಿರ್ವಹಿಸುತ್ತಿವೆ. 7 ಸ್ಥಾವರಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿವೆ ಮತ್ತು 4 ಸ್ಥಾವರ ನಿರ್ಮಾಣವು ಯೋಜನೆಯ ಹಂತದಲ್ಲಿದೆ

- **1990–92:** ವಿಯೆನ್ನಾದಲ್ಲಿರುವ ಅಂತರ ರಾಷ್ಟ್ರೀಯ ಅಣು ಶಕ್ತಿ ಸಂಸ್ಥೆಗೆ ಹಿರಿಯ ಸಲಹೆಗಾರರಾಗಿ ಕೆಲಸ
- **1996–98:** ವಿದ್ಯುತ್, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯಗಳ ಯೋಜನಾ ಆಯೋಗದ ಸದಸ್ಯ
- **2002–04 ಮತ್ತು 2006–08:** ದೇಶದ ಭದ್ರತಾ ಸಲಹಾ ಮಂಡಳಿಯ ಸದಸ್ಯ
- **2002–04:** ಕರ್ನಾಟಕದ ಉನ್ನತ ಶಿಕ್ಷಣದ ಕಾರ್ಯಪಡೆಯ ಮುಖ್ಯಸ್ಥ

ಗುಪ್ತಚರ ದಳ, ಸೇನಾ ಗುಪ್ತಚರ ಅಧಿಕಾರಿಗಳಿಂದಲೂ ವಿಚಾರಣೆ

ಜ್ಯೋತಿ ವಿಚಾರಣೆ ನಡೆಸಿದ ಎನ್‌ಐಎ

ಪ್ರಜಾವಾಣಿ ವಾರ್ತೆ/ಪಿಟಿಐ

ಚಂಡೀಗಢ: ಬೇಹುಗಾರಿಕೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಹರಿಯಾಣದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಅವರನ್ನು ಎನ್‌ಐಎ, ಗುಪ್ತಚರ ದಳ (ಐಬಿ) ಮತ್ತು ಸೇನಾ ಗುಪ್ತಚರ ಅಧಿಕಾರಿಗಳು ವಿಚಾರಣೆ ನಡೆಸಿದರು ಎಂದು ಪೊಲೀಸರು ಮಂಗಳವಾರ ತಿಳಿಸಿದರು.

ಜ್ಯೋತಿ ಮಲ್ಹೋತ್ರಾ

ಮಲ್ಹೋತ್ರಾ ಅವರ ಹಣಕಾಸು ವರ್ಗಾವಣೆ ಮತ್ತು ಪ್ರಯಾಣದ ಮಾಹಿತಿ ಆಧರಿಸಿದ ತನಿಖೆಯೂ ಮುಂದುವರಿದಿದೆ ಎಂದು ಅವರು ತಿಳಿಸಿದರು.

ಜ್ಯೋತಿ ಅವರು, ಪಾಕಿಸ್ತಾನ, ಚೀನಾ ಮತ್ತು ಇತರ ದೇಶಗಳಿಗೆ ಭೇಟಿ ನೀಡಿರುವ ಬಗ್ಗೆ ವರದಿಯಾಗಿದೆ. ಈ ಆಯಾಮದಲ್ಲಿಯೂ ತನಿಖೆ ನಡೆಯುತ್ತಿದೆ ಎಂದು ಹರಿಯಾಣದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಜ್ಯೋತಿ ಅವರ ಲ್ಯಾಪ್‌ಟಾಪ್‌ನ ವಿಧಿವಿಜ್ಞಾನ ಪರೀಕ್ಷೆ ನಡೆಯುತ್ತಿದೆ. ಜ್ಯೋತಿ ಅವರೊಂದಿಗೆ ಸಂಪರ್ಕದಲ್ಲಿದ್ದವರನ್ನೂ ವಿಚಾರಣೆ ನಡೆಸಲಾಗುತ್ತಿದೆ ಎಂದರು.

‘ಟ್ರಾವೆಲ್ ವಿತ್ ಜ್ಯೋ’ ಎನ್ನುವ ಯೂಟ್ಯೂಬ್ ಚಾನೆಲ್ ಮೂಲಕ ಟ್ರಾವೆಲ್ ವಿಡಿಯೊಗಳನ್ನು ಮಾಡುತ್ತಿದ್ದ ಜ್ಯೋತಿ ಅವರನ್ನು ಮೇ 16ರಂದು ಬಂಧಿಸಲಾಗಿದೆ.

ಅಧಿಕೃತ ರಹಸ್ಯ ಕಾಯ್ದೆ ಮತ್ತು ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದರು.

ಬೇಹುಗಾರಿಕೆ ಆರೋಪದ ಮೇಲೆ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದಿಂದ ಜ್ಯೋತಿ ಸೇರಿ 12 ಮಂದಿಯನ್ನು ಬಂಧಿಸಲಾಗಿದೆ.

ಕೇರಳ ಭೇಟಿ ಬಗ್ಗೆಯೂ ತನಿಖೆ

ತಿರುವನಂತಪುರ: ಜ್ಯೋತಿ ಮಲ್ಹೋತ್ರಾ ಅವರು ಕೇರಳದ ವಿವಿಧೆಡೆ ಭೇಟಿ ನೀಡಿ, ಸರಣಿ ವಿಡಿಯೊಗಳನ್ನು ಯುಟ್ಯೂಬ್‌ನಲ್ಲಿ ಹಂಚಿಕೊಂಡಿದ್ದರು. ಈ ಭೇಟಿಯ ಬಗ್ಗೆ ರಾಜ್ಯ ಮತ್ತು ಕೇಂದ್ರದ ಗುಪ್ತಚರ ಸಂಸ್ಥೆಗಳು ತನಿಖೆ ನಡೆಸುತ್ತಿವೆ.

ವಿಡಿಯೊಗಳಲ್ಲಿ ರಾಜ್ಯದ ಪ್ರವಾಸಿ ತಾಣಗಳ ಬಗ್ಗೆ ಪ್ರಚಾರ ಮಾಡಿದಂತಿದೆ. ಆದರೆ ಅವರು ರಾಜ್ಯದ ಪ್ರಮುಖ ಮೂಲಸೌಕರ್ಯಗಳ ವಿಡಿಯೊವನ್ನೂ ತೆಗೆದುಕೊಂಡಿರುವ ಶಂಕೆ ವ್ಯಕ್ತವಾಗಿದೆ. ಈ ಆಯಾಮದಲ್ಲಿ ಗುಪ್ತಚರ ಸಂಸ್ಥೆಗಳು ಮಾಹಿತಿ ಕಲೆಹಾಕುತ್ತಿವೆ.

ಜ್ಯೋತಿ ಅವರು ಕೇರಳದಾದ್ಯಂತ ರೈಲಿನಲ್ಲಿ ಪ್ರಯಾಣಿಸಿದ್ದರು. ಕೊಚ್ಚಿಗೆ ಮೆಟ್ರೊ ರೈಲು ಮತ್ತು ವಾಟರ್ ಮೆಟ್ರೊದಲ್ಲಿ ಪ್ರಯಾಣಿಸಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಜ್ಯೋತಿ ಅವರು ಕಾಸರಗೋಡಿನ ಪಡನ್ನ ಗ್ರಾಮಕ್ಕೂ ಭೇಟಿ ನೀಡಿದ ಬಗ್ಗೆ ಅನಧಿಕೃತ ಮೂಲಗಳಿಂದ ಮಾಹಿತಿ ಲಭ್ಯವಾಗಿದೆ. ಕೆಲ ವರ್ಷಗಳ ಹಿಂದೆ ಪಡನ್ನ ಗ್ರಾಮದಿಂದ ಹಲವು ಯುವಕರು ಐಸಿಸ್ ಉಗ್ರ ಸಂಘಟನೆಗೆ ಸೇರ್ಪಡೆಯಾಗಿದ್ದರು.

ಖ್ಯಾತ ಖಭೌತ ವಿಜ್ಞಾನಿ ಜಯಂತ್ ನಾರ್ಲಿಕರ್ ನಿಧನ

ಪುಣೆ (ಪಿಟಿಐ): ಖ್ಯಾತ ಖಭೌತವಿಜ್ಞಾನಿ ಮತ್ತು ಲೇಖಕ ಜಯಂತ್ ನಾರ್ಲಿಕರ್ (86) ಅವರು ಮಂಗಳವಾರ ಇಲ್ಲಿ ನಿಧನರಾಗಿದ್ದಾರೆ.

ಅವರಿಗೆ ಮೂವರು ಪುತ್ರಿಯರು ಇದ್ದಾರೆ. ನಾರ್ಲಿಕರ್ ಅವರು ಖಭೌತ ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಅಸಾಧಾರಣ ಕೊಡುಗೆಗಳು, ವಿಜ್ಞಾನವನ್ನು ಜನಪ್ರಿಯಗೊಳಿಸಲು ಮತ್ತು ದೇಶದಲ್ಲಿ ಮೊದಲ ಹಂತದ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಲು ಶ್ರಮಿಸುವ ಮೂಲಕ ಅಪಾರ ಮನ್ನಣೆ ಗಳಿಸಿದ್ದರು.

ಕುಟುಂಬದ ಮೂಲಗಳ ಪ್ರಕಾರ, ನಾರ್ಲಿಕರ್ ಅವರು ಮಂಗಳವಾರ ಬೆಳಿಗ್ಗೆ ನಿದ್ರೆಯಲ್ಲಿರುವಾಗಲೇ ನಿಧನ ಹೊಂದಿದ್ದಾರೆ. ನಾರ್ಲಿಕರ್ ಅವರು ಇತ್ತೀಚೆಗೆ ನಗರದ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

1938ರ ಜುಲೈ 19ರಂದು ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಜನಿಸಿದ ನಾರ್ಲಿಕರ್ ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ (ಬಿಎಚ್‌ಯು) ಆರಂಭಿಕ ಶಿಕ್ಷಣ, ಕೇಂಬ್ರಿಜ್ ವಿಶ್ವವಿದ್ಯಾಲಯದಿಂದ ಉನ್ನತ ಶಿಕ್ಷಣ ಪಡೆದಿದ್ದರು. ಬ್ರಿಟನ್‌ನಲ್ಲಿ ಡಾಕ್ಟರೇಟ್ ಮಾಡುವಾಗ ಅವರ ಮಾರ್ಗದರ್ಶಕರಾದ ಪ್ರಸಿದ್ಧ ವಿಜ್ಞಾನಿ ಫ್ರೆಡ್ ಹೋಯ್ಲ್ ಅವರೊಂದಿಗೆ ಗುರುತ್ವಾಕರ್ಷಣೆ ಕುರಿತು ತಮ್ಮದೇ ಸಿದ್ಧಾಂತ ಸಿದ್ಧಪಡಿಸಿದ್ದರು. ಈ ಸಿದ್ಧಾಂತವು ‘ಹೋಯ್ಲ್-ನಾರ್ಲಿಕರ್ ಸಿದ್ಧಾಂತ’ವೆಂದೇ ಹೆಸರಾಗಿದೆ.

ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ (1972-1989) ಸೇರುವ ಉದ್ದೇಶದಿಂದ ಭಾರತಕ್ಕೆ ಮರಳಿದರು. 1988ರಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗವು ಅವರನ್ನು ಇಂಟರ್ ಯುನಿವರ್ಸಿಟಿ ಸೆಂಟರ್ ಫಾರ್ ಅಸ್ಟ್ರೋನಮಿ ಆ್ಯಂಡ್ ಆಸ್ಟ್ರೋಫಿಸಿಕ್ಸ್ (ಐಯುಸಿಎಎ) ಸಂಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಿತ್ತು. 2003ರಲ್ಲಿ ನಿವೃತ್ತಿಯಾದರು.

ನಾರ್ಲಿಕರ್ ಅವರಿಗೆ ಪದ್ಮಭೂಷಣ (1965), ಪದ್ಮವಿಭೂಷಣ (2004), ಮಹಾರಾಷ್ಟ್ರ ಭೂಷಣ ಪ್ರಶಸ್ತಿ (2011) ನೀಡಿ ಗೌರವಿಸಲಾಗಿದೆ. ಅವರ ಆತ್ಮಚರಿತ್ರೆಯ ಪುಸ್ತಕಕ್ಕೆ (ಮರಾಠಿ) 2014ರಲ್ಲಿ ಪ್ರಾದೇಶಿಕ ಭಾಷೆಯ ವಿಭಾಗದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಸಂದಿದೆ. 2021ರಲ್ಲಿ ನಡೆದ 94ನೇ ಅಖಿಲ ಭಾರತೀಯ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಕೂಡ ವಹಿಸಿದ್ದರು.

ಮುಂಡಗೋಡ ತಾಲ್ಲೂಕಿನ ಬಾಚಣಿಕೆ ಸನಿಹ ರಾಜ್ಯ ಹೆದ್ದಾರಿ ಮೇಲೆ ಮಂಗಳವಾರ ಮರ ಬಿದ್ದು ಸಂಚಾರ ಬಂದ್ ಆಗಿತ್ತು (ಮೊದಲ ಚಿತ್ರ). ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಬಳಗೇರಿ ಗ್ರಾಮದ ಹತ್ತಿರದ ಹಳ್ಳದ ಸೇತುವೆಯ ಮೇಲ್ಪದರ ಕಿತ್ತುಹೋಗಿದೆ (ಮಧ್ಯದ ಚಿತ್ರ). ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲ್ಲೂಕಿನ ಸಂತೆಗುಳಿ ಸಮೀಪ ರಾಜ್ಯ ಹೆದ್ದಾರಿ–48 ಜಲಾವೃತ ಆಗಿದ್ದರಿಂದ ವಾಹನ ಸವಾರರು ಸಂಚರಿಸಲು ಪರದಾಡಿದರು

ಶಿರಾದಲ್ಲಿ ಕೆಸರಿನಲ್ಲಿ ಸಿಲುಕಿದ್ದ ಬಸ್

ಮಣಿಪಾಲ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಳೆ ನೀರಿನೊಂದಿಗೆ ಹರಿದು ಬಂದ ಕಲ್ಲುಗಳು ರಸ್ತೆಯಲ್ಲಿ ಸಂಗ್ರಹವಾಗಿದ್ದವು

ಸತತ ಮಳೆ, ಕೃಷಿ ಖುಷಿಗೂ 'ತಣ್ಣೀರು'

ಪ್ರಜಾವಾಣಿ ವಾರ್ತೆ

ದಾವಣಗೆರೆ/ಕಲಬುರಗಿ: ರಾಜ್ಯದ ಹಲವೆಡೆ ಮಂಗಳವಾರವೂ ಮಳೆಯ ಆರ್ಭಟ ಮುಂದುವರಿದಿದೆ. ದಾವಣಗೆರೆ ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಭಾರಿ ಮಳೆ ಸುರಿಯಿತು. ಬೆಳಿಗ್ಗೆ 11 ಗಂಟೆಗೆ ಭಾರಿ ಗಾಳಿ, ಗುಡುಗು ಸಮೇತ ಆರಂಭವಾದ ಮಳೆ ಮಧ್ಯಾಹ್ನ 1 ಗಂಟೆವರೆಗೂ ರಭಸವಾಗಿ ಸುರಿಯಿತು.

ಮಳೆಯಿಂದಾಗಿ ತಗ್ಗು ಪ್ರದೇಶಗಳಲ್ಲಿ ನೀರು ಸಂಗ್ರಹಗೊಂಡು ಸ್ಥಳೀಯರು ಸಂಕಷ್ಟ ಅನುಭವಿಸಿದರು. ರಸ್ತೆಗಳಲ್ಲಿ ಹಳ್ಳದಂತೆ ನೀರು ಹರಿದ ಪರಿಣಾಮ ವಾಹನ ಸವಾರರು ಪರದಾಡಿದರು. ಜಿಲ್ಲೆಯ ನ್ಯಾಮತಿ, ಹರಿಹರ, ಸಾಸ್ವೆಹಳ್ಳಿ, ಸಂತೇಬೆನ್ನೂರು, ಮಲೇಬೆನ್ನೂರು, ಕಡರನಾಯ್ಕನಹಳ್ಳಿ ಭಾಗದಲ್ಲೂ ಧಾರಾಕಾರ ಮಳೆ ಸುರಿಯಿತು. ಬಸವಾಪಟ್ಟಣದಲ್ಲಿ ಸುರಿದ ಮಳೆಗೆ ಬಸ್ ನಿಲ್ದಾಣ ಜಲಾವೃತವಾಗಿತ್ತು.

ಗ್ರಾಮೀಣ ಭಾಗದಲ್ಲಿ ಗಾಳಿ, ಮಳೆಯಿಂದಾಗಿ ಭತ್ತದ ಬೆಳೆ ಚಾಪೆ ಹಾಸಿದ್ದು, ರೈತರು ಆತಂಕದಲ್ಲಿದ್ದಾರೆ. ಈಗಾಗಲೇ ಬೆಳೆಯ ಕಟಾವು ನಡೆಸಿರುವ ರೈತರು, ಭತ್ತವನ್ನು ಒಣಗಿಸಲಾಗದೇ ತೇವಾಂಶದ ಸಮಸ್ಯೆ ಎದುರಿಸುತ್ತಿದ್ದಾರೆ. ತೋಟಗಾರಿಕಾ ಬೆಳೆಗಳಿಗೂ ಭಾರಿ ಹಾನಿಯಾಗಿದೆ.

ಕಲಬುರಗಿ, ಕೊಪ್ಪಳ, ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗಿದೆ. ರಾಯಚೂರು ಜಿಲ್ಲೆಯ ಸಿಂಧನೂರು, ದೇವದುರ್ಗ, ಲಿಂಗಸುಗೂರು, ಹಟ್ಟಿ ಚಿನ್ನದಗಣಿ, ಕವಿತಾಳದಲ್ಲಿ ಸಾಧಾರಣ ಮಳೆಯಾಗಿದೆ.

ಕೊಪ್ಪಳ ಜಿಲ್ಲೆಯಾದ್ಯಂತ ಮಂಗಳವಾರ ರಭಸದಿಂದ ಮಳೆ ಸುರಿದಿದ್ದು, ಜನರ ದೈನಂದಿನ ಚಟುವಟಿಕೆಗಳ ಮೇಲೆ ಪರಿಣಾಮಬೀರಿತು. ಬೆಳಿಗ್ಗೆಯಿಂದ ಮೋಡಕವಿದ ವಾತಾವರಣವಿತ್ತು. ಸಂಜೆ ವೇಳೆಗೆ ಜೋರಾಗಿ ಮಳೆ ಸುರಿದಿದೆ. ಕುಕನೂರು ತಾಲ್ಲೂಕಿನ ಬಳಗೇರಿ ಹಾಗೂ ಬೂದುಗುಂಪಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಹಳ್ಳದ ಸೇತುವೆ ರಸ್ತೆ ಕಿತ್ತು ಹೋಗಿದ್ದು, ವಾಹನ ಸಂಚಾರ ಸ್ಥಗಿತಗೊಂಡಿದೆ. ಹಳ್ಳದ ನೀರು ಪಕ್ಕದ ಜಮೀನುಗಳಿಗೆ ನುಗ್ಗಿ ಬೆಳೆ ಹಾನಿಯಾಗಿದೆ.

ಬೀದರ್ ಜಿಲ್ಲೆಯ ಔರಾದ್ ಪಟ್ಟಣ ಹಾಗೂ ಗ್ರಾಮೀಣ ಭಾಗಗಳಲ್ಲಿ ಮಂಗಳವಾರ ಬಿರುಸಿನ ಮಳೆಯಾಗಿದೆ. ಬೀದರ್, ಭಾಲ್ಕಿ, ಹುಲಸೂರಿನ ಹಲವೆಡೆ ಸಾಧಾರಣ ಮಳೆ ಬಿದ್ದಿದೆ.

ಶಿವಮೊಗ್ಗ ವರದಿ: ಮೇ ತಿಂಗಳ ಮೂರನೇ ವಾರ ಪೂರ್ಣಗೊಳ್ಳುವ ಮುನ್ನವೇ ಮಲೆನಾಡಿನಲ್ಲಿ ವರುಣನ ಆರ್ಭಟ ಆರಂಭವಾಗಿದೆ. ಮೋಡ ಕವಿದ ವಾತಾವರಣ, ಬಿರುಸು ಮಳೆ, ಕೆಲ ಹೊತ್ತು ನೇಸರನ ಇಣುಕು ನೋಟ ಮುಂಗಾರು ಹೊತ್ತಿನ ಅನುಭವ ಆಗುತ್ತಿದೆ.

ಶಿವಮೊಗ್ಗ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದೆ. ಕಳೆದ 24 ಗಂಟೆಯಲ್ಲಿ ಸೊರಬ ತಾಲ್ಲೂಕಿನಲ್ಲಿ ಹೆಚ್ಚು ಮಳೆ ಸುರಿದಿದೆ. ಹವಾಮಾನ ಇಲಾಖೆಯ ಮಾಹಿತಿಯಂತೆ ಸೊರಬ ತಾಲ್ಲೂಕಿನ ದೊಡ್ಡಿಕೊಪ್ಪದಲ್ಲಿ ಹೆಚ್ಚು ಮಳೆ (6.85 ಸೆಂ.ಮೀ) ಬಿದ್ದಿದೆ.

ಚಿತ್ರದುರ್ಗ ವರದಿ: ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಮಂಗಳವಾರ ಬೆಳಿಗ್ಗೆಯಿಂದಲೂ ಮೋಡ ಮುಚ್ಚಿದ ವಾತಾವರಣವಿದ್ದು ಜಿಟಿಜಿಟಿ ಮಳೆಯಾಗಿದೆ. ಚಳಿಗಾಲದ ರೀತಿಯಲ್ಲಿ ಜನರು ಜರ್ಕಿನ್, ಸ್ವೆಟರ್ ಧರಿಸಿ ಓಡಾಡುತ್ತಿದ್ದಾರೆ. ಮೊಳಕಾಲ್ಮುರು ಪಟ್ಟಣದಲ್ಲಿ 1 ಗಂಟೆಗೂ ಮಳೆಯಾಗಿದೆ. ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಭಾಗದಲ್ಲಿ ನಿರಂತರ ಮಳೆಗೆ ತಿಪ್ಪೇರುದ್ರಸ್ವಾಮಿ ದೊಡ್ಡಕೆರೆ, ಸಣ್ಣಕೆರೆಗೆ ಅಪಾರ ಪ್ರಮಾಣದ ನೀರು ಹರಿದುಬಂದಿದೆ.

ಹೊಸದುರ್ಗ ತಾಲ್ಲೂಕಿನ ಮತ್ತೋಡು, ಶ್ರೀರಾಂಪುರ ಹೋಬಳಿಯಲ್ಲಿ ಮಳೆಯಾಗಿದೆ. ಹೊಳಲ್ಕೆರೆ ತಾಲ್ಲೂಕಿನ ತಾಳ್ಯ, ಘಟ್ಟಿ ಹೊಸಹಳ್ಳಿ ಹೊರಕೆರೆ ದೇವರಪುರ, ಚಿತ್ರಹಳ್ಳಿ ಭಾಗದ ಚೆಕ್ ಡ್ಯಾಂಗಳು ತುಂಬಿವೆ.

ಮಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಸುಳ್ಯ, ಮೂಲ್ಕಿ ಮತ್ತು ಮೂಡುಬಿದಿರೆ ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗಿದೆ. ಮಂಗಳೂರಿನ ಕದ್ರಿ ಪಾರ್ಕ್‌ನಲ್ಲಿ ದೊಡ್ಡ ಮರ ಬಿದ್ದು, ಸಂಚಾರಕ್ಕೆ ತೊಡಕಾಯಿತು.

ಉಡುಪಿ ಜಿಲ್ಲೆಯಾದ್ಯಂತ ಮಂಗಳವಾರ ಮಧ್ಯಾಹ್ನದವರೆಗೆ ಧಾರಾಕಾರ ಮಳೆ ಸುರಿದಿದ್ದು, ನಗರ ಸೇರಿದಂತೆ ಹಲವೆಡೆ ರಸ್ತೆಯಲ್ಲಿ ಮಳೆ ನೀರು ಸಂಗ್ರಹವಾಗಿ ವಾಹನ ಸಂಚಾರಕ್ಕೆ ತೊಡಕುಂಟಾಗಿತ್ತು. ಬೆಳಿಗ್ಗೆ ಸುರಿದ ಭಾರಿ ಮಳೆಗೆ ಮಣಿಪಾಲ ಸಮೀಪದ ಐನಾಕ್ಸ್ ಬಳಿ ಮಣ್ಣು, ಕಲ್ಲುಗಳು ಮಳೆ ನೀರಿನೊಂದಿಗೆ ರಾಷ್ಟ್ರೀಯ ಹೆದ್ದಾರಿಗೆ ಹರಿದು, ಕೆಲಕಾಲ ರಸ್ತೆ ಸಂಚಾರ ಸ್ಥಗಿತಗೊಂಡಿತ್ತು. ಸಮೀಪದ ಅಂಗಡಿ, ಮನೆಗಳಿಗೂ ಮಳೆ ನೀರು ನುಗ್ಗಿತ್ತು. ಈ ಮಾರ್ಗದಲ್ಲಿ ಸಂಚರಿಸುತ್ತಿದ್ದ ವಾಹನಗಳು ಬದಲಿ ಮಾರ್ಗಗಳಲ್ಲಿ ಸಂಚರಿಸಿದವು.

ಭಾರಿ ಗಾಳಿ ಬೀಸಿದ ಪರಿಣಾಮವಾಗಿ ಮಣಿಪಾಲದ ಲಕ್ಷ್ಮೀಂದ್ರ ನಗರದಲ್ಲಿ ಮರ ಹಾಗೂ ವಿದ್ಯುತ್ ಕಂಬಗಳು ನೆಲಕ್ಕುರುಳಿದವು. ಕಾರ್ಕಳ, ಕುಂದಾಪುರ, ಬೈಂದೂರು, ಹೆಬ್ರಿ ತಾಲ್ಲೂಕಿನ ವಿವಿಧೆಡೆ ಭಾರಿ ಮಳೆ ಸುರಿದಿದೆ. ಬ್ರಹ್ಮಾವರದಲ್ಲಿ ಗಾಳಿ ಮಳೆಗೆ ಹಲವೆಡೆ ಮರಗಳು ಬಿದ್ದು ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಕೆಲವೆಡೆ ಮನೆಗಳ ಮೇಲೆ ಮರ ಬಿದ್ದ ವರದಿಯಾಗಿದೆ.

ಮೀನುಗಾರರು ಸಮುದ್ರಕ್ಕೆ ತೆರಳಬಾರದು, ಮೀನಗಾರಿಕೆಗೆ ತೆರಳಿರುವ ದೋಣಿಗಳು ದಡಕ್ಕೆ ಮರಳಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣೆ ಪ್ರಾಧಿಕಾರ ಸೂಚನೆ ನೀಡಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸೋಮವಾರ ಮಧ್ಯರಾತ್ರಿಯಿಂದಲೇ ಮಳೆ ಆರಂಭವಾಗಿ ಎಡೆಬಿಡದೆ ಸುರಿದಿದೆ. ಕುದುರೆಮುಖ, ಕಳಸ, ಶೃಂಗೇರಿ, ಕೊಪ್ಪ, ಕೊಟ್ಟಿಗೆಹಾರ, ಮೂಡಿಗೆರೆ, ಎನ್.ಆರ್. ಪುರ, ಚಿಕ್ಕಮಗಳೂರು ನಗರ, ಮುಳ್ಳಯ್ಯನಗಿರಿ, ಕೆಮ್ಮಣ್ಣುಗುಂಡಿ, ಕಡೂರು ಸುತ್ತಮುತ್ತ ಧಾರಾಕಾರ ಮಳೆಯಾಗಿದೆ.

ಅರಸೀಕೆರೆಯಲ್ಲಿ 4.7 ಸೆಂ.ಮೀ, ಗಂಡಸಿ 4, ಹಳ್ಳಿಮೈಸೂರು 3.5 ಸೆಂ.ಮೀ. ಮಳೆ ದಾಖಲಾಗಿದೆ.

ಕೋಲಾರ: ಉದ್ಯಾನ, ಅಂಡರ್‌ಪಾಸ್ ಜಲಾವೃತ

ಕೋಲಾರ ನಗರದ ಖಾದ್ರಿಪುರ ರೈಲು ಅಂಡರ್ ಪಾಸ್‌ನಲ್ಲಿ ಸಂಗ್ರಹವಾಗಿರುವ ಮಳೆ ನೀರು

ಬೆಂ.ಗ್ರಾಮಾಂತರ: ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸೋಮವಾರ ರಾತ್ರಿಯಿಡೀ ಜಿನುಗುತ್ತಿದ್ದ ಮಳೆ ಬೆಳಗಿನ ಜಾವ ಒಮ್ಮಿಂದೊಮ್ಮೆಲೆ ಆರ್ಭಟಿಸಿದೆ. ಹೂವು ಮಾರುಕಟ್ಟೆ, ತೋಟ, ಉದ್ಯಾನ, ರಸ್ತೆ, ಅಂಡರ್‌ಪಾಸ್ ಜಲಾವೃತವಾಗಿವೆ. ಚರಂಡಿಗಳಲ್ಲಿ ಕಸ ತುಂಬಿಕೊಂಡು ಕೊಳಚೆಯೊಂದಿಗೆ ಮಳೆ ನೀರು ರಸ್ತೆಗೆ ಹರಿದಿದೆ. ರಸ್ತೆಯಲ್ಲಿದ್ದ ಚೇಂಬರ್‌ಗಳು ತುಂಬಿ ಉಕ್ಕಿ ಹರಿದಿವೆ.

ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಎರಡು-ಮೂರು ದಿನಗಳಿಂದ ಅಬ್ಬರಿಸಿದ್ದ ಮಳೆಯ ಆರ್ಭಟ ಕೊಂಚ ತಣ್ಣಗಾಗಿದೆ. ಜಿಟ ಜಿಟ ಮಳೆ ಮುಂದುವರೆದಿದೆ. ತುಮಕೂರು ಜಿಲ್ಲೆಯಲ್ಲಿ ಬೆಳಗಿನ ಜಾವ ಸುರಿದ ಮಳೆಗೆ ನಗರದ ತಗ್ಗು ಪ್ರದೇಶದಲ್ಲಿನ ರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಸಮಸ್ಯೆ ಅನುಭವಿಸಿದರು.

ಶಿರಾ ತಾಲ್ಲೂಕಿನ ಬಸವನಹಳ್ಳಿ- ಕೆ.ಕೆ.ಪಾಳ್ಯ ಕೆಸರುಮಯವಾದ ರಸ್ತೆಯಲ್ಲಿ ಕೆಎಸ್ಆರ್‌ಟಿಸಿ ಬಸ್ ಸಿಲುಕಿ ಮೂರು ತಾಸು ಪ್ರಯಾಣಿಕರು ಪರದಾಡಿದರು. ಸ್ಥಳೀಯರು ಟ್ರ್ಯಾಕ್ಟರ್ ಸಹಾಯದಿಂದ ಕೆಸರಿನಿಂದ ಬಸ್ ಮೇಲಕ್ಕೆತ್ತಿ, ಹೊರ ತಂದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ರಾಮಸ್ವಾಮಿಪಲ್ಲಿ ಗ್ರಾಮದ ಮನೆಯೊಂದರ ಚಾವಣಿ ಕುಸಿದು ಕೂಲಿ ಕೆಲಸ ಮಾಡುವ ಜಯಮ್ಮರೆಡ್ಡಿ ಎಂಬ ವೃದ್ಧೆ ತೀವ್ರವಾಗಿ ಗಾಯಗೊಂಡಿದ್ದಾರೆ. ತಲೆ ಹಾಗೂ ಎರಡು ಕಾಲುಗಳ ಮೇಲೆ ಬಂಡೆ ಬಿದ್ದು ತೀವ್ರವಾಗಿ ಗಾಯಗೊಂಡ ಅವರನ್ನು ನೆರೆಹೊರೆಯವರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಕಮ್ಮರವಾರಿಪಲ್ಲಿ ಗ್ರಾಮದ ಅಪಾರ ಪ್ರಮಾಣದ ಟೊಮೆಟೊ ಹಾಗೂ ಕ್ಯಾರೆಟ್ ಬೆಳೆ ಸಂಪೂರ್ಣ ನೆಲಕಚ್ಚಿದೆ.

ಕೋಲಾರ ಜಿಲ್ಲೆಯಲ್ಲಿ ಸತತ ಆರೇಳು ದಿನಗಳಿಂದ ಬಿಟ್ಟುಬಿಟ್ಟು ಮಳೆ ಸುರಿಯುತ್ತಲೇ ಇದೆ. ಬಡಾವಣೆಗಳ ರಸ್ತೆಗಳು ಕೆಸರುಮಯವಾಗಿವೆ. ರಸ್ತೆಗಳಲ್ಲಿ ಕಾಲಿಡಲಾರದ ಸ್ಥಿತಿ ಇದೆ. ಗುಂಡಿಗಳಲ್ಲಿ ನೀರು ತುಂಬಿಕೊಂಡಿದೆ.

ತಗ್ಗು ಪ್ರದೇಶದಲ್ಲಿ ರಸ್ತೆ ಉದ್ದಕ್ಕೂ ಮಳೆ ನೀರು ನಿಂತು ಕೆಸರು ಗದ್ದೆಯಾಗಿವೆ. ಕೋಲಾರ ನಗರದ ಹೃದಯಭಾಗದಲ್ಲಿರುವ ಕುವೆಂಪು ಉದ್ಯಾನ ಕೆರೆಯಂತಾಗಿದೆ. ಸಂಪೂರ್ಣ ನೀರು ತುಂಬಿಕೊಂಡಿದ್ದು ಹರಿದು ಹೋಗಲು ಜಾಗವಿಲ್ಲದಂತಾಗಿದೆ.

ರಾಜ್ಯದಾದ್ಯಂತ ವರುಣನ ಅಬ್ಬರ

ಒಂದನೇ ಪುಟದಿಂದ...

ಹಳೆ ಮೈಸೂರು ಭಾಗದಲ್ಲೂ ಮಳೆಯಾಯಿತು. ಕೊಡಗು ಜಿಲ್ಲೆಯ ಕುಶಾಲನಗರ, ಸುಂಟಿಕೊಪ್ಪ, ನಾಪೋಕ್ಲು ಹಾಗೂ ಸೋಮವಾರಪೇಟೆಯಲ್ಲೂ ಬಿರುಸಿನ ಮಳೆಯಾಗಿದೆ.

ಹಾಸನ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿಯೂ ಉತ್ತಮ ಮಳೆಯಾಗಿದೆ. ಹಳೇಬೀಡಿಗೆ ಭೇಟಿ ನೀಡಿದ್ದ ಪ್ರವಾಸಿಗರು ಛತ್ರಿ ಹಿಡಿದುಕೊಂಡು ಹೊಯ್ಸಳೇಶ್ವರ ದೇವಸ್ಥಾನವನ್ನು ವೀಕ್ಷಿಸಿದರು. ಹಾಸನದಲ್ಲಿ ಮಳೆಯ ಮಧ್ಯೆಯೇ ವಿದ್ಯಾರ್ಥಿಗಳು ತಿರಂಗಾ ಯಾತ್ರೆ ನಡೆಸಿದರು.

ಚಿಕ್ಕಮಗಳೂರು ಜಿಲ್ಲೆಯಲ್ಲೂ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತ-ಗೊಂಡಿದೆ.

ಮೂಡಿಗೆರೆ ತಾಲ್ಲೂಕಿನ ಸುಂಕಸಾಲೆ ಬಳಿ ಮರವೊಂದು ಖಾಸಗಿ ಬಸ್, ಮಿನಿ ಬಸ್ ಮತ್ತು ಬೈಕ್ ಮೇಲೆ ಬಿದ್ದಿದೆ. ಬೈಕ್ ಸವಾರನಿಗೆ ಗಂಭೀರವಾಗಿ ಗಾಯವಾಗಿದ್ದು, ಬಸ್ ಮುಂಭಾಗ ಜಖಂಗೊಂಡಿದೆ. ಕೊಟ್ಟಿಗೆಹಾರ- ಕಳಸ ರಾಜ್ಯ ಹೆದ್ದಾರಿಯಲ್ಲಿ ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಕೆಆರ್‌ಎಸ್: 89.32 ಅಡಿಗೆ ಇಳಿದ ನೀರಿನ ಮಟ್ಟ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಮಂಗಳವಾರ 89.32 ಅಡಿಗೆ ಕುಸಿದಿದೆ.

ಜಲಾಶಯದ ಮಟ್ಟ 60 ಅಡಿ ತಲುಪುವವರೆಗೆ ಕುಡಿಯುವ ಉದ್ದೇಶಕ್ಕೆ ನೀರನ್ನು ಬಳಸಬಹುದು. ಉಳಿದ ನೀರನ್ನು 'ಡೆಡ್ ಸ್ಟೋರೇಜ್' ಎಂದು ಪರಿಗಣಿಸಲಾಗುತ್ತದೆ. ಈಗ ಲಭ್ಯವಿರುವ ನೀರನ್ನು ಎರಡು ತಿಂಗಳಿಗೂ ಹೆಚ್ಚು ಕಾಲ ಕುಡಿಯುವ ಉದ್ದೇಶಕ್ಕೆ ಬಳಸಬಹುದು.

ಮಡಿಕೇರಿಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಜಲಾಶಯದ ಒಳ ಹರಿವು ಹೆಚ್ಚಾಗುವ ಸಾಧ್ಯತೆ ಇದೆ.ಈ ಬಾರಿ ಮುಂಗಾರು ಉತ್ತಮವಾಗಿರುವ ಕಾರಣ ನೀರಿನ ಕೊರತೆ ಕಾಡುವುದಿಲ್ಲ ಎಂಬ ಆಶಾಭಾವನೆ ಅಧಿಕಾರಿಗಳದ್ದು.

ಜಲಾಶಯಕ್ಕೆ ಪ್ರಸ್ತುತ 148 ಕ್ಯುಸೆಕ್ ನೀರು ಹರಿದು ಬರುತ್ತಿದೆ. 549 ಕ್ಯುಸೆಕ್ ನೀರನ್ನು ಕುಡಿಯುವ ಉದ್ದೇಶಕ್ಕೆ ಹೊರಗೆ ಬಿಡಲಾಗುತ್ತಿದೆ. 124.80 ಅಡಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 15.53 ಟಿಎಂಸಿ ಅಡಿ (ಗರಿಷ್ಠ 49.5 ಟಿಎಂಸಿ) ನೀರಿನ ಸಂಗ್ರಹವಿದೆ.

ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 80.72 ಅಡಿ (11.1 ಟಿಎಂಸಿ ಅಡಿ) ನೀರಿನ ಸಂಗ್ರಹವಿತ್ತು. 1416 ಕ್ಯುಸೆಕ್ ಒಳ ಹರಿವು ಹಾಗೂ 270 ಕ್ಯುಸೆಕ್ ಹೊರ ಹರಿವು ದಾಖಲಾಗಿತ್ತು.

ನಾಲೆಗೆ ನೀರು ನಿಲುಗಡೆ: ರೈತ ಸಂಘದ ಒತ್ತಾಯದ ಮೇರೆಗೆ ಮೇ 11ರಿಂದ ನಾಲೆಗೆ ನೀರು ಹರಿಸಲಾಗುತ್ತಿತ್ತು. ಕೆಆರ್‌ಎಸ್ ಅಚ್ಚುಕಟ್ಟು ಪ್ರದೇಶದಲ್ಲಿ ಕಳೆದ ಮೂರು ದಿನಗಳಿಂದ ಉತ್ತಮ ಮಳೆ ಸುರಿಯುತ್ತಿದ್ದು, ಜಲಾಶಯದಿಂದ ವಿಶ್ವೇಶ್ವರಯ್ಯ ನಾಲೆಗೆ ಹರಿಸುತ್ತಿದ್ದ ನೀರನ್ನು ಸೋಮವಾರದಿಂದ ನಿಲ್ಲಿಸಲಾಗಿದೆ. ಮತ್ತೆ ನಾಲೆಗೆ ನೀರು ಹರಿಸುವ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

4 ದಿನಗಳಲ್ಲಿ ಕೇರಳಕ್ಕೆ ಮುಂಗಾರು

ನವದೆಹಲಿ(ಪಿಟಿಐ): ನಾಲ್ಕೈದು ದಿನಗಳಲ್ಲಿ ಕೇರಳಕ್ಕೆ ನೈರುತ್ಯ ಮುಂಗಾರು ಪ್ರವೇಶಿಸುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ನಿರೀಕ್ಷೆಯಂತೆ, ಮುಂಗಾರು ಪ್ರವೇಶಿಸಿದರೆ, 2009ರ ನಂತರ, ವಾಡಿಕೆಗಿಂತಲೂ ಮುಂಚಿತವಾಗಿ ಭಾರತದ ಮುಖ್ಯಭಾಗದಲ್ಲಿ ಮುಂಗಾರು ಪ್ರವೇಶಿಸುತ್ತಿರುವುದು ಇದೇ ಮೊದಲು (2009ರಲ್ಲಿ ಮೇ 23ರಂದು ಪ್ರವೇಶಿಸಿತ್ತು) ಎಂದು ಐಎಂಡಿ ತಿಳಿಸಿದೆ.

ಸಾಮಾನ್ಯವಾಗಿ ನೈರುತ್ಯ ಮುಂಗಾರು ಜೂನ್ 1ರಂದು ಕೇರಳಕ್ಕೆ ಪ್ರವೇಶಿಸುತಿತ್ತು. ಜುಲೈ 8ರ ಒಳಗಾಗಿ ಇಡೀ ದೇಶವನ್ನು ಆವರಿಸಿಕೊಳ್ಳುತ್ತದೆ.

ಸೆಪ್ಟೆಂಬರ್ 17ರ ಸುಮಾರಿಗೆ ವಾಯವ್ಯ ಭಾರತದಿಂದ ಸ್ಥಳಾಂತರಗೊಂಡು, ಅಕ್ಟೋಬರ್ 15ರ ಹೊತ್ತಿಗೆ ಸಂಪೂರ್ಣವಾಗಿ ಕೊನೆಗೊಳ್ಳುತ್ತದೆ.

ಕಳೆದ ವರ್ಷ ಮೇ 30ರಂದು ಕೇರಳಕ್ಕೆ ಮುಂಗಾರು ಪ್ರವೇಶಿಸಿತ್ತು. 2023ರಲ್ಲಿ ಜೂನ್ 8, 2022ರಲ್ಲಿ ಮೇ 29, 2021ರಲ್ಲಿ ಜೂನ್ 3, 2020ರಲ್ಲಿ ಜೂನ್ 1, 2019ರಲ್ಲಿ ಜೂನ್ 8 ಹಾಗೂ 2018ರಲ್ಲಿ ಮೇ 29ರಂದು ಪ್ರವೇಶಿಸಿತ್ತು.

ಭಾರಿ ಮಳೆ ಮುಂದುವರಿಕೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಬುಧವಾರವೂ ಭಾರಿ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ನಾಲ್ಕು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಹಾಗೂ ಆರು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ರಾಜ್ಯದಲ್ಲಿ ಮಳೆ ಬಿರುಸು ಪಡೆದಿದೆ. ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ ಬುಧವಾರ 'ರೆಡ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳ ಕೆಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹಲವೆಡೆ ಸಾಧಾರಣ ಮಳೆ ಸುರಿಯಲಿದೆ.

ಬೆಳಗಾವಿ, ಧಾರವಾಡ, ಹಾವೇರಿ, ದಕ್ಷಿಣ ಕನ್ನಡ, ಹಾಸನ ಹಾಗೂ ಕೊಡಗು ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಯ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ. ಉಳಿದ ಜಿಲ್ಲೆಗಳಿಗೆ ಇಲಾಖೆಯು 'ಯೆಲ್ಲೊ ಅಲರ್ಟ್' ನೀಡಿದೆ. ರಾಜ್ಯದ ವಿವಿಧೆಡೆ ಮಳೆಯ ಜತೆಗೆ ಗಂಟೆಗೆ 30ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ.

ಕರಾವಳಿಯಲ್ಲಿ ಗಂಟೆಗೆ 35ರಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಆದ್ದರಿಂದ ಮೀನುಗಾರರು ಎಚ್ಚರ ವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣದಿಂದ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ರಾಜ್ಯದ ವಿವಿಧೆಡೆ ಇದೇ 26ರವರೆಗೂ ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಉತ್ತಮ ಗುಣಮಟ್ಟ: ಬೋಳಾಸ್‌ಗೆ ವಂಡರ್‌ಫುಲ್ ಪಿಸ್ತಾ ಕಂಪನಿಯಿಂದ ಗೌರವ

ಮಂಗಳೂರು: ಬೋಳಾಸ್ ಆಗ್ರೋ ಪ್ರೈವೇಟ್ ಲಿಮಿಟೆಡ್‌ಗೆ, ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಪ್ರಖ್ಯಾತವಾದ ಪಿಸ್ತಾ ಉತ್ಪಾದಕರಾದ **Wonderful Pistachios** ಕಂಪನಿಯಿಂದ, ಭಾರತದಲ್ಲಿ ಉತ್ತಮ ಗುಣಮಟ್ಟದ ಉತ್ಪನ್ನಕ್ಕಾಗಿ ಪ್ರಶಂಸೆ ಲಭಿಸಿದೆ.

ಹಲವು ಪ್ರಮುಖ ಬ್ರ್ಯಾಂಡ್‌ಗಳ ನಡುವೆ ನಡೆದ ಮೌಲ್ಯಮಾಪನದಲ್ಲಿ, ಬೋಳಾಸ್ ಅತ್ಯುತ್ತಮವಾಗಿ ಕೆಲಸ ಮಾಡಿದ ಕಂಪನಿಯಾಗಿ ಗುರುತಿಸಲ್ಪಟ್ಟಿತು. ಉತ್ಪನ್ನದ ತಾಜಾತನ, ರುಚಿ, ರೋಸ್ಟ್ ಗುಣಮಟ್ಟ ಮತ್ತು ಒಟ್ಟು ಆಕರ್ಷಕತೆಯಂತಹ ಮುಖ್ಯ ಅಂಶಗಳಲ್ಲಿ ಬೋಳಾಸ್ ಮೇಲುಗೈ ಸಾಧಿಸಿದೆ. ಈ ಗೌರವವು ಭಾರತೀಯ ಗ್ರಾಹಕರಿಗೆ ಜಾಗತಿಕ ಮಟ್ಟದ ಗುಣಮಟ್ಟದ ಹಣ್ಣುಗಳನ್ನು ತಲುಪಿಸಲು ಬೋಳಾಸ್ ಮಾಡುವ ಪ್ರಯತ್ನಗಳನ್ನು ಪ್ರತಿಬಿಂಬಿಸುತ್ತದೆ.

ಈ ಪ್ರಶಂಸಾ ಪತ್ರವನ್ನು ಬೋಳಾಸ್‌ಗೆ ಸ್ಪೇನ್‌ನಲ್ಲಿ ನಡೆದ ಐಎನ್‌ಸಿ (ಇಂಟರ್‌ನ್ಯಾಷನಲ್ ನಟ್ ಅಂಡ್ ಡ್ರೈಡ್ ಫ್ರೂಟ್ ಕೌನ್ಸಿಲ್) ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಯಿತು. ಐಎನ್‌ಸಿ ಎಂಬುದು ಜಾಗತಿಕ ಒಣಹಣ್ಣುಗಳ ಉದ್ಯಮಕ್ಕೆ ಮುಂಚೂಣಿಯಲ್ಲಿ ನಿಲ್ಲುವ ಸಂಸ್ಥೆಯಾಗಿದ್ದು, ವಿಶ್ವದ ಪ್ರಮುಖ ಉತ್ಪಾದಕರನ್ನು, ಸಂಸ್ಕರಣಕಾರರು ಮತ್ತು ಮಾರಾಟಗಾರರನ್ನು ಒಂದೆಡೆ ಸೇರಿಸುತ್ತದೆ. ಬೋಳಾಸ್ ಕೂಡ ಐಎನ್‌ಸಿ ಸದಸ್ಯನಾಗಿದ್ದು, ಜಾಗತಿಕ ಒಣಹಣ್ಣು ವ್ಯಾಪಾರದ ಭವಿಷ್ಯದ ಬಗ್ಗೆ ನಡೆಯುವ ಚರ್ಚೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದೆ.

'ಈ ಗೌರವವು ನಮ್ಮ ಗುಣಮಟ್ಟ ಮತ್ತು ಹೊಸತನದ ಮೇಲೆ ಇರುವ ನಂಬಿಕೆಯನ್ನು ತೋರಿಸುತ್ತದೆ. ಉತ್ತಮ ಗುಣಮಟ್ಟದ ಪಿಸ್ತಾ ಭಾರತಕ್ಕೆ ತರುವುದರಲ್ಲಿ ನಾವು ಹೆಮ್ಮೆಪಡುತ್ತೇವೆ. ಇದರಿಂದ ಜನರಿಗೆ ಪೋಷಕಾಂಶಗಳಿಂದ ತುಂಬಿರುವ ಒಣಹಣ್ಣುಗಳು ಸುಲಭವಾಗಿ ಲಭ್ಯವಾಗುವಂತಾಗಿದೆ' ಎಂದು ಬೋಳಾಸ್ ತಂಡ ಹೇಳಿದೆ. ಈ ಗೌರವವು ಭಾರತೀಯ ಒಣಹಣ್ಣು ಮಾರುಕಟ್ಟೆಯಲ್ಲಿ ಬೋಳಾಸ್ ಬ್ರ್ಯಾಂಡ್‌ನ ವಿಶ್ವಾಸಾರ್ಹತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ವಿದ್ವತ್ ಪಿ.ಯು. ಕಾಲೇಜು

ವಿದ್ವತ್ ಪಿಯು ಕಾಲೇಜ್‌ನಲ್ಲಿ ಒತ್ತಡ ರಹಿತ ಅಧ್ಯಯನ

ಮಂಗಳೂರು: ಬೋರ್ಡ್ ಪರೀಕ್ಷೆ, ಸಿಇಟಿ, ಜೆಇಇ ಮೈನ್ಸ್ ಮತ್ತು ಅಡ್ವಾನ್ಸ್ಡ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಒತ್ತಡ ರಹಿತವಾಗಿ, ಪಾಠ ಮಾಡುವ ಕಲಿಕಾ ಪದ್ಧತಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಗುರುವಾಯನಕೆರೆಯ ವಿದ್ವತ್ ಪಿಯು ಕಾಲೇಜು ಹಾಗೂ ಸಮೂಹ ಶಿಕ್ಷಣ ಸಂಸ್ಥೆ ಅಭಿವೃದ್ಧಿಪಡಿಸಿದೆ.

VIDVATH Pre University College — Ennobling Minds, Inspiring the Youth

ಪದವಿ ಪೂರ್ವ ಶಿಕ್ಷಣ ಸಂಸ್ಥೆಯಲ್ಲಿ ವಿಜ್ಞಾನದಲ್ಲಿ ಪಿಸಿಎಂಬಿ, ಪಿಸಿಎಂಸಿ ಮತ್ತು ವಾಣಿಜ್ಯ ವಿಭಾಗಗಳಿಗೆ ಇಬಿಎಸಿ ಕೋರ್ಸ್‌ಗೆ ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದೆ. ಬೋರ್ಡ್ ಪರೀಕ್ಷೆಯೊಂದಿಗೆ ವಿಜ್ಞಾನದ ನಾನಾ ಸ್ಪರ್ಧಾತ್ಮಕ ಪರೀಕ್ಷೆ ಹಾಗೂ ವಾಣಿಜ್ಯ ವಿಭಾಗದ ಸಿಎ, ಸಿಎಸ್, ಕ್ಲ್ಯಾಟ್ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತದೆ ಎಂದು ಸಂಸ್ಥೆಯ ಅಧ್ಯಕ್ಷ ಪ್ರೊ. ಸುಭಾಶ್ಚಂದ್ರ ಶೆಟ್ಟಿ ತಿಳಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ 3 ದಶಕಗಳ ಅನುಭವಿ ಶಿಕ್ಷಕ, ಸಂಶೋಧಕ ಸಂಸ್ಥೆಯ ಅಕಾಡೆಮಿಕ್ ನಿರ್ದೇಶಕ ಪ್ರೊ. ಗಂಗಾಧರ್ ಇ.ಎಂ. ಅವರು ಒತ್ತಡ ರಹಿತ ಕಲಿಕಾ ಶಿಕ್ಷಣ ಪದ್ಧತಿಯನ್ನು ಅಭಿವೃದ್ಧಿಪಡಿಸಿದ್ದಾರೆ. ಇದೊಂದು ವಿನೂತನ ಪರಿಕಲ್ಪನೆ.

ವಿಶೇಷ ಪರೀಕ್ಷಾ ಮಾದರಿ ಬೋರ್ಡ್, ಸಿಇಟಿ, ಸಿಡಿಎಫ್– ಕಾನ್ಸೆಪ್ಟ್, ಡೆಫಿನಿಷನ್ ಮತ್ತು ಫಾರ್ಮ್ಯುಲ, ಎಕ್ಸ್‌ಪರ್ಟೈಸ್ ಟೆಸ್ಟ್ ಹೀಗೆ ಪ್ರತಿ ಶನಿವಾರ ಒಂದು ಪರೀಕ್ಷೆ ಇರುತ್ತದೆ. ಎಕ್ಸ್‌ಪರ್ಟೈಸ್ ಟೆಸ್ಟ್ ವೇಳೆ ಪ್ರಶ್ನೆಗಳಿಗೆ ಉತ್ತರಗಳ ಆಯ್ಕೆಗೆ ಅವಕಾಶ ಇರುವುದಿಲ್ಲ. ಇದೊಂದು ರೀತಿಯ ಸ್ಟಡಿ ಇಂಡಿಕೇಟರ್. ವಿದ್ಯಾರ್ಥಿಗಳು ಎಷ್ಟು ಆಳವಾಗಿ ವಿಷಯವನ್ನು ಅರಿತುಕೊಂಡಿದ್ದಾರೆ ಎಂಬುದನ್ನು ತೋರಿಸುತ್ತದೆ. ಸೋಮವಾರ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆಗಾಗಿ ಭಾನುವಾರ ಅವಕಾಶ ನೀಡಲಾಗುತ್ತದೆ. ಭಾನುವಾರ ವಿದ್ಯಾರ್ಥಿಗಳು ವರ್ಕೌಟ್ ಮಾಡುವುದರೊಂದಿಗೆ ಶಾರ್ಟ್ ನೋಟ್ಸ್ ಸಿದ್ಧತೆ ಮಾಡಬೇಕು. ವಿದ್ಯಾರ್ಥಿಗಳಿಗೆ ವಿಷಯದ ಮೇಲೆ ಹಿಡಿತ ಸಾಧಿಸುವ ಉದ್ದೇಶದಿಂದ ವಿದ್ಯಾರ್ಥಿಗಳಿಂದಲೇ ಪಾಠ ಮಾಡಿಸಲಾಗುತ್ತದೆ. ಸಹಪಾಠಿಗಳು ಪ್ರಶ್ನೆಗಳನ್ನೂ ಕೇಳುವುದರಿಂದ ವಿಷಯ ಪ್ರಸ್ತುತಪಡಿಸುವ ವಿದ್ಯಾರ್ಥಿ ಆಳವಾಗಿ ಅಧ್ಯಯನ ನಡೆಸಲು ವೇದಿಕೆ.

ಸ್ಪರ್ಧಾತ್ಮಕ ತರಬೇತಿ: ವಾರದ ಏಳೂ ದಿನ ಹಾಗೂ ದಿನದ 12 ಗಂಟೆ ತರಗತಿ ಎಂಬ ಮಾದರಿಯು ವನ್‌ವೇ ಕಮ್ಯುನಿಕೇಷನ್. ಇದು ಒತ್ತಡದಿಂದ ಕೂಡಿದ ಮಾದರಿ ಎಂಬುದು ಸಾಬೀತಾದ ಹಿನ್ನೆಲೆಯಲ್ಲಿ ವಿಶೇಷ ಮಾದರಿ ಅಳವಡಿಸಲಾಗಿದೆ. ಪ್ರತಿ ದಿನ ಸಂಜೆ 6.30ರಿಂದ 8.30ರವರೆಗೆ ಹಿರಿಯ ಶಿಕ್ಷಕರ ಮಾರ್ಗದರ್ಶನದಲ್ಲಿ ಡೌಟ್ ಕ್ಲಾರಿಫಿಕೇಷನ್ ಸೆಷನ್ ಇಲ್ಲಿನ ವಿಶೇಷತೆಯಾಗಿದೆ.

ದೀರ್ಘಾವಧಿ ಕೋಚಿಂಗ್: ನೀಟ್ ಹಾಗೂ ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಲಾಂಗ್ ಟರ್ಮ್ ಕೋಚಿಂಗ್ ಆರಂಭಿಸಲಾಗಿದ್ದು, ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದೆ. ನಾನಾ ಕಾರಣಗಳಿಂದಾಗಿ ನೀಟ್ ಮತ್ತು ಜೆಇಇ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆಯದೆ ಉತ್ತಮ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಅವಕಾಶ ವಂಚಿತರಿಗೆ ತಮ್ಮ ರ್‍ಯಾಂಕ್ ಹೆಚ್ಚಿಸಿಕೊಂಡು ಉತ್ತಮ ವೈದ್ಯಕೀಯ ಹಾಗೂ ಐಐಟಿಗಳಲ್ಲಿ ಸೀಟು ಪಡೆಯಲು ಪೂರಕವಾಗಿ ನೀಟ್ ಹಾಗೂ ಜೆಇಇ ದೀರ್ಘಾವಧಿಯ ಕೋಚಿಂಗ್ ಆರಂಭಿಸಿದೆ. ಜೆಇಇ ದೀರ್ಘಾವಧಿಯ ಕೋಚಿಂಗ್ ಆರಂಭಿಸಿದ ಮೊದಲ ಸಂಸ್ಥೆ ಎಂಬ ಹೆಗ್ಗಳಿಕೆ ವಿದ್ವತ್‌ಗೆ ದೊರೆತಿದೆ.

ಹೆಚ್ಚಿನ ಮಾಹಿತಿಗಾಗಿ ಜಾಲತಾಣ: www.vidvath.org ಅಥವಾ ದೂರವಾಣಿ ಸಂ: 7618718791, 8050902319, 7618718795 ಸಂಪರ್ಕಿಸಬಹುದು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಉದ್ಯೋಗ ವಾಣಿ

AIR FORCE SCHOOL, JALAHALLI - 560014

Email ID:- afsjal@rediffmail.com **VACANCY** Website : www.afsjal.org

Applications are invited for Appointment/Empanel of Teaching Staff and Helpers in Air Force School, Jalahalli for the Academic Session 2025-26, as per the following details :

Sl.No.	Post	Subject	Category	Vacancy
01	PGT	Physics	Empanel	01
02	TGT	Social Science	Regular Empanel	01 01
03	PRT	Academic - All Subjects	Regular/Contractual Empanel	01 02
04	Helpers (Male only)		Contractual Empanel	02 02

Note : 1. For details of eligibility criteria, please visit School Website: **www.afsjal.org**
2. Applications along with the Photocopies of supportive documents to reach Executive Director, Air Force School, Jalahalli before 05-06-2025
3. For any queries contact Tel No. 080-23455069

The Executive Director, AF School, Jalahalli

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ರಕ್ಷಣಾ ಮಂತ್ರಾಲಯದ ಅಧೀನ ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಯ ಎನ್ ಎಸ್ (ಎಸ್ ಮತ್ತು ಸಿ ಎಸ್) ಎಸ್ ಬಿ. ಯು ಗಾಗಿ ಕೊಚ್ಚಿಗೆ ನಿಯುಕ್ತಿಗೊಳಿಸಲು 5 ವರ್ಷಗಳ ನಿಗದಿತ ಅವಧಿಯ ಆಧಾರದ ಮೇಲೆ "ಹಿರಿಯ ಅಭಿಯಂತರ"ರ / ಇ–III ಹುದ್ದೆಗೆ ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕಲ್ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಈ ಕೆಳಕಂಡ ಅನುಭವೀ ಇಂಜಿನಿಯರ್‌ಗಳ ಆವಶ್ಯಕತೆ ಇದೆ.

ಕ್ರ. ಸಂ.	ಹುದ್ದೆ/ಶ್ರೇಣಿ	ಹುದ್ದೆಗಳ ಸಂಖ್ಯೆ	ವಿಷಯ	ಮೀಸಲಾತಿ	ಅರ್ಹತೋತ್ತರ ಅನುಭವ	ವೇತನ ಶ್ರೇಣಿ
1	ಹಿರಿಯ ಅಭಿಯಂತರ/ ಇ–III (5 ವರ್ಷಕ್ಕೆ ನಿಗದಿತ ಅವಧಿಯ ಆಧಾರದ ಮೇಲೆ)	14	ಎಲೆಕ್ಟ್ರಾನಿಕ್ಸ್-7 ಮೆಕ್ಯಾನಿಕಲ್-4 ಕಂಪ್ಯೂಟರ್ ಸೈನ್ಸ್-3	ಸಾಮಾನ್ಯ–7 ಇ.ಡಬ್ಲ್ಯೂ.ಎಸ್.–1 ಇ.ಹಿಂ.ವ.–3 ಪ.ಜಾ.–2 ಪ.ಪಂ.–1	ಪೂರ್ಣ ಕಾಲಿಕ ಬಿ.ಇ./ ಬಿ.ಟೆಕ್ ಪದವೀಧರರಿಗೆ ಕನಿಷ್ಠ 4 ವರ್ಷಗಳ ಸಂಗತ ಅರ್ಹತೋತ್ತರ ಅನುಭವ ಅಥವಾ ಎಮ್ ಇ/ ಎಮ್. ಟೆಕ್ ಪದವೀಧರರಿಗೆ ಕನಿಷ್ಠ 2 ವರ್ಷಗಳ ಸಂಗತ ಅರ್ಹತೋತ್ತರ ಅನುಭವ.	ರೂ. 50,000–3%–1,60,000

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 10.06.2025 ಆಗಿರುತ್ತದೆ. ಅರ್ಜಿ ಸಲ್ಲಿಸಲು ವಿವರಣಾತ್ಮಕ ಜಾಹೀರಾತಿಗಾಗಿ, ದಯವಿಟ್ಟು ನಮ್ಮ ಅಧಿಕೃತ ಜಾಲತಾಣ www.bel-india.in ನಲ್ಲಿನ CAREERS ಲಿಂಕ್ ಅನ್ನು ವೀಕ್ಷಿಸಿ.

ದಿನಾಂಕ: 21.05.2025

ಹ/–
ವ್ಯವಸ್ಥಾಪಕರು – ಮಾ. ಸಂ./ನೌಕಾ. ವ್ಯ.

'Har Ek Kaam Desh Ke Naam'

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ರಕ್ಷಣಾ ಸಚಿವಾಲಯದಡಿ ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಗೆ,ತನ್ನ ಮಿಲಿಟರಿ ಕಮ್ಯೂನಿಕೇಶನ್ ಎಸ್ ಬಿ ಯು, ಬೆಂಗಳೂರು ಸಂಕೀರ್ಣಕ್ಕಾಗಿ, ತಾತ್ಕಾಲಿಕ ಸಿಬ್ಬಂದಿಗಳ ನೇಮಕಾತಿಯನ್ನು ಹಮ್ಮಿಕೊಂಡಿದೆ. ಆಯ್ಕೆಯಾದ ಅಭ್ಯರ್ಥಿಗಳು ಕಂಪನಿಯ ಆವಶ್ಯಕತೆಗಳಿಗೆ ಅನುಸಾರವಾಗಿ ಪ್ರವಾಸ ಕೈಗೊಳ್ಳಲು ಆಸಕ್ತಿ ಹೊಂದಿರಬೇಕು. ಹುದ್ದೆಯ ವಿವರಗಳು ಈ ಕೆಳಕಂಡಂತಿವೆ :

ಹುದ್ದೆ / ಶ್ರೇಣಿ	ವಿದ್ಯಾರ್ಹತೆ	ಹುದ್ದೆಗಳ ಸಂಖ್ಯೆ	01/04/2025 ರಂತೆ ಗರಿಷ್ಠ ವಯೋಮಿತಿ	ನಿಯೋಜಿನೆ ಸ್ಥಳ
ಪರಿಯೋಜನ ಅಭಿಯಂತರರು -I	ಎಲೆಕ್ಟ್ರಾನಿಕ್ಸ್/ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ/ ಎಲೆಕ್ಟ್ರಾನಿಕ್ಸ್ ಮತ್ತು ದೂರಸಂಪರ್ಕ/ ದೂರಸಂಪರ್ಕ/ ಸಂವಹನದಲ್ಲಿ ಬಿ.ಇ/ ಬಿ.ಟೆಕ್.	16	32 ವರ್ಷಗಳು	ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶ
	ಎಲೆಕ್ಟ್ರಿಕಲ್ ಬಿ.ಇ/ ಬಿ.ಟೆಕ್/ ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್	8		
	ಕಂಪ್ಯೂಟರ್ ಸೈನ್ಸ್/ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್/ ಮಾಹಿತಿ ವಿಜ್ಞಾನ/ ಮಾಹಿತಿ ತಂತ್ರಜ್ಞಾನದಲ್ಲ ಬಿ.ಇ/ ಬಿ.ಟೆಕ್	4		

ಈ ಮೇಲಿನ ಹುದ್ದೆಗಳಿಗೆ 04.06.2025 ರಂದು ಅಥವಾ ಮುಂಚಿತವಾಗಿ. ಅರ್ಜಿ ಸಲ್ಲಿಸಬಹುದು.
ಹೆಚ್ಚಿನ ವಿವರಗಳಿಗೆ ದಯವಿಟ್ಟು ನಮ್ಮ ವೆಬ್ ಸೈಟ್ www.bel-india.in ಅನ್ನು ವೀಕ್ಷಿಸಿ

'ಹರ್ ಏಕ್ ಕಾಮ್ ದೇಶ್ ಕೆ ನಾಮ್'

ಹೆಚ್ಚಿನ ಸುದ್ದಿಗಾಗಿ prajavani.net ನೋಡಿರಿ

SEBI

ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ

ವಿಚಾರಣಾ ನೋಟಿಸ್

1. ಈ ಮೂಲಕ ತಿಳಿಸುವುದು ಏನೆಂದರೆ, ಕೆಳಗಿನ ಕೋಷ್ಟಕದಲ್ಲಿ ಹೆಸರಿಸಲಾಗಿರುವ ನೋಟಿಸದಾರರಿಗೆ ವಿಚಾರಣಾ ನೋಟಿಸ್ (ಎಚ್‌ಎನ್) ಜಾರಿಗೊಳಿಸಲಾಗಿದೆ. ಸದರಿ ವಿಚಾರಣಾ ನೋಟಿಸ್‌ಗಳು ದಾಖಲೆಯಲ್ಲಿರುವ ಹಿಂದಿನ ಬಲ್ಲ ವಿಳಾಸಕ್ಕೆ ಬಟವಾಡೆಯಾಗಿರುವುದಿಲ್ಲ.
2. ಬಟವಾಡೆಯಾಗದಿರುವ ವಿಚಾರಣಾ ನೋಟಿಸ್ ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ:

ಕ್ರ.ಸಂ.	ನೋಟಿಸದಾರರ ಹೆಸರು	ನೋಟಿಸದಾರರ ವಿಳಾಸ	ಪ್ರಕರಣದ ಹೆಸರು	ವಿಚಾರಣಾ ನೋಟಿಸ್ ಸಂಖ್ಯೆ ಮತ್ತು ದಿನಾಂಕ	ವಿಚಾರಣೆ ದಿನಾಂಕ & ಸಮಯ	ಸ್ಥಳ
1.	ಸ್ಟಾರ್ ಇನ್ಫೋಟೆಕ್ ಐಟಿ ಸೊಲ್ಯೂಷನ್ಸ್ ಅಂಡ್ ಮಾರ್ಕೆಟ್ ಗೈನರ್, ಮಾಲೀಕರು – ಶ್ರೀ. ರಾಹುಲ್ ಡಾಂಗಿ	335, ವಿದಿಶಾ ರಸ್ತೆ, ಕಲ್ಯಾಣನಗರ, ಹುಜೂರ್, ಭೋಪಾಲ್, ಮಧ್ಯಪ್ರದೇಶ–462037	ಸ್ಟಾರ್ ಇನ್ಫೋಟೆಕ್ ಐಟಿ ಸೊಲ್ಯೂಷನ್ಸ್ ಅಂಡ್ ಮಾರ್ಕೆಟ್ ಗೈನರ್, ಮಾಲೀಕರು – ಶ್ರೀ. ರಾಹುಲ್ ಡಾಂಗಿ	ಸೆಬಿ/ಡಬ್ಲ್ಯುಆರ್‌ಒ/ಐಎಲ್‌ಒ/ಎನ್‌ಕೆಎಸ್/ಒಡಬ್ಲ್ಯು/ಪಿ/13106/1/2025 ದಿನಾಂಕ ಮೇ 14, 2025	ಮೆ 28, 2025 ರಂದು ಬೆಳಗ್ಗೆ 11.00 ಗಂಟೆ	ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ, ಸೆಬಿ ಭವನ 2, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಈಸ್ಟ್, ಮುಂಬೈ 400051
		ಬಿಟಿಎಂ ಬಡಾವಣೆ, 2ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಬೆಂಗಳೂರು–560078, ಕರ್ನಾಟಕ		ಸೆಬಿ/ಡಬ್ಲ್ಯುಆರ್‌ಒ/ಐಎಲ್‌ಒ/ಎನ್‌ಕೆಎಸ್/ಒಡಬ್ಲ್ಯು/ಪಿ/13108/1/2025 ದಿನಾಂಕ ಮೇ 14, 2025		
		335, ವಿದಿಶಾ ರಸ್ತೆ, ಕಲ್ಯಾಣನಗರ, ಹುಜೂರ್, ಭೋಪಾಲ್, ಮಧ್ಯಪ್ರದೇಶ–462037		ಸೆಬಿ/ಡಬ್ಲ್ಯುಆರ್‌ಒ/ಐಎಲ್‌ಒ/ಎನ್‌ಕೆಎಸ್/ಒಡಬ್ಲ್ಯು/ಪಿ/13104/1/2025 ದಿನಾಂಕ ಮೇ 14, 2025		

3. ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ, ಇಂದೋರ್ ಸ್ಥಳೀಯ ಕಚೇರಿ, 104–105, 1ನೇ ಮಹಡಿ, ಸದ್ಗುರು ಪರಿಣಯ, ಸಿ–21 ಮಾಲ್ ಎದುರು, ಎ.ಬಿ.ರಸ್ತೆ, ಇಂದೋರ್–452010, ಮಧ್ಯಪ್ರದೇಶ ಇಲ್ಲಿಂದ ಸದರಿ ನೋಟಿಸ್‌ದಾರರು ತಮ್ಮ ವಿಚಾರಣಾ ನೋಟಿಸ್ ಪಡೆದುಕೊಳ್ಳಬೇಕೆಂದು ಸೂಚಿಸಲಾಗಿದೆ. ಅಲ್ಲದೆ, ಸೆಬಿ ಸಂಸ್ಥೆಯ ಅಧಿಕೃತ (www.sebi.gov.in) ವೆಬ್‌ಸೈಟ್‌ನಲ್ಲಿರುವ "ಅನ್‌ಸರ್ವಡ್ ಸಮನ್ಸ್/ ನೋಟಿಸಸ್" ವಿಭಾಗದಿಂದ ಕೂಡ ವಿಚಾರಣಾ ನೋಟಿಸ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ nilotpals@sebi.gov.in ಅಥವಾ abhishekk@sebi.gov.in ಇಮೇಲ್ ಐಡಿ'ಗೆ ಮನವಿ ಸಲ್ಲಿಸುವ ಮೂಲಕ ಕೂಡ ಪಡೆದುಕೊಳ್ಳಬಹುದು.
4. ಒಂದು ವೇಳೆ, ನೋಟಿಸದಾರರು ಆನ್‌ಲೈನ್ ವೇದಿಕೆಯ ಮೂಲಕ ವಿಚಾರಣೆಗೆ ಒಳಗಾಗಲು ಬಯಸುವುದಾದಲ್ಲಿ, ಮೇಲ್ಕಂಡ ಇಮೇಲ್ ವಿಳಾಸಕ್ಕೆ ಮಾಹಿತಿ ನೀಡಿ ಅವಕಾಶ ಪಡೆದುಕೊಳ್ಳಬಹುದು.
5. ಒಂದು ವೇಳೆ, ಸದರಿ ನೋಟಿಸ್‌ಗೆ ಯಾವುದೇ ಸ್ಪಂದನೆ ಬಾರದಿದ್ದಲ್ಲಿ ಅಥವಾ ನೋಟಿಸದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳು ವಿಚಾರಣೆಗೆ ಹಾಜರಾಗದಿದ್ದಲ್ಲಿ, ದಾಖಲೆಯಲ್ಲಿ ಲಭ್ಯವಿರುವ ವಾಸ್ತವಗಳ ಆಧಾರದ ಮೇರೆಗೆ ಸೆಬಿ ಸಂಸ್ಥೆಯು ಮುಂದಿನ ಪ್ರಕ್ರಿಯೆಯನ್ನು ಜಾರಿಗೊಳಿಸುತ್ತದೆ.

ದಿನಾಂಕ: 14.05.2025
ಸ್ಥಳ: ಇಂದೋರ್

ನೀಲೋತ್ಪಲ ಕುಮಾರ್ ಸೈಕಿಯಾ, ಎಜಿಎಂ
ಸೆಬಿ– ಇಂದೋರ್ ಲೋಕಲ್ ಆಫೀಸ್

CBC 15204/11/0047/2526

ಕೇಂದ್ರ–ರಾಜ್ಯಕ್ಕೆ ಹೈಕೋರ್ಟ್ ನೋಟಿಸ್

ಥೀಮ್ ಪಾರ್ಕ್ ಟೆಂಡರ್‌ಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಆರ್‌ಎಸ್ ಅಣೆಕಟ್ಟೆ ಸುತ್ತಮುತ್ತಲ ಪ್ರದೇಶದ 198 ಎಕರೆ ಕೃಷಿ ಜಮೀನು ವಶಪಡಿಸಿಕೊಂಡು, ಅಲ್ಲಿ ₹2,615 ಕೋಟಿಗೂ ಹೆಚ್ಚಿನ ವೆಚ್ಚದಲ್ಲಿ ಅಮ್ಯೂಸ್‌ಮೆಂಟ್ ಮತ್ತು ಥೀಮ್ ಪಾರ್ಕ್ (ಮನೋರಂಜನೆ ಉದ್ಯಾನ) ನಿರ್ಮಿಸುವ ಉದ್ದೇಶದಿಂದ ಕರೆಯಲಾಗಿರುವ ಟೆಂಡರ್ ಅಧಿಸೂಚನೆ ಪ್ರಶ್ನಿಸಲಾದ ಅರ್ಜಿ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೆ ಹೈಕೋರ್ಟ್ ಆದೇಶಿಸಿದೆ.

ಟೆಂಡರ್ ಪ್ರಶ್ನಿಸಿ ಮಂಡ್ಯ ತಾಲ್ಲೂಕಿನ ಗೋಪಾಲಪುರ ಗ್ರಾಮದ ಕೃಷಿಕ ಕೆ.ಬೋರಯ್ಯ ಸೇರಿದಂತೆ ಒಟ್ಟು ಐವರು ಸಲ್ಲಿಸಿರುವ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎಂ.ಶಿವಪ್ರಕಾಶ್, 'ಉದ್ದೇಶಿತ ಅಮ್ಯೂಸ್‌ಮೆಂಟ್ ಮತ್ತು ಥೀಮ್ ಪಾರ್ಕ್ ನಿರ್ಮಾಣದಿಂದ ರಾಜ್ಯದ ಪ್ರತಿಷ್ಠೆಯ ಸಂಕೇತವಾಗಿರುವ ಮತ್ತು ಕೋಟ್ಯಂತರ ರೈತರ ಜೀವನಾಡಿ ಕೆಆರ್‌ಎಸ್ ಅಣೆಕಟ್ಟೆಗೆ ಧಕ್ಕೆ ಉಂಟಾಗಲಿದೆ. ಹಾಗಾಗಿ, ಕೋರ್ಟ್ ನೀಡುವ ಮುಂದಿನ ಆದೇಶದವರೆಗೆ ಟೆಂಡರ್ ಅಧಿಸೂಚನೆಗೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳಿಗೆ ತಡೆ ನೀಡಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಟೆಂಡರ್ ಅಧಿಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿಪಿಪಿ) ಯೋಜನೆಯ ರೂಪುರೇಷೆಗಳೇನು ಎಂಬುದನ್ನು ಮುಂದಿನ ವಿಚಾರಣೆಯಲ್ಲಿ ಕೋರ್ಟ್‌ಗೆ ವಿವರಿಸಿ' ಎಂದು ರಾಜ್ಯ ಸರ್ಕಾರದ ಪರ ವಕೀಲರಿಗೆ ಮೌಖಿಕವಾಗಿ ನಿರ್ದೇಶಿಸಿತು. ಅಂತೆಯೇ, ಕೇಂದ್ರ ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ, ರಾಷ್ಟ್ರೀಯ ಅಣೆಕಟ್ಟೆ ಸುರಕ್ಷಾ ಪ್ರಾಧಿಕಾರದ ಅಧ್ಯಕ್ಷ ಮತ್ತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿ ಒಟ್ಟು 17 ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಿ ವಿಚಾರಣೆಯನ್ನು ಜೂನ್ 9ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಉದ್ದೇಶಿತ ಪಾರ್ಕ್‌ನಿಂದ ಕೆಆರ್‌ಎಸ್ ಅಣೆಕಟ್ಟೆಯ ಸುರಕ್ಷತೆಗೆ ತೀವ್ರ ಧಕ್ಕೆ ಉಂಟಾಗಲಿದೆ. ಸುತ್ತಮುತ್ತಲಿನ ಫಲವತ್ತಾದ 198 ಎಕರೆ ಕೃಷಿ ಜಮೀನನ್ನು ಇದಕ್ಕಾಗಿ ವಶಪಡಿಸಿಕೊಂಡರೆ ಇಲ್ಲಿರುವ ಜೀವವೈವಿಧ್ಯ ಮತ್ತು ಪರಿಸರ ಸಂರಕ್ಷಣೆಗೆ ಇನ್ನಿಲ್ಲದ ಹಾನಿಯಾಗಲಿದೆ. ಅಭಿವೃದ್ಧಿಯ ಹೆಸರಿನಲ್ಲಿ ವ್ಯಾಪಕವಾದ ವಾಣಿಜ್ಯ ಚಟುವಟಿಕೆಗಳಿಗೆ ಇಂಬು ನೀಡುವ ಮೂಲಕ ಸುತ್ತಲಿನ ಪರಿಸರದ ಅಸಮತೋಲನಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ' ಎಂದು ಅರ್ಜಿದಾರರು ಟೆಂಡರ್ ಪ್ರಕ್ರಿಯೆಯನ್ನು ಬಲವಾಗಿ ಆಕ್ಷೇಪಿಸಿದ್ದಾರೆ.

'ಈ ಟೆಂಡರ್ ಘೋಷಣೆ ಏಕಪಕ್ಷೀಯವಾಗಿದೆ. ರಾಜ್ಯ ಸರ್ಕಾರ ರಾಷ್ಟ್ರೀಯ ಅಣೆಕಟ್ಟೆ ಸುರಕ್ಷಾ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆದಿರುವುದಿಲ್ಲ. ಈ ಪಾರ್ಕ್ ನಿರ್ಮಾಣದಿಂದ ಆಗಲಿರುವ ಲಾಭ–ನಷ್ಟಗಳನ್ನು ಸಾರ್ವಜನಿಕರ ಅವಗಾಹನೆಗೂ ತಂದಿರುವುದಿಲ್ಲ. ಇದೇ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಪಿ.ಬಿ. ವರಾಳೆ ಮತ್ತು ಕೃಷ್ಣ ಎಸ್.ದೀಕ್ಷಿತ್ ಅವರ ವಿಭಾಗೀಯ ನ್ಯಾಯಪೀಠದ ಆದೇಶವನ್ನು ರಾಜ್ಯ ಸರ್ಕಾರ ಮತ್ತು ನೀರಾವರಿ ನಿಗಮವು ಸ್ಪಷ್ಟವಾಗಿ ಉಲ್ಲಂಘಿಸಿದೆ' ಎಂದು ಆರೋಪಿಸಿದ್ದಾರೆ.

ಅಭಿವೃದ್ಧಿ ಹೆಸರಲ್ಲಿ ವಾಣಿಜ್ಯ ಚಟುವಟಿಕೆ

'ರಾಜ್ಯ ಸರ್ಕಾರ ಅಮ್ಯೂಸ್‌ಮೆಂಟ್ ಮತ್ತು ಥೀಮ್ ಪಾರ್ಕ್ (ಮನೋರಂಜನೆ ಉದ್ಯಾನ) ನಿರ್ಮಾಣದ ಉದ್ದೇಶಕ್ಕಾಗಿ 2024ರ ಸೆಪ್ಟೆಂಬರ್ ಮತ್ತು ಡಿಸೆಂಬರ್‌ನಲ್ಲಿ ಎರಡು ಬಾರಿ ಟೆಂಡರ್ ಆಹ್ವಾನಿಸಿತ್ತು. ಆದರೆ, ಇದಕ್ಕೆ ರೈತ ಸಂಘ ಮತ್ತು ಸ್ಥಳೀಯ ಕೃಷಿಕರಿಂದ ತೀವ್ರ ವಿರೋಧ ವ್ಯಕ್ತವಾದ ಬೆನ್ನಲ್ಲೇ ಈಗ ಕೆಆರ್‌ಎಸ್ ಅಣೆಕಟ್ಟೆ ಅಧೀನದಲ್ಲಿರುವ ಕಾವೇರಿ ಬೃಂದಾವನ ಉದ್ಯಾನವನದ ಅಭಿವೃದ್ಧಿ, ಉಸ್ತುವಾರಿ ಯಾ ನಿರ್ವಹಣೆ ಹೆಸರಿನಲ್ಲಿ 2025ರ ಮಾರ್ಚ್ 15ರಂದು ₹2615.96 ಕೋಟಿ ಮೊತ್ತದ ಟೆಂಡರ್ ಕರೆಯಲಾಗಿದೆ' ಎಂದು ಅರ್ಜಿದಾರರು ಆರೋಪಿಸಿದ್ದಾರೆ.

ಮನವಿ ಏನು?: 'ಮಂಡ್ಯ ಜಿಲ್ಲೆ ರೈತ ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ 2024ರ ಸೆ. 2ರಂದು ಮುಖ್ಯಮಂತ್ರಿಯವರಿಗೆ ನೀಡಿರುವ ಮನವಿಯ ಅನುಸಾರ ಉದ್ದೇಶಿತ ಯೋಜನೆಯನ್ನು ಕೈಬಿಡುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಜಾಮೀನು ಸಿಕ್ಕರೂ ರನ್ಯಾಗೆ ಬಿಡುಗಡೆ ಭಾಗ್ಯ ಇಲ್ಲ

ಪ್ರಜಾವಾಣಿ ವಾರ್ತೆ

ಕೋರ್ಟ್ ಸುದ್ದಿ

ರನ್ಯಾ ರಾವ್

ಬೆಂಗಳೂರು: ದುಬೈನಿಂದ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟಿ ಹರ್ಷವರ್ಧನಿ ರನ್ಯಾ (ರನ್ಯಾ ರಾವ್) ಹಾಗೂ ತರುಣ್ ಕೊಂಡೂರು ರಾಜ್ ಅವರಿಗೆ ನಗರದ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯವು ಮಂಗಳವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

₹2 ಲಕ್ಷ ಮೊತ್ತದ ಬಾಂಡ್, ಎರಡು ಶ್ಯೂರಿಟಿಗಳನ್ನು ಒಳಗೊಂಡ ಷರತ್ತು ವಿಧಿಸಿ, ಜಾಮೀನು ಮಂಜೂರು ಮಾಡಿದೆ.

ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ರಾವ್ ಅವರ ವಿರುದ್ಧ ಕೇಂದ್ರೀಯ ಆರ್ಥಿಕ ಗುಪ್ತಚರ ಬ್ಯೂರೊ (ಸಿಇಐಬಿ) 'ಕಾಫಿಪೋಸಾ' ಕಾಯ್ದೆ ಅಡಿ ಬಂಧನದ ಆದೇಶ ಹೊರಡಿಸಿರುವ ಕಾರಣಕ್ಕೆ ಸದ್ಯಕ್ಕೆ ಬಿಡುಗಡೆಗೆ ಅವಕಾಶ ಇಲ್ಲ. ಈ ಆದೇಶವನ್ನು ಪ್ರಶ್ನಿಸಿ ರನ್ಯಾ ರಾವ್ ಅವರ ತಾಯಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಜೂನ್ 3ರಂದು ಈ ಅರ್ಜಿಯ ವಿಚಾರಣೆ ನಡೆಯಲಿದೆ.

ರನ್ಯಾ ರಾವ್ ಹಾಗೂ ತರುಣ್ ಅವರು ಜಾಮೀನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ರೆವಿನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ನಿಗದಿತ ಅವಧಿಯ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸದ ಕಾರಣಕ್ಕೆ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.

ದುಬೈ ನಿಂದ 14.2 ಕೆ.ಜಿ ಚಿನ್ನವನ್ನು ಕಳ್ಳ ಸಾಗಣೆ ಮಾಡಿಕೊಂಡು ಬಂದಿದ್ದ ಆರೋಪದ ಮೇರೆಗೆ ಮಾರ್ಚ್ 3ರಂದು ಡಿಆರ್‌ಐ ಅಧಿಕಾರಿಗಳು ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರನ್ಯಾ ರಾವ್ ಅವರನ್ನು ಬಂಧಿಸಿದ್ದರು. ಚಿನ್ನ ಸಾಗಣೆ ಹಾಗೂ ಮಾರಾಟಕ್ಕೆ ನೆರವು ನೀಡಿದ್ದ ಆರೋಪದ ಮೇರೆಗೆ ರಾಜು ಹಾಗೂ ಸಾಹಿಲ್ ಜೈನ್ ಅವರನ್ನು ಬಂಧಿಸಲಾಗಿತ್ತು. ಸದ್ಯ ಮೂವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ವಿದೇಶಿ ವಿನಿಮಯ ನಿಯಂತ್ರಣ ಮತ್ತು ಕಳ್ಳಸಾಗಣೆ ಚಟುವಟಿಕೆಗಳ ತಡೆ ಕಾಯ್ದೆಯ (ಕಾಫಿಪೋಸಾ) 3(1) ಸೆಕ್ಷನ್ ಅಡಿಯಲ್ಲಿ ರನ್ಯಾ ವಿರುದ್ಧ ಏಪ್ರಿಲ್ 22ರಂದು ಬಂಧನದ ಆದೇಶ ಹೊರಡಿಸಲಾಗಿದೆ. ಕಾಫಿಪೋಸಾ ಪ್ರಕರಣದಲ್ಲಿ ಬಂಧನವಾದರೆ ಜಾಮೀನಿನ ಮೇಲೆ ಬಿಡುಗಡೆ ಸಾಧ್ಯವಿಲ್ಲ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

TO LET

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

VACANCIES
Manufacturing Unit, Hennur, Bangalore
1. Admin Officer/Sales Co-ordinator
Degree, 2–5 yrs exp., good English & MS Office.
2. Accountant (Senior)
B.Com, min. 5 yrs exp., excellent in Tally.
3. Accountant (Junior)
B.Com, min. 2 yrs exp., excellent in Tally.
4. Production Supervisor
Min. 5 yrs exp., manage labour & meet targets.
5. Office Boy
10th pass, basic English, fluent in local language.
6. Packing Labour Staff
Packing, loading & unloading work.
Apply: Email resume to inmbeng@gmail.com or call 6360319296

ARE YOU THE ONE

GOPALAN FOUNDATION

WE ARE LOOKING FOR ACCOUNTANTS

Candidates with a graduate degree and strong practical experience in SAP FICO are encouraged to apply.

GOPALAN NATIONAL SCHOOL
BROOKEFIELD, BENGALURU

GOPALAN NATIONAL SCHOOL-NORTH
YELAHANKA, BENGALURU

hr@gopalancolleges.com 94499 66992

Walk-in: 5, Richmond Rd, Shanthala Nagar, Ashok Nagar, Bengaluru, Karnataka 560025

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Email: recruitdrsmce2211@gmail.com Website: www.drsmce.org

FACULTY POSITIONS FOR ENGINEERING & POLYTECHNIC

Applications are invited for the posts of Professors, Associate Professors and Asst. Professors in the following Disciplines...

- Computer Science & Engineering
- Information Science & Engineering
- Electronics & Communication Engineering
- Electrical & Electronics Engineering
- Mechanical Engineering
- Civil Engineering
- Basic Science Department : Physics, Chemistry and Mathematics
- MBA (Marketing, Finance, HR)
- Physical Education Director
- Librarian and Asst. Librarian

Non Teaching Posts
- Accountant, FDA, SDA.
- Typists (Kannada & English)
- Wardens for Boys Hostel & Girls' Hostel
- Receptionist, Drivers
- Foremen, Instructors and Attenders in the above Departments

Qualification and Pay Scale: As per AICTE norms

Note: For the posts of Professor & Associate Professor, Candidates having Ph.D are only eligible. Apply Via email and hard copies of certificate so as to reach on or before 7 days from the date of advertisement along with your detailed CV & supporting documents.

Dr. M.H. Annaiah, Director (Academics), 98867 58331
Dr. K.S. Jagadeesh Gowda, Principal, 98455 83294
Sri D.C. Venugopal, Chairman

Marketing & Sales

MATTRESS MARKETING: Required well Experienced Mattress Marketing Personnel from the Same Industry for a Company in Bangalore. Call:7090022466

Hotel

WANTED IMMEDIATELY MANAGERS, COOKS, ASSISTANTS, CLEANERS, WAITERS, CASHIERS Very Good Salary. Gents/Ladies Walkin: UNCLE'S KITCHEN RESTAURANTS, UNCLE'S STAY HOMES Call: 9900001954

Accounts & Finance

WANTED FEMALE Office Assistant Any Degree Knowing Tally Fluent In English, Kannada, Hindi Around Rajajinagar Contact: 9108458798/ 9845579620

Teachers/ Professors

B.SC/ BA B.Ed Maths, English, Social, Kannada, One/ Two years experience teacher for High School at Kammanahalli. Apply Online: Secretary, Priyadarshini English High School. Email: priyadarshinischool@gmail.com or kthama.priya@gmail.com 9448689058/ 8660472189

WANTED EXPERIENCED English Medium TEACHERS for Primary/ Higher Secondary for English/ EVS/ Mathematics/ Physical Education Teachers. Qualification: Graduates with B.Ed., Housekeeping Staff for School. Submit resumes to: S.S.K. Sangha #2, K.V. Temple street near Balepet Circle, Bangalore-53. Email: ssksangha@gmail.com. Phone: 8050004466, 7892932264.

REQUIRED EXPERIENCED candidates to handle High School section with BEd (Social Science) Contact: Jnanavahini Vidya Samsthe(R) JVS #8, Beml layout,8th Main Road, Basaveshwaranagar, Bengaluru-79 Email: jvsschool@gmail.com Whatsapp- 9343745526

SUNRISE SCHOOL Requires Experienced Lady Teachers for Nursery, Primary & High School for-all Subjects (PE-Male) Coffee-Board Layout Hebbal Contact:9008981637 svsres21@gmail.com

HOLY ANGEL'S High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School & Computer Teacher. STATE & ICSE Qualification: B.A./B.Sc., B.Ed M.A./M.Sc., M.Ed. Only English Medium Candidates need to apply

URGENTLY REQUIRED for HIGH SCHOOL Social, Science, Physical Education, Computer Science TEACHER. PRIMARY English Teacher for CBSE School. Food and Accommodation provided. Contact THE FLORENCE PUBLIC SCHOOL, Baragur, Sira Taluk, Tumkur Dist, Karnataka. Phone: 9886855684/ 6361986064

WANTED LECTURES. B.E.T Composite PU College (Partly aided), Bismillahnagar, Banerghatta Road Cross, Bangalore- 560029 is in need of full time ECONOMICS & ENGLISH Lecturers. QR: MA BEd. Preference: Experienced, local, lady candidates. Apply: principalas221@gmail.com.

MOUNT CARMEL ENGLISH SCHOOL
Walk in interview from 22/05/2025 to 31/05/2025
Timings: 10.00am to 2.00pm
Required a dynamic, dedicated, qualified and experienced Principal with Masters in Education and at least 5 years of experience in administration. We also require High School Social Science and N.T.T Teachers.
Eligible candidates can mail the Curriculum vitae with updated resume to Email: mountcarmel.rrnagar@gmail.com
Venue: Mount Carmel English School Campus, No.3, 12th Cross, Ideal Homes, Rajarajeshwari Nagar, Bangalore-560 098. Contact: 080-28602294/95, 7899070902

Wanted Experienced Lady candidates with Post Graduate and B.Ed. to teach English and Social Science for High School classes.
Walk-in Interview
Thursday, 22nd May 2025
Friday, 23rd May 2025
Saturday, 24th May 2025
Between: 10 a.m.-2 p.m.
Or email your resume to info@florence.edu.in for an appointment.
Florence High School
3rd Block, 3rd Stage, Basaveshwaranagar, Bengaluru-560 079
Tel : 080-23236160/41536693

REQ IMMEDIATELY, English BA , B. Ed teacher. Lakshmi Memorial High school near Hennur depot. Contact 8904378264

MOOKAMBIKA SCHOOL NR.Colony, Basavanagudi. Wanted PRINCIPAL/ ACADEMIC ADVISOR Fluency in English is mandatory. Should have Oratory skills, Team building and Interpersonal Skills. Ph: 93435-31234 Email: arvindpol.a@gmail.com

TEACHERS REQUIRED Experienced Female Teachers for High school Maths, Hindi and English Contact 9538822262, Wisdom International School, Frazer Town, B'lore-45.

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75.
English Medium School invites application for the following post:
MANAGER ADMIN. & ACCOUNTS
B.Com / M.Com with Tally ERP 9 and 10+ yrs experience in similar capacity
Apply to the Hon. Secretary before 25-05-2025 through post or email to contact.indiranagar@ppec.edu.in

Engg/ Production Technical

LOOKING FOR Hardware Executive with 3 to 5 years experience Should have knowledge on Installation, Network troubleshooting, Firewall, internet and G Suite. Call: 9916902503

WANTED EXPERIENCED CIVIL, MECHANICAL ENGINEERS and MARKETING EXECUTIVE for Construction Company at-Peenya, Bangalore. 9900240449 uajithnayak@rediffmail.com

Graphic Designers

WANTED MALE/ Female Graphic Designer (Corel Draw Photoshop Illustrator) in Reputed Company around Rajajinagar Contact: 9108458798/ 9845579620

General

WANTED BRANCH HEAD
for an ISO certified Security Service Agency, Mysore.
Candidates having experience in same field, Computer literate, Good in English Communication may apply. Preferred Ex-servicemen, Attractive Salary & Perks. PF & Medical etc.
Send resume: 96633 30458
rajadhani987456@gmail.com

REQUIRED JUNIOR ADVOCATES @ D.N.M Associates having experience of 2-3 years fluency in languages, hardworking and interested in profession both trial and High Court work. Call: 9845081411 Email: dnmanjunathadvocate@gmail.com

Wanted

REQUIRED OFFICE BOY/ ATTENDER, SECURITY GUARD, AAYA, BUS DRIVER for School. Contact: CAMLIN ENGLISH SCHOOL, 4th Cross, Near 7th Main Bus Stop, Hampinagar, Bangalore-560104. Phone: 080-23301363

REAL ESTATE SELLING

Commercial Land

Whitefield

SALE COMMERCIAL Land suitable for IT, Hospitals, Star Hotel, 68000Sqft on 80feet Road 170ft width depth 400ft, close to Metro Station. call Verna Developers, MG Road, BLR. 9916310226/ 9353128035.

Commerical

Seshadripuram

OFFICE SPACE for Sale: 6400Sqft fully Furnished, Car parking, Swiss Complex, Race Course Road, Bangalore. Contact: 9845081411, 080-29521081

Sites

Srirampura

SALE 30X100, 1st cross, North facing, Site, Single owner, 2 mins from metro, 17000/sqft PH 9739732433

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Business

VIZAG (VISAKHAPATNAM) Biggest City of Andhra. Want to start Any Business/ Buy Apartments/ RE/ Schools Arranging Big Finances. Excellent Guidance. Radhika Projects/ Services. Dr Swamy Naidu:- 9342247637. Bangalore.

Business Offers

Finance

NRI'S Investment And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

PUBLIC NOTICE

PUBLIC NOTICE

This is to inform the General Public that I **Uma. R,** W/o. Late Sri. Harish. K, R/o. No.36, Pushpa Nilaya, 8th 'C' Cross, Sanjeevininagar, Moodala palya, Bangalore-560072, willing to purchase the property bearing no. 56, BBMP khatha no.40/4, formed out of old syno-40, new syno-40/4, situated at Lingedheeranahalli, Bangalore, earlier known as Lingedheeranahalli Village, Yeshwanthapura Hobli, Bangalore North Taluk, measuring east to west-40ft and north to south-30ft totally measuring 1200sqft, now comes under the limits of BBMP, Bangalore, BBMP ward no.40, Doddabidarakallu, which is morefully described in the schedule from its owner Sri.K.Neelesh S/o Late.Kalachar.

If anybody is having any right, title, claim, interest or objections over the same, may file their objections with relevant documents within 15 days from this date of publication may file their objections and contact to the below mentioned address, and if any right, title, claim, interest or objections over the same is not filed from any person/s, I will enter the sale agreement with the above said property owner Sri.K.Neelesh S/o Late.Kalachar, and if objection and/or claims received thereafter will not be binding on me, failing which I will proceed further to purchase the said schedule property.

SCHEDULE PROPERTY

All that piece and parcel of the Property bearing no.56, BBMP khatha no.40/4, formed out of old syno-40, new syno-40/4, situated at Lingedheeranahalli, Bangalore, earlier known as Lingedheeranahalli Village, Yeshwanthapura Hobli, Bangalore North Taluk, measuring east to west-40ft and north to south-30ft totally measuring 1200sqft, now comes under the limits of BBMP, Bangalore, BBMP ward no.40, Doddabidarakallu and bounded on: **East by :** 4th Main Road, **West by:** Site No.61, **North by:** Site No.57, **South by:** Site No.55.

Uma. R
Mob No. +91 9880934979
Place: Bangalore. Date: 18-05-2025

SADASHIVANAGAR CLUB
No.21, 15th Cross, Sadashivanagar, Bangalore - 560080.
Mobile No. 91489 75091

TENDER NOTIFICATION

Sealed Tenders are invited from reputed Contractors for supply, laying of screed concrete floor with smooth finish of 60 to 70mm thick on 3rd floor of our Annexe Building for laying of synthetic tennis court.

Documents with specifications can be had from the office from 21st May '2025 to 26th May' 2025 by paying Rs.1000/- + GST.

Tender documents quoting with and without RMC to be submitted in sealed envelopes on or before 5:00 PM on 27th May' 2025 with an EMD of Rs.20,000/-

Hon.Secretary
Sadashivanagar Club
Date: 21.05.2025
Place: Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

TOURS & TRAVEL

Travel

VISIT HIMALAYAN Kingdom Nepal with Expert Guide Manager. All Inclusive Best Arrangements. GANESH SHENOY 8970126393

PERSONAL

Lost

LOST
I, **Umakantha K N.** S/o. Nagappaiah K. #94, 14th D Cross, 2nd Stage, 2nd Phase, WCR Mahalakshmipuram, Bangalore North-560086 have lost my Property BDA Site **Allotment Letter, Document Serial No.BDA/DS-3/787/II-BLK/BSK.6/2001-2002.**
Site Measurement: 9x12 meters.
If anybody found Allotment Letter, please call: 94483 68918 or nearby police station.

LOST
I, **Ganavi M.** D/o. Manjunath V R/a Maranayakanahalli Village, Attibele Hobli, Anekal Taluk, Bangalore Urban Dist. I have lost my **SSLC Marks Card, Reg. No. TV60044538,1233588/009, 044538** from the Council for the Indian School Certificate Examinations in the year 2023, on 15-05-2025 while painting of my House.
If found, Contact: 90357 01453, 94831 54318

Change of Name

I, HANUMANTHAIAH CHANDRAKANTH MUTHURAYANAGUDIPALYA resident at No.135, 1st floor, Coconut Avenue Road, 8th Cross, Malleswaram, Bengaluru-560003 have changed my name to HANUMANTHAIAH CHIKKAMUNIYAPPA MUTHURAYANAGUDIPALYA vide affidavit dated 19/05/2025 sworn before notary R.Basavaraja, Bengaluru.

CHANGE OF NAME
I, **ANUSHKA** D/o Hitesh Kantilal Shah, residing at #118 East Trinity Acres and Woods, Amblipura Sarjapur Road, Bengaluru - 560102, have changed my name from **ANUSHKA** to **ANUSHKA HITESH SHAH**. Hereafter, I shall be known as **ANUSHKA HITESH SHAH** for all purposes, including in official documents vide affidavit dated:14-07-2023, before notary B.M. Chandrashekar, Bengaluru

I, RYAN BONIFACE D SOUZA alias RAKESH VIJAY D SOUZA aged 51 years Residing at #12, Maria Mandir, 3rd Cross, Hutchins Road, Bangalore 560084, declare that both names refer to same person i.e., myself only. Vide affidavit dated 23.12.2024 before notary S I Balaguru, Bangalore

I, ANUPMA Rai aged about 53 years W/o Sudeep Narayan Residing at no 304, block- F2, Shriram Shreyas Apts, Telecom colony, Sahakarnagar Bangalore-560097, have changed my name from ANUPAMA RAI to ANUPMA RAI vide affidavit dated 17.05.2025 before notary L.B. Anasuyamma, Bengaluru.

I, ANJANA EBRAHIMKUNJU, R/a 106, Rhythm Classic, Doddathoguru Bengaluru-100, have changed my name to ANJANA KISHORE, vide affidavit dated 14.05.2025 notary K. V. Mani, Bengaluru

DH Classifieds More value, more impact
DECCAN HERALD
ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
JOB opportunities
www.dhclassifieds.com BOOK NOW
*Conditions apply
For more details contact:
+91 9845114560 | +91 9900428036 | +91 9731810277 | +91 9886213331 | 080- 45557163/164

ಕೋಲಾರ ಶಾಸಕ ಮಂಜುನಾಥ್ ವಿರುದ್ಧ ದೂರು

ಬೆಂಗಳೂರು: 'ಆಪರೇಷನ್ ಸಿಂಧೂರ' ಕುರಿತು ಹೇಳಿಕೆ ನೀಡಿದ್ದ ಕೋಲಾರ ಕ್ಷೇತ್ರದ ಶಾಸಕ ಕೊತ್ತನೂರು ಮಂಜುನಾಥ್ ಅವರ ವಿರುದ್ಧ ಬನಶಂಕರಿ ಠಾಣೆಗೆ ದೂರು ನೀಡಲಾಗಿದೆ.

'ಮಂಜುನಾಥ್ ಅವರು ದೇಶದ ಜನರ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ. ನಾಲ್ಕು ವಿಮಾನ ಹಾರಿಸಿ ಕೇಂದ್ರ ಸರ್ಕಾರ ಬಡಾಯಿಕೊಚ್ಚಿಕೊಳ್ಳುತ್ತಿದೆ ಎಂದು ಹೇಳಿ 'ಅಪರೇಷನ್ ಸಿಂಧೂರ' ಕುರಿತು ಲಘುವಾಗಿ ಮಾತನಾಡಿದ್ದಾರೆ. ಅಲ್ಲದೇ ಭಾರತೀಯ ಸೇನೆಗೂ ಮಂಜುನಾಥ್ ಅವಮಾನ ಮಾಡಿದ್ದಾರೆ' ಎಂದು ಆರೋಪಿಸಿ, ನಾಗರಿಕ ಹಕ್ಕು ಹೋರಾಟ ಸಮಿತಿ ಉಪಾಧ್ಯಕ್ಷ ಗಣೇಶ್ ಸಿಂಗ್ ಎಂಬುವರು ದೂರು ನೀಡಿದ್ದಾರೆ.

'ಮಂಜುನಾಥ್ ಅವರು ಕೋಲಾರದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ್ದಾರೆ ಎಂಬುದು ಗೊತ್ತಾಗಿದೆ. ದೂರು ಸ್ವೀಕರಿಸಿ ಅದನ್ನು ಕೋಲಾರ ಠಾಣೆಗೆ ವರ್ಗಾವಣೆ ಮಾಡಲಾಗಿದೆ. ಅಲ್ಲಿನ ಪೊಲೀಸರು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಾಸಕ ಮುನಿರತ್ನ ವಿರುದ್ಧ ಮತ್ತೊಂದು ಎಫ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ನಡೆಸಿದ ಆರೋಪದ ಅಡಿ ರಾಜರಾಜೇಶ್ವರಿನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರ ವಿರುದ್ಧ ಮತ್ತೊಂದು ಎಫ್ಐಆರ್ ದಾಖಲಾಗಿದೆ.

ಅತ್ಯಾಚಾರ ನಡೆಸಲಾಗಿದೆ ಎಂದು ಆರೋಪಿಸಿ 40 ವರ್ಷದ ಮಹಿಳೆ ದೂರು ನೀಡಿದ್ದು, ಮುನಿರತ್ನ, ವಸಂತ, ಚನ್ನಕೇಶ, ಕಮಲ್ ವಿರುದ್ಧ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

'ಪ್ರಕರಣ ದಾಖಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಘಟನೆಯು 2023ರಲ್ಲಿ ನಡೆದಿತ್ತು ಎಂದು ಮಹಿಳೆ ತಿಳಿಸಿದ್ದಾರೆ. ಆರೋಪಿಗಳು ಬೆದರಿಕೆ ಹಾಕಿದ್ದರಿಂದ ಹೆದರಿ ದೂರು ನೀಡಿರಲಿಲ್ಲ. ಈಗ ದೂರು ನೀಡುತ್ತಿರುವುದಾಗಿ ಮಹಿಳೆ ಹೇಳಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಈ ಹಿಂದೆ ಬಿಜೆಪಿಯಲ್ಲಿ ಕೆಲಸ ಮಾಡುತ್ತಿದ್ದೆ. ಪತಿ ಬಿಟ್ಟು ಹೋಗಿದ್ದರಿಂದ ಮತ್ತೊಬ್ಬರನ್ನು ಮದುವೆ ಆಗಿ ಜೀವನ ನಡೆಸುತ್ತಿದ್ದೆ. ವೇಶ್ಯಾವಾಟಿಕೆ ನಡೆಸುತ್ತಿದ್ದ ಆರೋಪ ಹೊರಿಸಿ ನನ್ನನ್ನು ಜೈಲಿಗೆ ಕಳುಹಿಸಿದ್ದರು. ಜಾಮೀನು ಪಡೆದು ಜೈಲಿನಿಂದ ಹೊರಬಂದ ಬಳಿಕ ಅವರ ಬೆಂಬಲಿಗರು ಬಂದು ಪ್ರಕರಣ ಇತ್ಯರ್ಥ ಪಡಿಸಿಕೊಳ್ಳುವ ಆಮಿಷವೊಡ್ಡಿದ್ದರು. ನಂತರ, ಶಾಸಕರ ಕಚೇರಿಗೆ ಕರೆದೊಯ್ದು ನನ್ನ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದರು' ಎಂದು ಸಂತ್ರಸ್ತೆ ನೀಡಿದ ದೂರು ಆಧರಿಸಿ ಎಫ್ಐಆರ್‌ನಲ್ಲಿ ದಾಖಲಿಸಲಾಗಿದೆ.

'ಮುನಿರತ್ನ ಅವರು ನನ್ನ ಮುಖದ ಮೇಲೆ ಮೂತ್ರ ವಿಸರ್ಜನೆ ಮಾಡಿದರು. ಬಳಿಕ, ಬಿಳಿ ಬಣ್ಣದ ಬಾಕ್ಸ್‌ನಲ್ಲಿದ್ದ ದ್ರವ ತೆಗೆದು ನನ್ನ ಎಡಭಾಗದ ಕೈಗೆ ಚುಚ್ಚಿ, ಜೀವನಪರ್ಯಂತ ನರಳುತ್ತೀಯಾ ಎಂದು ಹೇಳಿ ಬೆದರಿಸಿದ್ದರು' ಎಂಬುದು ಎಫ್ಐಆರ್‌ನಲ್ಲಿದೆ.

'2025ರ ಜನವರಿ 14ರಂದು ಹೊಟ್ಟೆನೋವಿಗೆ ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ತೆರಳಿದಾಗ ಇಡಿಆರ್ ವೈರಸ್ ಕಾಯಿಲೆ ಇರುವುದಾಗಿ ಪತ್ತೆಯಾಗಿತ್ತು. ಇದು ವಾಸಿಯಾಗದ ಕಾಯಿಲೆ ಎಂದು ವರದಿಯಲ್ಲಿ ವೈದ್ಯರು ತಿಳಿಸಿದ್ದಾರೆ' ಎಂದು ವಿವರಿಸಲಾಗಿದೆ.

ನೆಲಮಂಗಲದವರೆಗೂ ಮೆಟ್ರೊ: ಶಾಸಕ

ಮಾಗಡಿ: ನೆಲಮಂಗಲದವರೆಗೂ ಮೆಟ್ರೊ ವಿಸ್ತರಣೆಗೆ ಡಿಪಿಆರ್ ಸಿದ್ಧವಾಗುತ್ತಿದೆ. ಈ ಸಂಬಂಧ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಮಾಲೋಚನೆ ನಡೆಸಲಾಗಿದೆ ಎಂದು ಶಾಸಕ ಶ್ರೀನಿವಾಸ್ ಹೇಳಿದರು.

ತಾಲ್ಲೂಕಿನ ಸೋಲೂರು ಹೋಬಳಿ ಲಕ್ಕೇನಹಳ್ಳಿ ಗ್ರಾಮ ಪಂಚಾಯಿತಿಯಿಂದ ನಿರ್ಮಾಣಗೊಂಡಿರುವ ಸ್ವಚ್ಛ ಸಂಕೀರ್ಣ ಘನ ತ್ಯಾಜ್ಯ ಸಂಪನ್ಮೂಲ ನಿರ್ವಹಣೆ ಘಟಕಕ್ಕೆ ಮಂಗಳವಾರ ಚಾಲನೆ ನೀಡಿ ಮಾತನಾಡಿದರು.

ನೆಲಮಂಗಲದವರೆಗೂ ಮೆಟ್ರೊ ವಿಸ್ತರಣೆಗೆ ಡಿಪಿಆರ್ ಸಿದ್ಧತೆ ನಡೆದಿದೆ. ಆದರೆ, ತುಮಕೂರುವರೆಗೂ ಮೆಟ್ರೊ ವಿಚಾರದ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ ಎಂದರು.

ಮಹೇಶ್ವರಮ್ಮ ಜಾತ್ರಾ ಮಹೋತ್ಸವ

ಪೀಣ್ಯ ದಾಸರಹಳ್ಳಿ: ಶ್ರೀ ಮಹೇಶ್ವರಮ್ಮ ಜೀರ್ಣೋದ್ಧಾರ ಸೇವಾ ಸಮಿತಿ ಹಾಗೂ ಗ್ರಾಮಸ್ಥರು, ಮೇ 19 ರಿಂದ 22 ರವರೆಗೆ ಮಹೇಶ್ವರಮ್ಮ ಜಾತ್ರಾ ಮಹೋತ್ಸವ ಅಂಗವಾಗಿ ವಿವಿಧ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಮಂಗಳವಾರ ದನಿನ ಮಾರಮ್ಮ, ಮಹೇಶ್ವರಮ್ಮ ಮತ್ತು ಚಪ್ಪಮ್ಮ ದೇವರಿಗೆ ಆರತಿ ಮತ್ತು ರಥೋತ್ಸವ ಮೆರವಣಿಗೆ ನಡೆಯಿತು. ಹರಕೆ ಹೊತ್ತ ಭಕ್ತರು ಬಾಯಿಗೆ ಬೀಗ ಸೇವೆ, ದೊಡ್ಡದಾರತಿ ಮೆರವಣಿಗೆ ನಡೆಸಿದರು. ಬಳಿಕ ಅಗ್ನಿಕೊಂಡ ಹಾದು, ಪೂಜೆ ಸಲ್ಲಿಸಿದರು.

ಬುಧವಾರ ಮತ್ತು ಗುರುವಾರ ಪೂಜೆ ಸಲ್ಲಿಸಿ, ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಬ್ಯಾಡರಹಳ್ಳಿ ಠಾಣೆ ಪೊಲೀಸರಿಂದ ಮೂವರ ಬಂಧನ

'ಕದ್ದ ಹಣ: ಮಕ್ಕಳ ಶುಲ್ಕ ಕಟ್ಟಿದ್ದ ಕಳ್ಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮನೆಗಳ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ಆರೋಪಿ ಹಾಗೂ ಕೃತ್ಯಕ್ಕೆ ಸಹಕಾರ ನೀಡಿದ್ದ ಇಬ್ಬರನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೇಗೂರು ನಿವಾಸಿ ಶಿವು ಅಲಿಯಾಸ್ ಶಿವರಪ್ಪನ್, ಈತನ ಸ್ನೇಹಿತರಾದ ಅನಿಲ್ ಅಲಿಯಾಸ್ ಜಗ್ಗ ಮತ್ತು ವಿವೇಕ ಬಂಧಿತ ಆರೋಪಿಗಳು.

ಆರೋಪಿಗಳಿಂದ ₹24 ಲಕ್ಷ ಮೌಲ್ಯದ 260 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಶಿವು ಕಳ್ಳತನ ಪ್ರಕರಣದ ಪ್ರಮುಖ ಆರೋಪಿ. ಕೌಟುಂಬಿಕ ಕಾರಣಕ್ಕೆ ಶಿವು ಆತ್ಮಹತ್ಯೆ ಮಾಡಿಕೊಳ್ಳಲು ಆಲೋಚನೆ ಮಾಡಿದ್ದ ಎನ್ನಲಾಗಿದೆ. ಈ ಸಂದರ್ಭದಲ್ಲಿ ತಮ್ಮ ಬಡಾವಣೆಯ ಕೆಲವು ವಿದ್ಯಾರ್ಥಿಗಳು ಶಾಲಾ– ಕಾಲೇಜು ಶುಲ್ಕ ಕಟ್ಟಲು ಪರದಾಡುತ್ತಿರುವ ವಿಷಯವು ಶಿವುಗೆ ಗೊತ್ತಾಗಿತ್ತು. ಅವರ ಶಾಲಾ ಶುಲ್ಕ ಪಾವತಿಗಾಗಿ ಕಳ್ಳತನ ಮಾಡಲು ಇಳಿದಿದ್ದ ಎಂದು ಮೂಲಗಳು ತಿಳಿಸಿವೆ.

'ಬ್ಯಾಡರಹಳ್ಳಿ ಸೇರಿ ಹಲವು ಕಡೆ ಮನೆಗಳಿಗೆ ನುಗ್ಗಿ ಶಿವು ಕಳ್ಳತನ ಮಾಡಿದ್ದ. ಕದ್ದ ಚಿನ್ನಾಭರಣವನ್ನು ಸ್ನೇಹಿತರಾದ ಅನಿಲ್ ಹಾಗೂ ವಿವೇಕ್ ಸಹಾಯದಿಂದ ಮಾರಾಟ ಮಾಡಿದ್ದ.

ಅಪರಾಧ ಸುದ್ದಿ

ವಿವೇಕ

ಅನಿಲ್

ಕಳ್ಳತನದಿಂದ ಸಿಕ್ಕಿದ ಹಣದಲ್ಲಿ 20 ಮಕ್ಕಳ ಶಾಲಾ ಶುಲ್ಕ ಪಾವತಿ ಮಾಡಿದ್ದೇನೆ ಎಂಬುದಾಗಿ ಆರೋಪಿ ಶಿವು ಹೇಳಿಕೆ ನೀಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಶಿವು

'ಕಳವು ಮಾಡಿದ್ದ ಚಿನ್ನಾಭರಣವನ್ನು ₹22 ಲಕ್ಷಕ್ಕೆ ತಮಿಳುನಾಡಿನಲ್ಲಿ ಮಾರಾಟ ಮಾಡಿದ್ದೆ. ವಿವೇಕ ಹಾಗೂ ಅನಿಲ್‌ಗೆ ತಲಾ ₹4ಲಕ್ಷ ನೀಡಿ ಆಟೊ ಕೊಡಿಸಿದ್ದೆ. ಉಳಿದ ಹಣದಲ್ಲಿ ಶಾಲಾ ಮಕ್ಕಳ ಶುಲ್ಕ ಪಾವತಿಸಿದ್ದೆ ಎಂಬುದಾಗಿ ಶಿವು ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಯು ನೀಡಿರುವ ಹೇಳಿಕೆಯಲ್ಲಿ ಸತ್ಯಾಂಶ ಇದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಹೊಯ್ಸಳ ಸಿಬ್ಬಂದಿಯಿಂದ ಬೆಳಿಗ್ಗೆ ರಕ್ಷಣೆ, ರಾತ್ರಿ ಆತ್ಮಹತ್ಯೆ

ಶಾಲಿನಿ

ಬೆಂಗಳೂರು: ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ನಾಗರಾಜ್ ಅವರ ಪತ್ನಿ ಶಾಲಿನಿ ಅವರು ಎಚ್‌ಬಿಆರ್ ಬಡಾವಣೆ ಮನೆಯಲ್ಲಿ ನೇಣುಬಿಗಿದುಕೊಂಡು ಸೋಮವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಾಲಿನಿ ಪೋಷಕರು ಗೋವಿಂದಪುರ ಠಾಣೆಗೆ ದೂರು ನೀಡಿದ್ದು ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಪತಿ ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂದು ಆರೋಪಿಸಿ, ಶಾಲಿನಿ ಅವರು ಸೋಮವಾರ ಬೆಳಿಗ್ಗೆ ರೈಲಿಗೆ ಸಿಲುಕಿ ಸಾಯುತ್ತೇನೆ ಎಂಬುದಾಗಿ ಹೇಳಿ ಮನೆಯಿಂದ ಹೋಗಿದ್ದರು. ಹೊಯ್ಸಳ ಸಿಬ್ಬಂದಿಗೆ ಮಾಹಿತಿ ತಿಳಿದು ಶಾಲಿನಿ ಅವರನ್ನು ರಕ್ಷಿಸಿ ಮನೆಗೆ ಕರೆದುಕೊಂಡು ಬಂದುಬಿಟ್ಟಿದ್ದರು. ರಾತ್ರಿ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಗೊತ್ತಾಗಿದೆ.

ಮೃತ ಶಾಲಿನಿ ಹಾಗೂ ಪಿಎಸ್ಐ ನಾಗರಾಜ್ ಇಬ್ಬರು ಇಳಕಲ್ ಮೂಲದವರು. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಒಟ್ಟಿಗೆ ಮನೆಪಾಠಕ್ಕೂ ತೆರಳುತ್ತಿದ್ದರು. ಶಿಕ್ಷಣ ಮುಗಿದ ಮೇಲೆ ಶಾಲಿನಿ ಅವರು ಖಾಸಗಿ ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸೇರಿದ್ದರು. ನಾಗರಾಜ್ ಅವರು ಪಿಎಸ್ಐ ಪರೀಕ್ಷೆ ತೆಗೆದುಕೊಂಡಾಗ ಶಾಲಿನಿ ಅವರು ಆರ್ಥಿಕ ಸಹಾಯ ಮಾಡಿದ್ದರು' ಎಂದು ಮೂಲಗಳು ಹೇಳಿವೆ.

ಮೊದಲ ಪತಿಗೆ ವಿಚ್ಛೇದನ: ಶಾಲಿನಿ ಹಾಗೂ ನಾಗರಾಜ್ ಅವರ ಮಧ್ಯೆ ಪ್ರೇಮಾಂಕುರವಾಗಿತ್ತು. ಮೊದಲ ಪತಿಗೆ ಶಾಲಿನಿ ಅವರು ವಿಚ್ಛೇದನ ನೀಡಿ ಕಳೆದ ಆಗಸ್ಟ್‌ನಲ್ಲಿ ನಾಗರಾಜ್ ಅವರನ್ನು ಮದುವೆ ಆಗಿದ್ದರು ಎಂದು ಮೂಲಗಳು ತಿಳಿಸಿವೆ.

'ಶಾಲಿನಿ ಹಾಗೂ ನಾಗರಾಜ್ ಅವರ ಮಧ್ಯೆ ಇತ್ತೀಚೆಗೆ ಮನಸ್ತಾಪ ಆರಂಭವಾಗಿತ್ತು. ಪತಿ ನಾಗರಾಜ್ ಅವರು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂದು ಶಾಲಿನಿ ಹೇಳುತ್ತಿದ್ದರು. ಈ ಸಂಬಂಧ ಕೋಣನಕುಂಟೆ ಠಾಣೆಗೂ ದೂರು ನೀಡಿದ್ದರು. ಈ ಸಂಬಂಧ ಹಿರಿಯ ಅಧಿಕಾರಿಗಳು ಆಂತರಿಕ ತನಿಖೆ ನಡೆಸಿದ್ದರು. ಎರಡು ತಿಂಗಳಿಂದ ದಂಪತಿ ಮಧ್ಯೆ ಜಗಳ ವಿಕೋಪಕ್ಕೆ ಹೋಗಿತ್ತು. ನಾಗರಾಜ್ ಅವರು ಬೇರೆ ಮನೆಗೆ ತೆರಳಿ ವಾಸ ಮಾಡುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

ರೌಡಿಶೀಟರ್ ಮನೋಜ್ ಬಂಧನ

ಆನೇಕಲ್ : ಕೊಲೆ ಸೇರಿದಂತೆ ಹತ್ತಕ್ಕೂ ಹೆಚ್ಚು ಅಪರಾಧ ಪ್ರಕರಣಗಳ ಪ್ರಮುಖ ಆರೋಪಿಯಾಗಿದ್ದ ಕುಖ್ಯಾತ ರೌಡಿ ಶೀಟರ್‌ನನ್ನು ದೇವನಹಳ್ಳಿ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆನೇಕಲ್ ತಾಲ್ಲೂಕಿನ ಜಿಗಣಿ ಪೊಲೀಸರು ಬಂಧಿಸಿದ್ದಾರೆ.

ಮನೋಜ್ ಕುಮಾರ್ ಅಲಿಯಾಸ್ ಜಾಕಿ ಬಂಧಿತ ರೌಡಿಶೀಟರ್.

ಆನೇಕಲ್ ತಾಲೂಕಿನ ಬನ್ನೇರುಘಟ್ಟ, ಸೂರ್ಯಸಿಟಿ, ಅತ್ತಿಬೆಲೆ ಮತ್ತು ಬೆಂಗಳೂರಿನ ಕುಂಬಳಗೋಡು ಪೊಲೀಸ್ ಠಾಣೆಗಳಲ್ಲಿ ಕೊಲೆ ಸೇರಿದಂತೆ ವಿವಿಧ ಅಪರಾಧ ಪ್ರಕರಣಗಳು ಮನೋಜ್ ವಿರುದ್ಧ ದಾಖಲಾಗಿವೆ. ಮಹಾರಾಷ್ಟ್ರಕ್ಕೆ ತೆರಳಲು ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಬಂದಿದ್ದ ವೇಳೆ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್‌ಪಿ ಸಿ.ಕೆ.ಬಾಬಾ, ಎಎಸ್ಪಿ ಮತ್ತು ಡಿವೈಎಸ್ಪಿ ಅವರ ಮಾರ್ಗ ದರ್ಶನದಲ್ಲಿ ಜಿಗಣಿ ಸರ್ಕಲ್ ಇನ್‌ಸ್ಪೆಕ್ಟರ್ ಮಂಜುನಾಥ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತು.

ಭಾರತ ಸರ್ಕಾರ/Government of India
ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ
Ministry of Labour & Employment
ಉದ್ಯೋಗ ಮಹಾ ನಿರ್ದೇಶನಾಲಯ,
Directorate General of Employment
ಪ.ಜಾ/ಪ.ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ,
NATIONAL CAREER SERVICE CENTRE FOR SC/STs
ಸರ್ಕಾರಿ ಐಟಿಐ ಆವರಣ, ಡೈರಿ ಸರ್ಕಲ್, ಭನ್ನೇರುಘಟ್ಟ ರಸ್ತೆ, ಬೆಂಗಳೂರು–560029 ಕರ್ನಾಟಕ
Government ITI Campus, Dairy Circle, Bengaluru -560 029 Karnataka
ಇ–ಮೇಲ್/Email: cgcempbg@nic.in, ಟೆಲಿಫೋನ್/Tel.:080-29756192
National Career Service
NCSC/I/11011/1/2025-Bng Dated: 16-05-2025

ಪತ್ರಿಕಾ ಪ್ರಕಟಣೆ
ಪಜಾ /ಪಪಂ ದ ನಿರುದ್ಯೋಗಿ ಯುವಕ /ಯುವತಿರಿಗೆ ಬೆಂಗಳೂರಿನಲ್ಲಿ ಒಂದು ವರ್ಷದ ವಿಶೇಷ ತರಬೇತಿ ನೀಡಲು ಪ್ರತಿಷ್ಠಿತ /ನೋಂದಾಯಿತ ಸಂಸ್ಥೆಗಳಿಂದ
ಅರ್ಜಿ ಆಹ್ವಾನ

ಭಾರತ ಸರ್ಕಾರದ ಕಾರ್ಮಿಕ ಹಾಗೂ ಉದ್ಯೋಗ ಮಂತ್ರಾಲಯ, ನವದೆಹಲಿಯ ಅಧೀನ ಕಛೇರಿಯಾದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಆವರಣ, ಕೌಶಲ್ಯ ಭವನ ಹಿಂಭಾಗ, ಡೈರಿ ಸರ್ಕಲ್, ಬೆಂಗಳೂರು–560029 ಕಛೇರಿಯು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯರಿಗೆ **"ಒಂದು ವರ್ಷದ ವಿಶೇಷ ತರಬೇತಿ"** ಯೋಜನೆಯಡಿ ಸಾಮಾನ್ಯ ಇಂಗ್ಲೀಷ್, ಸಾಮಾನ್ಯ ಜ್ಞಾನ, ಕಂಪೂಟರ್ ಜ್ಞಾನ, ನ್ಯೂಮರಿಕಲ್ ಅಬಿಲಿಟಿ, ಶಾರ್ಟ್‌ಹ್ಯಾಂಡ್/ಸ್ಟೆನೋಗ್ರಾಫೀ (ಶೀಘ್ರಲಿಪಿ) ವಿಷಯಗಳ ತರಬೇತಿ ನೀಡಲು ಪ್ರತಿ ಅಭ್ಯರ್ಥಿಗೆ ನಿಗದಿತ ಸೇವಾ ಶುಲ್ಕ ನೀಡುತ್ತಿದ್ದು, ಅದಕ್ಕಾಗಿ ಅರ್ಹ ಪ್ರತಿಷ್ಠಿತ/ನೋಂದಾಯಿತ ಬೆಂಗಳೂರಿನಲ್ಲಿರುವ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಕಛೇರಿಯ ಇ–ಮೇಲ್ ಮೂಲಕ cgcempbg@nic.in ಅಥವಾ ಖುದ್ದಾಗಿ ಕಚೇರಿಯ ಸಮಯದಲ್ಲಿ ಸಂಪರ್ಕಿಸಿ ಅರ್ಜಿಯನ್ನು ಹಾಗೂ ಸೇವಾ ಷರತ್ತುಗಳನ್ನು ಪಡೆಯಬಹುದು. ಅಗತ್ಯ ದಾಖಲೆಗಳ ಜೊತೆಗೆ ಭರ್ತಿ ಮಾಡಿದ ಅರ್ಜಿಯನ್ನು ದಿನಾಂಕ: 30.05.2025, ಸಂಜೆ 5:00 ಒಳಗಾಗಿ ಕಛೇರಿಗೆ ನೋಂದಾಯಿತ ಪೋಸ್ಟ್/ಖುದ್ದಾಗಿ ಬಂದು ಸಲ್ಲಿಸಲು ತಿಳಿಸಿದೆ.
ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ಪಡೆಯಲು ಕಛೇರಿಯ ಮುಖ್ಯಸ್ಥರಾದ ಉಪ–ಪ್ರಾದೇಶಿಕ ಉದ್ಯೋಗಾಧಿಕಾರಿಗಳನ್ನು ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಉಪ–ಪ್ರದೇಶಿಕ ಉದ್ಯೋಗಾಧಿಕಾರಿ: ಫೋ:080–29756192

ಸಹಿ/– (ಶಿವಶಾಂತವೀರ ದಿವಾಕರ) ಕೇ.ಸಾ.ಸೇ
ಉಪ–ಪ್ರಾದೇಶಿಕ ಉದ್ಯೋಗಾಧಿಕಾರಿ
ಪ.ಜಾ/ಪ.ಪಂ.ದವರ ರಾಷ್ಟ್ರೀಯ ವೃತ್ತಿ ಸೇವಾ ಕೇಂದ್ರ, ಬೆಂಗಳೂರು–560029

BANGALORE DEVELOPMENT AUTHORITY
Office of the Executive Engineer, Dr.K.Shivarama Karantha Layout, (DSKL), Division,
BDA, # 108G, 5th Cross, MLA Layout, RMV 2nd Stage, Bhoopasandra, Bengaluru - 560 094
No.: BDA/EE/DSKL/TEND/01/Call-2/2025-26 Dated: 20.05.2025

INVITATION FOR TENDER (IFT) Call -2
(Short-term tender - Two Cover System)
Through GOK KPPP Portal only

Tenders on item rate basis are invited by the undersigned for the works mentioned below from the registered contractors of registration with CPWD/KPWD/Railways/MES or any State Government Organizations.

The tender Document can be downloaded from the Gok e-procurement website (http://eproc.karnataka.gov.in) on payment of prescribed fee noted against each item of work (non refundable) in the form of e-payment through e-Procurement Platform. The tenderer should accompany a copy of a vailed Registration Certificate and shall be submitted through e-Procurement Portal (Standard Tender Bid Document).

Sl. No.	Name of the Work	Approximate Value of the Works (Rs. in Crores)	EMD (Rs.in Crores)	Tender Processing fee (Cost of the Tender) (Rs.)	Period of Completion
1	Development of Ramagondanahalli lake	8.50	Refer to the Karnataka Public Procure-ment Portal	Refer to the Karnataka Public Procure-ment Portal	11 Months Including monsoon period
2	Development of Veerasagara lake	6.00			
3	Comprehensive Development and restoration of Byalakere -1	9.00			
4	Comprehensive Development and restoration of Byalakere -2	9.50			
5	Comprehensive Development and restoration of Byalakere -3	12.50			
6	Comprehensive Development and restoration of Mediagrahara lake	9.00			
7	Comprehensive Development and restoration of Guniagrahara lake	7.00			
8	Comprehensive Development and restoration of Ganigarahalli lake	14.50			
9	Comprehensive Development and restoration of Kalathammanahalli lake	8.00			
10	Improvements to Chikkabanavara lake	12.00			

Note : Calendar of Events

1. Availability of tender documents in E-Procurement Portal	20.05.2025 onwards
2. Last date of Receipt of queries	22.05.2025 upto 13.00 hrs
3. Date of Pre bid meeting	23.05.2025 upto 17.00 hrs
4. Last date of submission of tenders	28.05.2025 upto 16.00 hrs.
5. Date of Opening technical bid	29.05.2025 upto 16.15 hrs
6. Date of opening of financial bid	will be intimated to qualified tenders

1. No Joint Venture/Consortium is permissible. The validity of tender is 180 days from the date of opening of tender.
2. Aspiring Bidders/Consultant who have not registered in e-procurement should register before participating through the website https://kppp.karnataka.gov.in
3. For details, registration and e-payment visit GOK e-Procurement website https://kppp.karnataka.gov.in or contact e-Procurement Helpdesk
4. Before submission of online bids, bidders must ensure that scanned copies of all the necessary documents have been attached with bid.
5. All the information required for Bids must be filled and submitted online only.
6. Further details of the work can be obtained in the office of Executive Engineer, Bengaluru Development Authority, Kumara Park West, T.Chowdaiah Road, Bengaluru-560 020 on all working days between 10.00 am and 5.00 pm.

Sd/- Executive Engineer
DSKL Division
BDA, Bengaluru.

ಕರ್ನಾಟಕ ಸರ್ಕಾರ
ನಮೂನೆ – VII
(ಕರ್ನಾಟಕ ತಿದ್ದುಪಡಿ ನಿಯಮ–6)
ಸಂಖ್ಯೆ: ಆರ್ ಡಿ33 ಎಕ್ಯೂಬಿ 2024 ದಿನಾಂಕ: 15.05.2025

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 ಕಲಂ 19(1)ರ ಮೇರೆಗೆ ತಿದ್ದುಪಡಿ ಘೋಷಣೆ.

ಸಾರ್ವಜನಿಕ ಉದ್ದೇಶದ Formation road from Hoodi Railway Station to Kumbena Agrahara via Sadaramangala as per RMP-2015 for the width of 18.00mts and Length of 2.8Km. ಯೋಜನೆಗೆ ಸಂಬಂಧಿಸಿದಂತೆ ರಸ್ತೆ ನಿರ್ಮಾಣ ಮಾಡಲು ಅವಶ್ಯಕವಿರುವ ಸ್ವತ್ತುಗಳಿಗೆ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆ ಇರುತ್ತದೆ ಎಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ಕಲಂ 11(1) ರಂತೆ ಉಪ ಆಯುಕ್ತರು (ಭೂಸ್ವಾಧೀನ), ಬಿಬಿಎಂಪಿ ರವರ ಅಧಿಸೂಚನೆ ಕ್ರಮಾಂಕ:ಎಲ್ಎಕ್ಯೂ/ಸಿಆರ್./118/2023–24. ದಿನಾಂಕ:04–04–2024 ರಂತೆ ಅಧಿಸೂಚನೆ ಹೊರಡಿಸಲಾಗಿರುವುದರ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ. ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಾವಳಿ 2015 ರ ನಿಯಮ 28 ರಂತೆ ಕೇಂದ್ರ ಅಧಿನಿಯಮ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ. ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ – 2013 ರ ಕಲಂ 19(1) ರನ್ವಯ ಅಧಿಸೂಚನೆಯನ್ನು ಸರ್ಕಾರದ ಅಧಿಸೂಚನೆ ಕ್ರಮಾಂಕ ಸಂಖ್ಯೆ: ಆರ್‌ಡಿ 33 ಎಕ್ಯೂಬಿ 2024. ದಿ:09.04.2025 ಘೋಷಣೆಯನ್ನು ದಿನಾಂಕ: 23.04.2025ರ ರಾಜ್ಯಪತ್ರ ಭಾಗ–6. ಪುಟ ಸಂಖ್ಯೆ:1362 ರಿಂದ 1364ರಲ್ಲಿ ಪ್ರಕಟವಾಗಿರುತ್ತದೆ. ಸದರಿ ಘೋಷಣೆಯಲ್ಲಿನ ಕ್ರಮ ಸಂಖ್ಯೆ:10 & 11ರ 19(1) ರಲ್ಲಿನ ಅಧಿಸೂಚನೆಯನ್ನು ಈ ಕೆಳಕಂಡಂತೆ ಓದಿಕೊಳ್ಳಲು ಆದೇಶಿಸಿದೆ ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಪ್ರಕಟಣೆಯು ಕೇಂದ್ರ ಅಧಿನಿಯಮ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ. ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಪುನರ್ ನಿರ್ಮಾಣ–2003 ರ ಕಲಂ 19(1) ರಂತೆ ಹೊರಡಿಸಲಾಗಿದೆ. ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳ ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಬಿಬಿಎಂಪಿ, ಬೆಂಗಳೂರು ಇವರ ಕಚೇರಿಯಲ್ಲಿ ಪರಿಶೀಲನೆಗೆ ಇಡಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸದರಿ ಅಧಿನಿಯಮ ಕಲಂ 21(1) ರಡಿ ಸಂಬಂಧಿಸಿದ ಹಿತಾಸಕ್ತಿದಾರರಿಗೆ ಭೂಸ್ವಾಧೀನತೆಯ ಜಮೀನುಗಳ ಕಬ್ಜ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೇಮುಗಳನ್ನು ಸಲ್ಲಿಸಲು ತಿಳುವಳಿಕೆ ನೋಟಿಸ್ ನೀಡಿ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಿದೆ.

ಸದರಿ ಅಧಿಸೂಚನೆಯಲ್ಲಿ ಒಳಪಡುವ ಜಮೀನುಗಳ ವಿವರಗಳನ್ನು ಸೂಚಿಸುವ ಒಂದು ನಕ್ಷೆಯನ್ನು ಸಾರ್ವಜನಿಕ ಹಿತಾಸಕ್ತಿಗಾಗಿ ಹಾಗೂ ಸಂಬಂಧಿಸಿದ ಎಲ್ಲಾ ಹಿತಾಸಕ್ತಿದಾರರ ಅವಗಾಹನೆಗಾಗಿ ವಿಶೇಷ ಭೂಸ್ವಾಧೀನಾಧಿಕಾರಿ. ಕೊಠಡಿ ಸಂಖ್ಯೆ:208. ಎರಡನೇ ಮಹಡಿ. ಅನೆಕ್ಸ್–3 ಕಟ್ಟಡ. ಕೇಂದ್ರ ಕಚೇರಿ, ಎನ್.ಆರ್.ವೃತ್ತ. ಬಿಬಿಎಂಪಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಇಡಲಾಗಿದೆ.

ಜಿಲ್ಲೆ: ಬೆಂಗಳೂರು ನಗರ **ತಾಲ್ಲೂಕು: ಬೆಂಗಳೂರು ಪೂರ್ವ** **ಹೋಬಳಿ: ಕೃಷ್ಣರಾಜಪುರ** **ಗ್ರಾಮ: ಸಾದರಮಂಗಲ**

ಕ್ರ ಸಂ	ಖಾತೆದಾರರ ಹೆಸರು ಜೆ.ಎಂ.ಸಿಯಂತೆ / ಬಿ.ಬಿ.ಎಂ.ಪಿ ಖಾತೆಯಂತೆ	ಸರ್ವೆ ನಂ.	ಬಿ.ಬಿ.ಎಂ.ಪಿ ಖಾತಾ ನಂ./ ನಿವೇಶನ ಸಂ:	ಕಲಂ11(1) ಅಧಿಸೂಚನೆ ಯನ್ವಯ ಭೂಸ್ವಾಧೀನಕ್ಕೆ ಒಳಪಡುವ ಒಟ್ಟು ವಿಸ್ತೀರ್ಣ (ಚ.ಮೀ.ಗಳಲ್ಲಿ)		ಜೆ.ಎಂ.ಸಿಯಂತೆ ಭೂಸ್ವಾಧೀನ–ಕ್ಕೊಳಪಟ್ಟಿರುವ ಒಟ್ಟು ವಿಸ್ತೀರ್ಣ (ಚ.ಮೀ.ಗಳಲ್ಲಿ)			ತರಹೆ	ಚಕ್ಕುಬಂದಿ/ಸರಹದ್ದು			
				ಕೃಷಿ/ ಕೃಷಿಯೇತರ	ಖರಾಬು	ಕೃಷಿ	ಖರಾಬು	ಒಟ್ಟು		ಪೂ	ಪ	ಉ	ದ
1	2	3	4	5	6	7	8	9	10	11	12	13	14
11	ಅರ್ಜುನ್ ರಮೇಶ್ ಬಿನ್ ರಮೇಶ್ ಆದಿತ್ಯ ರಮೇಶ್ ಬಿನ್ ರಮೇಶ್ ಮತ್ತು ಮೆ॥ ಮೇರಿ ವೆಂಚರ್ಸ್	52/1	–	445.66	–	445.66	–	445.66	–	ಮಾನ್ಯ ಉಚ್ಚ ನ್ಯಾಯಾಲಯ ಪ್ರಕರಣ ಸಂ: CCC 856/2023ರಲ್ಲಿ ರೂ.2,13,91,680/– & CCC 857/2023ರಲ್ಲಿ ರೂ.1,06,95,840/– ಗಳನ್ನು ದಿನಾಂಕ: 08–02–2024 ರಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿರುತ್ತದೆ.			

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಹೇಮಲತ.ಎಂ)
ಸರ್ಕಾರ ಅಧೀನ ಕಾರ್ಯದರ್ಶಿ ಕಂದಾಯ ಇಲಾಖೆ (ಭೂಸ್ವಾಧೀನ–2)

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್
DIAGEO INDIA
ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 2221 0705; ಫ್ಯಾಕ್ಸ್: +91 80 2224 5253
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಮಾರ್ಚ್ 31, 2025ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ವರ್ಷದ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಆರ್ಥಿಕ ಪಲಿತಾಂಶಗಳ ವಿವರಣೆ
(₹ ಕೋಟಿಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಮಾರ್ಚ್ 31, 2025 ತ್ರೈಮಾಸಿಕ ಪರಿಶೋಧಿಸದಿರುವ	ಮಾರ್ಚ್ 31, 2025 ವಾರ್ಷಿಕ (ಪರಿಶೋಧಿಸಿದ)	ಮಾರ್ಚ್ 31, 2024 ತ್ರೈಮಾಸಿಕ ಪರಿಶೋಧಿಸದಿರುವ	ಮಾರ್ಚ್ 31, 2025 ತ್ರೈಮಾಸಿಕ ಪರಿಶೋಧಿಸದಿರುವ	ಮಾರ್ಚ್ 31, 2025 ವಾರ್ಷಿಕ (ಪರಿಶೋಧಿಸಿದ)	ಮಾರ್ಚ್ 31, 2024 ತ್ರೈಮಾಸಿಕ ಪರಿಶೋಧಿಸದಿರುವ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	6,549	26,780	6,394	6,634	27,276	6,511
2.	ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳು ಮತ್ತು ತೆರಿಗೆಯ ಮೊದಲು)	585	2,121	491	542	2,200	343
3.	ತೆರಿಗೆಗೆ ಮುಂಚಿನ ಅವಧಿಯ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	585	2,056	460	542	2,135	312
4.	ತೆರಿಗೆಯ ನಂತರದ ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	451	1,558	384	421	1,582	241
5.	ಅವಧಿಯ ಒಟ್ಟು ಸಮಗ್ರ ಆದಾಯ	449	1,556	387	423	1,582	240
6.	ಈಕ್ವಿಟಿ ಷೇರು ಬಂಡವಾಳ	145	145	145	145	145	145
7.	ಇತರ ಈಕ್ವಿಟಿ [ಕೆಳಗೆ ಟಿಪ್ಪಣಿ (ಬಿ) ಗಮನಿಸಿ]	7,734	7,734	6,818	7,959	7,959	6,976
8.	ಗಳಿಕೆ ಪ್ರತಿ ಷೇರಿಗೆ (₹ 2/- ಪ್ರತಿ) [ಕೆಳಗೆ ಟಿಪ್ಪಣಿ (ಸಿ) ಗಮನಿಸಿ] ಮೂಲ ಮತ್ತು ದುರ್ಬಲ (₹ ಗಳಲ್ಲಿ)	6.20	21.42	5.28	5.93	22.28	3.40

ಟಿಪ್ಪಣಿಗಳು
ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಮತ್ತು ವಾರ್ಷಿಕ ಮಾರ್ಚ್ 31, 2025ರ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಮತ್ತು ವಾರ್ಷಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com/~/media/Files/D/Diageo-V2/Diageo-India/investors/financials/results-reports-and-presentations/outcome-audited-financials-fy2025.pdf ನಲ್ಲಿ ಲಭ್ಯವಿರುತ್ತದೆ.
ಬಿ) ಮಾರ್ಚ್ 31, 2025ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಬಾಕಿಗಳು, ಮಾರ್ಚ್ 31, 2025ಕ್ಕೆ ಕೊನೆಗೊಂಡ ವರ್ಷಕ್ಕೆ ಲೆಕ್ಕಪರಿಶೋಧಿತ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಬ್ಯಾಲೆನ್ಸ್ ಶೀಟ್ ಪ್ರಕಾರ ಬಾಕಿಗಳನ್ನು ಪ್ರತಿನಿಧಿಸುತ್ತವೆ ಮತ್ತು ಮಾರ್ಚ್ 31, 2024ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಬಾಕಿಗಳು ಸೆಕ್ಯುರಿಟೀಸ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಷನ್ ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಂತ್ರಣ, 2015ರ ಪ್ರಕಾರ ಮಾರ್ಚ್ 31, 2024ಕ್ಕೆ ಕೊನೆಗೊಂಡ ವರ್ಷಕ್ಕೆ ಲೆಕ್ಕಪರಿಶೋಧಿತ ಸ್ವತಂತ್ರ ಮತ್ತು ಕ್ರೋಢೀಕೃತ ಬ್ಯಾಲೆನ್ಸ್ ಶೀಟ್ ಪ್ರಕಾರ ಬಾಕಿಗಳನ್ನು ಪ್ರತಿನಿಧಿಸುತ್ತವೆ.
ಸಿ) ಏಕೀಕೃತ ಹಣಕಾಸು ಅಡಿಯಲ್ಲಿ ವರ್ಷದ ಬಾಕಿ ಇರುವ ಈಕ್ವಿಟಿ ಷೇರುಗಳ ಸರಾಸರಿ ಸಂಖ್ಯೆಯನ್ನು ಲೆಕ್ಕಹಾಕುವಲ್ಲಿ, ಕಂಪನಿಯು ಯುಎಸ್ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪೆನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.
ಡಿ) ಈ ಕೆಳಗಿನ ಕ್ಯೂಆರ್ ಕೋಡನ್ನು ಸ್ಕ್ಯಾನ್ ಮಾಡುವ ಮೂಲಕ ಸಂಪೂರ್ಣ ಪಲಿತಾಂಶಗಳನ್ನು ವೀಕ್ಷಿಸಬಹುದು.

ಸ್ಥಳ : ಬೆಂಗಳೂರು
ದಿನಾಂಕ : ಮೇ 20, 2025

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/–
ಪ್ರವೀಣ್ ಸೋಮೇಶ್ವರ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಹೊಸಪೇಟೆಯಲ್ಲಿ ಕಾಂಗ್ರೆಸ್ ಸಮರ್ಪಣೆ ಸಂಕಲ್ಪ ಸಮಾವೇಶ; ನಕಲಿ ಜಾತಿ ಪತ್ರ ತಡೆಯಲು ಆಗ್ರಹ

ಎಸ್.ಸಿಗೆ 'ಬೇಡ ಜಂಗಮ': ಖರ್ಗೆ ಕಿಡಿ

ಪ್ರಜಾವಾಣಿ ವಾರ್ತೆ

ವಿಜಯನಗರ (ಹೊಸಪೇಟೆ): 'ಒಳಮೀಸಲಾತಿ ಕಲ್ಪಿಸಲು ನಡೆಸಲಾಗುತ್ತಿರುವ ಜಾತಿ ಸಮೀಕ್ಷೆಯ ಪರಿಶಿಷ್ಟ ಜಾತಿ (ಎಸ್‌ಸಿ) ಪಟ್ಟಿಯಲ್ಲಿ ಲಿಂಗಾಯತ ಬೇಡ ಜಂಗಮ ಸಮುದಾಯ ನುಸುಳುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಇದರ ಬಗ್ಗೆ ಎಚ್ಚರವಹಿಸಬೇಕು' ಎಂದು ಎಐಸಿಸಿ ಅಧ್ಯಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

'ಸಮರ್ಪಣೆ ಸಂಕಲ್ಪ' ಸಮಾವೇಶದಲ್ಲಿ ಮಾತನಾಡಿದ ಅವರು, 'ಒಳಮೀಸಲಾತಿ ಕಲ್ಪಿಸಲು ರಾಜ್ಯ ಸರ್ಕಾರ ಎಸ್‌ಸಿ ಸಮುದಾಯದ ಸಮೀಕ್ಷೆ ನಡೆಸುತ್ತಿದೆ. ಒಳಮೀಸಲಾತಿಗೆ ನನ್ನ ವಿರೋಧವಿಲ್ಲ. ಆದರೆ, ಲಿಂಗಾಯತ ಸಮುದಾಯದ ಬೇಡ ಜಂಗಮರನ್ನು ಎಸ್‌ಸಿ ಪಟ್ಟಿಗೆ ಸೇರಿಸುತ್ತಿರುವುದು ಸರಿಯಲ್ಲ. ಲಿಂಗಾಯತರಲ್ಲಿನ ಬಡ ವರ್ಗದವರಿಗೆ ನೆರವಾಗೋಣ. ಆದರೆ, ಬೇಡ ಜಂಗಮರನ್ನು ಎಸ್‌ಸಿ ಪಟ್ಟಿಗೆ ಸೇರಿಸುವುದು ತಪ್ಪು' ಎಂದು ಆಕ್ರೋಶ ವ್ಯಕ್ತಪಡಿಸಿದರು. ಹೀಗೆ ಹೇಳುತ್ತಿದ್ದಂತೆಯೇ, ಪಕ್ಕಕ್ಕೆ ಬಂದು ನಿಂತ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಮಾತುಗಳನ್ನು ಆಲಿಸಿದರು.


ಮಲ್ಲಿಕಾರ್ಜುನ ಖರ್ಗೆ

'ಬೇಡ ಜಂಗಮರನ್ನು ಎಸ್‌ಸಿ ಎಂದು ನಮೂದಿಸಿದರೆ ಅದು ಅಸ್ಪೃಶ್ಯ ಸಮುದಾಯಗಳ ವಿರೋಧಿ ನಡೆ. ದಲಿತ ವಿರೋಧಿ ನಡೆ. ಈ ಸಮುದಾಯಗಳ ಹಕ್ಕು ಕಸಿಯಲೆಂದು ಇದನ್ನು ಮಾಡುತ್ತೀದ್ದೀರಾ ಹೇಗೆ? ಅಥವಾ ಒಳ್ಳೆಯದಾಗಬೇಕು ಎಂದು ಮಾಡುತ್ತಿದ್ದೀರಾ' ಎಂದು ಅವರು ಪ್ರಶ್ನಿಸಿದರು.

'ಪರಿಶಿಷ್ಟ ಜಾತಿಗೆ ಸೇರಲೆಂದು ನಕಲಿ ಜಾತಿ ಪತ್ರ ನೀಡುವವರನ್ನು ತಡೆಯಬೇಕು. ನಾವೆಲ್ಲರೂ ಒಟ್ಟಾಗಿದ್ದು, ಇಂಥ ಜಟಿಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಪರಿಶಿಷ್ಟರಿಗೆ ಒಳ್ಳೆಯದಾಗಲಿ ಎಂದೇ ಸಮೀಕ್ಷೆ ಮಾಡಲಾಗುತ್ತಿದೆ. ಇಂಥ ಸಂದರ್ಭದಲ್ಲಿ ಬೇರೆಯವರನ್ನು ಸೇರಿಸಿಕೊಂಡರೆ ರಾಜ್ಯಕ್ಕೆ, ದೇಶಕ್ಕೆ ಒಳ್ಳೆಯದಾಗುವುದಿಲ್ಲ' ಎಂದರು.

> ಕಲ್ಯಾಣ ಕರ್ನಾಟಕ ಭಾಗದಲ್ಲಿ ಬುಡ್ಗಾ ಜಂಗಮ ಸಮುದಾಯದ 500 ಜನ ಇದ್ದರು. ಆದರೆ, ಈಗ ಅವರ ಹೆಸರಲ್ಲಿ ನಾಲ್ಕು ಲಕ್ಷ ಜನರು ಎಸ್‌ಸಿ ಪಟ್ಟಿಗೆ ಹೇಗೆ ಸೇರ್ಪಡೆಯಾದರು?
> **ಮಲ್ಲಿಕಾರ್ಜುನ ಖರ್ಗೆ,** ಅಧ್ಯಕ್ಷ, ಎಐಸಿಸಿ

'ಹಿಂದುಳಿದವರ ಜಾತಿ ಗಣತಿ ನಡೆಯಬೇಕು ಎಂಬುದು ರಾಹುಲ್ ಗಾಂಧಿಯವರ ಆಶಯ. ಆರಂಭದಲ್ಲಿ ಅದರ ಬಗ್ಗೆ ಎಲ್ಲರೂ ಟೀಕಿಸಿದರು. ಆದರೆ, ಪ್ರಧಾನಿ ಮೋದಿಯವರೇ ಕ್ಯಾಬಿನೆಟ್ ಸಭೆ ನಡೆಸಿ ಮುಂದಿನ ಜನಗಣತಿ ವೇಳೆ ಜಾತಿಗಣತಿ ಮಾಡಿ ಹಿಂದುಳಿದ ವರ್ಗಗಳ ಕಾಲಂ ಸೇರಿಸುವುದಾಗಿ ಹೇಳಿದರು. ಜಾತಿ ಗಣತಿ ಸರಿಯಾಗಿ ಆಗಬೇಕು. ರಾಹುಲ್ ಗಾಂಧಿಗೆ ಕೆಟ್ಟ ಹೆಸರು ಬರಬಾರದು' ಎಂದರು.

'26 ಜನರ ಪ್ರಾಣ ಉಳಿಸಬಹುದಿತ್ತು'

'ಪಹಲ್ಗಾಮ್‌ನಲ್ಲಿ ನಡೆದಿದ 26 ಜನರ ಹತ್ಯೆಯನ್ನು ತಮಗಿದ್ದ ಗುಪ್ತವಾರ್ತೆಯ ಮೂಲಕ ಪ್ರಧಾನಿ ಮೋದಿ ತಡೆಯಬಹುದಿತ್ತು. ಅವರು ಮುನ್ನೆಚ್ಚರಿಕೆ ವಹಿಸಿ, ಮುನ್ಸೂಚನೆ ನೀಡಿದ್ದರೆ 26 ಜನರ ಪ್ರಾಣ ಉಳಿಯುತಿತ್ತು' ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

'ಸರ್ವ ಪಕ್ಷಗಳ ಸಭೆಗೆ ಮೋದಿ ಬರಲಿಲ್ಲ. ದೇಶಪ್ರೇಮ ಇದ್ದಿದ್ದರೆ ಮೋದಿ ಬರಬೇಕಿತ್ತು. ನಾವು ಬಾರದೇ ಇದ್ದಿದ್ದರೆ ನಮ್ಮನ್ನು ದೇಶದ್ರೋಹಿಗಳು ಎನ್ನುತ್ತಿದ್ದರು' ಎಂದರು.

ಬಿಜೆಪಿ ಜನಾಕ್ರೋಶವೇ ನಕಲಿ: ಸಿ.ಎಂ

'ಬಿಜೆಪಿ ಹಮ್ಮಿಕೊಂಡಿರುವ ಜನಾಕ್ರೋಶ ಕಾರ್ಯಕ್ರಮವೇ ನಕಲಿ. ಅವರು ಹೇಳುತ್ತಿರುವುದು ಸತ್ಯವಾಗಿದ್ದರೆ ಇಲ್ಲಿ ಲಕ್ಷಾಂತರ ಜನ ಸೇರುತ್ತಲೇ ಇರಲಿಲ್ಲ. ನಾವು ನುಡಿದಂತೆ ನಡೆದಿದ್ದೇವೆ,ಅದಕ್ಕೇ ನಮ್ಮ ಮೇಲೆ ಜನರಿಗೆ ವಿಶ್ವಾಸ ಇದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ನಾವು ಕೊಟ್ಟ ಭರವಸೆಗಳಲ್ಲಿ 142 ಭರವಸೆಗಳನ್ನು ಎರಡು ವರ್ಷದಲ್ಲಿ ಪೂರೈಸಿದ್ದೇವೆ, ಉಳಿದವು ಮುಂದಿನ ಮೂರು ವರ್ಷದಲ್ಲಿ ಈಡೇರಿಸುತ್ತೇವೆ. ಆದರೆ ಬಿಜೆಪಿ ಸರ್ಕಾರ ತಾನು ನೀಡಿದ 600 ಭರವಸೆಗಳಲ್ಲಿ ಶೇ 10ರಷ್ಟನ್ನೂ ಈಡೇರಿಸಿರಲಿಲ್ಲ' ಎಂದು ಅವರು ಹೇಳಿದರು.

'ಕೇಂದ್ರ ಸರ್ಕಾರದಿಂದ ಪ್ರತೀ ವರ್ಷ ನಮಗೆ ನಷ್ಟ ಆಗುತ್ತಿದೆ. ನಾವು ಪ್ರತೀ ವರ್ಷ ₹4.5 ಲಕ್ಷ ಕೋಟಿ ತೆರಿಗೆ ರೂಪದಲ್ಲಿ ಕೊಟ್ಟರೆ ನಮಗೆ ವಾಪಸ್ ಬರುವುದು ಒಂದು ರೂಪಾಯಿಗೆ 14 ಪೈಸೆ ಮಾತ್ರ. ಇದರಿಂದ ಒಕ್ಕೂಟ ವ್ಯವಸ್ಥೆಯ ಘನತೆ ಹಾಳಾಗುತ್ತಿದೆ' ಎಂದರು.

'ಭೂ ಗ್ಯಾರಂಟಿ ದೇಶಕ್ಕೆ ಮಾದರಿ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ರಾಜ್ಯದ ನಿವಾಸಿಗಳು ಹಕ್ಕುಪತ್ರ ಇಲ್ಲದೆ ಇರಬಾರದು ಎಂಬ ಧ್ಯೇಯದೊಂದಿಗೆ 'ಭೂ ಗ್ಯಾರಂಟಿ' ಯನ್ನು ಜಾರಿಗೆ ತರಲಾಗಿದೆ. ಇನ್ನೂ 50 ಸಾವಿರ ಕುಟುಂಬಗಳಿಗೆ ಹಕ್ಕುಪತ್ರಗಳನ್ನು ಆರು ತಿಂಗಳೊಳಗೆ ನೀಡಲಾಗುವುದು' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದರು.

ರಾಹುಲ್ ಗಾಂಧಿ

ಸಮರ್ಪಣೆ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, 'ಹಾಡಿ, ತಾಂಡಾ, ಹಟ್ಟಿ, ಕೇರಿಗಳಲ್ಲಿ ವಾಸಿಸುವವರು ಬಡವರು. ಅವರಿಗೆ ಕೇವಲ ಹಕ್ಕು-ಪತ್ರವನ್ನು ಚೀಟಿಯ ರೂಪದಲ್ಲಿ ನೀಡದೆ, ಡಿಜಿಟಲ್ ರೂಪದಲ್ಲಿ ನೀಡಲು ನಾನು ಸೂಚಿಸಿದ್ದೆ. ಅದರಂತೆ ಇಂದು ಡಿಜಿಟಲ್ ಹಕ್ಕುಪತ್ರವನ್ನೇ ನೀಡಲಾಗುತ್ತಿದೆ' ಎಂದರು.

'ಭೂಮಾಲೀಕತ್ವ ಹಕ್ಕು ಜನರಿಗೆ ಸಿಗಬೇಕು ಎಂಬುದು ಇಂದಿರಾ ಗಾಂಧಿ ಅವರ ಕನಸಾಗಿತ್ತು. ದೇಶದಲ್ಲೇ ಮೊದಲ ರಾಜ್ಯದ ರೂಪದಲ್ಲಿ ಕರ್ನಾಟಕ ಭೂ ಗ್ಯಾರಂಟಿಯನ್ನು ಎಲ್ಲರಿಗೂ ಒದಗಿಸಿದ ರಾಜ್ಯವಾಗಲಿದೆ' ಎಂದು ಹೇಳಿದರು.

ಜನರ ದುಡ್ಡು ಜನರಿಗೆ: 'ಬಡಜನರು ತೆರಿಗೆ ಕೊಡುತ್ತಾರೆ, ಅವರ ದುಡ್ಡು ಅವರಿಗೇ ಸಿಗಬೇಕು ಎಂಬುದು ಕಾಂಗ್ರೆಸ್ ನಿಲುವು. ಅದಕ್ಕಾಗಿಯೇ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಅದರಿಂದ ದುಡ್ಡು ನಮ್ಮಲ್ಲೇ ಚಲಾವಣೆಯಾಗುತ್ತದೆ. ವ್ಯಾಪಾರ ವೃದ್ಧಿಸುತ್ತದೆ. ಕೆಲವರಿಗಷ್ಟೇ ಸಂಪತ್ತು ಸಿಗಬೇಕು ಎಂಬುದು ಬಿಜೆಪಿ ನಿಲುವು, ಅಂತಹ ಶ್ರೀಮಂತರು ಭಾರತದಲ್ಲಿ ಆ ಹಣ ವ್ಯಯಿಸುವುದಿಲ್ಲ, ವಿದೇಶಗಳಲ್ಲಿ ಆಸ್ತಿ ಮಾಡಿಕೊಳ್ಳುತ್ತಾರೆ' ಎಂದು ರಾಹುಲ್ ಟೀಕಿಸಿದರು. ರಾಹುಲ್ ಅವರ ಹಿಂದಿ ಭಾಷಣವನ್ನು ಶಾಸಕ ಶರತ್ ಬಚ್ಚೇಗೌಡ ಕನ್ನಡಕ್ಕೆ ಅನುವಾದಿಸಿದರು.

ಕೆರೆಗಳ ಭರ್ತಿಗೆ ಕ್ರಮ: ಡಿ.ಕೆ.ಶಿವಕುಮಾರ್

'ರಾಜ್ಯದ ಕೆರೆಗಳನ್ನು ತುಂಬಿಸುವ ಚಿಂತನೆ ಸರ್ಕಾರಕ್ಕಿದೆ. ತುಂಗಭದ್ರಾ ಜಲಾಶಯದ 24 ಟಿಎಂಸಿ ನೀರು ಉಳಿಸಿಕೊಳ್ಳಲು ನವಿಲೆ ಸಮಾನಾಂತರ ಜಲಾಶಯ ನಿರ್ಮಿಸಲು ಸರ್ಕಾರ ನಿರ್ಧರಿಸಿದೆ. ಆದರೆ, ಆಂಧ್ರ ಪ್ರದೇಶ, ತೆಲಂಗಾಣ ರಾಜ್ಯಗಳು ಒಪ್ಪುತ್ತಿಲ್ಲ. ತುಂಗಭದ್ರಾ ಮಂಡಳಿಗೂ ನಾವು ಮನವಿ ಮಾಡಿದ್ದೇವೆ. ನೀರು ಉಳಿಸಿ ರೈತರಿಗೆ ನೆರವಾಗಲು ನಾವು ಬದ್ಧ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹10 ಲಕ್ಷ ಕೋಟಿ ಹೂಡಿಕೆಗೆ ಒಡಂಬಡಿಕೆಯಾಗಿದೆ. ಹೂಡಿಕೆ ಹರಿದರೆ ಉದ್ಯೋಗ ಹೆಚ್ಚಲಿದೆ. ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಿದ್ದೇವೆ. ನಾವು ನುಡಿದಂತೆ ನಡೆದಿದ್ದೇವೆ. ಬಸವಣ್ಣನವರ ಮಾತಿನಂತೆ ನಡೆಯುತ್ತಿದ್ದೇವೆ' ಎಂದರು.

'ರಾಹುಲ್ ಗಾಂಧಿ ಅವರು ಭಾರತ್ ಜೋಡೊ ಯಾತ್ರೆ ಮೂಲಕ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಂಚರಿಸಿದ್ದರು. ಅಲ್ಲೆಲ್ಲ ಕಾಂಗ್ರೆಸ್‌ಗೆ ಹೆಚ್ಚಿನ ಸ್ಥಾನಗಳು ಸಿಕ್ಕಿವೆ. 6 ಸಂಸದರು ಗೆದ್ದಿದ್ದಾರೆ. ಅದಕ್ಕಾಗಿಯೇ ಸರ್ಕಾರ ಕಲ್ಯಾಣ ಕರ್ನಾಟಕ ಭಾಗಕ್ಕೆ ವಾರ್ಷಿಕ ₹5 ಸಾವಿರ ಕೋಟಿ ಅನುದಾನ ನೀಡುತ್ತಿದೆ' ಎಂದರು.

ಭೂಹಕ್ಕು: 'ಕೈ' 6ನೇ ಗ್ಯಾರಂಟಿ

ಒಂದನೇ ಪುಟದಿಂದ...

ಹಟ್ಟಿ, ಹಾಡಿ, ಕೇರಿ, ತಾಂಡಾ, ಗ್ರಾಮೀಣ ಪ್ರದೇಶದ ನಿವಾಸಿಗಳಿಗೆ ಸಮಾವೇಶದಲ್ಲಿ ಭೂಹಕ್ಕುಪತ್ರ ವಿತರಿಸಲಾಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಲಕ್ಷಾಂತರ ಜನರ ಸಮ್ಮುಖದಲ್ಲಿ ಸಾಂಕೇತಿಕವಾಗಿ ಆಯ್ದ 40 ಕುಟುಂಬಗಳಿಗೆ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರು ಹಕ್ಕು-ಪತ್ರಗಳನ್ನು ವಿತರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ '2015–16ರ ಅವಧಿಯಲ್ಲಿ ಹಕ್ಕುಪತ್ರ ನೀಡುವ ಸಂಬಂಧ ನಾನು ಸಮಿತಿ ರಚಿಸಿದ್ದೆ. ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಉಳುವವನೇ ಹೊಲದೊಡೆಯ ಎಂಬ ಕಾಯ್ದೆ ತಂದಂತೆ, ವಾಸಿಸುವವನೇ ಮನೆಯೊಡೆಯ ಎಂಬ ಧ್ಯೇಯದೊಂದಿಗೆ ಕಂದಾಯ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದ್ದೆ. ಅದರ ಫಲವೇ ಇಂದು 1.11 ಲಕ್ಷ ಮಂದಿಗೆ ಹಕ್ಕುಪತ್ರ ನೀಡಲಾಗಿದೆ. ಇನ್ನುಳಿದ 50 ಸಾವಿರ ಕುಟುಂಬಗಳಿಗೆ 6 ತಿಂಗಳಲ್ಲಿ ಹಕ್ಕುಪತ್ರ ನೀಡಲಾಗುವುದು' ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ನಗರ ಪ್ರದೇಶದ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ವಿತರಿಸುವ ಮೂಲಕ 7ನೇ ಗ್ಯಾರಂಟಿ ಯೋಜನೆಯನ್ನು ಶೀಘ್ರವೇ ಜಾರಿಗೊಳಿಸುತ್ತೇವೆ. ಜನರ ಖಾತೆಗಳನ್ನು ಸರಿಪಡಿಸಿ, ಅವರ ಸ್ವತ್ತಿಗೆ ದಾಖಲೆ ಸಿದ್ಧಪಡಿಸಿ, ವಾಸಸ್ಥಳವನ್ನು ಅಧಿಕೃತಗೊಳಿಸುವ ಕೆಲಸ ಈಗಾಗಲೇ ಆರಂಭಿಸಿದ್ದೇವೆ' ಎಂದರು. 'ಎಲ್ಲಿಯವರೆಗೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುತ್ತದೋ ಅಲ್ಲಿಯವರೆಗೆ ಗ್ಯಾರಂಟಿ ಯೋಜನೆಗಳು ಇದ್ದೇ ಇರುತ್ತವೆ' ಎಂದು ದೃಢವಾಗಿ ಹೇಳಿದರು.

ಬೆಳಿಗ್ಗೆ 11ರಿಂದ ಮಧ್ಯಾಹ್ನದವರೆಗೆ ನಡೆದ ಸಮಾವೇಶದಲ್ಲಿ ನಿರಂತರ ಮಳೆ ಸುರಿಯಿತು. 'ಮಳೆಯು ಪ್ರಗತಿ ಲಕ್ಷಣ' ಎಂದ ಕಾಂಗ್ರೆಸ್ ನಾಯಕರು ಹೇಳಿದರು. ಇದೇ ಸಂದರ್ಭದಲ್ಲಿ ಇಂದಿರಾ ಗಾಂಧಿ ಅವರ ಪ್ರತಿಮೆ ಅನಾವರಣಗೊಳಿಸಲಾಯಿತು. ಸರ್ಕಾರದ ಸಾಧನೆಗಳ ಕಿರುಹೊತ್ತಿಗೆ ಬಿಡುಗಡೆ ಮಾಡಲಾಯಿತು.

ಮುಖ್ಯಾಂಶಗಳು

- ಉತ್ಸಾಹ ತಗ್ಗಿಸದ ವರ್ಷಧಾರೆ
- ಸಚಿವರು, ಶಾಸಕರು ಭಾಗಿ
- ಜಿಲ್ಲೆಗಳಿಂದ ಹರಿದು ಬಂದ ಜನಸಾಗರ

2 ವರ್ಷದ ಸಾಧನೆ ಸಂಭ್ರಮಿಸಿದ ಸಮಾವೇಶ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ವರ್ಷಗಳಿಂದ ಬಾಕಿಯಿದ್ದ ಭೂ ಹಕ್ಕು-ಪತ್ರವನ್ನು ಪಡೆದ ಸಂಭ್ರಮ ಜನರ ಮೊಗದಲ್ಲಿದ್ದರೆ, ಅದನ್ನು ಅಚ್ಚುಕಟ್ಟಾಗಿ ವಿತರಿಸಿದ ಸಚಿವರ ಮುಖದಲ್ಲಿ ಸಂತೃಪ್ತಿ ಇತ್ತು. 'ನುಡಿದಂತೆ ನಡೆದಿದ್ದೇವೆ ಎಂದು ಸಾರಿ ಹೇಳಬೇಕಿಲ್ಲ. ಎಲ್ಲವೂ ನಿಮ್ಮೆಲ್ಲರ ಕಣ್ಣೆದುರೇ ಇದೆ' ಎಂದು ಹೇಳುವ ಸಾರ್ಥಕಭಾವ ನಾಯಕರ ಮಾತುಗಳಲ್ಲಿ ಇತ್ತು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಎರಡು ವರ್ಷ ಪೂರೈಸಿದ ಮತ್ತು ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಹಿನ್ನೆಲೆಯಲ್ಲಿ ಮಂಗಳವಾರ ಇಲ್ಲಿ ಆಯೋಜಿಸಲಾಗಿದ್ದ ಸಂಕಲ್ಪ ಸಮಾವೇಶವು ಹಲವು ಕಾರಣಗಳಿಂದ ಮಹತ್ವ ಪಡೆಯಿತು.

'ಮನೆ ಮಗ ಉಂಡರೆ ತಪ್ಪಿಲ್ಲ, ಮಳೆ ಬಂದರೆ ತಪ್ಪಿಲ್ಲ' ಎಂಬ ಗಾದೆ ನೆನಪಿಸಿಕೊಂಡ ಸಚಿವ ಎಚ್.ಕೆ.ಪಾಟೀಲ ಅವರು, 'ಮಳೆ ಎಂಬುದು ಪ್ರಗತಿ, ಅಭಿವೃದ್ಧಿಯ ಸಂಕೇತ. ಹೆಚ್ಚು ಮಳೆಯಾದಷ್ಟು ಸಂತೋಷ ಪಸರಿಸುತ್ತೆ' ಎಂದರು. ಇದಕ್ಕೂ ಮುನ್ನ ಸಚಿವ ಕೃಷ್ಣ ಬೈರೇಗೌಡರು, 'ಮಳೆಯು ನಮ್ಮ ಸಮ್ಮೇಳನಕ್ಕೆ ಅಕ್ಷರಶಃ ಹರಸಿದೆ. ಮಳೆಯಿಂದ ಅಲ್ಲಿ ಇಲ್ಲಿ ಸ್ವಲ್ಪ ತೊಂದರೆಯಾಗಿದೆ' ಎಂದರು.

ಹೊಸಪೇಟೆಯಲ್ಲಿ ಮಂಗಳವಾರ ಕಾಂಗ್ರೆಸ್ ಸಮರ್ಪಣೆ ಸಂಕಲ್ಪ ಸಮಾವೇಶವನ್ನು ಮಡಿಕೆಗೆ ಧಾನ್ಯ ಸುರಿಯುವ ಮೂಲಕ ಉದ್ಘಾಟಿಸಲಾಯಿತು. ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸಿದ್ದರಾಮಯ್ಯ, ರಣದೀಪ್‌ಸಿಂಗ್ ಸುರ್ಜೇವಾಲಾ ಭಾಗಿಯಾದರು –ಪ್ರಜಾವಾಣಿ ಚಿತ್ರ

ಮಳೆಯ ಕಾರಣದಿಂದ ಸಮಾವೇಶ ಸ್ಥಳಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಡವಾಗಿ ಬಂದರು. ಇಡೀ ಸಮಾವೇಶದ ನಿರೂಪಣೆಯನ್ನು ನಿರ್ವಹಿಸಿದ ಕೃಷ್ಣ ಬೈರೇಗೌಡರು, ಬಹುತೇಕ ಸಚಿವರಿಗೆ ಮತ್ತು ಶಾಸಕರಿಗೆ ಮಾತನಾಡಲು ಕಲ್ಪಿಸಿಕೊಟ್ಟರು ಅಲ್ಲದೇ ಸರ್ಕಾರದ ಸಾಧನೆಯನ್ನು ಒಂದೊಂದಾಗಿ ವಿವರಿಸಿದರು.ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರನ್ನು ಆಹ್ವಾನಿಸಿದ್ದು ಯಾಕೆ ಎಂಬ ಬಗ್ಗೆ ವಿವರ ನೀಡಿದ ಕೃಷ್ಣ ಬೈರೇಗೌಡರು, '2015ರಲ್ಲಿ ಹಾವೇರಿಗೆ ಬಂದಿದ್ದ ರಾಹುಲ್ ಗಾಂಧಿ ಅವರು ಹಕ್ಕುಪತ್ರಗಳ ಬಗ್ಗೆ ಮಾತು ನೀಡಿದ್ದರು. ಇಂದಿನ ಹಕ್ಕುಪತ್ರ ವಿತರಣೆಗೆ ಅವರು ಸಾಕ್ಷಿಯಾಗಲಿ ಮತ್ತು ಅವರಿಂದಲೇ ವಿತರಣೆಯಾಗಲಿ ಎಂಬ ಉದ್ದೇಶದಿಂದ ಅವರನ್ನು ಕರೆದಿದ್ದೇವೆ' ಎಂದು ತಿಳಿಸಿದರು.

ಶಿಸ್ತಿನ ಊಟ: ಬೆಳಿಗ್ಗೆ 10.30ರ ವೇಳೆಗೇ ಊಟ ಆರಂಭವಾಯಿತು. ಪುಲಾವ್, ಮೊಸರನ್ನ, ಮೈಸೂರು ಪಾಕ್ ಜನರ ಹೊಟ್ಟೆ ತುಂಬಿಸಿತು. ಪೆಂಡಾಲ್‌ನ ಎರಡೂ ಬದಿ ತಲಾ 20 ಕೌಂಟರ್‌ಗಳಲ್ಲಿ ಊಟ ಬಡಿಸುವ ವ್ಯವಸ್ಥೆ ಮಾಡಲಾಗಿತ್ತು. ನೂಕುನುಗ್ಗಲಿಗೆ ಅವಕಾಶ ಇರಲಿಲ್ಲ. ಮಳೆ ಸುರಿದರೂ ಊಟಕ್ಕೆ ತೊಂದರೆ ಆಗಲಿಲ್ಲ.

ಸಮಾವೇಶದಲ್ಲಿ 3 ಲಕ್ಷ ಮಂದಿ ಪಾಲ್ಗೊಳ್ಳುವರು ಎಂಬ ನಿರೀಕ್ಷೆಯಿತ್ತು. ವೇದಿಕೆಯ ಒಳಗೆ ಮತ್ತು ಅಕ್ಕಪಕ್ಕದಲ್ಲಿ 1.5 ಲಕ್ಷಕ್ಕೂ ಹೆಚ್ಚು ಜನರಿದ್ದರು ಹಾಗೂ 50 ಸಾವಿರಕ್ಕೂ ಹೆಚ್ಚು ಮಂದಿ ಸಂಚಾರ ದಟ್ಟಣೆಯಲ್ಲಿ ಸಿಲುಕಿದ್ದರು. ಹೀಗಾಗಿ ಅವರಿಗೆ ಮೈದಾನದ ಬಳಿ ಬೇಗನೇ ಬರಲು ಸಾಧ್ಯವಾಗಲಿಲ್ಲ.

ಸಮಾವೇಶ: 14 ಕಿ.ಮೀ.ಸಂಚಾರ ದಟ್ಟಣೆ

ಹೊಸಪೇಟೆ (ವಿಜಯನಗರ): ಸಮರ್ಪಣೆ ಸಂಕಲ್ಪಕ್ಕೆ ಮಂಗಳವಾರ ರಾಜ್ಯದ ಮೂಲೆ ಮೂಲೆಗಳಿಂದ ಸಾವಿರಾರು ವಾಹನಗಳು ಬಂದ ಕಾರಣ ನಗರದ ನಾಲ್ಕೂ ದಿಕ್ಕುಗಳಲ್ಲೂ 12ರಿಂದ 14 ಕಿ.ಮೀ. ವರೆಗೆ ಸಂಚಾರ ದಟ್ಟಣೆಯಾಯಿತು.

ಹೊಸಪೇಟೆಯಿಂದ ಬೆಂಗಳೂರು ರಸ್ತೆಯ ಮರಿಯಮ್ಮನಹಳ್ಳಿಯ-ವರೆಗೆ, ಬಳ್ಳಾರಿ ರಸ್ತೆಯ ಪಾಪಿ-ನಾಯನಕಹಳ್ಳಿವರೆಗೆ, ಹಂಪಿ ರಸ್ತೆಯಲ್ಲಿ ಕಮಲಾಪುರವರೆಗೆ, ಕೊಪ್ಪಳ ರಸ್ತೆಯಲ್ಲಿ ಹೊಸಹಳ್ಳಿ ಟೋಲ್‌ಗೇಟ್‌ವರೆಗೆ, ಸಂಡೂರು ರಸ್ತೆಯಲ್ಲಿ ಕಲ್ಲಹಳ್ಳಿ, ರಾಜಾಪುರ-ದವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬಳ್ಳಾರಿ ಬೈಪಾಸ್ ರಸ್ತೆಯಿಂದ ನಗರದ ಬಸ್ ನಿಲ್ದಾಣಕ್ಕೆ ಕೇವಲ ಮೂರು ಕಿ.ಮೀ. ಇದೆ, ವಾಹನಗಳು ಇಷ್ಟು ದೂರ ಕ್ರಮಿಸಲು ಮೂರು ಗಂಟೆ ತೆಗೆದುಕೊಂಡವು.

ಸಾಲೂರು ಮಠದ ಹಿರಿಯ ಶ್ರೀ ಗುರುಸ್ವಾಮಿ ಲಿಂಗೈಕ್ಯ

ಪ್ರಜಾವಾಣಿ ವಾರ್ತೆ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಮಲೆ ಮಹದೇಶ್ವರ ಬೆಟ್ಟದ ಸಾಲೂರು ಮಠದ ಹಿರಿಯ ಶ್ರೀಗಳಾದ ಗುರು ಸ್ವಾಮೀಜಿ (69) ಮಂಗಳವಾರ ಲಿಂಗೈಕ್ಯರಾದರು. ಅವರು ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ಅಂತ್ಯಕ್ರಿಯೆ ಸಾಲೂರು ಮಠದ ಆವರಣದಲ್ಲಿ ಸಂಜೆ ನಡೆಯಿತು.

ಗುರು ಸ್ವಾಮೀಜಿ, ಸಾಲೂರು ಮಠ

ಹನೂರು ತಾಲ್ಲೂಕಿನ ಜಿ.ಕೆ ಹೊಸೂರು ಗ್ರಾಮದಲ್ಲಿ 1956, ಆ.2ರಂದು ಪೂರ್ವಾಶ್ರಮದ ರುದ್ರಪ್ಪ ಹಾಗೂ ಪುಟ್ಟಮಾದಮ್ಮ ದಂಪತಿಯ ಪುತ್ರರಾಗಿ ಜನಿಸಿದ ಗುರು ಸ್ವಾಮೀಜಿ 1995ರಲ್ಲಿ ಸಾಲೂರು ಮಠದ ಪೀಠಾಧ್ಯಕ್ಷರಾದರು.

ಮಠದಲ್ಲಿ ಭಕ್ತರಿಗೆ ದಾಸೋಹದ ವ್ಯವಸ್ಥೆ, ಬಡ ಮಕ್ಕಳಿಗೆ ಉಚಿತ ಶಾಲೆ ಹಾಗೂ ವಸತಿ ನಿಲಯಗಳನ್ನು ಆರಂಭಿಸಿದ್ದರು. ಹನೂರು ತಾಲ್ಲೂಕಿನಲ್ಲಿ ವೃದ್ಧಾಶ್ರಮ ತೆರೆದಿದ್ದರು.

ರೇಣುಕಸ್ವಾಮಿ ಪ್ರಕರಣ: ಜು.10ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್ ತೂಗುದೀಪ್, ನಟಿ ಪವಿತ್ರಾಗೌಡ ಸೇರಿ 16 ಆರೋಪಿಗಳು ಇಲ್ಲಿನ 57ನೇ ಎಸಿಎಂಎಂ ನ್ಯಾಯಾಲಯಕ್ಕೆ ಮಂಗಳವಾರ ವಿಚಾರಣೆಗೆ ಹಾಜರಾಗಿದ್ದರು. ಪ್ರಕರಣದ ಮೂರನೇ ಆರೋಪಿ ಕೋರ್ಟ್‌ಗೆ ಗೈರಾಗಿದ್ದರು.

ಆರೋಪಿಗಳ ವಿಚಾರಣೆ ನಡೆಸಿದ ನ್ಯಾಯಾಧೀಶರು, ಜುಲೈ 10ಕ್ಕೆ ವಿಚಾರಣೆ ಮುಂದೂಡಿದರು. ಅಂದು ಎಲ್ಲ ಆರೋಪಿಗಳೂ ನ್ಯಾಯಾಲಯಕ್ಕೆ ಹಾಜರಾಗುವಂತೆ ಆದೇಶಿಸಿದರು.

ಮಂಗಳವಾರ ಬೆಳಿಗ್ಗೆ 11ಕ್ಕೆ ವಿಚಾರಣೆ ನಿಗದಿ ಆಗಿತ್ತು. ಪ್ರಕರಣದ ಸಂಖ್ಯೆಯನ್ನು ಕೋರ್ಟ್ ಸಿಬ್ಬಂದಿ ಕರೆದು ಆರೋಪಿಗಳ ಹಾಜರಾತಿ ಖಚಿತಪಡಿಸಿಕೊಂಡರು. ವಿಚಾರಣೆ ವೇಳೆ ಒಂದನೇ ಆರೋಪಿ ಪವಿತ್ರಾಗೌಡ ಅವರಿಂದ ದರ್ಶನ್ ದೂರ ನಿಂತಿದ್ದರು. ಆಗ ನ್ಯಾಯಾಧೀಶರು, ಒಂದನೇ ಆರೋಪಿ ಪಕ್ಕ ನಿಲ್ಲುವಂತೆ ದರ್ಶನ್‌ಗೆ ಸೂಚಿಸಿದರು.

'ನಿಮ್ಮ ವಿರುದ್ಧ ಐಪಿಸಿ ಸೆಕ್ಷನ್‌ಗಳಾದ 302, 34, 120(ಬಿ), 355, 143, 147ರ ಅಡಿ ಪ್ರಕರಣ ದಾಖಲಾಗಿದ್ದು, ಇದನ್ನು ಒಪ್ಪಿಕೊಳ್ಳುವಿರಾ' ಎಂದು ನ್ಯಾಯಾಧೀಶರು ಕೇಳಿದರು. 'ನಮ್ಮ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ' ಎಂದು ಆರೋಪಿಗಳು ಹೇಳಿದರು. ನಂತರ, ನ್ಯಾಯಾಧೀಶರು ವಿಚಾರಣೆ ಮುಂದೂಡಿದರು.

ದರ್ಶನ್

ಪವಿತ್ರಾಗೌಡ

ಕೋರ್ಟ್ ಹಾಲ್‌ನಿಂದ ಹೊರಗೆ ಬರುತ್ತಿರುವಾಗ ಪವಿತ್ರಾ ಅವರು ದರ್ಶನ್ ಅವರನ್ನು ಮಾತನಾಡಿಸುವ ಪ್ರಯತ್ನ ಮಾಡಿದರು ಎಂದು ಗೊತ್ತಾಗಿದೆ.

ಏಪ್ರಿಲ್ 8ರಂದು ಇದೇ ನ್ಯಾಯಾಲಯದಲ್ಲಿ ನಡೆದಿದ್ದ ವಿಚಾರಣೆಗೆ ದರ್ಶನ್ ಅವರು ಗೈರಾಗಿದ್ದರು. ಅಸಮಾಧಾನ ವ್ಯಕ್ತಪಡಿಸಿದ್ದ ನ್ಯಾಯಾಲಯವು ಆರೋಪಿಗಳು ಕಡ್ಡಾಯವಾಗಿ ವಿಚಾರಣೆಗೆ ಹಾಜರಾಗಬೇಕು ಎಂದು ದರ್ಶನ್ ಪರ ವಕೀಲರಿಗೆ ಸೂಚಿಸಿತ್ತು.

2024ರ ಜೂನ್ 8ರಂದು ಪಟ್ಟಣಗೆರೆಯ ಶೆಡ್‌ನಲ್ಲಿ ರೇಣುಕಸ್ವಾಮಿ ಅವರ ಕೊಲೆ ನಡೆದಿತ್ತು. ಕೊಲೆಯ ಆರೋಪದ ಮೇರೆಗೆ ದರ್ಶನ್, ಪವಿತ್ರಾಗೌಡ ಅವರನ್ನು ಜೂನ್ 11ರಂದು ಪೊಲೀಸರು ಬಂಧಿಸಿದ್ದರು.

ಒಂದು ಉಪ ನೋಂದಣಿ ಕಚೇರಿಗೆ ಮಂಗಳವಾರ ರಜೆ

ಬೆಂಗಳೂರು: ಸರದಿಯಂತೆ 2ನೇ ಮತ್ತು 4ನೇ ಶನಿವಾರ ಹಾಗೂ ಭಾನುವಾರದ ರಜಾ ದಿನಗಳಂದು ಕಾರ್ಯನಿರ್ವಹಿಸುವ ಉಪ ನೋಂದಣಾಧಿಕಾರಿ ಕಚೇರಿಗಳಿಗೆ ಮಂಗಳವಾರ ರಜಾ ದಿನವಾಗಿರುತ್ತದೆ.

ರಾಜ್ಯದ ಪ್ರತಿಯೊಂದು ಜಿಲ್ಲಾ ನೋಂದಣಿ ಕಚೇರಿ ವ್ಯಾಪ್ತಿಯಲ್ಲಿನ ಉಪ ನೋಂದಣಾಧಿಕಾರಿ ಕಚೇರಿಗಳು ಸರದಿಯಂತೆ 2ನೇ ಮತ್ತು 4ನೇ ಶನಿವಾರ ಹಾಗೂ ಭಾನುವಾರದ ರಜಾ ದಿನಗಳಂದು ಕಾರ್ಯನಿರ್ವಹಿಸಬೇಕು. ಯಾವ ಕಚೇರಿ ಆಯಾ ವಾರದ ರಜಾ ದಿನದಂದು ತೆರೆದಿರುತ್ತದೆಯೋ ಆ ಕಚೇರಿಗೆ ಮುಂದಿನ ಮಂಗಳವಾರ ರಜೆ ಇರುತ್ತದೆ ಎಂದು ಕಂದಾಯ ಇಲಾಖೆ ಹೊರಡಿಸಿದ ಆದೇಶದಲ್ಲಿ ವಿವರಿಸಲಾಗಿದೆ.

ಪ್ರತಿ ಜಿಲ್ಲಾ ನೋಂದಣಿ ಕಚೇರಿಯ ವ್ಯಾಪ್ತಿಯಲ್ಲಿನ ಸ್ವತ್ತುಗಳನ್ನು ಆ ವ್ಯಾಪ್ತಿಯ ಯಾವುದೇ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿ ಮಾಡಿಸಬಹುದು ಎಂಬ ನಿಯಮ ಜಾರಿಗೊಂಡ ಬಳಿಕ ಸರದಿಯಂತೆ ಒಂದು ಉಪ ನೋಂದಣಾಧಿಕಾರಿ ಕಚೇರಿ ರಜಾ ದಿನಗಳಲ್ಲೂ ಕಾರ್ಯನಿರ್ವಹಿಸುತ್ತವೆ. ಇದರಿಂದ ವರ್ಷದ 365 ದಿನವೂ ನೋಂದಣಿಗೆ ಅವಕಾಶ ಸಿಕ್ಕಿದೆ.

ಎಸ್‌ಕೆಡಿಆರ್‌ಡಿಪಿ: ಐಎಸ್‌ಒ ಪ್ರಮಾಣಪತ್ರ ಮೇಲ್ದರ್ಜೆಗೆ

ಧರ್ಮಸ್ಥಳದ ಅಮೃತವರ್ಷಿಣಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಐಎಸ್‌ಒ ಸಂಸ್ಥೆಯ ಜಿ.ಎಸ್. ಭಾರ್ಗವ್ ಅವರು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರಿಗೆ ಪ್ರಮಾಣಪತ್ರವನ್ನು ಹಸ್ತಾಂತರಿಸಿದರು

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಲಂಡನ್‌ನ ನ್ಯಾಷನಲ್ ಕ್ವಾಲಿಟಿ ಅಶ್ಯೂರೆನ್ಸ್ (ಎನ್‌ಕ್ಯೂಎ) ಸಂಸ್ಥೆಯು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ (ಎಸ್‌ಕೆಡಿಆರ್‌ಡಿಪಿ) 2024ರಲ್ಲಿ ನೀಡಿದ್ದ ಐಎಸ್‌ಒ ಪ್ರಮಾಣಪತ್ರವನ್ನು ಈಗ 'ಐಎಸ್‌ಒ 27001–2022' ಆಗಿ ಮೇಲ್ದರ್ಜೆಗೆ ಏರಿಸಿದೆ.

ಸಂಸ್ಥೆಯ ಕಾರ್ಯವೈಖರಿ, ಪಾರದರ್ಶಕತೆ, ತಂತ್ರಜ್ಞಾನ ಬಳಕೆ, ಸುರಕ್ಷತೆ, ಬದ್ಧತೆ, ಬ್ಯಾಂಕ್ ಮೂಲಕ ನಡೆಸುವ ವ್ಯವಹಾರಗಳ ದಾಖಲಾತಿ ನಿರ್ವಹಣೆ ಮೊದಲಾದ 109 ಅಂಶಗಳನ್ನು ಗಮನಿಸಿ ಪ್ರಮಾಣಪತ್ರವನ್ನು ಮೇಲ್ದರ್ಜೆಗೆ ಏರಿಸಲಾಗಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಧರ್ಮಸ್ಥಳದ ಅಮೃತವರ್ಷಿಣಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿ.ಎಸ್. ಭಾರ್ಗವ್ ಅವರು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ಪ್ರಮಾಣಪತ್ರವನ್ನು ಹಸ್ತಾಂತರಿಸಿದರು. ಭಾರತದಲ್ಲಿ ಐಎಸ್‌ಒ 27001–2022 ಪ್ರಮಾಣಪತ್ರ ಪಡೆದ ಚಾರಿಟಬಲ್ ಟ್ರಸ್ಟ್‌ಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೊದಲ ಸಂಸ್ಥೆಯಾಗಿದೆ.

ಸಂಕ್ಷಿಪ್ತ ಸುದ್ದಿ

ಪದವಿ ಕೋರ್ಸ್‌ಗಳ ಶುಲ್ಕ ಶೇ 5ರಷ್ಟು ಹೆಚ್ಚಳ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜುಗಳಲ್ಲಿ ವಿವಿಧ ಕೋರ್ಸ್‌ಗಳ ಶುಲ್ಕವನ್ನು 2025–26ನೇ ಸಾಲಿಗೆ ಶೇ 5ರಷ್ಟು ಹೆಚ್ಚಳ ಮಾಡಲು ಕಾಲೇಜು ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ಕಲಾ, ವಾಣಿಜ್ಯ, ವಿಜ್ಞಾನ ಮತ್ತು ಕಾನೂನು ಕೋರ್ಸ್‌ಗಳಿಗೆ ಪ್ರಾಂಶುಪಾಲರು ತಮ್ಮ ಕಾಲೇಜುಗಳ ಮಟ್ಟದಲ್ಲಿ ಶುಲ್ಕವನ್ನು ಹೆಚ್ಚಿಸಿಕೊಳ್ಳಬಹುದು. ಹೆಚ್ಚಳದಿಂದ ಸಂಗ್ರಹವಾದ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡದೆ, ಕಾಲೇಜುಗಳ ಖಾತೆಯಲ್ಲೇ ಇಟ್ಟುಕೊಂಡು ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ.

'ಸರ್ಕಾರಿ ಕಾಲೇಜುಗಳಲ್ಲಿ ಕೋವಿಡ್ ಆರಂಭಕ್ಕೂ ಮೊದಲು ಹೆಚ್ಚಳ ಮಾಡಲಾಗಿತ್ತು. ಐದು ವರ್ಷಗಳ ನಂತರ ಶೇ 5ರಷ್ಟು ಹೆಚ್ಚಳಕ್ಕೆ ಅನುಮತಿ ನೀಡಲಾಗಿದೆ. ಶೇ 5ರಷ್ಟು ಹೆಚ್ಚಳ ಮಾಡಿದರೂ ಒಟ್ಟಾರೆ ಶುಲ್ಕ ₹500 ಮೀರುವುದಿಲ್ಲ' ಎಂದು ಕಾಲೇಜು ಶಿಕ್ಷಣ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಸರ್ಕಾರವು ಆರೋಗ್ಯ ಪರೀಕ್ಷೆಗಾಗಿ ಪ್ರತಿ ವಿದ್ಯಾರ್ಥಿಯಿಂದ ₹32 ಸಂಗ್ರಹಿಸುತ್ತಿದ್ದು, ಕಡ್ಡಾಯವಾಗಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗೆ ಸೂಚಿಸಲಾಗಿದೆ.

ಆಕಾಂಕ್ಷ ಆತ್ಮಹತ್ಯೆ ಆರೋಪಿ ಬಂಧನ

ಉಜಿರೆ (ದಕ್ಷಿಣ ಕನ್ನಡ): ಆಕಾಂಕ್ಷ ಎಸ್. ನಾಯರ್ ಆತ್ಮಹತ್ಯೆಗೆ ಕುಮ್ಮಕ್ಕು ನೀಡಿದ ಆರೋಪದಲ್ಲಿ ಕೇರಳ ದ ಪ್ರೊಫೆಸರ್ ಬಿಜಿಲ್ ಸಿ. ಮ್ಯಾಥ್ಯೂ ಅವರನ್ನು ಸೋಮವಾರ ರಾತ್ರಿ ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಆಕಾಂಕ್ಷ ಅವರ ಮೃತದೇಹ ಬುಧವಾರ ಧರ್ಮಸ್ಥಳ ತಲುಪಲಿದ್ದು, ಬೊಳಿಯಾರ್‌ನಲ್ಲಿರುವ ಅವರ ಮನೆಯ ಬಳಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಆಕಾಂಕ್ಷ ಅವರ ಶವ ಸಾಗಿಸಲು ಅವರು ಕೆಲಸ ಮಾಡುತ್ತಿದ್ದ ಕಂಪನಿಯು ದೆಹಲಿ ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ವಿಮಾನ ವ್ಯವಸ್ಥೆ ಮಾಡಿದೆ. ಬೆಂಗಳೂರಿನಿಂದ ಆಂಬುಲೆನ್ಸ್ ಮೂಲಕ ಬೊಳಿಯಾರ್‌ಗೆ ಬುಧವಾರ ಶವ ತರಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಐಟಿ ಮಾರಿಷಸ್ ಮತ್ತು ಅಮೆರಿಕದ ಬಿಂಗ್‌ಹ್ಯಾಮ್ಟನ್ ವಿವಿ ನಡುವೆ ಒಪ್ಪಂದ

ಚೆನ್ನೈ: ಪರಿವರ್ತನಾತ್ಮಕ ಶಿಕ್ಷಣ ಮತ್ತು ಖಂಡಾಂತರ ಅವಕಾಶ (ಟ್ರಾನ್ಸ್ಫ-ರ್ಮೇಟಿವ್ ಎಜುಕೇಷನ್ ಮತ್ತು ಕ್ರಾಸ್–ಕಾಂಟಿನೆಂಟಲ್ ಆಪರ್ಚುನಿಟೀಸ್)ಗಳನ್ನು ನೀಡುವ ಮೂಲಕ ಭವಿಷ್ಯದ ನಾಯಕರನ್ನು ಸಬಲೀಕರಣಗೊಳಿಸುವ ಒಪ್ಪಂದಕ್ಕೆ ವಿಐಟಿ ಮಾರಿಷಸ್ ಹಾಗೂ ಅಮೆರಿಕದ ಬಿಂಗ್‌ಹ್ಯಾಮ್ಟನ್ ವಿಶ್ವವಿದ್ಯಾಲಯ ಸಹಿ ಹಾಕಿವೆ.

ಇತ್ತೀಚೆಗೆ ಬಿಂಗ್‌ಹ್ಯಾಮ್ಟನ್ ಕ್ಯಾಂಪಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಐಟಿಯ ಸ್ಥಾಪಕ ಮತ್ತು ಕುಲಪತಿ ಡಾ. ಜಿ. ವಿಶ್ವನಾಥನ್ ಮತ್ತು ನ್ಯೂಯಾರ್ಕ್‌ನ ಬಿಂಗ್‌ಹ್ಯಾಮ್ಟನ್ ವಿವಿ (SUNY) ಅಧ್ಯಕ್ಷ ಡಾ. ಹಾರ್ವೆ ಜಿ. ಸ್ಟೆಂಜರ್ ಅವರು ಒಪ್ಪಂದ ಪತ್ರಕ್ಕೆ ಸಹಿ ಹಾಕಿದರು.

ನಂತರ ಮಾತನಾಡಿದ ಡಾ. ಜಿ. ವಿಶ್ವನಾಥನ್, ಈ ಕಾರ್ಯತಂತ್ರದ ಒಪ್ಪಂದವು 'ಎರಡು ಸಂಸ್ಥೆಗಳ ನಡುವಿನ ದೀರ್ಘಕಾಲೀನ ಸಹಯೋಗವನ್ನು ಗುರುತಿಸುತ್ತದೆ. ಅಲ್ಲದೇ ಇದು ವಿದ್ಯಾರ್ಥಿಗಳಿಗೆ ಅಮೆರಿಕದ ಪ್ರಮುಖ ಸಂಸ್ಥೆಗಳಲ್ಲಿ ವಿವಿಧ ಶೈಕ್ಷಣಿಕ ಅವಕಾಶಗಳನ್ನು ಹುಡುಕಲು ದಾರಿ ಮಾಡಿಕೊಡುತ್ತದೆ' ಎಂದು ಹೇಳಿದರು.

ವಿಐಟಿ ಮಾರಿಷಸ್ ಮತ್ತು ಬಿಂಗ್‌ಹ್ಯಾಮ್ಟನ್ ವಿವಿ ನಡುವಿನ ಒಪ್ಪಂದ ಕಾರ್ಯಕ್ರಮದಲ್ಲಿ ವಿಐಟಿ ಕುಲಪತಿ ಡಾ. ಜಿ. ವಿಶ್ವನಾಥನ್, ಬಿಂಗ್‌ಹ್ಯಾಮ್ಟನ್ ವಿವಿ ಅಧ್ಯಕ್ಷ ಡಾ. ಹಾರ್ವೆ ಜಿ. ಸ್ಟೆಂಜರ್ ಹಾಗೂ ನೊಬೆಲ್ ಪ್ರಶಸ್ತಿ ವಿಜೇತ ಡಾ. ಎಂ. ಸ್ಟಾನ್ಲಿ ವಿಟಿಂಗ್‌ಹ್ಯಾಮ್ ಹಾಗೂ ಎರಡೂ ಸಂಸ್ಥೆಗಳ ಪ್ರಮುಖರು ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಸಮುದಾಯದ ವಿದ್ಯಾರ್ಥಿಗಳ ಕಲಿಕೆಗೆ ಹಾಗೂ ಜಾಗತಿಕವಾಗಿ ವಿಸ್ತಾರಗೊಳಿಸುವ ಉದ್ದೇಶದಿಂದ ಮಾರಿಷಸ್‌ನಲ್ಲಿ ವಿಐಟಿ ಅನ್ನು ಪ್ರಾರಂಭಿಸಲಾಯಿತು. ಮಾರಿಷಸ್, ಏಷ್ಯಾ, ಯುರೋಪ್ ಮತ್ತು ಆಫ್ರಿಕಾ ದೇಶದ ವಿದ್ಯಾರ್ಥಿಗಳಿಗೆ ಕೇಂದ್ರವಾಗಿ ನಮ್ಮ ವಿಐಟಿ ಮಾರಿಷಸ್ ಕಾರ್ಯನಿರ್ವಹಿಸಲಿದೆ.

ಮಾರಿಷಸ್‌ನ ಉನ್ನತ ಶಿಕ್ಷಣ ಆಯೋಗ (ಎಚ್‌ಇಸಿ)ದಿಂದ ವಿಐಟಿ ಮಾರಿಷಸ್ ಅನುಮೋದಿಸಲ್ಪಟ್ಟಿದ್ದು, ಕಂಪ್ಯೂಟರ್ ಎಂಜಿನಿಯರಿಂಗ್, ಸಿವಿಲ್ ಎಂಜಿನಿಯರಿಂಗ್, ಎಐ ಕಂಪ್ಯೂಟರ್ ಎಂಜಿನಿಯರಿಂಗ್ ಮತ್ತು ಡೇಟಾ ಸೈನ್ಸ್‌ನೊಂದಿಗೆ ಕಂಪ್ಯೂಟರ್ ಎಂಜಿನಿಯರಿಂಗ್‌ನಲ್ಲಿ ಪದವಿಗಳನ್ನು ನೀಡಲಿದೆ. ಜುಲೈ 2025ರಿಂದ ತರಗತಿಗಳು ಪ್ರಾರಂಭವಾಗಲಿವೆ. ಇಲ್ಲಿನ ವಿದ್ಯಾರ್ಥಿಗಳು ವಾರಕ್ಕೆ 20 ಗಂಟೆಗಳ ಅರೆಕಾಲಿಕ ಕೆಲಸ ಮತ್ತು ಮೂರು ವರ್ಷಗಳ ಕೆಲಸದ ಪರವಾನಗಿ ಪಡೆಯಲು ಅರ್ಹರಾಗಿತ್ತಾರೆ. ಇದರೊಟ್ಟಿಗೆ ನಮ್ಮ ವಿವಿ ಪ್ರಮುಖ ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಹಯೋಗ ಹೊಂದಿದ್ದು ವಿದ್ಯಾರ್ಥಿಗಳಿಗೆ ಅತ್ಯುತ್ತಮ ಉದ್ಯೋಗಾವಕಾಶಗಳನ್ನು ಒದಗಿಸಲಿದೆ ಎಂದು ವಿವರಿಸಿದರು.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ಊರ ಹಬ್ಬದಲ್ಲಿ ಪಾಲ್ಗೊಳ್ಳುವುದಕ್ಕೆ ನಿರ್ಬಂಧ • ಪರಿಶಿಷ್ಟನಿಂದಲೇ ಗ್ರಾಮದಲ್ಲಿ ಡಂಗೂರ

ಪರಿಶಿಷ್ಟರಿಗೆ ಬಹಿಷ್ಕಾರ; ದಾಖಲಾಗದ ಪ್ರಕರಣ

ಪ್ರಜಾವಾಣಿ ವಾರ್ತೆ

ಹಾರೋಹಳ್ಳಿ (ರಾಮನಗರ): ಗ್ರಾಮದಲ್ಲಿ ನಡೆಯುವ ಮಾರಮ್ಮನ ಹಬ್ಬದಲ್ಲಿ ಭಾಗವಹಿಸಲು ಅವಕಾಶ ನೀಡುವಂತೆ ಕೇಳಿದ ತಾಲ್ಲೂಕಿನ ಬನವಾಸಿ ಗ್ರಾಮದ ಪರಿಶಿಷ್ಟ ಜಾತಿಯವರಿಗೆ ಒಕ್ಕಲಿಗ ಸಮುದಾಯದವರು ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಬಹಿಷ್ಕಾರ ಹಾಕಿದ ಬಗ್ಗೆ ಎರಡು ದಿನದ ಹಿಂದೆ ಗ್ರಾಮದಲ್ಲಿ ದಲಿತ ವ್ಯಕ್ತಿಯಿಂದಲೇ ಡಂಗೂರ ಸಾರಿಸಿದ್ದಾರೆ.

ಬಹಿಷ್ಕಾರ ಹಾಕಿದ ಒಕ್ಕಲಿಗ ಸಮುದಾಯದ ಏಳು ಮಂದಿ ವಿರುದ್ಧ ಪರಿಶಿಷ್ಟ ಸಮುದಾಯದವರು ಹಾರೋಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರು ನೀಡಿ ಎರಡು ದಿನವಾದರೂ ಇನ್ನೂ ಪ್ರಕರಣ ದಾಖಲಾಗಿಲ್ಲ.

ಗ್ರಾಮದ ಅಂಗಡಿಗಳಲ್ಲಿ ಪರಿಶಿಷ್ಟರಿಗೆ ದಿನಸಿ ಸಾಮಗ್ರಿ ಕೊಡಬಾರದು. ಡೇರಿಗೆ ಹಾಲು ಹಾಕಿಸಿಕೊಳ್ಳಬಾರದು ಮತ್ತು ನೀಡಬಾರದು. ಕುಡಿಯುವ ನೀರು ಮುಟ್ಟಲು ಬಿಡಬಾರದು ಹಾಗೂ ಕೃಷಿ ಕೆಲಸಗಳಿಗೆ ಪರಿಶಿಷ್ಟ ಸಮುದಾಯದವರನ್ನು ಕರೆಯಬಾರದು ಎಂದು ಒಕ್ಕಲಿಗ ಸಮುದಾಯದವರು ಷರತ್ತು ಹಾಕಿದ್ದರು. ಉಲ್ಲಂಘಿಸಿದವರು ₹10 ಸಾವಿರ ದಂಡ ಕಟ್ಟಬೇಕು ಎಂದು ದಲಿತ ವ್ಯಕ್ತಿಯಿಂದಲೇ ಗ್ರಾಮದಲ್ಲಿ ಡಂಗೂರ ಸಾರಿಸಿದ್ದರು.

ಹಾರೋಹಳ್ಳಿ ತಾಲ್ಲೂಕಿನ ಬನವಾಸಿ ಗ್ರಾಮಕ್ಕೆ ಸಮಾಜ ಕಲ್ಯಾಣ ಇಲಾಖೆಯ ಕನಕಪುರ ತಾಲ್ಲೂಕಿನ ಸಹಾಯಕ ನಿರ್ದೇಶಕ ಜೈಪ್ರಕಾಶ್ ಮಂಗಳವಾರ ಭೇಟಿ ನೀಡಿ, ಗ್ರಾಮಸ್ಥರು ಹಾಗೂ ದಲಿತ ಮುಖಂಡರೊಂದಿಗೆ ಸಭೆ ನಡೆಸಿದರು

ಮೇ 18ರಂದು ನಡೆದಿದ್ದ ಘಟನೆ ಕುರಿತು ತಹಶೀಲ್ದಾರ್ ಮತ್ತು ಪೊಲೀಸರಿಗೆ ಪರಿಶಿಷ್ಟ ಸಮುದಾಯದವರು ದೂರು ನೀಡಿ ಎರಡು ದಿನವಾದರೂ ಪ್ರಕರಣ ದಾಖಲಾಗಿಲ್ಲ. ವಿಷಯ ತಿಳಿದು ಗ್ರಾಮಕ್ಕೆ ದಲಿತ ಮುಖಂಡರು ಮಂಗಳವಾರ ಭೇಟಿ ನೀಡುತ್ತಿದ್ದಂತೆಯೇ ಸಮಾಜ ಕಲ್ಯಾಣ ಇಲಾಖೆಯ ಕನಕಪುರ ತಾಲ್ಲೂಕಿನ ಸಹಾಯಕ ನಿರ್ದೇಶಕರು ಸಹ ಗ್ರಾಮಕ್ಕೆ ದೌಡಾಯಿಸಿ ಸಂತ್ರಸ್ತರ ಅಹವಾಲು ಆಲಿಸಿದ್ದಾರೆ.

ಏನಿದು ಘಟನೆ?: ಗ್ರಾಮದಲ್ಲಿ ಮಾರಮ್ಮನ ಹಬ್ಬ ಆಚರಣೆ ಕುರಿತು ಬನವಾಸಿ, ಜುಟ್ಟೇಗೌಡನವಲಸೆ ಹಾಗೂ ವಡೇರಹಳ್ಳಿ ಗ್ರಾಮದ ಮುಖಂಡರ ಸಭೆ ನಡೆದಿತ್ತು. ಸಭೆಯಲ್ಲಿ ಭಾಗವಹಿಸಿದ್ದ ಒಕ್ಕಲಿಗ ಸಮುದಾಯದ ಮುಖಂಡರು, 'ಹಿಂದಿನಿಂದ ನಡೆದುಕೊಂಡು ಬಂದಿರುವಂತೆ ದಲಿತರು ಹಬ್ಬದಲ್ಲಿ ಭಾಗವಹಿಸಬಾರದು' ಎಂದು ತಾಕೀತು ಮಾಡಿದ್ದರು.

ಅದಕ್ಕೆ ಆಕ್ಷೇಪಿಸಿದ್ದ ಪರಿಶಿಷ್ಟರು, 'ಹೀಗೆ ಹೇಳುವುದು ಕಾನೂನಿಗೆ ವಿರುದ್ಧವಾಗುತ್ತದೆ. ನಾವು ಸಹ ನಿಮ್ಮೊಂದಿಗೆ ಸಾಮರಸ್ಯದಿಂದ ಹಬ್ಬದಲ್ಲಿ ಪಾಲ್ಗೊಳ್ಳಲು ಅವಕಾಶ ಕೊಡಿ' ಎಂದಿದ್ದರು. ಇದರಿಂದ ಕೆರಳಿದ ಒಕ್ಕಲಿಗರು ಏಕವಚನದಲ್ಲಿ ನಿಂದಿಸಿದ್ದರು. ಇದರಿಂದ ನೊಂದ ದಲಿತರು ಸಭೆಯಿಂದ ಹೊರನಡೆದಿದ್ದರು.

ಸಭೆ ಮುಗಿದ ಬಳಿಕ ಮೂರು ಗ್ರಾಮಗಳ ಸವರ್ಣೀಯ ಮುಖಂಡರು, ಬನವಾಸಿಯ 12 ದಲಿತ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ್ದರು. ಬಳಿಕ ದಲಿತರು ಅದೇ ಗ್ರಾಮದ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ರವಿಕುಮಾರ್ ಸೇರಿದಂತೆ ಏಳು ಮುಖಂಡರ ವಿರುದ್ಧ ತಹಶೀಲ್ದಾರ್ ಮತ್ತು ಹಾರೋಹಳ್ಳಿ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು.

> ಬಹಿಷ್ಕಾರದ ಕುರಿತು ದೂರು ಕೊಟ್ಟಿದ್ದೇವೆ. ಗ್ರಾಮಕ್ಕೆ ಬುಧವಾರ ಪೊಲೀಸರು, ಅಧಿಕಾರಿಗಳು ಭೇಟಿ ನೀಡಲಿದ್ದಾರೆ. ಬಳಿಕ ಮುಂದಿನ ನಡೆ ನಿರ್ಧರಿಸುತ್ತೇವೆ
> **ಗೋಪಾಲ್,** ಬನವಾಸಿ ಗ್ರಾಮಸ್ಥ

> ದೂರು ಕೊಟ್ಟರೆ ತಕ್ಷಣ ಪ್ರಕರಣ ದಾಖಲಿಸಿಕೊಳ್ಳಲಾಗುವುದು. ದೂರನ್ನೇ ನೀಡದಿದ್ದರೆ ನಾವು ಪ್ರಕರಣ ದಾಖಲಿಸಿಕೊಳ್ಳುವುದಾದರೂ ಹೇಗೆ?
> **ಆರ್. ಶ್ರೀನಿವಾಸ ಗೌಡ**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

> ತಕ್ಷಣ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಎಸ್‌ಪಿ ಕಚೇರಿ ಎದುರು ಪ್ರತಿಭಟಿಸಲಾಗುವುದು
> **ಎಂ. ನಾಗೇಶ್,** ರಾಜ್ಯ ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಬಹುಜನ ಸಮಾಜ ಪಕ್ಷ

> ಗ್ರಾಮಕ್ಕೆ ಭೇಟಿ ನೀಡಿ, ದಲಿತ ಸಮುದಾಯದವರ ಜೊತೆ ಸಭೆ ನಡೆಸಿದ್ದೇನೆ. ಅಲ್ಲಿನ ವಾಸ್ತವ ಸ್ಥಿತಿ ಕುರಿತು ಮೇಲಧಿಕಾರಿಗಳ ಗಮನಕ್ಕೆ ತಂದಿರುವೆ
> **ಜೈಪ್ರಕಾಶ್**, ಸಹಾಯಕ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ, ಕನಕಪುರ

ವಕ್ಫ್ (ತಿದ್ದುಪಡಿ) ಕಾಯ್ದೆ ಪ್ರಶ್ನಿಸಿದ ಅರ್ಜಿಗಳ ವಿಚಾರಣೆ ವೇಳೆ ಸಿಜೆಐ ಬಿ.ಆರ್. ಗವಾಯಿ ಅಭಿಪ್ರಾಯ

‘ಗಮನಾರ್ಹ ಲೋಪವಿದ್ದರಷ್ಟೇ ಮಧ್ಯಪ್ರವೇಶ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಸಂಸತ್ತಿನಲ್ಲಿ ಅಂಗೀಕೃತವಾದ ಶಾಸನಗಳಲ್ಲಿ ಗಮನಾರ್ಹ ಲೋಪಗಳು ಕಾಣಿಸದ ಹೊರತು ನ್ಯಾಯಾಲಯ ಮಧ್ಯಪ್ರವೇಶ ಮಾಡುವಂತಿಲ್ಲ ಎಂಬ ಅಭಿಪ್ರಾಯ ಜನರಲ್ಲಿದೆ’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಹೇಳಿದ್ದಾರೆ.

ವಕ್ಫ್ (ತಿದ್ದುಪಡಿ) ಕಾಯ್ದೆ–2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಮುಖ್ಯ ನ್ಯಾಯಮೂರ್ತಿಗಳು ಈ ಮಾತು ಹೇಳಿದರು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ‘ಈ ಕಾಯ್ದೆ ವಕ್ಫ್ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವ ಗುರಿ ಹೊಂದಿದೆ’ ಎಂದು ಪುನರುಚ್ಚರಿಸಿದರು. ಆಗ ಮುಖ್ಯ ನ್ಯಾಯಮೂರ್ತಿಗಳು, ‘ಪ್ರತಿಯೊಂದು ಶಾಸನವು ಸಂವಿಧಾನದ ಪ್ರಕಾರ ಸಂಸತ್ತಿನಲ್ಲಿ ಅನುಮೋದನೆಗೊಳ್ಳುತ್ತದೆ. ಮಧ್ಯಂತರ ಆದೇಶಕ್ಕಾಗಿ ನೀವು ಬಲವಾದ ವಾದ ಮಂಡಿಸಬೇಕು. ವಿಶೇಷವಾಗಿ ಪ್ರಸ್ತುತ ಸನ್ನಿವೇಶದಲ್ಲಿ, ನಾವು ಹೆಚ್ಚಿನದನ್ನು ಹೇಳಬೇಕಾಗಿಲ್ಲ’ ಎಂದು ಮಾರ್ಮಿಕವಾಗಿ ಹೇಳಿದರು.

ಕಪಿಲ್ ಸಿಬಲ್ ವಾದ ಮಂಡಿಸಿ ‘ನ್ಯಾಯಾಂಗೇತರ ಮಾರ್ಗಗಳ ಮೂಲಕ ವಕ್ಫ್ ಅನ್ನು ವಶಪಡಿಸಿಕೊಳ್ಳುವುದಕ್ಕೆ ಈ ಕಾನೂನು ಒಂದು ಸಾಧನ. ಈ ಪ್ರಕರಣದಲ್ಲಿ ಐತಿಹಾಸಿಕ ಕಾನೂನು ಹಾಗೂ ಸಾಂವಿಧಾನಿಕ ತತ್ವಗಳನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ’ ಎಂದು ಆಕ್ಷೇಪಿಸಿದರು.

‘ಆಡಳಿತ ಮಂಡಳಿಗಳಲ್ಲಿ ಮುಸ್ಲಿಂ ಸದಸ್ಯರಿರಬೇಕು ಎಂಬ ಅಂಶ ಹಿಂದಿನ ವಕ್ಫ್ ಕಾಯ್ದೆಗಳಲ್ಲಿತ್ತು. 2025ರ ಕಾಯ್ದೆಯಲ್ಲಿ ಅದರ ಬಗ್ಗೆ ಯಾವುದೇ ಉಲ್ಲೇಖವಿಲ್ಲ’ ಎಂಬ ಅಂಶವನ್ನು ಅವರು ಪೀಠದ ಗಮನಕ್ಕೆ ತಂದರು.

‘2025ರ ಕಾಯ್ದೆಯು ನ್ಯಾಯಾಂಗ ಪ್ರಕ್ರಿಯೆಯನ್ನು ಮೀರಿ, ಕಾರ್ಯಾಂಗದ ವಿಧಾನಗಳ ಮೂಲಕ ವಕ್ಫ್ ಆಸ್ತಿಗಳನ್ನು ವ್ಯವಸ್ಥಿತವಾಗಿ ಸ್ವಾಧೀನಪಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಮೇಲಾಗಿ, ವಕ್ಫ್ ಆಸ್ತಿಗಳು ವಕ್ಫ್ ಅಲ್ಲದ ಆಸ್ತಿಗಳಾಗಬಹುದು. ಹಿಂದಿನ ಶಾಸನಗಳು ಆಸ್ತಿಗಳನ್ನು ರಕ್ಷಿಸುತ್ತಿದ್ದವು ಮತ್ತು ಈಗಿನ ಕಾಯ್ದೆಯು ಅವುಗಳನ್ನು ಕಸಿದುಕೊಳ್ಳುವ ಉದ್ದೇಶ ಹೊಂದಿದೆ’

ಎಂದು ದೂರಿದರು.

‘ಈ ಕಾಯ್ದೆ ವಕ್ಫ್ ಆಸ್ತಿಗಳನ್ನು ನಿಧಾನವಾಗಿ ಸ್ವಾಧೀನಪಡಿಸಿ ಕೊಳ್ಳಲು ಅವಕಾಶ ನೀಡುತ್ತದೆ. ಇಸ್ಲಾಮಿಕ್ ಕಾನೂನಿನ ಅಡಿಯಲ್ಲಿರುವ ಧಾರ್ಮಿಕ ಅಥವಾ ದತ್ತಿ ಉದ್ದೇಶಗಳ ಶಾಶ್ವತ ದತ್ತಿಯಾದ ವಕ್ಫ್ ಪರಿಕಲ್ಪನೆಯನ್ನೇ ದುರ್ಬಲಗೊಳಿಸುತ್ತದೆ’ ಎಂದು ಸಿಬಲ್ ಹೇಳಿದರು.

ಕಾಯ್ದೆಯ ಸೆಕ್ಷನ್ 3ಸಿ ಅನ್ನು ಉಲ್ಲೇಖಿಸಿದ ಅವರು, ಆಸ್ತಿಯು ಸರ್ಕಾರಕ್ಕೆ ಸೇರಿದ ಭೂಮಿಯೇ ಎಂಬುದರ ಕುರಿತು ತನಿಖೆ ನಡೆಸಲು ಅಧಿಕೃತ ಅಧಿಕಾರಿಗೆ ಇದು ಅವಕಾಶ ಕಲ್ಪಿಸುತ್ತದೆ’ ಎಂದರು.

ಕಾಯ್ದೆಯ ಸೆಕ್ಷನ್ 9 ಮತ್ತು 14 ಅನ್ನು ಉಲ್ಲೇಖಿಸಿದ ಅವರು, ‘ಈ ಸೆಕ್ಷನ್‌ಗಳು ಕೇಂದ್ರ ಮತ್ತು ರಾಜ್ಯ ವಕ್ಫ್ ಮಂಡಳಿಗಳ ಸಂಯೋಜನೆ ಬದಲಾಯಿಸಲು ಅನುವು ಮಾಡಿಕೊಡುತ್ತವೆ. ಮಂಡಳಿಗಳಲ್ಲಿ ಮುಸ್ಲಿಮೇತರರೇ ಹೆಚ್ಚಿನ ಸಂಖ್ಯೆಯಲ್ಲಿ ಇರಲಿದ್ದಾರೆ. ಇದು ಸಮುದಾಯದ ನಿಯಂತ್ರಣವನ್ನು ದುರ್ಬಲಗೊಳಿಸುವ ಪ್ರಯತ್ನ. ಸೆಕ್ಷನ್ 23 ಪ್ರಕಾರ, ವಕ್ಫ್ ಮಂಡಳಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯನ್ನಾಗಿ ಮುಸ್ಲಿಮೇತರರನ್ನು ನೇಮಕ ಮಾಡಲು ಅವಕಾಶವಿದೆ. ಇತರ ಧರ್ಮದವರನ್ನು ವಕ್ಫ್ ಆಡಳಿತದ ಭಾಗವಾಗಲು ಅವಕಾಶ ನೀಡುವುದು ಸರಿಯಲ್ಲ’ ಎಂದು ವಾದಿಸಿದರು.

ಮತ್ತೊಬ್ಬ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ರಾಜೀವ್ ಧವನ್, ‘ಈ ಕಾಯ್ದೆಯು ಜಾತ್ಯತೀತತೆ ಮತ್ತು ಸಾಂಸ್ಕೃತಿಕ ಸ್ವಾಯತ್ತತೆಯ ಮೇಲಿನ ದಾಳಿ’ ಎಂದು ಹೇಳಿದರು.

‘2013ರಿಂದ ವಕ್ಫ್ ಆಸ್ತಿಯ ಪ್ರಮಾಣದಲ್ಲಿ ಶೇ 116ರಷ್ಟು ಹೆಚ್ಚಳ ಕಂಡುಬಂದಿದೆ’ ಎಂಬ ಕೇಂದ್ರ ಸರ್ಕಾರದ ಪ್ರಮಾಣಪತ್ರಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಿಂಘ್ವಿ, ‘ಆಸ್ತಿಗಳ ಡಿಜಿಟಲೀಕರಣದಿಂದ ಈ ಏರಿಕೆ ಕಂಡುಬಂದಿದೆ. ಹೊಸದಾಗಿ ಯಾವುದೇ ಆಸ್ತಿಗಳ ಸ್ವಾಧೀನ ಆಗಿಲ್ಲ’ ಎಂದರು.

‘ದೇಶದಲ್ಲಿ ಒಟ್ಟು 8.72 ಲಕ್ಷ ವಕ್ಫ್ ಆಸ್ತಿಗಳಿವೆ. ಅದರಲ್ಲಿ 4 ಲಕ್ಷಕ್ಕೂ ಹೆಚ್ಚು ವಕ್ಫ್‌ಗಳು ಬಳಕೆದಾರರ ವಕ್ಫ್‌ಗಳಾಗಿವೆ’ ಎಂದು ಅವರು ವಿವರಿಸಿದರು. ಜಂಟಿ ಸಂಸದೀಯ ಸಮಿತಿಯ ವರದಿಯ ಪ್ರಕಾರ, 28 ರಾಜ್ಯಗಳ ಪೈಕಿ ಐದರಲ್ಲಿ ಮತ್ತು 4 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಾತ್ರ ವಕ್ಫ್ ಆಸ್ತಿಗಳ ಸಮೀಕ್ಷೆ ನಡೆಸಲಾಗಿದೆ’ ಎಂದರು.

3 ವಿಷಯಕ್ಕೆ ಸೀಮಿತವಾಗಿರಲಿ : ಕೇಂದ್ರ

ಮೂರು ವಿಷಯಗಳಿಗೆ ಸೀಮಿತವಾಗಿ ಅರ್ಜಿಗಳ ವಿಚಾರಣೆ ನಡೆಸಬೇಕು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಪೀಠವನ್ನು ಕೋರಿದರು. ‘ಬಳಕೆಯ ಕಾರಣದಿಂದಾಗಿ ವಕ್ಫ್, ಕೇಂದ್ರ ವಕ್ಫ್ ಪರಿಷತ್ ಮತ್ತು ರಾಜ್ಯ ವಕ್ಫ್ ಮಂಡಳಿಗಳಿಗೆ ಮುಸ್ಲಿಮೇತರರ ನಾಮನಿರ್ದೇಶನ ಮತ್ತು ವಕ್ಫ್ ಅಡಿಯಲ್ಲಿ ಸರ್ಕಾರಿ ಭೂಮಿಯ ಗುರುತಿಸುವಿಕೆಯನ್ನು ಒಳಗೊಂಡ ಮೂರು ಅಂಶಗಳಲ್ಲಿ ಮಧ್ಯಂತರ ತಡೆಯಾಜ್ಞೆ ಅಗತ್ಯವಿದೆಯೇ ಎಂಬುದನ್ನು ಪರಿಗಣಿಸುವುದಾಗಿ ನ್ಯಾಯಪೀಠ ಈ ಹಿಂದೆ ಹೇಳಿತ್ತು. ಈ ವಿಷಯಗಳಿಗೆ ಸೀಮಿತವಾಗಿ ವಿಚಾರಣೆ ನಡೆಯಬೇಕು’ ಎಂದು ಅವರು ಮನವಿ ಮಾಡಿದರು.

ಅರ್ಜಿದಾರರ ಪರ ವಕೀಲರಾದ ಸಿಬಲ್ ಹಾಗೂ ಅಭಿಷೇಕ್ ಮನು ಸಿಂಘ್ವಿ ಈ ಮನವಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ‘ಪ್ರಕರಣವನ್ನು ಪ್ರತ್ಯೇಕ ಭಾಗಗಳಾಗಿ ವಿಚಾರಣೆ ನಡೆಸುವುದು ಸರಿಯಲ್ಲ’ ಎಂದರು.

‘ಇದು ವಕ್ಫ್ ಆಸ್ತಿಗಳನ್ನು ವ್ಯವಸ್ಥಿತವಾಗಿ ವಶಪಡಿಸಿಕೊಳ್ಳುವ ಹುನ್ನಾರ ಹೊಂದಿರುವ ಕಾಯ್ದೆ. ನ್ಯಾಯಾಲಯದಲ್ಲಿ ಇಂತದೇ ವಿಷಯ ಮಂಡಿಸಬೇಕು ಎಂಬುದನ್ನು ಸರ್ಕಾರ ನಿರ್ದೇಶಿಸುವಂತಿಲ್ಲ’ ಎಂದು ಸಿಬಲ್ ಆಕ್ಷೇಪಿಸಿದರು.

ಶಿಷ್ಟಾಚಾರ ಉಲ್ಲಂಘನೆ ವಿಚಾರ ಅತಿಯಾಗಿ ರಂಜಿಸಬೇಡಿ: ಸಿಜೆಐ

ನವದೆಹಲಿ (ಪಿಟಿಐ): ಮುಂಬೈ ಭೇಟಿ ವೇಳೆ ನಡೆದ ಶಿಷ್ಟಾಚಾರ ಉಲ್ಲಂಘನೆ ವಿಚಾರವು ಕ್ಷುಲ್ಲಕವಾಗಿದ್ದು, ಅದನ್ನು ಅತಿ ರಂಜಿತವಾಗಿ ಬಿಂಬಿಸಬೇಡಿ ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಬಿ.ಆರ್.ಗವಾಯಿ ಹೇಳಿದ್ದಾರೆ.

ಸಿಜೆಐ ಆಗಿ ನೇಮಕಗೊಂಡ ಬಳಿಕ ಮೊದಲ ಬಾರಿಗೆ (ಮೇ 18) ಗವಾಯಿ ಅವರು ತವರು ರಾಜ್ಯ ಮಹಾರಾಷ್ಟ್ರಕ್ಕೆ ಭೇಟಿ ನೀಡಿದ್ದರು. ಈ ವೇಳೆ ರಾಜ್ಯದ ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಅಥವಾ ನಗರ ಪೊಲೀಸ್ ಕಮೀಷನರ್ ತಮ್ಮನ್ನು ಸ್ವಾಗತಿಸಲು ಬರದೇ ಇರುವುದನ್ನು ಆಕ್ಷೇಪಿಸಿ, ಇದು ಶಿಷ್ಟಾಚಾರ ಉಲ್ಲಂಘನೆ

ಬಿ.ಆರ್. ಗವಾಯಿ

ಎಂದು ಹೇಳಿದ್ದರು. ಈ ಸಂಬಂಧ ಸುಪ್ರೀಂಕೋರ್ಟ್ ಪ್ರಕಟಣೆ ಒಂದನ್ನು ಬಿಡುಗಡೆ ಮಾಡಿದ್ದು, ಮಹಾರಾಷ್ಟ್ರಕ್ಕೆ ಸಿಜೆಐ ಭೇಟಿ ನೀಡಿದ ವೇಳೆ ನಡೆದ ಶಿಷ್ಟಾಚಾರ ಉಲ್ಲಂಘನೆಗೆ ಸಂಬಂಧಿಸಿದಂತೆ ಮಾಧ್ಯಮಗಳು ಸುದ್ದಿ ಪ್ರಕಟಿಸಿವೆ. ಘಟನೆಗೆ ಸಂಬಂಧಪಟ್ಟ ಎಲ್ಲರೂ ಈಗಾಗಲೇ ವಿಷಾದ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಈ ವಿಚಾರವನ್ನು ಅತಿಯಾಗಿ ರಂಜಿಸದೆ ಇರಲು ಸಿಜೆಐ ಮನವಿ ಮಾಡಿದ್ದಾರೆ’ ಎಂದು ತಿಳಿಸಿದೆ.

ಮಣಿಪುರ ಹೈಕೋರ್ಟ್‌ನ ಸಿಜೆ ಆಗಿ ಕೆಂಪಯ್ಯ ಸೋಮಶೇಖರ್ ನೇಮಕ

ನವದೆಹಲಿ (ಪಿಟಿಐ): ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಕೆಂಪಯ್ಯ ಸೋಮಶೇಖರ್ ಅವರನ್ನು ಮಣಿಪುರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ. ಕೇಂದ್ರ ಕಾನೂನು ಸಚಿವಾಲಯ ಈ ಸಂಬಂಧ ಅಧಿಕೃತ ಅಧಿಸೂಚನೆ ಹೊರಡಿಸಿದೆ.

ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದಲ್ಲಿ ಮೇ 15ರಂದು ನಡೆದ

ಕೆಂಪಯ್ಯ ಸೋಮಶೇಖರ್

ಕೊಲಿಜಿಯಂ, ನ್ಯಾಯಮೂರ್ತಿ ಸೋಮಶೇಖರ್ ಅವರಿಗೆ ಬಡ್ತಿ ನೀಡಲು ಶಿಫಾರಸು ಮಾಡಿತ್ತು.

ಮಣಿಪುರ ಹೈಕೋರ್ಟ್‌ನ ಹಾಲಿ ಮುಖ್ಯ ನ್ಯಾಯಮೂರ್ತಿ ಡಿ. ಕೃಷ್ಣ ಕುಮಾರ್ ಅವರು ಮೇ 21ರಂದು ಸೇವಾ ನಿವೃತ್ತಿ ಹೊಂದಲಿದ್ದಾರೆ.

‘ಕನ್ನಡ ಕಲಿಕೆ ರಾಜ್ಯದಾದ್ಯಂತ ವಿಸ್ತರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನ್ಯಭಾಷಿಕರಿಗೆ ಕನ್ನಡ ಕಲಿಕಾ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ವಿಸ್ತರಿಸಲು ನಿರ್ಧರಿಸಲಾಗಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ.

ಪುರುಷೋತ್ತಮ ಬಿಳಿಮಲೆ

‘ಈವರೆಗೆ ಬೆಂಗಳೂರು ನಗರಕ್ಕೆ ಸೀಮಿತವಾಗಿದ್ದ ಈ ಕಾರ್ಯಕ್ರಮವನ್ನು ಜಿಲ್ಲೆಗಳಿಗೆ ವಿಸ್ತರಿಸಲಾಗುವುದು. ಈ ಸಂಬಂಧ ಪೂರ್ವಭಾವಿ ಕ್ರಮಗಳಿಗೆ ಚಾಲನೆ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಕೇಂದ್ರದ ಉದ್ಯಮಗಳು, ಬ್ಯಾಂಕ್‌ಗಳು, ಕೇಂದ್ರ ಸರ್ಕಾರಿ ಕಚೇರಿಗಳು ರಾಜ್ಯದಾದ್ಯಂತ ಇದ್ದು, ಈ ಸಂಸ್ಥೆಗಳಲ್ಲಿ ಹಲವಾರು ಅನ್ಯಭಾಷಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ವ್ಯಾಪಾರ-ವ್ಯವಹಾರಗಳಿಗಾಗಿಯೂ ಬೇರೆ ರಾಜ್ಯಗಳಿಂದ ಬಂದು, ಕರ್ನಾಟಕದಲ್ಲಿ ನೆಲೆ ಕಂಡುಕೊಂಡಿರುವ ಹಲವು ಅನ್ಯಭಾಷಿಕರು ಇದ್ದಾರೆ. ಈ ಸಮುದಾಯವನ್ನು ಪ್ರತಿ ಜಿಲ್ಲೆಯಲ್ಲಿ ಗುರುತಿಸಿ, ಅವರಿಗೆ ಕನ್ನಡ ಕಲಿಸುವ ಪ್ರಯತ್ನ ಮಾಡಲು ಪ್ರಾಧಿಕಾರ ನಿರ್ಣಯಿಸಿದೆ’ ಎಂದು ಹೇಳಿದ್ದಾರೆ.

‘ಈ ಅಭಿಯಾನಕ್ಕೆ ಆಸಕ್ತ ಸಂಘ ಸಂಸ್ಥೆಗಳು ಜಿಲ್ಲಾಡಳಿತದಡಿ ನೋಂದಾಯಿಸಿಕೊಳ್ಳಬಹುದಾಗಿದೆ. ಜಿಲ್ಲಾಡಳಿತವು ತರಗತಿ ನಡೆಸಲು ಸ್ಥಳಾವಕಾಶ ಒದಗಿಸಲಿದೆ. ಜಿಲ್ಲಾಡಳಿತದಿಂದ ನೇಮಿಸಲ್ಪಡುವ ಶಿಕ್ಷಕರಿಗೆ ಗೌರವ ಸಂಭಾವನೆಯನ್ನು ಪ್ರಾಧಿಕಾರವೇ ನೀಡಲಿದೆ. ಬೋಧನೆಗೆ ಸಂಬಂಧಿಸಿದಂತೆ ವಿಶೇಷ ಪಠ್ಯಕ್ರಮವನ್ನು ರೂಪಿಸಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

‘ಅನ್ಯಭಾಷಿಕರಿಗೆ ವಾರದಲ್ಲಿ 3 ದಿನಗಳಂತೆ 3 ತಿಂಗಳು ತರಗತಿಗಳನ್ನು ನಡೆಸಲಾಗುವುದು. ಕಲಿಕಾರ್ಥಿಗಳಿಂದ ಶಿಕ್ಷಕರ ಬೋಧನಾ ಗುಣಮಟ್ಟ ಅಳೆಯಲು ತೀರ್ಮಾನಿಸಲಾಗಿದ್ದು, ಈ ಪ್ರಯತ್ನದಲ್ಲಿ ವೃತ್ತಿಪರತೆ ಮತ್ತು ಪಾರದರ್ಶಕತೆಯನ್ನು ಕಾಯ್ದುಕೊಳ್ಳಲಾಗುವುದು’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್‌ರಸ್ತೆ, ಮೈಸೂರು–570001
Ph: +91-0821-2520512 (Off.), 2520803 (Fax)
Website : www.mmcri.karnataka.gov.in/
E-mail : mmcrimysore@yahoo.com
ಸಂಖ್ಯೆ: ಉಪಕರಣ/37/2024–25 ದಿನಾಂಕ: 17.05.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಟ್ರಾಮಾ ಕೇರ್ ಸೆಂಟರ್‌ನ ನ್ಯೂರೋ ಸರ್ಜರಿ ವಿಭಾಗಕ್ಕೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ವಿದ್ಯುನ್ಮಾನ ವೇದಿಕೆ ಮುಖಾಂತರ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿ: 19.05.2025 ರಿಂದ ಪಡೆಯಬಹುದಾಗಿದ್ದು, ದಿ: 02.06.2025 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್
DIPR/DDMYS/214/KSMCA/182/2025-26

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ

ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ:03/2025–26, ದಿನಾಂಕ: 19.05.2025

2025–26ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿಗೆ ಅನುಮೋದನೆಯಾಗಿರುವ ದ್ರವತ್ಯಾಜ್ಯ ನಿರ್ವಹಣೆಯಲ್ಲಿ ಮಲ ತ್ಯಾಜ್ಯ ಸಂಸ್ಕರಣ (FSTP) ಘಟಕಗಳ ನಿರ್ಮಾಣ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಹಾಗೂ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಏಜೆನ್ಸಿದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೆಯ **ದಿನಾಂಕ: 30.05.2025 ರಂದು 17.30 ಗಂಟೆಯವರೆಗೆ ಇರುತ್ತದೆ.** ಹೆಚ್ಚಿನ ವಿವರಗಳಿಗೆ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್–http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಗ್ರಾ.ಕು.ನೀ. ಮತ್ತು ನೈ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:70/ಕೆಎಸ್‌ಎಂಸಿಎ/2025–26

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
“ಜ್ಞಾನ ಸಂಗಮ”, ಬೆಳಗಾವಿ – 590018, ಕರ್ನಾಟಕ
ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2025–26/ಐ.ಎಫ್.ಟಿ. ನಂ.20/774 ದಿನಾಂಕ: 19–05–2025

ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ. ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಮಂತ್ರಿಸಲಾಗಿದೆ. ಕಾಮಗಾರಿಗಳ ಹೆಸರು: 1) ವಿತಾವಿಯ “ಜ್ಞಾನ ಸಂಗಮ” ಆವರಣದಲ್ಲಿಯ ಸಿಎನ್‌ಸಿ ಕಾರ್ಯಾಗಾರಕ್ಕೆ ಸಿಸಿ ಪೇವ್‌ಮೆಂಟ್ ರಸ್ತೆ, ಸಿಸಿ ಡ್ರೈನೇಜ್ ತಡೆಗೋಡೆ ಮತ್ತು ಪೇವರಗಳ ನಿರ್ಮಾಣ, ತ್ಯಾಜ್ಯ ವಿಲೇವಾರಿ ಪಿಟ್ ಮತ್ತು ಆಡಿಟೋರಿಯಮ್ ಹಿಂದುಗಡೆ ನಿರ್ಮಾಣ ಮಾಡುವ ಕಾಮಗಾರಿ ಮೊತ್ತ ರೂ. 1,23,27,964/– (ತೆರಿಗೆ ರಹಿತ). ಮತ್ತು 2) ವಿತಾವಿಯ “ಜ್ಞಾನ ಸಂಗಮ” ಆವರಣದಲ್ಲಿ ಶೈಕ್ಷಣಿಕ ಕಟ್ಟಡದ ಅನೆಕ್ಸ್‌ನ ಎರಡನೇ ಮಹಡಿಯ ನಿರ್ಮಾಣ ಕಾಮಗಾರಿ ಮೊತ್ತ ರೂ. 1,74,65,882/– (ತೆರಿಗೆ ರಹಿತ). ಇತರೆ ಮಾಹಿತಿಗಳನ್ನು ವೆಬ್‌ಸೈಟ್: https://kppp.karnataka.gov.in ಮೂಲಕ ದಿನಾಂಕ: 19–05–2025 ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
ವಾಸಾಸಂಇ/ಬೆಳಗಾವಿ/277/ಅಡ್ವರ್ಟೋ/2025–26

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: ಕವಿನಿಆ/ಎಫ್–34/ವಾ–17/206 ದಿನಾಂಕ: 16.05.2025

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: “ಸೌರ ವಿದ್ಯುತ್ ಘಟಕಗಳ ಯೋಜನೆಗಳು (ಸೌರ ಮೇಲ್ಛಾವಣಿ ಘಟಕಗಳ ಯೋಜನೆಗಳು ಸೇರಿದಂತೆ) ಮುಂದಿನ ನಿಯಂತ್ರಿತ ಅವಧಿ ಆ.ವ. 2025–2026 ರವರೆಗೆ ದರ ನಿರ್ಧರಣೆ ಮತ್ತು ಮಾನದಂಡಗಳ” – ಸಾರ್ವಜನಿಕ ವಿಚಾರಣೆ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಚರ್ಚಾಪತ್ರವನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: https://kerc.karnataka.gov.in ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಶುಕ್ರವಾರ ದಿನಾಂಕ: 06.06.2025ರಂದು ಬೆಳಿಗ್ಗೆ 11:30 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ, ಒಂದನೆಯ ಮಹಡಿ, ನಂ. 16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052 ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.**

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/763/2025-26

ಕಾರ್ಮಿಕರ ರಾಜ್ಯ ವಿಮಾ ಯೋಜನೆ
ವೈದ್ಯಕೀಯ ಸೇವೆಗಳ ನಿರ್ದೇಶನಾಲಯ
ಎಸ್. ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು–560010

Tender for Supply and Installation of Dialysis Units under Turnkey Basis at ESI Hospitals Indiranagar, Mysore and Hubli

ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ	ಇಎಸ್‌ಐಎಸ್/ಇಜಿಎಸ್/03/2025–26 ದಿನಾಂಕ: 20.05.2025 ESISMS/2025-26/IND0013
ವಿವರಗಳು	Tender for Supply and Installation of Dialysis Units under Turnkey Basis at ESI Hospitals Indiranagar, Mysore and Hubli
ಟೆಂಡರ್ ನಮೂನೆ ವಿವರಗಳಿಗೆ ಹಾಗೂ ದಾಖಲಿಸಲು ಸಂಪರ್ಕಿಸಬೇಕಾದ ವೆಬ್‌ಸೈಟ್	https://.kppp.karnataka.gov.in and Department website https://esisms.karnataka.gov.in
ಮುಂಗಡ ಠೇವಣಿ	ರೂ. 7,36,800/–
ಪೂರ್ವಭಾವಿ ಸಭೆ	28.05.2025, ಮಧ್ಯಾಹ್ನ 3:30 ಗಂಟೆಗೆ ಕಾ.ರಾ.ವಿ.ಯೋ.ವೈ ಸೇವೆಗಳ ನಿರ್ದೇಶನಾಲಯ ಕಛೇರಿ, ರಾಜಾಜಿನಗರ, ಬೆಂಗಳೂರು.
ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಸಲ್ಲಿಸಲು ಅಂತಿಮ ದಿನಾಂಕ	ದಿನಾಂಕ: 21.06.2025 ಮಧ್ಯಾಹ್ನ 2:30 ಗಂಟೆ
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಸ್ವೀಕರಿಸಿದ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ದಿನಾಂಕ: 24.06.2025 ಬೆಳಿಗ್ಗೆ 11:30 ಗಂಟೆ

ಸಹಿ/–, ನಿರ್ದೇಶಕರು
ಕಾ.ರಾ.ವಿ.ಯೋ.ವೈ. ಸೇವೆಗಳು
ವಾಸಾಸಂಇ/ವಾಪ್ರ/ಎಲ್‌ಸಿ/764/2025–26

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಸೊರಬ ಉಪ ವಿಭಾಗ, ಸೊರಬ–577429
Email ID : acfsoraba@gmail.com
ಕ್ರ.ಸಂ:ಸ.ಅ.ಸಂ/ಸೋ.ಉ.ವಿ/ಸಭೆ/ಸಿಆರ್–103/2025–26ದಿ: 17–05–2025

–: ಸಂಕ್ಷಿಪ್ತ ಪ್ರಕಟಣೆ :–

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸೊರಬ ತಾಲ್ಲೂಕು, ಆನವಟ್ಟಿ ವಲಯದ, ಜಡೆ ಹೋಬಳಿ, ತಲಗಡ್ಡೆ ಗ್ರಾಮದ ಸ.ನಂ.179 ಹಾಗು 192 ರ ಜಮೀನಿಗೆ ಹೊಂದಿಕೊಂಡಿರುವ ವರದಾ ನದಿ ದಂಡೆಯ ಅಂಚಿನ ಖರಾಬು ಜಾಗದಲ್ಲಿ ರೈತರು ನೆಟ್ಟಿರುವ, ಅಕೇಶಿಯಾ ಜಾತಿಯ 958 ಹಾಗೂ ನೀಲಗಿರಿ ಜಾತಿಯ 82 ಮರಗಳಿದ್ದು, ಕೆಲವು ಮರಗಳು ಅಲ್ಲಲ್ಲಿ ಒಣಗಿದ್ದು, ಸ್ವಲ್ಪ ಮರಗಳು ಬುಡ ಸಮೇತ ನೀರಿಗೆ ಬಿದ್ದು ಸರ್ಕಾರಕ್ಕೆ ನಷ್ಟ ಉಂಟಾಗಿರುತ್ತದೆ. ಅಕ್ಕ–ಪಕ್ಕದ ರೈತರಿಗೆ ಜಮೀನಿನಲ್ಲಿರುವ ಬೆಳೆಗೆ ನಷ್ಟವಾಗಿರುತ್ತದೆ. ಅದೇ ಮಾರ್ಗದಲ್ಲಿ ಓಡಾಡುವ ಜಮೀನಿನ ರೈತರು ಮತ್ತು ಸಾರ್ವಜನಿಕರ ಜೀವಕ್ಕೆ ಆಸ್ತಿ– ಪಾಸ್ತಿಗೆ ಅಪಾಯಕಾರಿಯಾಗಿ ಬೆಳೆದು ನಿಂತಿದ್ದು, ಬಲಿತ ಮರಗಳಾಗಿದ್ದು, ಸದರಿ ಮರಗಳನ್ನು ಕಟಾವು ಮಾಡಿ ಹರಾಜಿನ ಮೂಲಕ ವಿಲೇ ಮಾಡಿದ್ದಲ್ಲಿ ಸರ್ಕಾರಕ್ಕೆ ಉಂಟಾಗುವ ನಷ್ಟವನ್ನು ತಪ್ಪಿಸಬಹುದಾಗಿದ್ದು, ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮ 1976 ರ ಕಲಂ 8(3)(v(iii) ರಂತೆ ಸದರಿ ಅಪಾಯಕಾರಿ 1040 ಮರಗಳನ್ನು ಇಲಾಖಾ ಮೂಲಕ ವಿಲೆಗೊಳಿಸುವ ಬಗ್ಗೆ ಹಾಗೂ ಸದರಿ ವರದಾ ನದಿ ದಂಡೆಯ ಅಂಚಿನ ಖರಾಬು ಜಾಗದಲ್ಲಿ ತೆರವುಗೊಳಿಸಲಿರುವ ಪ್ರದೇಶದಲ್ಲಿ ಮಣ್ಣಿನ ಸವಕಳಿ ತಪ್ಪಿಸಲು ಇಲಾಖಾವತಿಯಿಂದ ಮಿಶ್ರ/ಕಾಡು ಜಾತಿಯ ನೆಡುತೋಪು ರಚನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸೊರಬ ಉಪವಿಭಾಗ, ಸೊರಬದಲ್ಲಿ ದಿನಾಂಕ:22.05.2025 ರ ಪೂರ್ವಾಹ್ನ 11–30 ಕ್ಕೆ ಸಾರ್ವಜನಿಕ ಅಹವಾಲು ಸಭೆಯನ್ನು ನಿಗದಿಪಡಿಸಿದ್ದು, ಸಾರ್ವಜನಿಕರು ಈ ಸಭೆಯಲ್ಲಿ ಭಾಗವಹಿಸಲು ಈ ಮೂಲಕ ಕೋರಲಾಗಿದೆ.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸೊರಬ ಉಪ ವಿಭಾಗ ಸೊರಬ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/116/05/283

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಏಜೆನ್ಸಿಗಳಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ.ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/310/2025–26 ದಿನಾಂಕ: 16.05.2025	₹ 4,41,554/- / ₹ 11,100/-	04.06.2025 ರ ಸಂಜೆ 4:00 ಗಂಟೆಯವರೆಗೆ	06.06.2025 ರ ಸಂಜೆ 5:00 ಗಂಟೆಯ ನಂತರ
2	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/319/2025–26 ದಿನಾಂಕ: 19.05.2025 (ಟೆಂಡರ್ ಇಂಡೆಂಟ್ ನಂ. 1772) (8ನೇ ಕರೆ)	₹ 33,47,082/- / ₹ 67,000/-	27.05.2025 ರ ಸಂಜೆ 4:00 ಗಂಟೆಯವರೆಗೆ	29.05.2025 ರ ಸಂಜೆ 5:00 ಗಂಟೆಯ ನಂತರ
3	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/319/2025–26 ದಿನಾಂಕ: 19.05.2025 (ಟೆಂಡರ್ ಇಂಡೆಂಟ್ ನಂ. 2018) (9ನೇ ಕರೆ)	₹ 68,64,424/- / ₹ 1,37,300/-	27.05.2025 ರ ಸಂಜೆ 4:00 ಗಂಟೆಯವರೆಗೆ	29.05.2025 ರ ಸಂಜೆ 5:00 ಗಂಟೆಯ ನಂತರ
4	ಪೂರ್ವ–1	ಬೆಂಜಮಂ/ಕಾನಿಅ(ಪೂರ್ವ)–1/ಯೋ.ವಿ/319/2025–26 ದಿನಾಂಕ: 19.05.2025 (ಟೆಂಡರ್ ಇಂಡೆಂಟ್ ನಂ. 1771) (11ನೇ ಕರೆ)	₹ 44,62,393/- / ₹ 89,300/-	27.05.2025 ರ ಸಂಜೆ 4:00 ಗಂಟೆಯವರೆಗೆ	29.05.2025 ರ ಸಂಜೆ 5:00 ಗಂಟೆಯ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–1)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು. DIPR/CP/MIA/757/2025-26

ಬೆಂಗಳೂರು ನಗರ ವಿಶ್ವವಿದ್ಯಾಲಯ
BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS
Office of the Registrar Evaluation, Jnana Jyothi Central College Campus, Dr Ambedkar Veedhi, Bengaluru-560001 Ph: 080-22295559/29572003 Mail: registrarevlubcu@gmail.com/regev@bcu.ac.in
ಸಂಖ್ಯೆ:ಬೆಂ.ನ.ವಿ.ಐ.ಐ./4ನೇ ಘಟಿಕೋತ್ಸವ/2025–26 ದಿನಾಂಕ: 20.05.2025

ಪತ್ರಿಕಾ ಪ್ರಕಟಣೆ

2021–22ನೇ ಸಾಲಿನಲ್ಲಿ ಸ್ನಾತಕ ಪದವಿ ವ್ಯಾಸಂಗಕ್ಕೆ ಪ್ರವೇಶ ಪಡೆದು 2023–24 ರಲ್ಲಿ ಉತ್ತೀರ್ಣರಾಗಿ ಪದವಿ ಪಡೆಯಲು ಅರ್ಹತೆ ಹೊಂದಿದ ಮತ್ತು 2022–23 ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗಕ್ಕೆ ಪ್ರವೇಶ ಪಡೆದು 2023–24 ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡಲು ಹಾಗೂ 2018–19 ರಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದು, ಎಲ್ಲಾ ಸೆಮಿಸ್ಟರುಗಳ ಎಲ್ಲಾ ವಿಷಯಗಳಲ್ಲಿ ತೇರ್ಗಡೆ ಹೊಂದಿ ಈ ಹಿಂದೆ ನಡೆದ ಘಟಿಕೋತ್ಸವಗಳಲ್ಲಿ ಪದವಿ ಪ್ರಮಾಣ ಪತ್ರ ಪಡೆಯದ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡಲು ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ನಾಲ್ಕನೇ ಘಟಿಕೋತ್ಸವವನ್ನು ಜೂನ್ 11, 2025ರಲ್ಲಿ ಆಯೋಜಿಸಿದೆ. ಈ ವಿಶ್ವವಿದ್ಯಾಲಯದಲ್ಲಿ ಹಾಗೂ ಇದಕ್ಕೆ ಸಂಯೋಜನೆಗೊಂಡಿರುವ ಕಾಲೇಜುಗಳಲ್ಲಿ ಮತ್ತು ಸ್ವಾಯತ್ತ ಕಾಲೇಜುಗಳಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. (ಬಿ.ಎಡ್. ಬಿ.ಪಿ.ಎಡ್ ಸೇರಿದಂತೆ) ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಈ ಕೆಳಕಂಡ ದಿನಾಂಕಗಳ ಒಳಗೆ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿ, ನಂತರ ಅದರ **Printout** ಪ್ರತಿಗಳನ್ನು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ/ವಿಶ್ವವಿದ್ಯಾನಿಲಯದ ಆಯಾ ವಿಭಾಗಗಳ ಮುಖ್ಯಸ್ಥರುಗಳಿಗೆ ಸಲ್ಲಿಸಲು ಸೂಚಿಸಲಾಗಿದೆ.

ಈಗಾಗಲೇ ಪದವಿ ಪ್ರಮಾಣ ಪತ್ರ ಪಡೆದಿರುವವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಇಲ್ಲಿಯವರೆಗೂ ಉತ್ತೀರ್ಣರಾ–ಗಿದ್ದರೂ ಪದವಿ ಪ್ರಮಾಣ ಪತ್ರ ಪಡೆಯದ ವಿದ್ಯಾರ್ಥಿಗಳು ಮಾತ್ರ ನಿಗದಿತ ಶುಲ್ಕ ಪಾವತಿಯೊಂದಿಗೆ ಅರ್ಜಿ ಸಲ್ಲಿಸಬಹುದು.

ಕ್ರ ಸಂ.	ವಿವರ	ದಿನಾಂಕ
1.	ಪೂರ್ಣಗೊಳಿಸಿದ ಅರ್ಜಿಯನ್ನು ಸ್ನಾತಕೋತ್ತರ ವಿಭಾಗಗಳು/ ಕಾಲೇಜುಗಳಿಗೆ ದಂಡ ಶುಲ್ಕವಿಲ್ಲದೆ ಸಲ್ಲಿಸಲು ಕೊನೆಯ ದಿನಾಂಕ	02.06.2025
2.	ಪೂರ್ಣಗೊಳಿಸಿದ ಅರ್ಜಿಯನ್ನು ಸ್ನಾತಕೋತ್ತರ ವಿಭಾಗಗಳು/ ಕಾಲೇಜುಗಳಿಗೆ ರೂ.100/– ದಂಡ ಶುಲ್ಕದೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ,	05.06.2025
3.	ಘಟಿಕೋತ್ಸವಕ್ಕೆ ಪಿ.ಜಿ. ವಿಭಾಗಗಳಲ್ಲಿ ಮತ್ತು ಕಾಲೇಜುಗಳಲ್ಲಿ ಸ್ವೀಕರಿಸಿದ ಅರ್ಜಿಗಳನ್ನ, ಆನ್‌ಲೈನ್ ಶುಲ್ಕ ರಶೀದಿಗಳೊಂದಿಗೆ ಪಟ್ಟಿಯನ್ನು ಕುಲಸಚಿವರು (ಮೌಲ್ಯಮಾಪನ) ಅವರಿಗೆ ಸಲ್ಲಿಸಲು ಕೊನೆಯ ದಿನಾಂಕ	06.06.2025

ಹೆಚ್ಚಿನ ವಿವರಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ https://www.bcu.ac.in/ ನಿಂದ ಪಡೆಯಬಹುದಾಗಿದೆ.

ಸಹಿ/–
ಕುಲಸಚಿವರು (ಆ)
ಡಿಐಪಿಆರ್/ಸಿಪಿ/776/ಸಿಸಿಎಲ್/2025–26

ಪುರಸಭಾ ಕಾರ್ಯಾಲಯ, ಮಧುಗಿರಿ
ಟೌನ್ ಹಾಲ್ ರಸ್ತೆ ಮಧುಗಿರಿ, ತುಮಕೂರು ಜಿಲ್ಲೆ–572132
ನಂ:ಪು.ಸ.ಮ.ಗಿ/ಕಂ.ಶಾ/ಸಿಆರ್/ /2025–26 ದಿನಾಂಕ: 15.05.2025

ಸಾರ್ವಜನಿಕ ಪ್ರಕಟಣೆ

ಮಧುಗಿರಿ ಪುರಸಭೆ ವ್ಯಾಪ್ತಿಯಲ್ಲಿ ಲಭ್ಯವಿರುವ ಸಿ.ಎ/ನಾಗರೀಕ ಸೌಲಭ್ಯಗಳ ನಿವೇಶನಗಳನ್ನು ಈ ಕೆಳಕಂಡಂತೆ ಗುರ್ತಿಸಿದ್ದು ನಾಗರೀಕ ಸೌಲಭ್ಯ ಕಲ್ಪಿಸಲು ಇಚ್ಛೆಯುಳ್ಳಾ ಸಂಘ ಸಂಸ್ಥೆಗಳು/ಸರ್ಕಾರಿ ಇಲಾಖೆಗಳು/ಎನ್.ಜಿ.ಓಗಳು/ನಿಗಮ ಮಂಡಳಿಗಳು/ಇತರೆ ಸಾರ್ವಜನಿಕ ಪ್ರಕಟಣೆ ಮೂಲಕ ದಿನಾಂಕ: 15/05/2025 ರಿಂದ 30/05/2025ರ ವರೆಗೆ ಅರ್ಜಿಗಳನ್ನು ಸಲ್ಲಿಸಲು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಸಾರ್ವಜನಿಕ ಪ್ರಕಟಣೆ ಮೂಲಕ ಪ್ರಕಟಿಸಿದೆ. ಹೆಚ್ಚಿನ ವಿವರಗಳಿಗೆ ಕಛೇರಿಯ ವೆಬ್‌ಸೈಟ್ www.madhugiritown.mrc.gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಕಛೇರಿಯ ಆಡಳಿತ ಶಾಖೆಯನ್ನು ಸಂಪರ್ಕಿಸಿ ವಿವರ ಪಡೆದುಕೊಳ್ಳಲು ಈ ಮೂಲಕ ಕೋರಲಾಗಿದೆ.

ಕ್ರ ಸಂ	ವಾರ್ಡಿನ ಹೆಸರು	ಖಾತಾ ನಂಬರ್	ಅಳತೆ ಚ.ಅಡಿ	ಅಳತೆ ಚ.ಮೀಟರ್	ಮಾರುಕಟ್ಟೆ ಬೆಲೆ	ಒಟ್ಟು ಮೊತ್ತ ರೂ.ಗಳಲ್ಲಿ
01	ಗುರುವಡೇರಹಳ್ಳಿ	8317/60/16/30	6124	569.23	20,000/-	12,12,070/-
02	ಮಲ್ಲೇಗೌಡ ಬಡಾವಣೆ	5600/44	35X78=2730	253.71	8,000/-	20,29,739/-
03	ನಾಗಮ್ಮ ಬಡಾವಣೆ ದಂಡಿನ ಮಾರಮ್ಮ ದೇವಸ್ಥಾನದ ಹತ್ತಿರ	8539/23	2114	196.50	13,000/-	25,54,500/-
04	ಕೃಷ್ಣಪ್ಪ ಬಡಾವಣೆ (ಗುರುವಡೇರಹಳ್ಳಿ)	9924/48	66X40=2640	245.35	20,000/-	49,70,063/-
05	ಶಂಕರಲಿಂಗಪ್ಪ ಬಡಾವಣೆ ಲಿಂಗೇನಹಳ್ಳಿ	10092/61 10093/62 10094/64	4710	437.76	16,000/-	70,04,160/-
06	ಸೋಮೇಶ್ವರ ಬಡಾವಣೆ ಗುರುವಡೇರಹಳ್ಳಿ	10280/118	6259	581.74	9,000/-	52,35,660/-
07	ಕೆ.ಬಿ ಕುಮಾರ್ ಬಡಾವಣೆ ಲಿಂಗೇನಹಳ್ಳಿ	5772/32	1597	148.5	16,000/-	23,76,000/-
08	ಚೋಳಭೈರಪ್ಪ ಬಡಾವಣೆ ಲಿಂಗೇನಹಳ್ಳಿ.	8424/B	1297	399.36	16,000/-	63,89,760/-
09	ಎಂ.ಪಿ ಸುರೇಶ್ ಬಡಾವಣೆ ಗುರುವಡೇರಹಳ್ಳಿ	9705/29	3851	357.94	20,000/-	71,58,800/-
10	ಕೃಷ್ಣಪ್ಪ ಬಡಾವಣೆ ಗುರುವಡೇರಹಳ್ಳಿ	9924/48	66X40=2460	266.81	20,000/-	53,36,200/-
11	ಶಂಕರ್ ಲಿಂಗಪ್ಪ ಬಡಾವಣೆ ಲಿಂಗೇನಹಳ್ಳಿ	10092/16 10093/62 10094/64	4710	437.76	16,000/-	70,04,160/-
12	ಸೋಮೇಶ್ವರ ಬಡಾವಣೆ ಗುರುವಡೇರಹಳ್ಳಿ	10280/118	6259	581.74	9,000/-	52,35,660/-
13	ಸಿರಿ ಬಡಾವಣೆ ನವೀನ್‌ಕುಮಾರ್ ಬಿನ್ ತಿಮ್ಮಯ್ಯ	3/8 4/4 3/1 3/2 3/9 4/1 4/2 4/3 3/10 3/7	25X12=300	91.43	22,000/-	20,11,581/-
14	ಏಜಾಜ್ ಲೇಔಟ್ ಲಿಂಗೇನಹಳ್ಳಿ	100/2 100/3 100/9 17.85+27.65/2	28.55+31/2 X	677.26	16,000/-	1,08,35,280/-
15	ಲಿಂಗೇನಹಳ್ಳಿ	1265B 1265A	2163	201.03	16,000/-	32,16,480/-
16	ಪಾಳ್ಯದಹಳ್ಳಿ ಪೃಥ್ವಿ ಬಡಾವಣೆ	101	8839	821.55	9,000/-	73,93,950/-
17	ನರಸಿಂಹಮೂರ್ತಿ ಸುಜಾತಮ್ಮ ಬಡಾವಣೆ ಗುರುವಡೇರಹಳ್ಳಿ	5551/14B	1999	185.8	20,000/-	37,16,000/-
18	ಬಿ.ಸಿ ಸುಜಾತ ಬಡಾವಣೆ ಗುರುವಡೇರಹಳ್ಳಿ	5642	2798	260.12	20,000/-	52,02,400/-
19	ಕೆಂಪಮ್ಮ ಕೋಂ ಪುಟ್ಟರಾಮಯ್ಯ ಬಡಾವಣೆ ವಿಶೇಷ	45/11	2189	203.45	10,000/-	20,34,500/-

ಸಹಿ/– ಮಂಜುನಾಥ.ಜಿ.ಎ ಅಧ್ಯಕ್ಷರು, ಪುರಸಭೆ, ಮಧುಗಿರಿ.
ಸಹಿ/– ಶ್ರೀಮತಿ ಸುಜಾತ ಶಂಕರ್‌ನಾರಾಯಣ ಉಪಾಧ್ಯಕ್ಷರು, ಪುರಸಭೆ, ಮಧುಗಿರಿ.
ಸಹಿ/– ಶ್ರೀ ಸುರೇಶ್.ಎಸ್. ಮುಖ್ಯಾಧಿಕಾರಿ, ಪುರಸಭೆ, ಮಧುಗಿರಿ.
DIPR/TUM/75/KSMCA/2025-26

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ನಿಜವಾದ ಪ್ರೀತಿ ತಿಳಿವಳಿಕೆಯಿಂದ ಹುಟ್ಟುತ್ತದೆ.
-ಗೌತಮ ಬುದ್ಧ

ಒಗ್ಗಟ್ಟಿನ ಸಂದೇಶ ಮುಕ್ಕಾಗಿಸಿದ ನಿಯೋಗದ ಸದಸ್ಯರ ಆಯ್ಕೆ ವಿವಾದ

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ, ಅದಕ್ಕೆ ಪ್ರತಿಕ್ರಿಯೆಯಾಗಿ ನಡೆಸಿದ 'ಸಿಂಧೂರ ಕಾರ್ಯಾಚರಣೆ' ಮತ್ತು ಭಯೋತ್ಪಾದನೆಯನ್ನು ಸರ್ಕಾರದ ನೀತಿಯಾಗಿಸಿಕೊಂಡಿರುವ ಪಾಕಿಸ್ತಾನದಂತಹ ವಿಚಾರಗಳಲ್ಲಿ ಭಾರತದ ನಿಲುವನ್ನು ವಿವರಿಸಲು ಬಹುಪಕ್ಷಗಳ ಸಂಸದೀಯ ನಿಯೋಗವನ್ನು ನಿಯೋಜನೆ ಮಾಡಿ ಸರ್ಕಾರವು ಉತ್ತಮ ಕೆಲಸ ಮಾಡಿದೆ. ಈ ಪ್ರಕ್ರಿಯೆಯು ನಮ್ಮ ಒಗ್ಗಟ್ಟನ್ನು ಪ್ರದರ್ಶಿಸುತ್ತದೆ ಮತ್ತು ಬಾಹ್ಯ ಬೆದರಿಕೆ ಹಾಗೂ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ದೃಢ ನಿರ್ಧಾರವನ್ನು ತೋರಿಸುತ್ತದೆ. ರಾಜತಂತ್ರಜ್ಞರು, ಪರಿಣತರು, ದೇಶದ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದ ಪ್ರತಿನಿಧಿಗಳು ನಿಯೋಗದ ಭಾಗವಾಗಿದ್ದಾರೆ. ಅಮೆರಿಕ, ಐರೋಪ್ಯ ಒಕ್ಕೂಟದ ದೇಶಗಳು, ರಷ್ಯಾ, ಜಪಾನ್, ಸೌದಿ ಅರೇಬಿಯಾ ಮತ್ತು ಕೊಲ್ಲಿಯ ಇತರ ರಾಷ್ಟ್ರಗಳು, ಇಂಡೊನೇಷ್ಯಾ ಹಾಗೂ ಆಫ್ರಿಕಾದ ದೇಶಗಳಿಗೆ ನಿಯೋಗಗಳು ಭೇಟಿ ನೀಡಲಿವೆ. ಆದರೆ, ಸಂಘರ್ಷದ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಬೆಂಬಲ ನೀಡಿದ್ದ ಚೀನಾ ಮತ್ತು ಟರ್ಕಿಯನ್ನು ನಿಯೋಗಗಳ ಭೇಟಿಯಿಂದ ಹೊರಗೆ ಇರಿಸಿರುವುದು ಗಮನಾರ್ಹ. ಪಾಕಿಸ್ತಾನವು ಅತಿಕ್ರಮಣಕಾರಿ ದೇಶ ಎಂದು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಬಿಂಬಿಸುವ ಭಾರತದ ಪ್ರಯತ್ನಗಳಿಗೆ ನಿಯೋಗಗಳ ವಿವರಣೆಯು ಪೂರಕವಾಗಬಹುದು.



ತಪ್ಪು ಗ್ರಹಿಕೆಗಳನ್ನು ನಿವಾರಿಸುವುದು ಮತ್ತು ಭಾರತದ ನಿಲುವನ್ನು ಪರಿಣಾಮಕಾರಿಯಾಗಿ ತಿಳಿಸುವುದು ನಿಯೋಗಗಳ ಹೊಣೆ

ರಾಜತಾಂತ್ರಿಕ ವಿಚಾರಗಳಿಗೆ ಸಂಬಂಧಿಸಿ ಸರ್ವಪಕ್ಷ ನಿಯೋಗಗಳನ್ನು ಇತರ ದೇಶಗಳಿಗೆ ಭಾರತವು ಈ ಹಿಂದೆಯೂ ಕಳುಹಿಸಿತ್ತು. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದ ಮುಂದೆ ಪಾಕಿಸ್ತಾನವು ಕಾಶ್ಮೀರಕ್ಕೆ ಸಂಬಂಧಿಸಿದ ನಿರ್ಣಯ ಮಂಡಿಸಿದ್ದರ ವಿರುದ್ಧ ವಿವರಗಳನ್ನು ನೀಡಲು ಅಟಲ್ ಬಿಹಾರಿ ವಾಜಪೇಯಿ ಮತ್ತು ಫಾರೂಕ್ ಅಬ್ದುಲ್ಲಾ ಅವರಿದ್ದ ನಿಯೋಗವನ್ನು ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರು 1994ರಲ್ಲಿ ಕಳುಹಿಸಿದ್ದರು. ಮುಂಬೈ ಮೇಲೆ 2008ರಲ್ಲಿ ದಾಳಿಯಾದ ಬಳಿಕ ಆಗಿನ ಪ್ರಧಾನಿ ಮನಮೋಹನ ಸಿಂಗ್ ಅವರು ಸರ್ವ ಪಕ್ಷ ನಿಯೋಗವನ್ನು ವಿವಿಧ ದೇಶಗಳಿಗೆ ಕಳುಹಿಸಿದ್ದರು. ತಪ್ಪು ಗ್ರಹಿಕೆಗಳನ್ನು ನಿವಾರಿಸುವುದು ಮತ್ತು ಭಾರತದ ನಿಲುವನ್ನು ಪರಿಣಾಮಕಾರಿಯಾಗಿ ತಿಳಿಸುವುದು ಈಗಿನ ನಿಯೋಗಗಳ ಹೊಣೆಯಾಗಿದೆ. ಪಹಲ್ಗಾಮ್ ದಾಳಿಯ ನಂತರದ ಸಂಘರ್ಷದಲ್ಲಿ ಭಾರತಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಕವಾದ ಬೆಂಬಲ ಸಿಕ್ಕಿಲ್ಲ. ಭಾರತ ಮತ್ತು ಪಾಕಿಸ್ತಾನವನ್ನು ಸಮಾನವಾಗಿ ಕಾಣುವ ಪ್ರವೃತ್ತಿ ಕೆಲವು ದೇಶಗಳಿಗೆ ಇದೆ. ಆದರೆ, ಹೀಗೆ ನೋಡುವುದರಲ್ಲಿಯೇ ಲೋಪ ಇದೆ ಎಂಬುದನ್ನು ಜಗತ್ತಿಗೆ ತಿಳಿಸಬೇಕಿದೆ– ಭಾರತವು ಭಯೋತ್ಪಾದನೆಯ ಸಂತ್ರಸ್ತ ದೇಶವಾದರೆ, ಪಾಕಿಸ್ತಾನವು ಭಯೋತ್ಪಾದನೆಯ ಮೂಲವಾಗಿದೆ. ಅಲ್ಲಿನ ಸರ್ಕಾರ ಮತ್ತು ಸೇನೆಯು ಭಯೋತ್ಪಾದನೆಗೆ ಬೆಂಬಲವಾಗಿ ನಿಂತಿವೆ. ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯಾದರೆ, ಪಾಕಿಸ್ತಾನವನ್ನು ಸಶಸ್ತ್ರ ಪಡೆಗಳು ಮುನ್ನಡೆಸುತ್ತವೆ. ಈ ವ್ಯತ್ಯಾಸಗಳು ಬಹಳ ಮುಖ್ಯವಾದವು ಮತ್ತು ಅವು ಜಗತ್ತಿನ ಕಣ್ಣಿನಿಂದ ಮರೆಯಾಗಬಾರದು.

ನಿಯೋಗಗಳಿಗೆ ಸದಸ್ಯರ ಆಯ್ಕೆ ವಿಚಾರದಲ್ಲಿ ಅದರಲ್ಲಿಯೂ ಕಾಂಗ್ರೆಸ್ ಪಕ್ಷದಿಂದ ಆಯ್ಕೆ ವಿಚಾರದಲ್ಲಿ ವಿವಾದ ಸೃಷ್ಟಿಯಾಗಿರುವುದು ದುರದೃಷ್ಟಕರ. ಸದಸ್ಯರನ್ನು ಆಯ್ಕೆ ಮಾಡುವ ಮುನ್ನ ಪಕ್ಷದ ಜೊತೆಗೆ ಸಮಾಲೋಚನೆ ನಡೆಸಿಲ್ಲ ಎಂಬ ಅಸಮಾಧಾನ ಕಾಂಗ್ರೆಸ್‌ಗೆ ಇದೆ. ಕಾಂಗ್ರೆಸ್ ಸೂಚಿಸಿದ ನಾಲ್ಕು ಹೆಸರುಗಳ ಪೈಕಿ ಒಂದನ್ನು ಮಾತ್ರ ಸರ್ಕಾರ ಸ್ವೀಕರಿಸಿದೆ. ಒಂದು ನಿಯೋಗದ ನೇತೃತ್ವವನ್ನು ಶಶಿ ತರೂರ್ ಅವರಿಗೆ ವಹಿಸುವ ಮೂಲಕ ಸರ್ಕಾರವು ರಾಜಕಾರಣ ಮಾಡಿದೆ. ಈ ಸಂದರ್ಭದಲ್ಲಿ ಕೂಡ ಕಾಂಗ್ರೆಸ್ ಪಕ್ಷಕ್ಕೆ ಮುಜುಗರ ಉಂಟು ಮಾಡುವ ಪ್ರಲೋಭನೆಯನ್ನು ಸರ್ಕಾರವು ಮೀರಿ ನಿಲ್ಲಬೇಕಿತ್ತು. 'ಸಿಂಧೂರ ಕಾರ್ಯಾಚರಣೆ'ಯೂ ಸೇರಿದಂತೆ ವಿವಿಧ ವಿಚಾರಗಳಲ್ಲಿ ತರೂರ್ ಅವರು ಇತ್ತೀಚೆಗೆ ವ್ಯಕ್ತಪಡಿಸಿದ ವಿಚಾರಗಳು ಕಾಂಗ್ರೆಸ್ ಪಕ್ಷದ ಅಧಿಕೃತ ನಿಲುವಿಗೆ ಅನುಗುಣವಾಗಿ ಇರಲಿಲ್ಲ. ಅದೇನೇ ಇದ್ದರೂ ತರೂರ್ ಅವರು ವಿಚಾರಗಳನ್ನು ಪರಿಣಾಮಕಾರಿಯಾಗಿ ಸಂವಹನ ಮಾಡಬಲ್ಲ ನಾಯಕ. ಹಾಗೆಯೇ ಅಂತರರಾಷ್ಟ್ರೀಯ ಮಟ್ಟದ ರಾಜತಾಂತ್ರಿಕತೆಯಲ್ಲಿ ಅನುಭವಿಯೂ ಹೌದು. ಒಟ್ಟಾರೆ ರಾಷ್ಟ್ರೀಯ ಹಿತಾಸಕ್ತಿಯೇ ಮುಖ್ಯ ಪರಿಗಣನೆ ಆಗಿರಬೇಕಿದ್ದ ಈಗಿನ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಪ್ರತಿಕ್ರಿಯೆ ಅತಿರೇಕದ್ದೂ ಒರಟುತನದಿಂದ ಕೂಡಿದ್ದೂ ಆಗಿದೆ.

ದಿನದ ಟ್ವೀಟ್

ದುರಹಂಕಾರವನ್ನು ಖಂಡಿಸುತ್ತೇನೆ

ಚಂದಾಪುರದ ಎಸ್‌ಬಿಐ ಶಾಖೆಯಲ್ಲಿ 'ನಾನು ಕನ್ನಡ ಮಾತಾಡುವುದಿಲ್ಲ' ಎಂದು ಅಧಿಕಾರಿಯೊಬ್ಬರು ಹೇಳಿದ ವಿಡಿಯೊ ನೋಡಿದೆ. ಆ ಅಧಿಕಾರಿಯ ದುರಹಂಕಾರದ ನಡತೆಯನ್ನು ನಾನು ಖಂಡಿಸುತ್ತೇನೆ. ಬ್ಯಾಂಕ್ ಅಧಿಕಾರಿಗಳು ಸ್ಥಳೀಯ ಭಾಷೆಯಲ್ಲಿ ವ್ಯವಹರಿಸಬೇಕಾದ್ದು ಅಗತ್ಯ. ಘಟನೆಯ ಕುರಿತು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ಕ್ರಮಕ್ಕೆ ಆಗ್ರಹಿಸಲಾಗುವುದು.

ಪುರುಷೋತ್ತಮ ಬಿಳಿಮಲೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಕಿಡಿನುಡಿ

ಯಾವ ಪುರುಷಾರ್ಥಕ್ಕೆ ಗ್ರೇಟರ್ ಬೆಂಗಳೂರು? ಯಾರ ಉದ್ಧಾರಕ್ಕೆ ಬ್ರ್ಯಾಂಡ್ ಬೆಂಗಳೂರು? ಲೂಟಿ ಹೊಡೆಯೋದಕ್ಕೆ ಹೊಸ ಹೊಸ ಹೆಸರೇ? ಎರಡು ವರ್ಷಗಳಿಂದ ಬ್ರ್ಯಾಂಡ್ ಬ್ರ್ಯಾಂಡ್ ಎಂದು ಭಜನೆ ಮಾಡುತ್ತಿದ್ದೀರಲ್ಲ... ಬ್ರ್ಯಾಂಡ್ ಎಂದರೆ ಬೆಂಗಳೂರನ್ನು ಮುಳುಗಿಸುವುದಾ?

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 21-5-2000

- **ವಿವಿಧ ಕಚೇರಿಗಳಿಗೆ ಕೃಷ್ಣ: 52 ಮಂದಿ ಅಮಾನತು**

ಬೆಂಗಳೂರು: ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ನಗರದಲ್ಲಿ ವಿವಿಧ ಇಲಾಖೆಗಳ ಕಚೇರಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ, ಸಿಬ್ಬಂದಿಯ ಹಾಜರಾತಿ ಮತ್ತು ಸಮಯಪಾಲನೆ ಬಗ್ಗೆ ಪರಿಶೀಲಿಸಿ ರಜೆ ಚೀಟಿ ನೀಡದೆ ಗೈರುಹಾಜರಾಗಿದ್ದ 52 ಮಂದಿಯನ್ನು ಪತ್ತೆ ಮಾಡಿ ಅವರನ್ನು ಅಮಾನತುಗೊಳಿಸಲು ಆದೇಶ ನೀಡಿದರು.

ಬೆಳಿಗ್ಗೆ 10.25ಕ್ಕೆ ವಿಧಾನಸೌಧದ ಪಕ್ಕದಲ್ಲೇ ಇರುವ ಬಹುಮಹಡಿ ಕಟ್ಟಡಕ್ಕೆ ತೆರಳಿ ರೇಷ್ಮೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶನಾಲಯಗಳು, ಸರ್ಕಾರಿ ಮುದ್ರಣಾಲಯ ಹಾಗೂ ಕೆಂಪೇಗೌಡ ರಸ್ತೆಯಲ್ಲಿರುವ ವಾಣಿಜ್ಯ ತೆರಿಗೆ ಇಲಾಖೆ ಕಚೇರಿಗೆ ಭೇಟಿ ನೀಡಿ ಅಲ್ಲಿ ತಮ್ಮ ಕೆಲಸಗಳಿಗಾಗಿ ಆಗಮಿಸಿದ್ದ ಸಾರ್ವಜನಿಕರೊಂದಿಗೆ ಮಾತನಾಡಿ ಅವರ ಸಮಸ್ಯೆಗಳನ್ನು ತಿಳಿದುಕೊಂಡರು.

- **ಶರಣಾಗತಿ ಇಲ್ಲ: ಚಂದ್ರಿಕಾ ಘೋಷಣೆ**

ಕೊಲಂಬೊ (ಪಿಟಿಐ): ಜಾಫ್ನಾದಲ್ಲಿ ಎಲ್‌ಟಿಟಿಇ ವಿರುದ್ಧ ಹೋರಾಡುತ್ತಿರುವ ಪಡೆಗಳು ಶರಣಾಗುವ ಪ್ರಶ್ನೆಯೇ ಇಲ್ಲ ಎಂದು ಹೇಳಿರುವ ಶ್ರೀಲಂಕಾದ ಅಧ್ಯಕ್ಷೆ ಚಂದ್ರಿಕಾ ಕುಮಾರತುಂಗ ಅವರು ಇದಕ್ಕಾಗಿ ತಮಿಳು ಗೆರಿಲ್ಲಾಗಳು ತಮ್ಮ ಹತ್ಯೆಗೆ ಮತ್ತೊಮ್ಮೆ ಯತ್ನಿಸಿದರೂ ಹೆದರುವುದಿಲ್ಲ ಎಂದಿದ್ದಾರೆ.

ಒಂದು ವಾರದೊಳಗೆ ಜಾಫ್ನಾ ಪ್ರದೇಶದಲ್ಲಿರುವ ಪ್ರಜೆಗಳು ಶರಣಾಗಬೇಕು ಎಂಬ ಎಲ್‌ಟಿಟಿಇ ಬೇಡಿಕೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

50 ವರ್ಷಗಳ ಹಿಂದೆ

ಬುಧವಾರ, 21-5-1975

- **ಹಾಸನದ ಬಳಿ ಖಾಸಗಿ ಬಸ್ ಅಪಘಾತ: 19 ಜನರ ಸಾವು**

ಹಾಸನ: ನಿನ್ನೆ ರಾತ್ರಿ ಇಲ್ಲಿಗೆ 5 ಮೈಲಿ ದೂರದ ಯಗಚಿ ಹೊಳೆ ಬಳಿ ಮಂಗಳೂರಿನಿಂದ ಬೆಂಗಳೂರಿಗೆ ಹೊರಟಿದ್ದ ಖಾಸಗಿ ಪ್ರವಾಸಿ ಬಸ್ಸೊಂದು ಅಪಘಾತಕ್ಕೀಡಾಗಿ ಇಬ್ಬರು ಚಾಲಕರು ಮತ್ತು ಕ್ಲೀನರ್ ಸಹಿತ ಒಟ್ಟು 19 ಮಂದಿ ಸತ್ತ ಭೀಕರ ದುರಂತ ನಡೆಯಿತು.

ಬಸ್ಸಿನಲ್ಲಿದ್ದ 46 ಮಂದಿಯಲ್ಲಿ 18 ಮಂದಿ ಸ್ಥಳದಲ್ಲೇ ಮೃತಪಟ್ಟು, ಇನ್ನೊಬ್ಬರು ನಂತರ ಆಸ್ಪತ್ರೆಯಲ್ಲಿ ಸತ್ತರು. ಮೃತರಲ್ಲಿ ಇಬ್ಬರು ಹೆಂಗಸರು ಮತ್ತು ಮೂವರು ಮಕ್ಕಳು.

- **ಅವನತಿಯತ್ತ ಮದರಾಸು ಚಿತ್ರೋದ್ಯಮ**

ಮದರಾಸು: ದೇಶದಲ್ಲಿ ಬಹಳ ಹಿಂದಿನಿಂದಲೂ ಚಿತ್ರೋದ್ಯಮಕ್ಕೆ ಹೆಸರಾಗಿದ್ದ ತಮಿಳುನಾಡಿನಲ್ಲಿ ಈಗ ಈ ಉದ್ಯಮ ಡೋಲಾಯಮಾನ ಸ್ಥಿತಿಯಲ್ಲಿದೆ.

ಚಿತ್ರ ನಿರ್ಮಾಣ ವೆಚ್ಚ ಹೆಚ್ಚಿರುವುದು, ಗಲ್ಲಾಪೆಟ್ಟಿಗೆ ತುಂಬದೆ ಇರುವುದು, ಕಾರ್ಮಿಕ ಅಶಾಂತಿ, ಇತರ ದಕ್ಷಿಣ ರಾಜ್ಯಗಳು ಚಿತ್ರೀಕರಣಕ್ಕೆ ನೀಡಿರುವ ಪ್ರೋತ್ಸಾಹ, ತಮಿಳುನಾಡಿನಲ್ಲಿ ಜಲಕ್ಷಾಮ, ವಿದ್ಯುತ್ ಕೊರತೆ ಮತ್ತು ಹಿಂದಿ ಚಿತ್ರಗಳಿಗೆ ಇರುವ ವಿಸ್ತಾರ ಮಾರುಕಟ್ಟೆ –ಈ ಪರಿಸ್ಥಿತಿಗೆ ಕಾರಣವಾಗಿರುವ ಅನೇಕ ಅಂಶಗಳೆಂದು ಉದ್ಯಮದ ಮೂಲಗಳು ಹೇಳಿವೆ. ದಕ್ಷಿಣದಲ್ಲಿ ಬೆಂಗಳೂರು ಮತ್ತು ಮೈಸೂರು ಪ್ರಮುಖ ಚಿತ್ರ ನಿರ್ಮಾಣ ಕೇಂದ್ರಗಳಾಗಿ ಕ್ರಮೇಣ ರೂಪುಗೊಳ್ಳುತ್ತಿವೆ ಎಂಬುದು ಈ ಮೂಲಗಳ ಅಭಿಪ್ರಾಯ.

ಲೋಪ ಸರಿಪಡಿಸುವಿಕೆಯನ್ನು ಯಾರು, ಎಲ್ಲಿಂದ, ಯಾವಾಗ ಆರಂಭಿಸುವುದು?

ಪೊಲೀಸ್ ಇಲಾಖೆ ಮತ್ತು ವಿಶ್ವಾಸಾರ್ಹತೆ!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಯಾವುದೇ ವ್ಯವಸ್ಥೆಯ ವಿಶ್ವಾಸಾರ್ಹತೆ ಮೂರು ಪ್ರಾಥಮಿಕ ಅಂಶಗಳನ್ನು ಅವಲಂಬಿಸಿರುತ್ತದೆ. ಮೊದಲನೆಯದಾಗಿ ನಂಬಿಕೆ; ನಂಬಿಕೆಯೇ ಇಲ್ಲದ ವ್ಯವಸ್ಥೆಯ ಮೇಲೆ ಅವಲಂಬನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎರಡನೆಯದು ಪಾರದರ್ಶಕತೆ; ಇದು ವಿಶ್ವಾಸಾರ್ಹತೆಯ ಗುಣಮಟ್ಟವನ್ನು ನಿರ್ಧರಿಸುತ್ತದೆ. ಮೂರನೆಯದು ಹೊಣೆಗಾರಿಕೆ; ಇದು ನಿರ್ದಿಷ್ಟ ವ್ಯವಸ್ಥೆಯ ರಚನಾ ಸ್ವರೂಪವನ್ನು ಸೂಚಿಸಿದರೂ ಜಾರಿಗೊಳಿಸುವ ಜನರ ಧೋರಣೆ ಮತ್ತು ವರ್ತನೆಗೆ ನೇರವಾಗಿ ಸಂಬಂಧಪಡುತ್ತದೆ.

ಈ ಮಾನದಂಡಗಳನ್ನು ಅನ್ವಯಿಸಿ ಕರ್ನಾಟಕದ ಈಗಿನ ಪೊಲೀಸ್ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಅಳೆದರೆ ಶಂಕಾಸ್ಪದ ಚಿತ್ರಣ ಮೂಡುತ್ತದೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ನಡೆದ ಸರಣಿ ಘಟನೆಗಳು ಒಟ್ಟಾರೆಯಾಗಿ ಒಂದು ವ್ಯವಸ್ಥೆಯ ಭಾಗವಾದ ಇಲಾಖೆಯು ನಂಬಿಕೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ ಕಾಪಾಡಿಕೊಳ್ಳುವಲ್ಲಿ ಕಂಡಿರುವ ಕರುಣಾಜನಕ ವೈಫಲ್ಯ ಮತ್ತು ಅದು ಎದುರಿಸುತ್ತಿರುವ ಸವಾಲುಗಳನ್ನು ಸೂಚಿಸುತ್ತವೆ. ಅಷ್ಟೇ ಅಲ್ಲ, ಇವು ಪೊಲೀಸ್ ಇಲಾಖೆಯ ಅಪಾಯಕಾರಿ ಸೂಚಕಗಳಾಗಿಯೂ ಗೋಚರಿಸುತ್ತವೆ.

ಮಂಗಳೂರು ಹೊರವಲಯದ ಕುಡುಪುವಿನಲ್ಲಿ ಗುಂಪು ಹಲ್ಲೆಗೆ ಒಳಗಾಗಿ ಮೃತಪಟ್ಟ ಮೊಹಮ್ಮದ್ ಅಶ್ರಫ್, ರೌಡಿಪಟ್ಟಿಯಲ್ಲಿದ್ದ ಹಿಂದುತ್ವವಾದಿ ಕಾರ್ಯಕರ್ತ ಸುಹಾಸ್ ಶೆಟ್ಟಿ ಕೊಲೆ, ಸುರತ್ಕಲ್‌ನಲ್ಲಿ 2022ರ ಜುಲೈ 28ರಂದು ನಡೆದಿದ್ದ ಕಾಟಿಪಳ್ಳ ಮಂಗಳಪೇಟೆಯ ಮಹಮ್ಮದ್ ಫಾಝಿಲ್ ಹತ್ಯೆ, ಅದಕ್ಕೂ ಹಿಂದೆ ನಡೆದ ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಕೊಲೆ ಪ್ರಕರಣಗಳು ನಾಡಿನ ನೆಮ್ಮದಿಯನ್ನು ಕದಡಿವೆ. ತುಸು ಹಿಂದಕ್ಕೆ ಸರಿದರೆ ಹುಬ್ಬಳ್ಳಿಯ ನೇಹಾ ಹಿರೇಮಠ, ಅಂಜಲಿ ಅಂಬಿಗೇರ, ಮಡಿಕೇರಿಯ ಬಾಲಕಿ ಮೀನಾ, ಬೆಂಗಳೂರಿನ ಪ್ರಬುದ್ಧಾ, ತುಮಕೂರಿನ ರುಕ್ಸಾನಾ ಹತ್ಯೆಗಳು ನೆನಪಾಗುತ್ತವೆ. ಇವೆಲ್ಲಾ ಮೇಲ್ನೋಟಕ್ಕೆ ಪ್ರತ್ಯೇಕ ಘಟನೆಗಳಂತೆ ಗೋಚರಿಸಿದರೂ ಈ ಹತ್ಯಾಸರಣಿ ಹುಟ್ಟುಹಾಕುವ ಹಲವು ಪ್ರಶ್ನೆಗಳು ಪರೋಕ್ಷವಾಗಿ ಪೊಲೀಸ್ ಇಲಾಖೆಯ ಜಾಗೃತ ಸ್ಥಿತಿ, ಪರಿಸ್ಥಿತಿಯನ್ನು ನಿರ್ವಹಿಸುವ ಸಾಮರ್ಥ್ಯ ಹಾಗೂ ಗುಪ್ತಚರ ಜಾಲದ ಸೋಲನ್ನು ಒಳಗೊಳ್ಳುತ್ತವೆ.

ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರದ ಮಲ್ಲಿಗೆ ಕೊಲೆ ಪ್ರಕರಣವಂತೂ ಪೊಲೀಸ್ ಇಲಾಖೆಯ ಮುಖಕ್ಕೆ ಅಳಿಸಲಾಗದ ಮಸಿ ಬಳಿದಿದೆ. ಪತ್ನಿ ಮಲ್ಲಿಗೆಯ ಕೊಲೆ ಆರೋಪದ ಮೇಲೆ ಪೊಲೀಸರು ಪರಿಶಿಷ್ಟ ಪಂಗಡಕ್ಕೆ ಸೇರಿದ 40 ವರ್ಷ ವಯಸ್ಸಿನ ಸುರೇಶ ಎಂಬ ವ್ಯಕ್ತಿಯನ್ನು ಬಂಧಿಸಿ, ಎರಡು ವರ್ಷ ಜೈಲುಶಿಕ್ಷೆ ಅನುಭವಿಸುವಂತೆ ಮಾಡಿದರು. ಡಿಎನ್‌ಎ ವರದಿಯು ಅಸ್ಥಿಪಂಜರ ಮಲ್ಲಿಗೆಯವರದ್ದಲ್ಲ ಮತ್ತು ಅದು ಅಪರಿಚಿತ ಪುರುಷನದು ಎಂದು ದೃಢಪಡಿಸುವ ಮೊದಲೇ ಪೊಲೀಸರು ಸುರೇಶ ಅವರ ವಿರುದ್ಧ ಅಕಾಲಿಕವಾಗಿ ಆರೋಪಪಟ್ಟಿ ಸಲ್ಲಿಸಿದ್ದರು. ಇನ್ನೊಬ್ಬ ವ್ಯಕ್ತಿಯೊಂದಿಗೆ ಪರಾರಿಯಾಗಿದ್ದ ಮಲ್ಲಿಗೆ ಈ ವರ್ಷದ ಏಪ್ರಿಲ್‌ನಲ್ಲಿ ಜೀವಂತವಾಗಿ ಪ್ರತ್ಯಕ್ಷರಾದರು!

ನ್ಯಾಯ ಪ್ರಕ್ರಿಯೆಯ ಗರ್ಭಪಾತಕ್ಕೆ ಕಾರಣವಾದ 'ಮಲ್ಲಿಗೆ ಕೊಲೆ' ಪ್ರಕರಣದಲ್ಲಿ 2025ರ ಏಪ್ರಿಲ್ 23ರಂದು ನ್ಯಾಯಾಲಯವು ಸುರೇಶ ಅವರನ್ನು ಖುಲಾಸೆಗೊಳಿಸಿ ₹1 ಲಕ್ಷ ಪರಿಹಾರ ಮತ್ತು ಅಪರಿಚಿತ ಮೃತದೇಹದ ಬಗ್ಗೆ ಹೆಚ್ಚಿನ ತನಿಖೆಗೆ ಆದೇಶಿಸಿತು. ಹಿಂದೆ ತನಿಖೆ ನಡೆಸಿದ ಪೊಲೀಸ್ ಅಧಿಕಾರಿಯ ವಿರುದ್ಧ ಎಫ್‌ಐಆರ್ ದಾಖಲಿಸಲು ಕೂಡ ಕೋರ್ಟ್ ಆದೇಶಿಸಿದೆ. ಈ ಪ್ರಕರಣವು ಇಲಾಖೆಯ ತನಿಖಾ ಪದ್ಧತಿಯಲ್ಲಿನ ಲೋಪ, ವೈಜ್ಞಾನಿಕ ಪುರಾವೆಗಳ ನಿರ್ಲಕ್ಷ್ಯವನ್ನಲ್ಲದೇ ಅಂಚಿನಲ್ಲಿರುವ ಸಮುದಾಯಗಳ ವಿರುದ್ಧದ ಪಕ್ಷಪಾತದ ಧೋರಣೆಯನ್ನೂ ತೋರಿಸಿಕೊಟ್ಟಿದೆ. ಇಲಾಖೆಯ ಬಗೆಗಿನ ಸಾರ್ವಜನಿಕ ನಂಬಿಕೆಯನ್ನಂತೂ ಇನ್ನಿಲ್ಲದಷ್ಟು ಹುಸಿಗೊಳಿಸಿದೆ.

ಭೋವಿ ಅಭಿವೃದ್ಧಿ ನಿಗಮ ಹಗರಣ ತನಿಖೆಯ ನೆಪದಲ್ಲಿ ಡಿವೈಎಸ್ಪಿ ಕನಕಲಕ್ಷ್ಮೀ ನೀಡಿದ ಕಿರುಕುಳದಿಂದ ವಕೀಲೆ ಎಸ್.ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾದ ಪ್ರಕರಣದ ತನಿಖೆ ನಡೆಸಲು ಕರ್ನಾಟಕ ಹೈಕೋರ್ಟ್ ಎಸ್‌ಐಟಿ ರಚಿಸಿತ್ತು. ತನಿಖಾ ತಂಡವು ಹೈಕೋರ್ಟ್‌ಗೆ ಸಲ್ಲಿಸಿದ 2,300 ಪುಟಗಳ ಅಂತಿಮ ವರದಿ ಪ್ರಕಾರ ಜೀವಾಗೆ ಡಿವೈಎಸ್‌ಪಿ ಕನಕಲಕ್ಷ್ಮೀ ಕಿರುಕುಳ, ಹಿಂಸೆ ನೀಡಿರುವುದು ಸಾಬೀತಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಹತ್ಯೆ, ಅತ್ಯಾಚಾರ, ದೌರ್ಜನ್ಯ ಪ್ರಕರಣಗಳಲ್ಲಿ ನೊಂದವರಿಗೆ ನ್ಯಾಯ ಸಿಗಲಿ ಎಂಬ ನ್ಯಾಯಪರ ದನಿಗಳನ್ನು ಸಾಮಾನ್ಯವಾಗಿ ಆಲಿಸಬಹುದು. ಅಷ್ಟಕ್ಕೂ ಈ 'ನ್ಯಾಯ' ಎಂದರೆ ಏನು? ಅದನ್ನು ದೊರಕಿಸಿಕೊಳ್ಳುವ ನ್ಯಾಯಯುತ 'ಮಾರ್ಗ' ಯಾವುದು? ನೊಂದವರ ವಿಷಯದಲ್ಲಿ ನ್ಯಾಯ ಸಿಗುವುದು ಎಂದರೆ ಆ ನೋವಿಗೆ ಕಾರಣ ಆದ ಅಪರಾಧಿಗೆ ಕಠಿಣ ಶಿಕ್ಷೆ ವಿಧಿಸುವುದು ಎಂದೇ ಭಾವಿಸಲಾಗಿದೆ. ಅಪರಾಧಕ್ಕೆ ಸೂಕ್ತ ಶಿಕ್ಷೆ ವಿಧಿಸಲು ಇರುವ ಸಾಂಪ್ರದಾಯಿಕ ಮತ್ತು ಕಾನೂನುಬದ್ಧ ಮಾರ್ಗವೆಂದರೆ ನ್ಯಾಯಾಂಗ ಪ್ರಕ್ರಿಯೆ. ಆದರೆ ಈ ಮಾರ್ಗದಲ್ಲಿನ ವಿಳಂಬದ ಸಾಧ್ಯತೆ ಕಾರಣಕ್ಕೆ 'ಅಪರಾಧಿಯನ್ನು ಎನ್‌ಕೌಂಟರ್ ಮಾಡಿಬಿಡಿ' ಎಂಬ ರೋಷಾವೇಶದ ಬೇಡಿಕೆ ಇತ್ತೀಚೆಗೆ ಹೆಚ್ಚಾಗಿದೆ.

ಹುಬ್ಬಳ್ಳಿಯಲ್ಲಿ ಐದು ವರ್ಷ ವಯಸ್ಸಿನ ಮಗುವಿನ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ ಕೊಲೆ ಮಾಡಿದ ಬಿಹಾರ ಮೂಲದ ಆರೋಪಿ ರಿತೇಶ್ ಕುಮಾರ್ (35) ಪೊಲೀಸರ ಎನ್‌ಕೌಂಟರ್‌ಗೆ ಬಲಿಯಾಗಿದ್ದುದು ಅನುಮಾನ ಹುಟ್ಟಿಸಿರುವ ಪ್ರಕರಣ. ವಶಕ್ಕೆ ಪಡೆದು ವಿಚಾರಣೆ ನಡೆಸುವ ವೇಳೆ ಆರೋಪಿಯು ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ, ಪರಾರಿಯಾಗಲು ಯತ್ನಿಸಿದ, ಪಿಎಸ್‌ಐ ಅನ್ನಪೂರ್ಣ ಅವರು ಆತ್ಮರಕ್ಷಣೆಗೆ ಎನ್‌ಕೌಂಟರ್ ಮಾಡಿದ್ದಾರೆ ಎಂಬುದು ಪೊಲೀಸರ ವಿವರಣೆ. ಎನ್‌ಕೌಂಟರ್ ಪದವು ಮೂಲತಃ ಪೊಲೀಸರು ಮತ್ತು ಆರೋಪಿ ನಡುವೆ 'ನಡೆಯುವ' ಘರ್ಷಣೆಯನ್ನು ಬಿಂಬಿಸುತ್ತದೆ. ಆದರೆ ಇತ್ತೀಚೆಗಿನ ಎನ್‌ಕೌಂಟರ್ 'ಮಾಡುವ' ಕ್ರಮ ಬೇರೆಯದೇ ಒಳಾರ್ಥ ಹೊಮ್ಮಿಸುವುದನ್ನು ಗಮನಿಸಬೇಕು. 2019ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಪಶುವೈದ್ಯೆಯೊಬ್ಬರ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಗಳನ್ನು ಎನ್‌ಕೌಂಟರ್ 'ಮಾಡಿದ' ಘಟನೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೇಮಿಸಿದ ಆಯೋಗವು 'ಇದು ಪೊಲೀಸರ ಸೃಷ್ಟಿ' ಎಂದು ಹೇಳಿದೆ.

ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವುದು ನ್ಯಾಯ ವ್ಯವಸ್ಥೆಯ ಅವಿಭಾಜ್ಯ ಕರ್ತವ್ಯ. ಕಠಿಣ ಶಿಕ್ಷೆಗೆ ಅಗತ್ಯವಾದ ಸಾಕ್ಷ್ಯಾಧಾರ ಒದಗಿಸುವ ಹೊಣೆಯನ್ನು ತನಿಖಾಧಿಕಾರಿ ವಹಿಸಬೇಕಾಗುತ್ತದೆ. ಕೊಲೆ, ಅತ್ಯಾಚಾರ ನಡೆದ ಸತ್ಯ ಕಣ್ಣೆದುರೇ ಇರುತ್ತದೆ. ಆದರೆ ಅಪರಾಧ ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂಬ ಕಾರಣಕ್ಕಾಗಿ ನ್ಯಾಯಾಲಯಗಳು ಆರೋಪಿಗಳನ್ನು ಬಿಡುಗಡೆ ಮಾಡುವ ಪ್ರಕರಣಗಳು ಹೇರಳವಾಗಿ ಸಿಗುತ್ತವೆ. ಹೀಗೆ ವೈಫಲ್ಯಕ್ಕೆ ಕಾರಣವಾಗುವ ತನಿಖಾಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವ ವ್ಯವಸ್ಥೆ ಮಾತ್ರ ನಮ್ಮಲ್ಲಿಲ್ಲ.

ಸಂಚಾರ ಪೊಲೀಸರ ವರ್ತನೆ, ಸುಲಿಗೆ ಎಲ್ಲರ ಅನುಭವಕ್ಕೆ ಬಂದರೂ ಕ್ರಮ ವಹಿಸಬೇಕಾದ ಇಲಾಖೆಯ ಮುಖ್ಯಸ್ಥರಿಗೆ ಈ ಕುರಿತು ಮಾಹಿತಿಯೇ ಇರುವುದಿಲ್ಲ. ಬೆಂಗಳೂರಿನಲ್ಲಿ ನಡೆದ ಭಾರತೀಯ ವಾಯುಪಡೆಯ ಅಧಿಕಾರಿ ಮತ್ತು ಕನ್ನಡಿಗ ಬೈಕ್ ಸವಾರನ ಪ್ರಕರಣವನ್ನು ಪೊಲೀಸರು ನಿರ್ವಹಿಸಿದ ರೀತಿ ಅದಕ್ಷತೆಗೆ ಸಾಕ್ಷ್ಯ ಒದಗಿಸುತ್ತದೆ. ಅಪರಾಧಗಳಲ್ಲಿ ಪೊಲೀಸರು ಭಾಗಿಯಾಗುತ್ತಿರುವುದನ್ನು ಬೆಂಗಳೂರಿನ ಪೊಲೀಸ್ ಆಯುಕ್ತ ಬಿ.ದಯಾನಂದ ಸ್ವತಃ ಒಪ್ಪಿಕೊಂಡಿದ್ದಾರೆ. ಪಾರದರ್ಶಕತೆಯ ಪ್ರಾಥಮಿಕ ಅಗತ್ಯ ಪೂರೈಸುವ 'ಬಾಡಿ ಕ್ಯಾಮೆರಾ'ಗಳ ವ್ಯಾಪಕ ಬಳಕೆ ಬಗ್ಗೆ ಅರಿವಿರುವ ಆಯುಕ್ತರು ಅದನ್ನು ಸ್ವತಃ ಧರಿಸುತ್ತಾರೆ. ಆದರೆ, ಇಲಾಖೆಯ ಎಲ್ಲಾ ಸ್ತರಗಳಲ್ಲಿ ಬಾಡಿ ಕ್ಯಾಮೆರಾ ಅಳವಡಿಕೆಯನ್ನು ಖಚಿತಪಡಿಸಿಕೊಳ್ಳಲು ಅವರಿಗೇ ಸಾಧ್ಯವಾಗಿಲ್ಲ!

'ಪೊಲೀಸ್ ವ್ಯವಸ್ಥೆ ಪರಿಣಾಮಕಾರಿಯಾಗಿದ್ದರೆ ವ್ಯಾಪಕ ಅಪರಾಧ ಚಟುವಟಿಕೆಗಳು ಹೇಗೆ ಘಟಿಸುತ್ತವೆ' ಎಂದು ಪ್ರಶ್ನಿಸುತ್ತಾರೆ ಬೆಂಗಳೂರಿನ ಪೊಲೀಸ್ ಆಯುಕ್ತರಾಗಿದ್ದ ಪಿ.ಕೋದಂಡರಾಮಯ್ಯ. ವರ್ಗಾವಣೆ ದಂಧೆ, ರಾಜಕೀಯ ಹಸ್ತಕ್ಷೇಪ, ಭ್ರಷ್ಟಾಚಾರ, ಜಾತೀಯತೆ, ಹಿರಿಯ ಅಧಿಕಾರಿಗಳ ಉದಾಸೀನ ವರ್ತನೆ ಹಾಗೂ ಕಿರಿಯ ಅಧಿಕಾರಿಗಳ ಅನೈತಿಕತೆಯನ್ನು ಅವರು ಪರಿಸ್ಥಿತಿಯ ಕಾರಣಗಳಾಗಿ ಗುರುತಿಸುತ್ತಾರೆ. ಸರ್ಕಾರ ಮನಸ್ಸು ಮಾಡಿದರೆ ಮತ್ತು ಐಪಿಎಸ್ ಅಧಿಕಾರಿಗಳಿಗೆ ರಾಜಕಾರಣಿಗಳನ್ನು ಹೇಗೆ ನಿಭಾಯಿಸಬೇಕೆಂದು ತಿಳಿದಿದ್ದರೆ ವ್ಯವಸ್ಥೆಯನ್ನು ಸರಿಪಡಿಸುವುದು ಅಸಾಧ್ಯವೇನಲ್ಲ ಎಂಬುದು ಅವರ ಖಚಿತ ಅಭಿಪ್ರಾಯ.

ವೃತ್ತಿಪರತೆಯ ಕೊರತೆಯಿಂದ ನರಳುತ್ತಿರುವ ಪೊಲೀಸ್ ಇಲಾಖೆಯ ಲೋಪಗಳ ಸರಿಪಡಿಸುವಿಕೆಯನ್ನು ಯಾರು, ಎಲ್ಲಿಂದ, ಯಾವಾಗ ಆರಂಭಿಸುವುದು...?

ಚುರುಮುರಿ



ಮಳೆ ಬಿಲ್ಲು

• ಮಣ್ಣೆ ರಾಜು

ಮಳೆ ಅವಾಂತರದಲ್ಲಿ ಜನ ನೆಂದು ನೊಂದಿದ್ದರು. ಸಂತ್ರಸ್ತರ ಸಂಕಟ ಆಲಿಸಲು ಬಂದ ಶಾಸಕರು, ಹಾನಿಯ ಪರಿಹಾರಕ್ಕೆ ಸರ್ಕಾರದಿಂದ 'ಮಳೆ ಬಿಲ್ಲು' ಕೊಡಿಸುವ ಭರವಸೆ ನೀಡಿದರು.

'ಸಾರ್, ಮನೆಗೆ ಮಳೆನೀರು ನುಗ್ಗಿ ಫಜೀತಿಯಾಗಿದೆ...' ಜನ ದುಃಖ ಹೇಳಿಕೊಂಡರು.

'ನಾವು ಸಪ್ಲೈ ಮಾಡೊ ನೀರಿಗೆ ವಾಟರ್ ಟ್ಯಾಕ್ಸ್ ಕಟ್ಟಬೇಕು, ಮಳೆನೀರು ಬಂದರೆ ಟ್ಯಾಕ್ಸ್ ಕಟ್ಟಬೇಕಾಗಿಲ್ಲ' ಎಂದು ಜೋಕ್ ಮಾಡಿದ ಶಾಸಕರು, 'ತಗ್ಗಿನಲ್ಲಿ ಮನೆ ಕಟ್ಟಿಕೊಂಡರೆ ನೀರು ನುಗ್ಗದೇ ಇರುತ್ತೇನ್ರೀ?' ಎಂದರು.

ಈ ವೇಳೆ ಶಾಸಕರು ರಸ್ತೆ ಗುಂಡಿ ಮುಚ್ಚುವ, ಚರಂಡಿ ಕ್ಲೀನ್ ಮಾಡುವ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು.

'ಉಯ್ಯೋ ಮಳೆಯಲ್ಲಿ ಗುಂಡಿ ಮುಚ್ಚಿದರೆ ಬಾಳಿಕೆ ಬರುತ್ತಾ?' ಜನ ಕೇಳಿದರು.

'ಇಂಜಿನಿಯರ್‌ಗಳಿಗಿಂಥ ಹೆಚ್ಚಿನ ಜ್ಞಾನ ಐತೇನ್ರೀ ನಿಮಗೆ?' ಸಣ್ಣದಾಗಿ ರೇಗಿ ದೊಡ್ಡದಾಗಿ ನಕ್ಕರು. 'ಗುಂಡಿ ಮುಚ್ಚುವ ಕಾಮಗಾರಿ ಬಿಲ್ ಅನ್ನು ಬೇಗ ಕೊಡುಸ್ತೀನಿ' ಅಂದಾಗ ಎಂಜಿನಿಯರ್, ಗುತ್ತಿಗೆದಾರರು ಆನಂದವಾಗಿ ನಕ್ಕರು.

'ಮರದ ಕೊಂಬೆ ಬಿದ್ದು ಕಾರು ಜಖಂ ಆಗಿದೆ. ಕಾಂಪೌಂಡ್ ಕುಸಿದಿದೆ. ಸರ್ಕಾರದಿಂದ ಪರಿಹಾರ ಕೊಡಿಸಿ' ಮಲ್ಲೇಶಿಯ ಮನವಿ.

'ಕಾರನ್ನು ಶೆಡ್‌ನಲ್ಲಿ ನಿಲ್ಲಿಸಬೇಕು, ರಸ್ತೆಯಲ್ಲಿ ನಿಲ್ಲಿಸಿದ್ದು ನಿಮ್ಮ ತಪ್ಪು'.

'ಡಬಲ್ ಬೆಡ್‌ರೂಂ ಸೈಜಿನ ಶೆಡ್ ಜಾಗದಲ್ಲಿ ಸಿಂಗಲ್ ಬೆಡ್ ರೂಂ ಕಟ್ಟಿ ಬಾಡಿಗೆಗೆ ಕೊಟ್ಟಿದ್ದೇನೆ ಸಾರ್...'

'ಮಳೆಯಲ್ಲಿ ನೆಂದ ಮಗಳಿಗೆ ಜ್ವರ ಬಂದಿದೆ. ಕೆಸರಿನಲ್ಲಿ ಜಾರಿಬಿದ್ದು ಹೆಂಡ್ತಿ ಸೊಂಟ ಮುರಿದುಕೊಂಡಿದ್ದಾಳೆ. ಸರ್ಕಾರದಿಂದ ಚಿಕಿತ್ಸೆ ಬಾಬ್ತಿನ 'ಮಳೆ ಬಿಲ್ಲು' ಕೊಡಿಸಿ ಸಾರ್' ಮೂರ್ತಿ ಕೇಳ್ಕೊಂಡ.

'ಮನೆ ಸೋರಿದರೆ, ಹೆಂಡ್ತಿ ಜಾರಿದರೆ ಸರ್ಕಾರ ರಿಪೇರಿ ಖರ್ಚು ಕೊಡಲ್ಲ...' ಎಂದು ರೇಗುತ್ತಾ ಶಾಸಕರು ಕಾರು ಹತ್ತಿ ಹೊರಟರು.

ಸಂಗತ

ಚಹಾದ ಘಮ, ಅದಕ್ಕೊಂದು ದಿನ!

ಚಹಾ ಸೇವಿಸದೆ ಬ್ರಿಟನ್ನಿನ ಜನರ ಮಧ್ಯಾಹ್ನ ಕಳೆಯುವುದಿಲ್ಲ. ಭಾರತದಲ್ಲಿ ಚಹಾ ಜನರ ನಡುವಿನ ಸಂಪರ್ಕದ ಕೊಂಡಿ

• ಶಿಶಿರ ವಸಿಷ್ಠ

ತಬಲಾ ಮಾಂತ್ರಿಕ ಉಸ್ತಾದ್ ಜಾಕೀರ್ ಹುಸೇನ್ ಅವರು ಜಾಹೀರಾತೊಂದರಲ್ಲಿ 'ವಾಹ್! ತಾಜ್ ಬೋಲಿಯೇ!' ಎಂದು ಹೇಳುತ್ತಿದ್ದುದು ನಾವೆಲ್ಲ ಸೇವಿಸುವ ಚಹಾದ ಘಮ, ರುಚಿ ಮತ್ತು ಹಳೆಯ ನೆನಪುಗಳನ್ನು ತಾಜಾ ಆಗಿಸುತ್ತಿತ್ತು. ದೇಶದ ಉದ್ದಗಲಕ್ಕೂ ಎಲ್ಲ ಸ್ತರಗಳ ಜನರ ಪ್ರೀತಿಪಾತ್ರ ಹಾಗೂ ಸರಳ ಪೇಯವೆನಿಸಿರುವ ಚಹಾವನ್ನು ನೆನಪಿಸಿಕೊಳ್ಳುವ ಅಂತರರಾಷ್ಟ್ರೀಯ ಚಹಾ ದಿನ (ಮೇ 21) ಮತ್ತೆ ಬಂದಿದೆ. ವಿಶ್ವಸಂಸ್ಥೆಯಿಂದ ಅಧಿಕೃತವಾಗಿ ಗುರುತಿಸಿಕೊಂಡಿರುವ ಈ ದಿನ ಚಹಾ ಬೆಳೆ, ಅದರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಾಮುಖ್ಯವನ್ನು ತಿಳಿಸುತ್ತದೆ.

ನಮ್ಮಲ್ಲಿ ನೀಲಗಿರಿ ಟೀ, ಡಾರ್ಜಿಲಿಂಗ್ ಟೀ, ಹರ್ಬಲ್ ಟೀ, ಲೆಮನ್ ಗ್ರಾಸ್ ಟೀ, ಅಸ್ಸಾಂ ಟೀ, ಬ್ಲಾಕ್ ಟೀ, ವೈಟ್ ಟೀ, ಜಿಂಜರ್ ಟೀ, ಮಿಂಟ್ ಟೀ, ಲೆಮನ್ ಟೀ, ಗ್ರೀನ್ ಟೀ... ಹೀಗೆ ಹಲವು ರುಚಿ, ಹೆಸರುಗಳೊಂದಿಗೆ ಹಲವು ಬಗೆಯ ಚಹಾ ಸಿಗುತ್ತದೆ. ಕಾಶ್ಮೀರಿ ಖವಾ, ಹಿಮಾಚಲದ ಕಾಂಗ್ರ ಟೀ, ಹೈದರಾಬಾದಿನ ಇರಾನಿಚಾಯ್, ಪುಣೆಯ ತಂದೂರಿ ಚಾಯ್, ಅರಬ್ ಮೂಲದ ಸುಲೇಮಾನಿ ಚಾಯ್, ಚೀನಾದ ಊಲಾಂಗ್ ಟೀ ಸೇವಿಸುವವರಿಗೆ ವಿಚಿತ್ರ ಕಿಕ್ ಕೊಡುತ್ತವೆ. ಇಂಗ್ಲೆಂಡಿನ ರಾಜ ಚಾರ್ಲ್ಸ್ ಗ್ರೇ (1830) ನೆನಪಿನ 'ಅರ್ಲ್ ಗ್ರೇ ಟೀ' ಪ್ರಪಂಚದ ಅತ್ಯಂತ ಜನಪ್ರಿಯ ಚಹಾಗಳಲ್ಲೊಂದು.

ಲಡಾಖ್, ಟಿಬೆಟ್ ಮತ್ತು ಭೂತಾನ್‌ನ ಜನರಿಗೆ ಯಾಕ್ ಪ್ರಾಣಿಯ ಬೆಣ್ಣೆ ಬೆರೆಸಿದ ಬಟರ್ ಚಹಾ ದಿನಕ್ಕೆ ಮೂರು ಬಾರಿ ಬೇಕೇ ಬೇಕು. ಮೈಸೂರು ಸೀಮೆಯವರಿಗೆ ಮಧ್ಯಾಹ್ನದ ಊಟದ ನಂತರ ಕಾಫಿ ಕುಡಿಯುವ ಹವ್ಯಾಸವಿದ್ದರೆ, ಉಳಿದ ಭಾಗದವರು ಚಹಾ ಕುಡಿದು ಸಂತೃಪ್ತರಾಗುತ್ತಾರೆ. ಉತ್ತರ ಕರ್ನಾಟಕದ ಎಲ್ಲ ಕಡೆ ಚಹಾದ ಘಮ ಮೂಗಿಗೆ ಬಡಿಯುತ್ತದೆ. ಮುಂಬೈನಲ್ಲಿ ದಿನದ 24 ಗಂಟೆಗಳಲ್ಲೂ ಹಬೆಯಾಡುವ ಚಹಾ ಸಿಗುತ್ತದೆ. ಹೈದರಾಬಾದಿಗೆ ಭೇಟಿ ನೀಡುವವರೆಲ್ಲ ಅಲ್ಲಿ ಸಿಗುವ ಪರಿಮಳಯುಕ್ತ ಇರಾನಿ ಚಹಾದೊಂದಿಗೆ ಉಸ್ಮಾನಿಯಾ ಬಿಸ್ಕತ್‌ಗಳನ್ನು ಸವಿಯದೆ ಬರುವುದಿಲ್ಲ. ನಾಲ್ಕು ಜನ ಗೆಳೆಯರು ಒಟ್ಟಿಗೆ ಸೇರಿ ಹರಟುವಾಗ ಮಾತಿಗೆ ರಂಗು ತರುವುದು ಬಿಸಿ ಬಿಸಿ ಚಹಾ. ಅದರಲ್ಲೂ ಮಸಾಲಾ ಚಾಯ್ ಯುವಕರ ಪಾಲಿಗೆ ಬಹಳ ಇಷ್ಟದ್ದು.

ಭಾರತ, ಶ್ರೀಲಂಕಾ, ನೇಪಾಳ ಮತ್ತು ಕೆನ್ಯಾ ಹೆಚ್ಚು ಚಹಾ ಬೆಳೆಯುವ ದೇಶಗಳು. ಜಪಾನ್ ಮತ್ತು ಚೀನಾದಲ್ಲಿ ಚಹಾ ಸೇವನೆಯು ಸಂಸ್ಕೃತಿಯ ಭಾಗ. ಜಪಾನ್ ಟೀ ಪಾರ್ಟಿಗಳು ವಿಶ್ವವಿಖ್ಯಾತ. ಚಹಾ ಸೇವನೆ ಇಲ್ಲದೆ ಬ್ರಿಟನ್ನಿನ ಜನರ ಮಧ್ಯಾಹ್ನದ ಹೊತ್ತು ಸರಿಯುವುದೇ ಇಲ್ಲ. ಜಪಾನ್ ಮತ್ತು ಚೀನಾದ ಜನರ ಸಂಸ್ಕೃತಿಯ ಭಾಗವಾಗಿರುವ ಚಹಾ, ಭಾರತದಲ್ಲಿ ಜನರ ನಡುವಿನ ಸಂಪರ್ಕ ಕೊಂಡಿ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೆ ಉದ್ಯೋಗ ನೀಡಿರುವ ಚಹಾ ಉದ್ಯಮವು ಬಡದೇಶಗಳ ರಫ್ತು ವರಮಾನದ ಮೂಲ. ಆದರೆ, ಬದಲಾಗುತ್ತಿರುವ ವಾಯುಗುಣ ಚಹಾ ಬೆಳೆಯ ಮೇಲೆಯೂ ಅಡ್ಡ ಪರಿಣಾಮಗಳನ್ನು ಬೀರುತ್ತಿದೆ.

ನಮ್ಮ ಈಶಾನ್ಯ ರಾಜ್ಯಗಳ ಪ್ರಮುಖ ವಾಣಿಜ್ಯ ಬೆಳೆ ಚಹಾ. ಅಸ್ಸಾಂ ರಾಜ್ಯವನ್ನು ಭಾರತದ ಚಹಾ ರಾಜಧಾನಿ ಎಂದು ಕರೆಯುತ್ತಾರೆ. ಇಲ್ಲಿನ ಚಹಾ ಬೆಳೆಯು ದೇಶಕ್ಕೆ ಆರ್ಥಿಕ ವರಮಾನ ತಂದುಕೊಡುವುದಲ್ಲದೆ ವಿಶಿಷ್ಟ ಬೆಳೆ ಎಂಬ ಕಾರಣಕ್ಕೆ ಜಾಗತಿಕ ಭೂಪಟದಲ್ಲಿ ಭಾರತಕ್ಕೆ ವಿಶೇಷವಾದ ಸ್ಥಾನ ಕೂಡ ಕಲ್ಪಿಸಿದೆ. ಇಲ್ಲಿ ಬೆಳೆವ ಚಹಾ ಸೊಪ್ಪು ವಿಶ್ವದ ಮೂಲೆ ಮೂಲೆಗೂ ತಲುಪುತ್ತದೆ.

ಪುರಾತನ ಈಜಿಪ್ಟ್, ಗ್ರೀಸ್ ಮತ್ತು ರೋಮ್‌ನಲ್ಲಿ ಬಳಕೆಯಲ್ಲಿದ್ದ ಚಮ್ಮೋ ಮೈಲ್ ಚಹಾ ಹಲವು ಔಷಧಿಗಳ ಕಣಜ ಎಂದೇ ಖ್ಯಾತ. ಋತುಚಕ್ರದ ನೋವು, ಸಂಧಿವಾತ, ಉರಿಊತ ಶಮನ ಮಾಡುವಲ್ಲಿ ಈ ಚಹಾ ನೆರವಾಗುತ್ತದೆ ಎನ್ನಲಾಗಿದೆ. ನಿದ್ರಾಹೀನತೆಯಿಂದ ಬಳಲುವವರು, ಮಧುಮೇಹಿಗಳು ಇದರ ಸೇವನೆ ರೂಢಿಸಿಕೊಂಡರೆ ಆರೋಗ್ಯ ಸುಧಾರಿಸುತ್ತದೆ ಎಂಬ ಮಾತು ಇದೆ. ಆದರೆ, ರಕ್ತ ತೆಳುವಾಗುವ ಮಾತ್ರೆ ತೆಗೆದುಕೊಳ್ಳುವವರು ಇದರ ಸೇವನೆಗೆ ಮುನ್ನ ವೈದ್ಯರ ಸಲಹೆ ಪಡೆಯಬೇಕು. ಗರ್ಭಿಣಿಯರಲ್ಲಿ ಗರ್ಭಪಾತವಾಗುವ ಮತ್ತು ಅಕಾಲದಲ್ಲಿ ಹೆರಿಗೆಯಾಗುವ ಅಪಾಯ ಉಂಟು ಮಾಡುತ್ತದೆ ಎಂಬುದು ವೈದ್ಯರ ಅಂಬೋಣ. ಆದರೆ, ಸಾಮಾನ್ಯವಾದ ಶೀತಕ್ಕೆ ಇದು ರಾಮಬಾಣ ಇದ್ದಂತೆ ಎಂಬ ಮಾತು ಕೂಡ ಇದೆ.

ಚೀನಾದ 'ಔಷಧ ಚಹಾ' ಎಂದೇ ಖ್ಯಾತವಾಗಿರುವ ಯೆಲ್ಲೊ ಟೀ (ಹಳದಿ ಚಹಾ) ಜಗತ್ತಿನಲ್ಲೇ ಅತ್ಯಂತ ವಿರಳ ಮಾದರಿಯದ್ದಾಗಿದೆ. ಚಹಾದ ಎಲೆಗಳು ಸಂಪೂರ್ಣವಾಗಿ ಒಣಗುವುದಕ್ಕಿಂತ ಮುಂಚೆ ಅಲ್ಪ ಪ್ರಮಾಣದಲ್ಲಿ ಹುದುಗು ಬರುವಂತೆ ಮಾಡಿ ಅದರಲ್ಲಿನ ಕಿಣ್ವಗಳನ್ನು ಕೊಂದು ಅದರ 'ಹಸಿರುತನ'ವನ್ನು ತೆಗೆಯಲಾಗುತ್ತದೆ. ಚೀನಾದ ಔಷಧ ಪದ್ಧತಿಯಲ್ಲಿ ಪ್ರಮುಖ ಸ್ಥಾನ ಗಳಿಸಿರುವ ಈ ಚಹಾಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹು ಬೇಡಿಕೆ ಇದೆ.

ಅಮೆರಿಕದ ಕ್ರಾಂತಿಗೂ ಚಹಾಕ್ಕೂ ನೇರ ನಂಟಿದೆ. 1773ರಲ್ಲಿ ಅಮೆರಿಕವನ್ನು ರಾಜಕೀಯ ಹಿಡಿತದಲ್ಲಿ ಇಟ್ಟುಕೊಂಡಿದ್ದ ಈಸ್ಟ್ ಇಂಡಿಯಾ ಕಂಪನಿ ಚಹಾದ ಮೇಲೆ ತೆರಿಗೆ ಹಾಕಿದಾಗ ಅಮೆರಿಕನ್ನರು ರೊಚ್ಚಿಗೆದ್ದು ಬಾಸ್ಟನ್ ಬಂದರಿನಲ್ಲಿ ನಿಂತಿದ್ದ ಬ್ರಿಟಿಷ್ ಹಡಗುಗಳನ್ನೇರಿ ಅದರಲ್ಲಿ 342 ಡಬ್ಬಿಗಳಲ್ಲಿ ತುಂಬಿ ಇಟ್ಟಿದ್ದ ಚಹಾ ಸೊಪ್ಪನ್ನು ಸಮುದ್ರಕ್ಕೆ ಸುರಿದು ಪ್ರತಿಭಟನೆ ನಡೆಸಿದರು. ಅಮೆರಿಕ ಕ್ರಾಂತಿಯ ಮೊದಲ ಹೋರಾಟ ಇದಾಗಿತ್ತು. ಇದನ್ನು 'ಬಾಸ್ಟನ್ ಟೀ ಪಾರ್ಟಿ' ಎಂದು ಕರೆಯುತ್ತಾರೆ.

ವಾಚಕರ ವಾಣಿ

ಮಳೆ ಮತ್ತು ನಗರಗಳ ನೆರೆ

ಹಿಂದೆ ನಮ್ಮ ಮನೆಗಳು ಮಣ್ಣಿನ ಮಾಳಿಗೆ ಹೊಂದಿದ್ದವು. ಮಳೆ ಎಷ್ಟು ಆಗಿದೆ ಎಂದು ಮಾಳಿಗೆ ಮೇಲೆ ಬಿದ್ದ ನೀರು ಹರಿನಾಳಿಗೆಯಲ್ಲಿ ಬೀಳುವುದನ್ನು ನೋಡಿ ಜನ ಅಂದಾಜು ಮಾಡುತ್ತಿದ್ದರು. ಮಳೆನೀರಿನ ಒಂದಿಷ್ಟನ್ನು ಆ ಮಣ್ಣು ಹೀರಿಕೊಳ್ಳುತ್ತಿತ್ತು. ಇನ್ನುಳಿದಿದ್ದು ಹರಿಯುತ್ತಿತ್ತು. ಆದರೆ ಈಗ ನಮ್ಮ ನಗರ, ಪಟ್ಟಣಗಳು ಹೇಗೆ ಬೆಳೆದಿವೆ ನೋಡಿ. ಡಾಂಬರ್ ರಸ್ತೆ ಪಕ್ಕದಲ್ಲಿ ಪಾದಚಾರಿ ಮಾರ್ಗ, ನಂತರ ಚರಂಡಿ, ನಂತರ ಮನೆ ಕಾಂಪೌಂಡ್, ಅದಾದ ನಂತರ ಕಾಟಾಚಾರಕ್ಕೆ ಮೂರಡಿ ಜಾಗ ಬಿಟ್ಟು ಮನೆ ಇರುತ್ತದೆ.

ಸುತ್ತಲಿನ ಖಾಲಿ ಜಾಗದಲ್ಲೂ ಹುಲ್ಲು, ಗಿಡಗಂಟಿ ಬೆಳೆಯಬಾರದು ಎಂದು ಕಾಂಕ್ರೀಟ್ ಅಥವಾ ಟಾರು ಹಾಕಿಸಿರುತ್ತಾರೆ. ನೀರು ಇಂಗಲು ಒಂದು ಅಡಿ ಮಣ್ಣಿನ ನೆಲವೂ ಇರುವುದಿಲ್ಲ. ಆದ್ದರಿಂದ ಬಿದ್ದ ಮಳೆನೀರು ಸರ್ರನೆ ಹರಿದು ಗಟಾರಕ್ಕೆ ಹೋಗುತ್ತದೆ. ದೊಡ್ಡ ಮಳೆ ಬಂದರೆ ನೀರು ಎಲ್ಲಾ ಕಡೆ ನುಗ್ಗುವುದು ಸಹಜ. ನಾವು ಕಟ್ಟಿಕೊಂಡ ಬದುಕು ನಿಸರ್ಗವಿರೋಧಿ ಆಗಿದೆ. ಆದ್ದರಿಂದ ಅವರಿವರನ್ನು ಟೀಕಿಸದೆ, ಮನೆಯೊಳಗೆ ನೀರು ನುಗ್ಗಿದರೆ ಕಾಗದದ ದೋಣಿ ಮಾಡಿ ಮಕ್ಕಳೊಂದಿಗೆ ಆಟವಾಡಿ. ಅದೊಂದೇ ಉಳಿದಿರುವ ಮಾರ್ಗ!

ಶಶಿಧರ ಪಾಟೀಲ, ಬಾಗಲಕೋಟೆ

ಜನೌಷಧಿ: ಆದೇಶ ಹಿಂಪಡೆಯಲು ಒತ್ತಾಯಿಸಬೇಡಿ

ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿನ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳನ್ನು ತೆರವು ಮಾಡಲು ಆರೋಗ್ಯ ಸಚಿವರು ಆದೇಶಿಸಿರುವುದು ಸರಿ. ಇದನ್ನು ವಿರೋಧಿಸಿ, ಈ ಆದೇಶವನ್ನು ಹಿಂಪಡೆಯಬೇಕೆಂದು ಬಿಜೆಪಿಯ ಕೆಲವು ಶಾಸಕರು, ನಾಯಕರು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಸರ್ಕಾರ ಯಾಕಾಗಿ ಈ ಆದೇಶ ಮಾಡಿದೆ ಎಂಬ ವಿಚಾರ ಅವರಿಗೆ ಅರ್ಥವಾಗಿಲ್ಲ. ತಾನು ಉಚಿತವಾಗಿ ಔಷಧ ಕೊಡುತ್ತೇನೆಂದು ಸರ್ಕಾರವು ಹೇಳುತ್ತಲೇ ಬಂದಿದೆ, ಬಿಜೆಪಿ ನೇತೃತ್ವದ ಸರ್ಕಾರವಿದ್ದಾಗಲೂ ಇದೇ ಮಾತು ಹೇಳಿದೆ. ಆದರೆ, ಸರ್ಕಾರಿ ಆಸ್ಪತ್ರೆಗೆ ಬಂದ ರೋಗಿಗಳಿಗೆ ಹೊರಗಿನಿಂದ ಔಷಧಿ ತರುವಂತೆ ಚೀಟಿ ಬರೆದುಕೊಡುವುದು, ತಮ್ಮಲ್ಲಿ ಔಷಧಗಳ ದಾಸ್ತಾನು ಇಲ್ಲವೆಂದು ಹೇಳುವುದು ಬಹುಕಾಲದಿಂದ ಇದೆ. ಇದರ ಜೊತೆಗೆ ಆಸ್ಪತ್ರೆಯ ಆವರಣದೊಳಗೇ ಔಷಧ ಮಾರಾಟ ಮಾಡುವ ಜನೌಷಧಿ ಕೇಂದ್ರಗಳು! ಹಾಗಾದರೆ ರೋಗಿಗಳಿಗೆ ಸರ್ಕಾರವು ಉಚಿತವಾಗಿ ಔಷಧ ಕೊಡುವ ವಿಚಾರ ಎಲ್ಲಿ ಹೋಯಿತು?

ಜನಸಂಘಟನೆಗಳು ಈ ಪ್ರಶ್ನೆಯನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಮುಂದಿಟ್ಟಿದ್ದವು. ಸರ್ಕಾರವು ಆಶ್ವಾಸನೆ ನೀಡಿರುವಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಔಷಧ ಕೊಡಬೇಕು ಎಂದು ಫೆಬ್ರುವರಿಯಲ್ಲಿ 13 ಜಿಲ್ಲೆಗಳ ಜನರು ಸಚಿವರಿಗೆ ಪತ್ರ ಬರೆದಿದ್ದರು. ಜನರ ಅಹವಾಲು ಮನ್ನಿಸಿ ಸಚಿವರು ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿನ ಜನೌಷಧಿ ಕೇಂದ್ರಗಳನ್ನು ತೆರವು ಮಾಡಲು ಆದೇಶಿಸಿದ್ದಾರೆ. ಈ ಆದೇಶ ಬೇಗನೆ ಜಾರಿಯಲ್ಲಿ ಬರಲಿ. ಸರ್ಕಾರಿ ಆಸ್ಪತ್ರೆಗೆ ಬರುವವರಿಗೆ ಔಷಧಗಳು ಉಚಿತವಾಗಿ ಲಭ್ಯವಾಗಲಿ. ಈ ಆದೇಶ ಹಿಂತೆಗೆದುಕೊಳ್ಳಲು ದಯವಿಟ್ಟು ಯಾರೂ ಒತ್ತಾಯಿಸಬೇಡಿ.

ಶಾರದಾ ಗೋಪಾಲ, ಧಾರವಾಡ

ಬಿ ಖಾತಾ: ವಿದ್ಯುತ್ ಸಂಪರ್ಕ ಏಕಿಲ್ಲ?

ಬೆಂಗಳೂರು ಜಲಮಂಡಳಿಯಿಂದ ತಾತ್ಕಾಲಿಕ ನೀರಿನ ಸಂಪರ್ಕ ಹಾಗೂ ಬೆಸ್ಕಾಂನಿಂದ ವಿದ್ಯುತ್ ಸಂಪರ್ಕ ಪಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ (ಬಿಬಿಎಂಪಿ) ಕಟ್ಟಡಗಳ ಸ್ವಾಧೀನಾನುಭವ ಪ್ರಮಾಣಪತ್ರ ಅಥವಾ ಒ.ಸಿ. ಪಡೆಯಬೇಕೆಂಬ ನಿಯಮ ರೂಪಿಸಲಾಗಿದೆ.

ಬಿ ಖಾತಾ ಆಸ್ತಿಗಳಿಗೆ ಈ ರೀತಿಯ ಯಾವುದೇ ಪ್ರಮಾಣಪತ್ರ ಪಡೆಯುವ ಅವಶ್ಯಕತೆ ಇಲ್ಲ ಎಂದು ಮೊದಲು ಹೇಳಲಾಗಿತ್ತು. ಈಗ ಈ ನಿಯಮ ತಂದಿರುವುದರಿಂದ, ಬಿ ಖಾತಾ ಆಸ್ತಿ ಮಾಲೀಕರು ಸಂಕಷ್ಟ ಎದುರಿಸಬೇಕಾಗಿದೆ. ಬಿ ಖಾತಾ ನಿವೇಶನಗಳಲ್ಲಿ ಮನೆ ನಿರ್ಮಾಣ ಆರಂಭಿಸಿದವರು ತಾತ್ಕಾಲಿಕವಾಗಿ ನೀರು, ವಿದ್ಯುತ್ ಸಂಪರ್ಕ ಸಿಗದೆ ತ್ರಿಶಂಕು ಸ್ಥಿತಿಯಲ್ಲಿ ಇರುವಂತಾಗಿದೆ. ನಿಗದಿತ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕವನ್ನೆಲ್ಲ ಕಟ್ಟಿ, ಸರ್ಕಾರಿ ದರ ನೀಡಿಯೇ ಬಿ ಖಾತಾ ಆಸ್ತಿ ನೋಂದಣಿ ಮಾಡಿಕೊಂಡಿರುವವರನ್ನು ಯಾವುದೋ ಮಹಾ ಅಪರಾಧ ಮಾಡಿದವರಂತೆ ನೋಡಲಾಗುತ್ತಿದೆ. ಸರ್ಕಾರ ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಗೀತಾ ಕೆಂಗೇರಿ, ಬೆಂಗಳೂರು

ಸತತವಾಗಿ ಮಳೆ ಸುರಿದರೆ ಜನರ ಗತಿ?

ಬೆಂಗಳೂರಿನ ಹಲವು ಪ್ರದೇಶಗಳು ಜಲಾವೃತಗೊಂಡಿವೆ, ಮನೆಗಳಿಗೆ ನೀರು ನುಗ್ಗಿದೆ. ಕೆಲವೆಡೆ ರಸ್ತೆಗಳಲ್ಲಿ ಜನರು ದೋಣಿ ಬಳಸಿ ಓಡಾಟ ನಡೆಸಿದರು. ಹೀಗೇ ಸತತವಾಗಿ ಮಳೆಯಾದರೆ ಜನರ ಗತಿ ಏನು? ನಗರದ ರಸ್ತೆಗಳು ಗುಂಡಿಮಯವಾಗಿವೆ. ಇದು ಅನಾಹುತಕ್ಕೆ ಕಾರಣವಾಗುತ್ತದೆ. ಇನ್ನು ಕೆಲವು ದಿನಗಳಲ್ಲಿ ಶಾಲೆಗಳು ಪುನರಾರಂಭ ಆಗುತ್ತವೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚಿನ ಮುಂಜಾಗರೂಕತೆಯೊಂದಿಗೆ ಕೆಲಸ ಮಾಡಬೇಕಿದೆ. ಪ್ರತಿ ಬಾರಿ ಹೆಚ್ಚು ಮಳೆಯಾದಾಗಲೂ ಜನ ಒಂದಲ್ಲ ಒಂದು ಬಗೆಯಲ್ಲಿ ತೊಂದರೆ ಅನುಭವಿಸಬೇಕಾಗಿದೆ. ಇಷ್ಟೆಲ್ಲಾ ಸಮಸ್ಯೆ ಇದ್ದರೂ ಸಂಬಂಧಪಟ್ಟ ಎಂಜಿನಿಯರ್‌ಗಳು ಏನು ಮಾಡುತ್ತಿರುತ್ತಾರೆ, ಸಮಸ್ಯೆ ಪರಿಹಾರ ಅವರಿಂದ ಏಕೆ ಸಾಧ್ಯವಾಗುತ್ತಿಲ್ಲ?

ಅರ್ಪಣಾ ಸ್ವರೂಪ್, ಬೆಂಗಳೂರು

ಫಲಿತಾಂಶದ ಹೊಣೆ ಹೊರಬೇಕು

ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಉಲ್ಲೇಖವಾಗಿ ಇರಿಸಿಕೊಂಡು ಗಿರಿಜಾಶಂಕರ್ ಜಿ.ಎಸ್. ಇಡೇಹಳ್ಳಿ ಅವರು ಫಲಿತಾಂಶಕ್ಕೆ ಶಿಕ್ಷಕರು ಮಾತ್ರವೇ ಹೊಣೆಯೇ (ಪ್ರ.ವಾ., ಸಂಗತ, ಮೇ 19) ಎಂಬ ಪ್ರಶ್ನೆ ಎತ್ತಿದ್ದಾರೆ. ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಸರ್ಕಾರ ನೀಡುವ ವೇತನ, ಇತರೆ ಭತ್ಯೆಗಳು ಮತ್ತು ಸೌಕರ್ಯಗಳು ಖಾಸಗಿ ಶಾಲಾ ಶಿಕ್ಷಕರಿಗೆ ಸಿಗುವುದಿಲ್ಲ. ಆದರೂ ಶಾಲೆಯ ಫಲಿತಾಂಶಕ್ಕಾಗಿ, ತಮ್ಮ ಕಾರ್ಯಕ್ಷಮತೆಯ ಮೌಲ್ಯಮಾಪನವನ್ನು ಗಮನಿಸಿ ಖಾಸಗಿ ಶಾಲೆಯ ಶಿಕ್ಷಕರು ಫಲಿತಾಂಶಕ್ಕೆ ಹೆಚ್ಚು ಪ್ರಾಮುಖ್ಯ ನೀಡುತ್ತಾರೆ. ಇವೆರಡಕ್ಕೂ ಪ್ರಾಮುಖ್ಯ ನೀಡುವ ಸರ್ಕಾರಿ ಶಾಲೆಗಳು ವಿರಳ. ಹಾಗಾಗಿ ಸರ್ಕಾರಿ ಶಾಲೆಯ ಶಿಕ್ಷಕರು ಫಲಿತಾಂಶದ ಹೊಣೆ ಹೊತ್ತುಕೊಳ್ಳಲೇಬೇಕು.

ದಿವ್ಯಶ್ರೀ, ಬೇಲೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶದ ಬಹುತೇಕ ರಾಜ್ಯಗಳಿಗೆ ಮದ್ಯವು ಆದಾಯದ ಪ್ರಮುಖ ಮೂಲ. ಈ ಕಾರಣಕ್ಕೆ ಆಗಿಂದಾಗ್ಗೆ ಮದ್ಯಕ್ಕೆ ಸಂಬಂಧಿಸಿದ ಶುಲ್ಕ, ತೆರಿಗೆಗಳನ್ನು ಹೆಚ್ಚಿಸುತ್ತಲೇ ಇರುತ್ತವೆ. ಕರ್ನಾಟಕ ಸರ್ಕಾರವು ಈಗ ಅಬಕಾರಿ ಕಾನೂನಿಗೆ ತಿದ್ದುಪಡಿ ಮಾಡಿ, ಕರಡು ನಿಯಮಗಳ ಅಧಿಸೂಚನೆ ಪ್ರಕಟಿಸಿದೆ. ಅದರ ಅನ್ವಯ ಮದ್ಯ ತಯಾರಿಕೆ, ಬಾಟ್ಲಿಂಗ್, ಮಾರಾಟ ಮಳಿಗೆಗಳ ಪರವಾನಗಿ ಸೇರಿ ಎಲ್ಲ ಸ್ವರೂಪದ ಶುಲ್ಕವನ್ನು ಶೇ 100ರಷ್ಟು ಹೆಚ್ಚಿಸಲು ಮುಂದಾಗಿದೆ. ಇದರಿಂದ ಮದ್ಯ ತಯಾರಕರು ಮತ್ತು ಮಾರಾಟಗಾರರು ಸಂಕಷ್ಟ ಎದುರಿಸಬೇಕಾಗಿದೆ. ಯಾವುದೇ ರೀತಿಯ ಬೆಲೆ/ಶುಲ್ಕ ಹೆಚ್ಚಳವು ಅಂತಿಮವಾಗಿ ಗ್ರಾಹಕರಿಗೆ ವರ್ಗಾವಣೆಯಾಗುತ್ತದೆ. ಮುಂದಿನ ದಿನಗಳಲ್ಲಿ ಮದ್ಯ ಮತ್ತಷ್ಟು ದುಬಾರಿಯಾಗಲಿದೆ ಎಂದು ಹೇಳಲಾಗುತ್ತದೆ

ಅಬಕಾರಿ ಶುಲ್ಕ ದುಪ್ಪಟ್ಟು ಪರಿಣಾಮವೇನು?

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳಿಗೆ ಅಬಕಾರಿ ಮತ್ತು ಇಂಧನ ಆದಾಯವೇ ಪ್ರಮುಖ ಹಣಕಾಸು ಮೂಲಗಳಾಗಿವೆ. ರಾಜ್ಯಗಳ ಸ್ವಂತ ತೆರಿಗೆ ಆದಾಯದಲ್ಲಿ (ಎಸ್‌ಒಟಿಆರ್) ಅಬಕಾರಿ ಆದಾಯದ ಪಾಲು ಗಮನಾರ್ಹವಾದುದಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ 2019–20ರ ಒಂದು ಅಧ್ಯಯನದ ಪ್ರಕಾರ, ಹಲವು ರಾಜ್ಯಗಳ ಎಸ್‌ಒಟಿಆರ್‌ನಲ್ಲಿ ಅಬಕಾರಿ ಸುಂಕದ ಪ್ರಮಾಣವು ಶೇ 10–ಶೇ 15ರಷ್ಟು ಇದೆ. ಕರ್ನಾಟಕ, ರಾಜಸ್ಥಾನ ಸೇರಿದಂತೆ ಐದು ರಾಜ್ಯಗಳಲ್ಲಿ ಅಬಕಾರಿ ಆದಾಯವು ರಾಜ್ಯದ ಆದಾಯದ ಶೇ 20ಕ್ಕಿಂತ ಹೆಚ್ಚು ಎಂದು 'ಇಂಡಿಯನ್ ರೇಟಿಂಗ್ ಆ್ಯಂಡ್ ರಿಸರ್ಚ್' ಏಜೆನ್ಸಿ ವರ್ಷದ ಹಿಂದೆಯೇ ಹೇಳಿತ್ತು. ಮದ್ಯ ಮಾರಾಟದ ಆಧಾರದಲ್ಲಿ ಅದರ ಆದಾಯವು ನಿರ್ಧಾರವಾಗುತ್ತದೆ. ಕರ್ನಾಟಕ, ತಮಿಳುನಾಡು, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ತೆಲಂಗಾಣ ಅಬಕಾರಿಯಿಂದ ಅತಿ ಹೆಚ್ಚು ಆದಾಯ ಗಳಿಸುತ್ತಿರುವ ರಾಜ್ಯಗಳಾಗಿವೆ.

ಅಬಕಾರಿ ರಾಜ್ಯದ ವಿಷಯವಾಗಿದ್ದು, ಪ್ರತಿ ರಾಜ್ಯವೂ ತನ್ನದೇ ಆದ ಅಬಕಾರಿ ನೀತಿ ಹೊಂದಿದೆ. ಸುಂಕ, ಶುಲ್ಕವೂ ಭಿನ್ನವಾಗಿವೆ. ಪ್ರತಿಯೊಂದು ರಾಜ್ಯದಲ್ಲಿಯೂ ಸರ್ಕಾರ ತನ್ನದೇ ಘಟಕಗಳ ಮೂಲಕ ಇಲ್ಲವೇ ಖಾಸಗಿಯವರಿಗೆ ಪರವಾನಗಿ (ಸನ್ನದು) ನೀಡುವ ಮೂಲಕ ಮದ್ಯ ಮಾರಾಟ ಮಾಡುತ್ತದೆ. ಪ್ರತಿ ವರ್ಷವೂ ಮದ್ಯದಂಗಡಿಗಳ ಸನ್ನದು ನವೀಕರಣ ಮಾಡಬೇಕು. ಅದಕ್ಕಾಗಿ ಪ್ರತಿ ವರ್ಷವೂ ಭಾರಿ ಮೊತ್ತವನ್ನು ಶುಲ್ಕವಾಗಿ ಭರಿಸಬೇಕು.

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನಂಥ (ಎಂಎಸ್‌ಐಎಲ್) ಘಟಕಗಳ ಮೂಲಕ ಮತ್ತು ಖಾಸಗಿಯವರಿಗೆ ಮದ್ಯದಂಗಡಿಗಳನ್ನು ನಡೆಸಲು ಪರವಾನಗಿ ನೀಡುವ ಮೂಲಕ ರಾಜ್ಯದಲ್ಲಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಎಲ್ಲ ಸರ್ಕಾರಗಳೂ ಕಾಲದಿಂದ ಕಾಲಕ್ಕೆ ಬಿಯರ್ ಮತ್ತು ದೇಶೀಯ ಮದ್ಯಗಳ (ಐಎಂಎಲ್) ಮೇಲಿನ ತೆರಿಗೆಯನ್ನು ಹೆಚ್ಚಿಸುತ್ತಲೇ ಬರುತ್ತಿವೆ. ಆದಾಯ ಸಂಗ್ರಹದ ಗುರಿ ಮುಟ್ಟುವ ಸಲುವಾಗಿಯೂ ಸರ್ಕಾರಗಳು ಮದ್ಯದ ಬೆಲೆಯನ್ನು ಹೆಚ್ಚಿಸಿದ್ದುಂಟು. ಅದರಲ್ಲೂ ಹೆಚ್ಚು ಜನ ಕುಡಿಯುವ ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು (ಎಇಡಿ) ಹಲವು ಬಾರಿ ಹೆಚ್ಚಳ ಮಾಡಲಾಗಿದೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಿಯರ್ ಮೇಲಿನ ಎಇಡಿ ಮೂರು ಬಾರಿ ಹೆಚ್ಚಾಗಿದೆ. ಈಗ ಅಬಕಾರಿ ಶುಲ್ಕವೂ ಸೇರಿದಂತೆ ಹಲವು ರೀತಿಯ ಶುಲ್ಕಗಳಲ್ಲಿ ಭಾರಿ ಹೆಚ್ಚಳ ಮಾಡಲು ಸರ್ಕಾರ ಹೊರಟಿದೆ. ತಯಾರಿಕೆಯ ಮಟ್ಟದಲ್ಲೂ ಶುಲ್ಕವನ್ನು ಹೆಚ್ಚಿಸಲು ಅಧಿಸೂಚನೆ ಪ್ರಕಟಿಸಲಾಗಿದೆ. ಮಾರಾಟ ಮಳಿಗೆಗಳ ಸನ್ನದು ಶುಲ್ಕ ದುಪ್ಪಟ್ಟುಗೊಳಿಸಲಾಗಿದೆ. ಡಿಸ್ಟಿಲರಿ ಮತ್ತು ವೇರ್‌ಹೌಸ್ ಸನ್ನದು ಶುಲ್ಕವನ್ನು ₹45 ಲಕ್ಷದಿಂದ ₹90 ಲಕ್ಷಕ್ಕೆ, ಬ್ರುವರಿ ಸನ್ನದು ಶುಲ್ಕವನ್ನು ₹27 ಲಕ್ಷದಿಂದ ₹ 54 ಲಕ್ಷಕ್ಕೆ ಹೆಚ್ಚಳ ಮಾಡಲಾಗಿದೆ. ಇದಲ್ಲದೇ ಬಾಟ್ಲಿಂಗ್ ಸನ್ನದು ಶುಲ್ಕ, ಬಲ್ಕ್ ಬಿಯರ್ ಮಾರಾಟ ಗುತ್ತಿಗೆಯನ್ನೂ ದುಪ್ಪಟ್ಟುಗೊಳಿಸಲಾಗಿದೆ.

'ಹೊರೆ ಗ್ರಾಹಕರಿಗೆ ವರ್ಗ ಅನಿವಾರ್ಯ'

ರಾಜ್ಯದಲ್ಲಿ ಸಿಎಲ್2 (ವೈನ್ ಶಾಪ್), ಸಿಎಲ್ 4 (ಕ್ಲಬ್), ಸಿಎಲ್ 6ಎ (ತಾರಾ ಹೋಟೆಲ್) ಸಿಎಲ್7 (ಹೋಟೆಲ್ ಮತ್ತು ಬೋರ್ಡಿಂಗ್ ಹೌಸ್), ಸಿಎಲ್-9 (ಬಾರ್ ಆ್ಯಂಡ್ ರೆಸ್ಟೋರೆಂಟ್), ಸಿಎಲ್ 11ಸಿ (ಎಂಎಸ್‌ಐಎಲ್) ಸೇರಿ 13 ಸಾವಿರಕ್ಕೂ ಹೆಚ್ಚು ಮದ್ಯ ಮಾರಾಟ ಮಳಿಗೆಗಳಿವೆ. ರಾಜಧಾನಿ ಬೆಂಗಳೂರಿನಲ್ಲೇ 3,700ರಷ್ಟು ಮದ್ಯದ ಮಳಿಗೆಗಳು ವಹಿವಾಟು ನಡೆಸುತ್ತಿವೆ.

ಮದ್ಯದ ಅಂಗಡಿಗಳ ಮಾಲೀಕರಿಗೆ ಸರ್ಕಾರ ಎಂಆರ್‌ಪಿ ಮೇಲೆ ಶೇ 10ರಷ್ಟು ಕಮಿಷನ್(ಮಾರ್ಜಿನ್) ನೀಡುತ್ತಿದೆ. 2009ರವರೆಗೂ ಈ ಕಮಿಷನ್ ಪ್ರಮಾಣ ಶೇ 20ರಷ್ಟಿತ್ತು. ಅಂದಿನ ಬಿಜೆಪಿ ಸರ್ಕಾರ ಅದನ್ನು ಶೇ 10ಕ್ಕೆ ಇಳಿಸಿತ್ತು. ಆ ಬಳಿಕ ಅಂಗಡಿಗಳಿಗೆ ಲಾಭ ಕಡಿಮೆಯಾಗಿದೆ ಎಂಬುದು ಮಾರಾಟಗಾರರ ಹೇಳಿಕೆ.

'ಪರವಾನಗಿ ಶುಲ್ಕವನ್ನು ಹೆಚ್ಚಿಸುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ, ಶೇ 100ರಷ್ಟು ಹೆಚ್ಚಿಸಿದರೆ ಅದರ ಹೊರೆಯನ್ನು ನಿಭಾಯಿಸುವುದು ಕಷ್ಟ. ಸಣ್ಣ ಪ್ರಮಾಣದಲ್ಲಿ ಹೆಚ್ಚಿಸಿದರೆ ಸಮಸ್ಯೆ ಇಲ್ಲ ಅಥವಾ ನಮ್ಮ ಕಮಿಷನ್ ಪ್ರಮಾಣ ಹೆಚ್ಚಿಸಿದರೂ ನಷ್ಟ ಆಗದಂತೆ ತಡೆಯಬಹುದು. ಈಗಿನ ಪರಿಸ್ಥಿತಿಯಲ್ಲಿ ಎಷ್ಟು ದಿನ ನಷ್ಟದಲ್ಲಿ ಅಂಗಡಿ ನಡೆಸುವುದಕ್ಕೆ ಆಗುತ್ತದೆ? ಅನಿವಾರ್ಯವಾಗಿ ನಾವು ನಮ್ಮ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಲೇಬೇಕಾಗುತ್ತದೆ' ಎಂದು ಹೇಳುತ್ತಾರೆ ಮದ್ಯದ ಅಂಗಡಿಗಳ ಮಾಲೀಕರು.

ಇಡೀ ದೇಶದಲ್ಲಿಯೇ ಮದ್ಯದ ಅಂಗಡಿಗಳು ಮತ್ತು ಮದ್ಯ ತಯಾರಿಕಾ ಘಟಕಗಳ ಪರವಾನಗಿ ಶುಲ್ಕ ಕರ್ನಾಟಕದಲ್ಲೇ ಅತ್ಯಂತ ಕಡಿಮೆ ಇತ್ತು. 2016ರಿಂದ ಇದನ್ನು ಪರಿಷ್ಕರಿಸಿರಲಿಲ್ಲ. ಈಗ ಪರಿಷ್ಕರಿಸಲಾಗಿದೆ. ಸರ್ಕಾರ ಅಬಕಾರಿ ಇಲಾಖೆಗೆ ವರಮಾನ ಸಂಗ್ರಹದ ಗುರಿ ನೀಡಿದ್ದು, ಅದನ್ನು ಸಾಧಿಸಲು ಇಂತಹ ಕ್ರಮಗಳು ಅನಿವಾರ್ಯ ಎಂದು ಹೇಳುತ್ತಾರೆ ಅಧಿಕಾರಿಗಳು.

ಉದ್ಯಮಕ್ಕೆ ಹೊಡೆತ

ಸರ್ಕಾರದ ನಿರ್ಧಾರವು ಮದ್ಯ ತಯಾರಿಕೆ ಮತ್ತು ಮಾರಾಟ ಉದ್ಯಮದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂಬ ಆತಂಕವನ್ನು ಈ ಕ್ಷೇತ್ರದಲ್ಲಿ ತೊಡಗಿಕೊಂಡವರು ವ್ಯಕ್ತಪಡಿಸಿದ್ದಾರೆ.

ರಾಜ್ಯದಲ್ಲಿ ಭಾರತೀಯ ಮದ್ಯ ತಯಾರಿಸುವ 31 ಘಟಕಗಳು ಮತ್ತು ಬಿಯರ್ ತಯಾರಿಸುವ 13 ಘಟಕಗಳಿವೆ.

'ಪರವಾನಗಿ ಶುಲ್ಕವನ್ನು ದುಪ್ಪಟ್ಟು ಹೆಚ್ಚಿಸಿರುವುದು ನಮ್ಮ ಉದ್ಯಮಕ್ಕೆ ಅತ್ಯಂತ ದೊಡ್ಡ ಹೊಡೆತ. ಇದರಿಂದ ಮದ್ಯ ತಯಾರಿಕೆಯ ಒಟ್ಟಾರೆ ವೆಚ್ಚ ಹೆಚ್ಚಲಿದೆ. ಈಗಾಗಲೇ ವಿದ್ಯುತ್ ಶುಲ್ಕ ಏರಿಕೆ ಸೇರಿದಂತೆ ವಿವಿಧ ಕಾರಣಗಳಿಂದ ತಯಾರಿಕಾ ವೆಚ್ಚ ಜಾಸ್ತಿಯಾಗಿದೆ. ಕಾರ್ಮಿಕರ ಕನಿಷ್ಠ ವೇತನ ಹೆಚ್ಚಿಸುವ ನಿರ್ಧಾರವನ್ನೂ ಸರ್ಕಾರ ತೆಗೆದುಕೊಂಡಿದೆ. ಈಗ ಪರವಾನಗಿ ಶುಲ್ಕ ಜಾಸ್ತಿ ಮಾಡಲಾಗಿದೆ' ಎಂದು ಕರ್ನಾಟಕ ಬ್ರುವರ್ಸ್ ಆ್ಯಂಡ್ ಡಿಸ್ಟಿಲ್ಲರ್ಸ್ ಅಸೋಸಿಯೇಷನ್‌ನ ಪದಾಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸರ್ಕಾರದ ಈ ತೀರ್ಮಾನದಿಂದ ಮದ್ಯ ತಯಾರಕರು ಮತ್ತು ಮಾರಾಟಗಾರರಿಗೆ ನಷ್ಟವಾಗಲಿದೆ. ಅದು ಗ್ರಾಹಕರ ಮೇಲೆ ಪರಿಣಾಮ ಬೀರದು ಎಂಬುದು ಅವರ ಅಭಿಪ್ರಾಯ.

ಮದ್ಯದ ಬೆಲೆಯನ್ನು ಹೆಚ್ಚಿಸಿದರೆ, ಜಾಸ್ತಿಯಾಗಲಿರುವ ತಯಾರಿಕಾ ವೆಚ್ಚವನ್ನು ಸರಿದೂಗಿಸಬಹುದು. ಆದರೆ, ಬೆಲೆಯ ಬಗ್ಗೆ ನಿರ್ಧಾರ ಕೈಗೊಳ್ಳುವುದು ಸರ್ಕಾರ. ಮದ್ಯ ತಯಾರಿಕಾ ಕಂಪನಿಗಳು ಬೆಲೆ ಹೆಚ್ಚಿಸುವಂತೆ ಸರ್ಕಾರದ ಮೇಲೆ ಒತ್ತಡ ಹಾಕಬಹುದಷ್ಟೆ ಎಂದು ಹೇಳುತ್ತಾರೆ ಉದ್ಯಮದ ಪ್ರತಿನಿಧಿಗಳು.

ಶೇ 15ರಷ್ಟು ಮಳಿಗೆಗಳು ಮುಚ್ಚಲಿವೆ

ಪರವಾನಗಿ ಶುಲ್ಕ ಹೆಚ್ಚಳ ಮಾಡಿದರೆ,ಮದ್ಯದ ಅಂಗಡಿಗಳ ಮಾಲೀಕರಿಗೆ ಹೊರೆ ಹೆಚ್ಚಾಗುತ್ತದೆ. ಕಡಿಮೆ ಮದ್ಯ ಮಾರಾಟವಾಗುವ ಅಂಗಡಿಗಳ ಮಾಲೀಕರಿಗೆ ಅದನ್ನು ನಿಭಾಯಿಸುವಷ್ಟು ಆರ್ಥಿಕ ಸಂಪನ್ಮೂಲ ಇರುವುದಿಲ್ಲ. ಕನಿಷ್ಠ ಶೇ 10ರಿಂದ ಶೇ 15ರಷ್ಟು ಅಂಗಡಿಗಳು ಮುಚ್ಚುವ ಸಾಧ್ಯತೆ ಇದೆ. 2016ರಿಂದ ಶುಲ್ಕ ಹೆಚ್ಚು ಮಾಡಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಈ ಅವಧಿಯಲ್ಲಿ 3000ಕ್ಕೂ ಹೆಚ್ಚು ಹೊಸ ಮದ್ಯದ ಅಂಗಡಿಗಳು ಸ್ಥಾಪನೆಯಾಗಿವೆ. ಆದರೆ, ಮಾರಾಟದಲ್ಲಿ ಹೆಚ್ಚಳವಾಗಿಲ್ಲ

ಗೋವಿಂದರಾಜ್ ಹೆಗ್ಡೆ, ರಾಜ್ಯ ಮದ್ಯ ಮಾರಾಟಗಾರರ ಒಕ್ಕೂಟದ ಕಾರ್ಯದರ್ಶಿ

ಅಂಗಡಿ ನಿರ್ವಹಣೆ ಸಾಧ್ಯವಿಲ್ಲ

ಈಗಾಗಲೇ ನಾವು ಸಂಕಷ್ಟ ಅನುಭವಿಸುತ್ತಿದ್ದೇವೆ. ನಮ್ಮ ಮಾರ್ಜಿನ್ ಹೆಚ್ಚಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಲೇ ಇದ್ದೇವೆ. ಅದರ ಬದಲು ಸರ್ಕಾರ ಪರವಾನಗಿ ಶುಲ್ಕವನ್ನು ಶೇ 100ರಷ್ಟು ಹೆಚ್ಚಿಸಿ ನಮ್ಮನ್ನು ಇನ್ನಷ್ಟು ಕಷ್ಟಕ್ಕೆ ತಳ್ಳಿದೆ. ಶೇ 5–10ರಷ್ಟು ಹೆಚ್ಚಿಸಿದ್ದರೆ ಸುಮ್ಮನಿರಬಹುದಿತ್ತು. ಈಗಿನದ್ದಕ್ಕಿಂತ ಎರಡು ಪಟ್ಟು ಜಾಸ್ತಿ ಮಾಡಿದರೆ ಅದನ್ನು ಪಾವತಿಸುವುದು ಹೇಗೆ? ವ್ಯಾಪಾರ ನಡೆಸಲು ಸಾಧ್ಯವೇ ಇಲ್ಲ. ಸರ್ಕಾರ ಹಾಲು ನೀಡುವ ಕೆಚ್ಚಲನ್ನೇ ಕತ್ತರಿಸಲು ಹೊರಟಿದೆ. ಅದು ತನ್ನ ನಿರ್ಧಾರವನ್ನು ಮರುಪರಿಶೀಲಿಸಬೇಕು

ಲೋಕೇಶ್, ಬೆಂಗಳೂರು ನಗರ ಜಿಲ್ಲಾ ಮದ್ಯ ವ್ಯಾಪಾರಿಗಳ ಸಂಘದ ಅಧ್ಯಕ್ಷ

ಈ ಸಂಬಂಧ ಅಧಿಸೂಚನೆ ಹೊರಡಿಸಿ ಆಕ್ಷೇಪಣೆ ಆಹ್ವಾನಿಸಲಾಗಿದೆ. ಜುಲೈ 1ರಿಂದ ಪರಿಷ್ಕೃತ ಶುಲ್ಕ ಜಾರಿಗೆ ಬರಲಿದೆ.

ಸರ್ಕಾರದ ಕ್ರಮಕ್ಕೆ ಮದ್ಯ ಮಾರಾಟಗಾರರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಹಿಂದೆ 2016ರಲ್ಲಿ ರಾಜ್ಯ ಸರ್ಕಾರವು ಸನ್ನದು ಶುಲ್ಕವನ್ನು ಶೇ 15ರಷ್ಟು ಹೆಚ್ಚಿಸಿತ್ತು. 'ಹಣದುಬ್ಬರ ಮತ್ತಿತರ ಕಾರಣಗಳಿಂದ ಈ ಬಾರಿಯೂ ನಿಗದಿತ ಪ್ರಮಾಣದಲ್ಲಿ ಹೆಚ್ಚಿಸಬಹುದಿತ್ತು. ಆದರೆ, ಭಾರಿ ಪ್ರಮಾಣದಲ್ಲಿ ಹೆಚ್ಚಿಸಿರುವುದರಿಂದ ತಾವು ತೀವ್ರ ಸಂಕಷ್ಟಕ್ಕೆ ಸಿಲುಕುತ್ತೇವೆ' ಎನ್ನುವುದು ಮದ್ಯ ಮಾರಾಟಗಾರರ ಅಳಲು.

ಸದ್ಯ, ಮದ್ಯಕ್ಕೆ ಸಂಬಂಧಿಸಿದ ಶುಲ್ಕ ಮತ್ತು ಸುಂಕಗಳು ಅತಿ ಹೆಚ್ಚಾಗಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ಈಗ ಈ ಪ್ರಮಾಣವು ಮತ್ತಷ್ಟು ಹೆಚ್ಚಾಗಲಿದೆ. ಸರ್ಕಾರದ ಕ್ರಮಗಳಿಂದ ಈಗಾಗಲೇ ಬಿಯರ್ ದರ ವಿಪರೀತ ಹೆಚ್ಚಾಗಿದೆ. ಈಗ ಬಿಯರ್ ಜತೆಗೆ ಅಗ್ಗದ ಬೆಲೆಗೆ ದೊರೆಯುವ ಐಎಂಎಲ್ ದರವೂ ಹೆಚ್ಚಾಗಲಿದೆ.

ಸರ್ಕಾರ ಈ ಹಿಂದೆ ಬೆಲೆ ಹೆಚ್ಚಳ ಮಾಡಿದ್ದು ಮತ್ತು ಇತರ ಕಾರಣಗಳಿಂದ ಈಗಾಗಲೇ ರಾಜ್ಯದಲ್ಲಿ ಬಿಯರ್ ಮಾರಾಟ ಕುಸಿದಿದೆ. ಜತೆಗೆ, 24–25ನೇ ಸಾಲಿನಲ್ಲಿ ರಾಜ್ಯದ 19 ಜಿಲ್ಲೆಗಳಲ್ಲಿ ಒಟ್ಟಾರೆ ಮದ್ಯ ಮಾರಾಟ ಕುಸಿದಿದೆ. ಈಗ ಶುಲ್ಕಗಳ ಹೆಚ್ಚಳದಿಂದ ಮುಂದಿನ ದಿನಗಳಲ್ಲಿ ಮದ್ಯದ ದರ ಹೆಚ್ಚಾಗಿ, ಮಾರಾಟ ಮತ್ತಷ್ಟು ಕುಸಿಯಲಿದೆ ಎನ್ನುವ ಆತಂಕ ಮದ್ಯ ಮಾರಾಟಗಾರರದ್ದು.

ಕುಡಿತ ಒಂದು ಚಟ. ಅದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದರ ನಡುವೆಯೂ ಕರ್ನಾಟಕವೂ ಸೇರಿದಂತೆ ದೇಶದಲ್ಲಿ ಮದ್ಯ ಕುಡಿಯುವವರ ಸಂಖ್ಯೆ ಹೆಚ್ಚಾಗಿದೆ. ಅದಕ್ಕೆ ಕಾರಣಗಳು ಅನೇಕ. ಹೀಗೆ ಕುಡಿಯುವವರಲ್ಲಿ ಗ್ರಾಮೀಣ ಭಾಗದವರು, ಬಡವರು, ಶ್ರೀಮಂತರು, ಕೆಳಮಧ್ಯಮ ವರ್ಗದವರು ಹೀಗೆ ನಾನಾ ಸ್ಥಿತಿಯ ನಾನಾ ಹಿನ್ನೆಲೆಯ ಜನ ಇದ್ದಾರೆ. ಜನರು ಕುಡಿಯಬಾರದು ಎಂದು ಸರ್ಕಾರಗಳು ಪ್ರಾಮಾಣಿಕವಾಗಿ ಭಾವಿಸಿದರೆ, ಪಾನನಿಷೇಧ ಜಾರಿಗೆ ತರಬೇಕು. ಆದರೆ, ಆದಾಯ ಸಂಗ್ರಹಕ್ಕಾಗಿ ಮದ್ಯ ಕುಡಿಯಲು ಅವಕಾಶ ನೀಡಿ, ಬೆಲೆಯನ್ನು ಹೀಗೆ ವಿಪರೀತ ಎನ್ನುವಷ್ಟು ಏರಿಕೆ ಮಾಡುವುದರಿಂದ ಮದ್ಯ ಸೇವನೆ ಮಾಡುವವರನ್ನು ಶೋಷಣೆ ಮಾಡಿದಂತಾಗುತ್ತದೆ ಎನ್ನುವ ಅಭಿಪ್ರಾಯವೂ ಇದೆ.

ಆಧಾರ: ಪಿಟಿಐ, ಅಬಕಾರಿ ಇಲಾಖೆ ವೆಬ್‌ಸೈಟ್, ಮಾಧ್ಯಮ ವರದಿಗಳು

ರಾಜ್ಯದಲ್ಲೇ ತೆರಿಗೆ ಜಾಸ್ತಿ

ದೇಶದ ಎಲ್ಲ ರಾಜ್ಯಗಳ ಪೈಕಿ ಕರ್ನಾಟಕದಲ್ಲಿಯೇ ಮದ್ಯದ ಮೇಲೆ ತೆರಿಗೆ ಹೆಚ್ಚು ಎಂದು ಹೇಳುತ್ತಾರೆ ವ್ಯಾಪಾರಿಗಳು. ಕನಿಷ್ಠ ಶೇ 70ರಿಂದ ಶೇ 80ರಷ್ಟು ತೆರಿಗೆ ವಿಧಿಸಲಾಗುತ್ತಿದೆ ಎಂದು ಅವರು ಹೇಳುತ್ತಾರೆ. ಇದೇ ಕಾರಣಕ್ಕೆ ಗೋವಾ, ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ಗ್ರಾಹಕರು ಮದ್ಯಕ್ಕೆ ಹೆಚ್ಚು ಹಣ ತೆರಬೇಕಾಗುತ್ತದೆ.

ಪ್ರತಿ ಲೀಟರ್ ಮದ್ಯದ ಮೇಲೆ ₹50 ಅಬಕಾರಿ ಸುಂಕ ಹಾಕಲಾಗುತ್ತದೆ. ಇದಲ್ಲದೆ, ಮದ್ಯದ ಬೆಲೆಯ ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನೂ ವಿಧಿಸಲಾಗುತ್ತದೆ. ಮದ್ಯದ ಮೂಲ ಬೆಲೆಯ ಆಧಾರದಲ್ಲಿ 16 ಸ್ಲ್ಯಾಬ್‌ಗಳನ್ನು ಮಾಡಲಾಗಿದ್ದು, ಒಂದೊಂದು ಸ್ಲ್ಯಾಬ್‌ಗೂ ಪ್ರತ್ಯೇಕವಾದ ಹೆಚ್ಚುವರಿ ಅಬಕಾರಿ ಸುಂಕ ನಿಗದಿಪಡಿಸಲಾಗಿದೆ.

ಬಿಯರ್ ಮೇಲೆ ಎಇಡಿ 205%

2023ರ ಜುಲೈನಿಂದ ಇಲ್ಲಿವರೆಗೆ ಕರ್ನಾಟಕ ಸರ್ಕಾರವು ಬಿಯರ್ ಮೇಲೆ ವಿಧಿಸಲಾಗುತ್ತಿರುವ ಹೆಚ್ಚುವರಿ ಅಬಕಾರಿ ಸುಂಕವನ್ನು ಮೂರು ಬಾರಿ ಹೆಚ್ಚಿಸಿದೆ. ಅದಕ್ಕೂ ಮೊದಲು ಪ್ರತಿ ಲೀಟರ್ ಬಿಯರ್‌ಗೆ ಘೋಷಿತ ಬೆಲೆಯ ಶೇ 175ರಷ್ಟು ಹೆಚ್ಚುವರಿ ಅಬಕಾರಿ ಸುಂಕವನ್ನು ವಿಧಿಸಲಾಗುತ್ತಿತ್ತು. ಅದೀಗ ಶೇ 205ಕ್ಕೆ ಏರಿದೆ. ಇದರಿಂದ ರಾಜ್ಯದಲ್ಲಿ ಬಿಯರ್ ಬೆಲೆ ಹೆಚ್ಚಾಗಿದ್ದು, ಮಾರಾಟ ಕುಸಿದಿದೆ.

ತೆರಿಗೆ ಹೆಚ್ಚಳ ನಿರ್ಧಾರವು ₹5,000 ಕೋಟಿ ಮೌಲ್ಯದ ಉದ್ಯಮದ ಮೇಲೆ ಪರಿಣಾಮ ಬೀರುತ್ತಿದ್ದು, ಮುಂದೆ ತೆರಿಗೆ ಹೆಚ್ಚಿಸದಂತೆ ಬ್ರುವರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮನವಿ ಮಾಡಿದೆ.

ರಾಷ್ಟ್ರೀಯ

ಅಬಕಾರಿ ಹಗರಣ; ಐಎಎಸ್ ಅಧಿಕಾರಿ ಚೌಬೆ ಬಂಧನ

ರಾಂಚಿ (ಪಿಟಿಐ): ಜಾರ್ಖಂಡ್‌ನ ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಭ್ರಷ್ಟಾಚಾರ ನಿಗ್ರಹ ದಳವು (ಎಸಿಬಿ) ಹಿರಿಯ ಐಎಎಸ್ ಅಧಿಕಾರಿ ವಿನಯ್ ಕುಮಾರ್ ಚೌಬೆಯನ್ನು ಮಂಗಳವಾರ ಬಂಧಿಸಿದೆ.

ಒಂದು ತಾಸಿಗೂ ಅಧಿಕ ಕಾಲ ವಿಚಾರಣೆಗೆ ಒಳಪಡಿಸಿದ ಬಳಿಕ ಅವರನ್ನು ಬಂಧಿಸಲಾಯಿತು. ನಂತರ, ಎಸಿಬಿಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಯೋಗೇಶ್ ಕುಮಾರ್ ಮುಂದೆ ಹಾಜರುಪಡಿಸಿದ್ದು, ಜೂನ್ 3ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

1999ನೇ ಬ್ಯಾಚಿನ ಐಎಎಸ್ ಅಧಿಕಾರಿಯಾಗಿರುವ ಚೌಬೆ ಅವರು, ಹಲವು ಮಹತ್ವದ ಹುದ್ದೆಗಳ ಜವಾಬ್ದಾರಿ ನಿರ್ವಹಿಸಿದ್ದು, ಮುಖ್ಯಮಂತ್ರಿಗಳ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಪ್ರಸ್ತುತ, ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.

ವಿನಯ್ ಕುಮಾರ್ ಚೌಬೆ ಈ ಹಿಂದೆ ಜಾರ್ಖಂಡ್‌ನ ಅಬಕಾರಿ ಇಲಾಖೆಯ ಕಾರ್ಯದರ್ಶಿಯಾಗಿದ್ದ ವೇಳೆ ಅಬಕಾರಿ ನೀತಿಯಲ್ಲಿ ಅಕ್ರಮ ನಡೆಸಿದ್ದು ಬೆಳಕಿಗೆ ಬಂದ ಬಳಿಕ ಎಸಿಬಿ ತನಿಖೆ ಆರಂಭಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಚೌಬೆ ವಿರುದ್ಧ ಎಫ್‌ಐಆರ್ ದಾಖಲಿಸಲು ರಾಜ್ಯ ಸರ್ಕಾರ ಎಸಿಬಿಗೆ ಅನುಮತಿ ನೀಡಿತ್ತು.

ಇದರ ಬೆನ್ನಲ್ಲೇ, ಮಂಗಳವಾರ ಬೆಳಿಗ್ಗೆ ಚೌಬೆ ಅವರ ನಿವಾಸಕ್ಕೆ ಬಂದ ಎಸಿಬಿ ತಂಡ, ವಿಚಾರಣೆಗಾಗಿ ಕೇಂದ್ರ ಕಚೇರಿಗೆ ಕರೆದೊಯ್ದಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಜಂಟಿ ಆಯುಕ್ತ ಗಜೇಂದ್ರ ಸಿಂಗ್ ಅವರನ್ನು ಎಸಿಬಿ ವಿಚಾರಣೆಗೊಳಪಡಿಸಿತ್ತು.

ಚೌಬೆ ಹಾಗೂ ಸಿಂಗ್ ಅವರಿಗೆ ಸೇರಿದ ಮನೆಗಳ ಮೇಲೆ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿದ್ದರು.

ಕಾಯಂ ನಿಯೋಜನೆಗೆ ಹಿಂದೇಟು ನೌಕಾಪಡೆಗೆ 'ಸುಪ್ರೀಂ' ತರಾಟೆ

ನವದೆಹಲಿ (ಪಿಟಿಐ): ಅಲ್ಪಾವಧಿ ಸೇವೆಗೆ ನೇಮಕಗೊಂಡಿರುವ 2007ನೇ ಬ್ಯಾಚ್‌ನ ಅಧಿಕಾರಿಯನ್ನು ಕೋರ್ಟ್ ನಿರ್ದೇಶನದ ಹೊರತಾಗಿಯೂ, ಕಾಯಂ ನಿಯೋಜನೆಗೆ ಪರಿಗಣಿಸದ ನೌಕಾಪಡೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿತು. ಅಲ್ಲದೆ 'ಅಹಂಕಾರವನ್ನು ಬಿಟ್ಟುಬಿಡಿ' ಎಂದು ಅಧಿಕಾರಿಗಳಿಗೆ ಹೇಳಿತು.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರಿದ್ದ ನ್ಯಾಯಪೀಠವು, 2007ನೇ ಬ್ಯಾಚ್‌ನ ಜಡ್ಜ್ ಅಡ್ವೊಕೇಟ್ ಜನರಲ್ಸ್ (ಜೆಎಜಿ) ವಿಭಾಗದ ಅಧಿಕಾರಿ ಸೀಮಾ ಚೌಧರಿ ಪ್ರಕರಣವನ್ನು ಒಂದು ವಾರದ ಒಳಗಾಗಿ ಪರಿಗಣಿಸಿ, ಅವರನ್ನು ಕಾಯಂ ನಿಯೋಜನೆ ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿತು.

ಸೇನಾ ನ್ಯಾಯಾಲಯದಲ್ಲಿ ವಕೀಲ/ವಕೀಲೆ ಮತ್ತು ಸಲಹೆಗಾರ/ಸಲಹೆಗಾರ್ತಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸಲು ಪರಮಾಧಿಕಾರ ಹೊಂದಿರುವ ಸೇನಾಧಿಕಾರಿಯನ್ನು ಜಡ್ಜ್ ಅಡ್ವೊಕೇಟ್ ಜನರಲ್(ಜೆಎಜಿ) ಎಂದು ಕರೆಯಲಾಗುತ್ತದೆ.

'ಸಾಕು ಇಲ್ಲಿಗೆ ನಿಲ್ಲಿಸಿ. ತಪ್ಪನ್ನು ಸರಿಪಡಿಸಿಕೊಳ್ಳಿ. ಚೌಧರಿ ಅವರನ್ನು ಕಾಯಂ ನಿಯೋಜನೆ ಮಾಡಿಕೊಳ್ಳಲು ಒಂದು ವಾರ ಕಾಲಾವಕಾಶ ನೀಡುತ್ತೇವೆ. ಕೋರ್ಟ್ ಆದೇಶವನ್ನು ಮೀರಿ ನಡೆಯಬಹುದು ಎಂದು ಸಂಬಂಧಪಟ್ಟ ಅಧಿಕಾರಿಗಳು ಭಾವಿಸಿದ್ದಾರೆಯೇ? ಅದ್ಯಾವ ರೀತಿಯ ಶಿಸ್ತಿನ ಸಿಪಾಯಿಗಳು ನೀವು?' ಎಂದು ನ್ಯಾಯಪೀಠವು ನೌಕಾಪಡೆಯ ಅಧಿಕಾರಿಗಳು ಮತ್ತು ಕೇಂದ್ರದ ಪರ ಹಾಜರಿದ್ದ ಹಿರಿಯ ವಕೀಲ ಆರ್.ಬಾಲಸುಬ್ರಮಣಿಯನ್ ಅವರನ್ನು ಪ್ರಶ್ನಿಸಿತು.

ಅನಧಿಕೃತ ಕಾಲೇಜುಗಳಿಗೆ ಪ್ರವೇಶ ವೈದ್ಯಕೀಯ ವಿದ್ಯಾರ್ಥಿಗಳಿಗೆ ಎಚ್ಚರಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನಧಿಕೃತ ವೈದ್ಯಕೀಯ ಕಾಲೇಜುಗಳಲ್ಲಿ ಪದವಿ ಶಿಕ್ಷಣ ಅಥವಾ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯದಂತೆ ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದೆ.

ಅನುಮತಿ ಪಡೆಯದ ಕಾಲೇಜುಗಳಿಂದ ಪಡೆಯುವ ಪದವಿಗೆ ಮಾನ್ಯತೆ ಇರುವುದಿಲ್ಲ. ವಿದೇಶಿ ವೈದ್ಯಕೀಯ ಕಾಲೇಜು ಪ್ರವೇಶ ಪರೀಕ್ಷೆಗೆ ಹಾಜರಾಗಲು ಅರ್ಹತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಮಾನ್ಯತೆ ಇಲ್ಲದ ಕಾಲೇಜುಗಳಿಗೆ ಪ್ರವೇಶ ಪಡೆದರೆ, ಅದರಿಂದ ಆಗುವ ಸಮಸ್ಯೆಗಳಿಗೆ ವಿದ್ಯಾರ್ಥಿಗಳೇ ಹೊಣೆ ಆಗುತ್ತಾರೆ ಎಂದು ಎನ್‌ಎಂಸಿ ಎಚ್ಚರಿಸಿದೆ.

ಎನ್‌ಎಂಸಿಯ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ ವಿದ್ಯಾರ್ಥಿಗಳು ಎನ್‌ಎಂಸಿ ಮಾನ್ಯತೆ ಪಡೆದಿರುವ ವೈದ್ಯಕೀಯ ಕಾಲೇಜುಗಳ ವಿವರಗಳನ್ನು ಪರಿಶೀಲಿಸಬಹುದು ಅಥವಾ ಕಚೇರಿಗೆ ನೇರವಾಗಿ ಭೇಟಿ ನೀಡಬಹುದು ಎಂದು ತಿಳಿಸಿದೆ.

ಗುಂಡಣ್ಣ

ಜ್ಞಾನ ದಾಸೋಹ ಯಾಕೆ ಬೇಕು?

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

199

ಈ ವಿಶ್ವದಲ್ಲಿ ದಾರ್ಶನಿಕರು ಮಾಡಿದ ವ್ಯಾಖ್ಯಾನಗಳು, ವಾಗ್ಗೇಯಕಾರರು, ಉಪನಿಷತ್‌ಗಳು, ಅವುಗಳನ್ನು ರಚಿಸಿದ ಋಷಿಗಳು, ವಚನಗಳು, ಅವುಗಳನ್ನು ರಚಿಸಿದ ಶರಣರು, ಅನೇಕ ಜನರ, ಶರಣರ, ಸಂತರ ಅನುಭವಾಮೃತಗಳನ್ನು ಅವರೆಲ್ಲಾ ಈ ನೆಲದ ಮಣ್ಣಿನಲ್ಲೇ ಬಿಟ್ಟು ಹೋಗಿದ್ದು ಯಾಕೆ? ಯಾತಕ್ಕಾಗಿ ಇವುಗಳನ್ನು ರಚನೆ ಮಾಡಿದರು? ಅವರೇನು ಹೆಸರಿಗಾಗಿ ರಚನೆ ಮಾಡಿದರೋ? ಯಾತಕ್ಕಾಗಿ ಇವುಗಳನ್ನು ಮನುಕುಲದ ಮಧ್ಯದಲ್ಲಿ ಬಿಟ್ಟುಹೋದರು? ದಾರ್ಶನಿಕರಾಗಲಿ, ಸಂತರಾಗಲಿ, ಶರಣರಾಗಲಿ ಉಪನಿಷತ್, ವಚನ, ಅನುಭವಾಮೃತವನ್ನು ಹೆಸರಿಗಾಗಿಯೂ ಬರೆದಿದ್ದಲ್ಲ, ಪ್ರಶಸ್ತಿಗಾಗಿಯೂ ಬರೆದಿದ್ದಲ್ಲ; ಈ ಜನರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವುದಕ್ಕಾಗಿಯೂ ಅಲ್ಲ. ಬದಲಾಗಿ ಮನುಷ್ಯರು ಬದುಕುವ ಈ ಭೂಮಿ ಸ್ವರ್ಗವಾಗಬೇಕು ಎನ್ನುವುದೇ ಅವರೆಲ್ಲರ ಆಶಯವಾಗಿತ್ತು. ಕಲ್ಪನೆಯ ಸ್ವರ್ಗಕ್ಕಿಂತ ವಾಸ್ತವಿಕ ಬದುಕು ಬಹಳ ಮುಖ್ಯ.

ಈ ಬದುಕು ಎಲ್ಲಿಂದ ಆರಂಭವಾಗುತ್ತದೆ, ಎಲ್ಲಿ ಮುಗಿಯುತ್ತದೆ ಎನ್ನುವುದರ ಬಗ್ಗೆ ಈ ದೇಶದ ದಾರ್ಶನಿಕರು ಬಹಳಷ್ಟು ಸಂಶೋಧನೆ ಮಾಡಿದರು. ಜೀವನದ ಎಳೆಎಳೆಗಳನ್ನು ಬಿಡಿಸಿ ನೋಡಿದರು. ಎಲ್ಲಿಯವರೆಗೆ ಕಣ್ಣು ನೋಡುತ್ತದೆ, ಎಲ್ಲಿಯವರೆಗೆ ಕೈ ಕೆಲಸ ಮಾಡುತ್ತದೆ, ಎಲ್ಲಿಯವರೆಗೆ ಕಾಲು ನಡೆಯುತ್ತದೆ, ಎಲ್ಲಿಯವರೆಗೆ ಬುದ್ಧಿ ವಿಚಾರ ಮಾಡುತ್ತದೆ ಎಂದರೆ ದೇಹದಲ್ಲಿ ಉಸಿರು ಇರುವ ತನಕ ಮಾತ್ರ. ಉಸಿರ ನಿಂತ ತಕ್ಷಣ ಎಲ್ಲವೂ ನಿಂತು ಹೋಗುತ್ತವೆ. ಉಸಿರಿನೊಂದಿಗೆ ಜೀವನವೂ ನಿಂತು ಹೋಗುತ್ತದೆ. ಬದುಕು ಅಂದ್ರೆ ಉಸಿರಿನ ಲೀಲಾವಿಲಾಸ ಅಷ್ಟೇ. ಈ ಬದುಕು ಇಸ್ಪೀಟ್ ಆಟದಂತೆ. ಇಸ್ಪೀಟಿನಲ್ಲಿ ರಾಜ, ರಾಣಿ, ಪ್ರಜಾ ಎಂದೆಲ್ಲ ಇರುತ್ತವೆ. ಆಟ ಮುಗಿದ ಮೇಲೆ ಎಲ್ಲವನ್ನೂ ಒಂದೇ ಪ್ಯಾಕೆಟ್‌ನಲ್ಲಿ ಇಡಲಾಗುತ್ತದೆ. ಹಾಗೆಯೇ ಜೀವನ ಎಂಬ ಆಟದಲ್ಲಿ ಒಬ್ಬ ಸನ್ಯಾಸಿ, ಒಬ್ಬ ರಾಜಕಾರಣಿ, ಅಧಿಕಾರಿ ಎಲ್ಲಾ ಇರ್ತಾರೆ. ಆದರೆ ಒಮ್ಮೆ ಆಟ ಮುಗೀತು ಅಂದರೆ ಎಲ್ಲರನ್ನೂ ಸ್ಮಶಾನ ಎನ್ನುವ ಪ್ಯಾಕೆಟ್‌ಗೆ ಕಳುಹಿಸುತ್ತಾರೆ. ತಾಯಿಯ ಗರ್ಭದಿಂದ ಈ ಭೂಮಿಗೆ ಒಬ್ಬ ಬರುವಾಗ ಆತನಿಗೆ ಉಸಿರು ಇತ್ತು, ಆದರೆ ಹೆಸರು ಇರಲಿಲ್ಲ. ಈ ಭೂಮಿಯನ್ನು ಬಿಟ್ಟು ಹೋಗುವಾಗ ಉಸಿರು ಇರುವುದಿಲ್ಲ. ಆದರೆ ಹೆಸರು ಉಳಿಯುವಂತೆ ಮಾಡಬೇಕು. ಅದು ಬದುಕಿನ ಸಾರ್ಥಕತೆ. ಬದುಕು ಅಷ್ಟು ಅದ್ಭುತವಾಗಿದೆ.

ಈ ನಿಸರ್ಗ ದೇವತೆ ಎಲ್ಲರಿಗೂ ಬದುಕು ಕೊಟ್ಟಿದೆ. ಅರಮನೆಯಲ್ಲಿ ಇರುವವನಿಗೂ ಒಂದು ಬದುಕು ಇದೆ. ಗುಡಿಸಿಲಿನಲ್ಲಿ ಇರುವವನಿಗೂ ಒಂದು ಬದುಕು ಇದೆ. ಬದುಕು ಹೇಗೆ ಸುಂದರವಾಗುತ್ತದೆ? ತಾನೂ ಸಂತೋಷವಾಗಿರಬೇಕು, ತನ್ನ ನೆರೆಹೊರೆಯವರೂ ಸಂತೋಷವಾಗಿರಬೇಕು, ನಮಗೆ ಆಶ್ರಯ ಕೊಟ್ಟಿರುವ ಜಗತ್ತೂ ಸುಂದರವಾಗಿರಬೇಕಲ್ಲ. ಅಂತಹ ಕಲ್ಪನೆ ಮನುಷ್ಯನ ಬದುಕಿನ ಬಗ್ಗೆ ಬರಬೇಕು. ಮನುಷ್ಯನಿಗೆ ದುಃಖ ಯಾಕೆ? ಅವನು ತಪ್ಪಿದ್ದು ಎಲ್ಲಿ? ಅವನು ತಪ್ಪಿದ್ದು ಈ ಜಗತ್ತನ್ನು ಸರಿಯಾಗಿ ತಿಳಿದುಕೊಳ್ಳದೇ ಇರುವಲ್ಲಿ. ಮನುಷ್ಯನ ಅಜ್ಞಾನದಿಂದ ಬದುಕು ಕೆಟ್ಟಿದೆ. ಅದಕ್ಕಾಗಿಯೇ ಜ್ಞಾನಿಗಳು ಜ್ಞಾನವನ್ನು ಹಂಚಲು ಪ್ರಾರಂಭ ಮಾಡಿದರು. ನಾವು 25–30 ಲಕ್ಷ ರೂಪಾಯಿ ಖರ್ಚು ಮಾಡಿ ಮನೆ ಕಟ್ಟುತ್ತೇವೆ. ಆದರೆ ಮನೆ ಉದ್ಘಾಟನೆಯಾಗುವುದು ಒಂದು ರೂಪಾಯಿ ಮೇಣದಬತ್ತಿಯಿಂದ. ಹಾಗಾದರೆ ಬೆಲೆ ಇರುವುದು ಮನೆಗೋ ಬೆಳಕಿಗೋ? ಬೆಲೆ ಇರುವುದು ಮನೆಗಲ್ಲ, ಬೆಳಕಿಗೆ. ಅದಕ್ಕಾಗಿ ಜ್ಞಾನ ದಾಸೋಹ ಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮೇ 21, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣನವಮಿ ಗಂ 27-22 ನಕ್ಷತ್ರ: ಶತಭಿಷ ಗಂ. 18-58 ಯೋಗ: ವೈಧೃತಿ ಗಂ. 24-35 ಕರಣ: ತೈತಿಲ ಗಂ. 16-14, ನಂತರ ಗರ ಗಂ.27-22, ವೃಷಭ ಮಾಸದ 07 ನೇ ದಿನ. ರಾಹುಕಾಲ : ಮಧ್ಯಾಹ್ನ 12-00 – 01-30

ಸೂರ್ಯೋದಯ : 06-07 ಸೂರ್ಯಾಸ್ತ : 06-47

ಮುಸ್ಲಿಂ ದಿನಾಂಕ : 22 ಜುಲ್ಖಾಯದ್

ಅದೃಷ್ಟ ಸಂಖ್ಯೆ : 4, 12

ಮೇಷ: ಅನೇಕ ಕ್ಷೇತ್ರಗಳಲ್ಲಿ ದುಡಿಯುವ ಜನಗಳ ದೃಷ್ಟಿದೋಷವು ಸ್ವಲ್ಪ ಮಟ್ಟಿನ ಆರೋಗ್ಯವನ್ನು ಹಾಳುಮಾಡುವುದು. ಎರಡನೇ ದರ್ಜೆಯ ನೌಕರರಿಗೆ ವರ್ಗಾವಣೆಯಿಂದ ಆರ್ಥಿಕವಾಗಿ ಅನುಕೂಲವಾಗುವುದು.

ವೃಷಭ: ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಷಯದಲ್ಲಿ ಲಾಭವಿರುವುದು. ಆತಂಕ ತುಂಬಿದ ಕೆಲಸಕಾರ್ಯದಲ್ಲಿರುವವರ ಮನೆಯಲ್ಲಿ ದೇವತಾನುಗ್ರಹದಿಂದ ನೆಮ್ಮದಿ ಬರಲಿದೆ. ಜೀವನದಲ್ಲಿ ಅಭೀಷ್ಟ ಪಡೆಯಬಹುದು.

ಮಿಥುನ: ಪ್ರಾಮಾಣಿಕತೆಗೆ ತಕ್ಕ ಫಲ ಇಂದಿನ ದಿನವಲ್ಲವಾದರೂ ನಾಳೆಯ ದಿನದಲ್ಲಿ ನಿಮ್ಮದ್ದೇ ಆಗಿರುತ್ತದೆ. ಹಾಗಾಗಿ ಪ್ರಾಮಾಣಿಕತೆ ಇರಲಿ. ಗೆಳೆಯರ ಜತೆಗಿನ ಹಾಸ್ಯಮಯವಾದ ಸುಂದರ ಸಂಜೆ ನಿಮ್ಮದಾಗುತ್ತದೆ.

ಕರ್ಕಾಟಕ: ಹೊಸ ವಾಹನ ಖರೀದಿಗೆ ಯೋಚಿಸಿದವರು ಸ್ವಲ್ಪ ದಿನಗಳ ಮಟ್ಟಿಗೆ ತಟಸ್ಥರಾಗಿರುವುದು ಉತ್ತಮ. ರಕ್ತದ ಒತ್ತಡ, ಮೂತ್ರ ಸಂಬಂಧದ ದೋಷಗಳು ಅನುಭವಕ್ಕೆ ಬಂದರೆ ಉದಾಸೀನತೆ ಬೇಡ.

ಸಿಂಹ: ನಿರಾಸೆಯ ಜೀವನಶೈಲಿಯು ಗುರು ಸೇವೆಯಿಂದ ಹಂತ ಹಂತವಾಗಿ ಮುಕ್ತಾಯವಾಗುವುದು. ಸಾಫ್ಟ್‌ವೇರ್ ಹಾಗೂ ತಾಂತ್ರಿಕ ವಿದ್ಯಾರ್ಥಿಗಳಿಗೆ ನೌಕರಿ ಸಿಗುವ ಲಕ್ಷಣವಿದೆ. ಅವಿವಾಹಿತರಿಗೆ ಕಂಕಣ ಭಾಗ್ಯ ಒದಗಲಿದೆ.

ಕನ್ಯಾ: ಹೂಡಿಕೆಯಿಂದ ಅಧಿಕ ಲಾಭ ಬಂದಿರುವ ಸುದ್ದಿ ತಿಳಿದು ಅತೀವ ಸಂತೋಷಗೊಳ್ಳುವಿರಿ. ಆಹಾರ ಪದಾರ್ಥಗಳಿಂದ ಹಾಗೂ ಕಾಡು ಉತ್ಪನ್ನಗಳ ಮಾರಾಟದಿಂದ ಲಾಭ ಸಿಗಲಿದೆ. ತಂದೆ ಮಕ್ಕಳಲ್ಲಿ ವೈಮನಸ್ಸು ಬರಬಹುದು.

ತುಲಾ: ಕೋರ್ಟು ಕಚೇರಿಗಳ ವ್ಯವಹಾರದಲ್ಲಿ ಓಡಾಟ ಅತ್ಯಗತ್ಯ. ಹಳೆಯ ವ್ಯಾಪಾರಕ್ಕೆ, ವ್ಯಾಪಾರಸ್ಥಳಕ್ಕೆ ಹೊಸ ರೂಪವನ್ನು ನೀಡಿದರೆ ಲಾಭಾಂಶ ಹೆಚ್ಚುವುದು. ಉದ್ಯೋಗಾಕಾಂಕ್ಷಿಗಳಿಗೆ ಶುಭ ಸಮಯ.

ವೃಶ್ಚಿಕ: ವಿವಾಹಾದಿ ಶುಭಕಾರ್ಯಗಳಿಗೆ ಅನೇಕ ಕಾಲದಿಂದ ಇದ್ದ ಅಡೆತಡೆ ನಿವಾರಣೆಯಾಗಲಿದೆ. ಸರಳ ಸ್ವಭಾವದಿಂದ ಇರುವ ನಿಮಗೆ ಸಂಬಂಧಿಕರಲ್ಲಿ ಗೌರವ ಹೆಚ್ಚುವುದು. ಭವಿಷ್ಯದ ಕುರಿತು ಯೋಜನೆಗಳನ್ನು ರೂಪಿಸಲು ಸುದಿನ.

ಧನು: ಕುಟುಂಬದ ಸದಸ್ಯರೊಂದಿಗೆ ಶುಭ ಕಾರ್ಯದ ನಿಮಿತ್ತ ಊರಿಗೆ ಪ್ರಯಾಣ ಮಾಡುವಿರಿ. ವಿರೋಧದ ನಡುವೆಯೂ ಕಾರ್ಯ ಸಾಧನೆ ಮಾಡಿದ ಹೆಮ್ಮೆ ನಿಮಗಿರುವುದು. ವಿದ್ಯಾಭ್ಯಾಸ ನಿಶ್ಚಿಂತೆಯಿಂದ ಸಾಗಲಿದೆ.

ಮಕರ: ಸಮಸ್ಯೆಯನ್ನು ಎದುರಿಸಲು, ಬಗೆಹರಿಸಲು ವಿದ್ಯೆಗಿಂತ ಬುದ್ಧಿವಂತಿಕೆ ಅನಿವಾರ್ಯವಾಗುವುದು. ಚರ್ಮ ಸಂಬಂಧಿಸಿದ ಉದ್ಯಮದವರಿಗೆ ರಫ್ತು ವ್ಯಾಪಾರಗಳಿಂದ ಲಾಭ ಉಂಟಾಗುವುದು.

ಕುಂಭ: ದೈಹಿಕ ಕೆಲಸವನ್ನು ಮಾಡಿ ದುಡಿಮೆ ಮಾಡುತ್ತಿರುವವರು ದೇಹಕ್ಕೆ ಸ್ವಲ್ಪ ಮಟ್ಟಿನ ವಿಶ್ರಾಂತಿ ನೀಡಬೇಕಾಗುತ್ತದೆ. ಶತ್ರುತ್ವವನ್ನು ಸಾಧಿಸುವುದು ಸರಿಯಲ್ಲ. ಕಾರ್ಯವೈಖರಿಗೆ ವಿಶೇಷ ಶ್ಲಾಘನೆ ಸಲ್ಲಲಿದೆ.

ಮೀನ: ಹೂವು-ಹಣ್ಣು, ತರಕಾರಿಗಳ ಮಾರಾಟಗಾರರಿಗೆ ತಾವು ನಿರೀಕ್ಷಿಸಿದಕ್ಕಿಂತ ಲಾಭವನ್ನು ವ್ಯಾಪಾರದಲ್ಲಿ ಪಡೆದುಕೊಳ್ಳುವುದರಿಂದ ಸಂತೋಷ ಇರುವುದು. ಸಹವರ್ತಿಗಳಲ್ಲಿ ಸಲಹೆ ಸಹಕಾರಗಳನ್ನು ಕೋರುವಿರಿ.

ಪದಬಂಧ 6049

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಸುತ್ತಾಡುವ ಸ್ವಭಾವದವನು ಮಾಲೆ ಧರಿಸಿದ್ದಾನಲ್ಲಾ! (4)
3.ಹೀಗೆ ವಾಸನೆ ನೋಡು (4)
5.ಜನನಿ ನುಡಿದಿರುವ ಸತ್ಯ (2)
7.ಈತ ತಿರುಪೆ ಬೇಡುವವನು (3)
8.ಹಂತಕನೇರಿದ ಮೆಟ್ಟಿಲು (2)
9.ಜಲಾಶಯದಲ್ಲಿ ಸಂಗ್ರಹಿಸಿದ ನೀರು (2)
10.ಸುರನ ಹತ್ತಿರ ನಿಂತಿರುವ ರಾಕ್ಷಸ (3)
12.ಕರ್ತಾರನ ಕೈಯಿದು (2)
14.ಮನುಷ್ಯನ ಆಕಾರ (4)
15.ಒಬ್ಬೊಬ್ಬರಿಗೆ ಸಂಬಂಧಪಟ್ಟದ್ದು (4)

ಮೇಲಿಂದ ಕೆಳಕ್ಕೆ

1.ಸ್ಮರಣ ಶಕ್ತಿ ಚನ್ನಾಗಿರುವವನು (4)
2.ಕನ್ನಡಿಗ ಪಡೆದುಕೊಂಡಿರುವ ರಿಬೇಟ್ (4)
3.ಪರಲೋಕಕ್ಕೆ ಸಂಬಂಧಿಸಿದ್ದು (4)
4.ಚನ್ನಾಗಿ ಕಾಪಾಡಿದುದು (4)
6.ಜಲದಲ್ಲಿ ಕ್ಲಿಷ್ಟವಾದುದು ಕಾಣುತ್ತಿದೆ (3)
8.ಆತಂಕ ಹುಟ್ಟಿಸಿರುವ ಕೊಲೆಗಾರ! (3)
9.ದಪ್ಪ ನೂಲಿರುವ ನೆಲ ಹಾಸು (4)
10.ಬುದ್ಧಿ ಇಟ್ಟುಕೊಂಡೇ ನೀಡಿದ ಒಪ್ಪಿಗೆ (4)
11.ರಾತ್ರಿಯ ಒಡೆಯನಿವನು (4)
13.ಸಮುದ್ರವನ್ನು ಹೀಗೂ ಹೇಳುವರು (4)



6048ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಂಬ 3.ಅವಸರ
5.ವಸನ 7.ಕುಡಿನೋಟ
9.ವರದಿ 10.ಕಡಲು
11.ನವೀಕೃತ 13.ಮಣಕ
15.ಅರಸಿಕ 16.ವಪೆ

ಮೇಲಿಂದ ಕೆಳಕ್ಕೆ:
2.ಬಡವ 3.ಆನನ
4.ಸರಕು 6.ಸರದಿ
8.ಟಪಾಲು 9.ವಪನ
10.ಕಲ್ಯಾಣ 12.ತತ್ವರ
13.ಮಶಕ 14.ಕಕವ

ಸುಡೊಕು 6433

4			9		1		3	
	9			8			7	4
8			4		5	9		
7								8
	8		1	6	2		9	
		9	7			2		
		8		1				
9		4	8		7		2	5
	1			9			8	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6432 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ಷೇರುಪೇಟೆ ವಹಿವಾಟು 872



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	24,945
ಇಂದಿನ ಅಂತ್ಯ	24,683
▼	261
ದಿನದ ಕನಿಷ್ಠ	24,669

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹613

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹190-540
ದ್ವಿತಳಿ (ಬಿ.ವಿ)	₹235-642

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹193
ಆರ್ಎಸ್ಎಸ್-5	₹188
ಗುಡ್ ಲಾಟ್	₹178

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ	
ಅಪಿ	52939-53369
ಬೆಟ್ಟೆ	29629-30059
ಕೆಂಪುಗೋಟು	20609-21010
ರಾಶಿ	52449-52899
ಪುತ್ತೂರು	
ಕೋಕ	20000-30500
ಹೊಸತು	26000-46000
ಸಾಗರ	
ಬಿಳಿಗೋಟು	21611-25587
ಚಾಲಿ	35699-37141
ಕೋಕ	12581-20299
ಕೆಂಪುಗೋಟು	23099-26099
ರಾಶಿ	31209-54839
ಸಿಪ್ಪೆಗೋಟು	8269-17869
ಶಿವಮೊಗ್ಗ	
ಬೆಟ್ಟೆ	52007-59099
ಗೊರಬಲು	18009-32699
ರಾಶಿ	48009-57169
ಸರಕು	58700-98596
ಸಿದ್ದಾಪುರ	
ಬಿಳಿಗೋಟು	24299-29169
ಚಾಲಿ	35099-41099
ಕೋಕ	20119-25589
ಕೆಂಪುಗೋಟು	21119-21819
ರಾಶಿ	41889-46009
ತಟ್ಟಿಬೆಟ್ಟೆ	28419-30119
ಶಿರಸಿ	
ಬೆಟ್ಟೆ	24199-41309
ಬಿಳಿಗೋಟು	16011-34603
ಚಾಲಿ	35099-42599
ರಾಶಿ	43609-47699
ಯಲ್ಲಾಪುರ	
ಅಪಿ	58099-60299
ಬಿಳಿಗೋಟು	14899-33960
ಚಾಲಿ	34009-41670
ಕೋಕ	8786-18969
ಕೆಂಪುಗೋಟು	14899-25399
ರಾಶಿ	39009-54498
ತಟ್ಟಿಬೆಟ್ಟೆ	26306-36789

ಕರಗಿದ ಹೂಡಿಕೆದಾರರ ₹5.64 ಲಕ್ಷ ಕೋಟಿ ಸಂಪತ್ತು

ಸೆನ್ಸೆಕ್ಸ್ 872 ಅಂಶ ಕುಸಿತ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಮಂಗಳವಾರ ಕರಡಿ ಕುಣಿತದಿಂದಾಗಿ ಸೂಚ್ಯಂಕಗಳು ಇಳಿಕೆ ಕಂಡಿವೆ.

ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಐಸಿಐಸಿಐ ಬ್ಯಾಂಕ್‌ನ ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು. ಇದರಿಂದ ಹೂಡಿಕೆದಾರರ ಸಂಪತ್ತು ₹5.64 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 872 ಅಂಶ ಇಳಿಕೆ ಕಂಡು (ಶೇ 1.06) 81,186 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 261 ಅಂಶ ಇಳಿಕೆ ಕಂಡು (ಶೇ 1.05), 24,683 ಅಂಶಗಳಲ್ಲಿ ಮುಕ್ತಾಯಗೊಂಡಿತು.

ಎಟರ್ನಲ್ ಷೇರಿನ ಮೌಲ್ಯದಲ್ಲಿ ಶೇ 4.10ರಷ್ಟು ಇಳಿಕೆಯಾಗಿದೆ. ಮಾರುತಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಅಲ್ಟ್ರಾಟೆಕ್ ಸಿಮೆಂಟ್, ಪವರ್ ಗ್ರಿಡ್, ನೆಸ್ಲೆ, ಬಜಾಜ್ ಫೈನಾನ್ಸ್, ಎಚ್‌ಯುಎಲ್, ಏಷ್ಯನ್ ಪೇಂಟ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಟಾಟಾ ಸ್ಟೀಲ್, ಇನ್ಫೊಸಿಸ್, ಐಟಿಸಿ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹1,000 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹490 ಕಡಿಮೆಯಾಗಿ, ₹96,540ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ದರವು (ಶೇ 99.5 ಪರಿಶುದ್ಧತೆ) ₹450 ಇಳಿಕೆಯಾಗಿದ್ದು, ₹96,130 ಆಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1 ಸಾವಿರ ಇಳಿಕೆಯಾಗಿ, ₹97,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕ ಮತ್ತು ಚೀನಾ ನಡುವಿನ ಸುಂಕ ಸಮರಕ್ಕೆ ತಾತ್ಕಾಲಿಕ ತಡೆ ಬಿದ್ದಿದೆ. ರಷ್ಯಾ ಮತ್ತು ಉಕ್ರೇನ್ ನಡುವೆ ಕದನ ವಿರಾಮ ಕುರಿತು ಶೀಘ್ರವೇ ಮಾತುಕತೆ ಶುರುವಾಗುವ ನಿರೀಕ್ಷೆಯಿದೆ. ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್, ಬಡ್ಡಿದರ ಕಡಿತಗೊಳಿಸುವ ನಿರೀಕ್ಷೆಯಿದೆ. ಹೀಗಾಗಿ, ಜಾಗತಿಕ ಮಾರುಕಟ್ಟೆಯಲ್ಲಿ ಹಳದಿ ಲೋಹಕ್ಕೆ ಬೇಡಿಕೆ ಕಡಿಮೆಯಾಗಿದ್ದು, ದರ ಇಳಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹16800-16800
ಮಧುಗಿರಿ	₹10000-15000
ತುಮಕೂರು	₹12100-13600

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,000-1,400
ಮಧ್ಯಮ	₹600-1,000
ಸಣ್ಣ	₹300-600

ಸುಧಾ, ಮಯೂರ ಓದಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕೆ.ಎನ್.ವಾಸಂತಿ ಹೆಗ್ಗಡೆಯವರು
ದಿ॥ ಶ್ರೀ ಎಂ.ವಿ.ಪುಟ್ಟಪ್ಪ ಹೆಗ್ಗಡೆ ರವರ ಧರ್ಮಪತ್ನಿ
ಮುಡುಬ, ಶೃಂಗೇರಿ.
ಜನನ: 30-04-1944 ನಿಧನ: 21-05-2024
ನೀವು ನಮ್ಮನ್ನಗಲಿ ಒಂದು ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಾಳದಲ್ಲಿದೆ. ನಿಮ್ಮ ದಿವ್ಯಾತ್ಮವು ಭಗವಂತನ ಪದತಳದಲ್ಲಿ ಚಿರಶಾಂತಿ ಪಡೆಯಲೆಂದು ಪ್ರಾರ್ಥಿಸುವ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಎಲ್ಲಾ ಕುಟುಂಬಸ್ಥರು, ಶಿವಮೊಗ್ಗ.
ಫೋನ್: 9481320229 / 9480204505
9845027001 / 9448210868

290 ಲಕ್ಷ ಟನ್ ಗೋಧಿ ಖರೀದಿ: ಜೋಶಿ

ನವದೆಹಲಿ (ಪಿಟಿಐ): 'ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ 290 ಲಕ್ಷ ಟನ್ ಗೋಧಿ ಖರೀದಿಸಲಾಗಿದೆ. ಈ ಬಾರಿ ಖರೀದಿ ಪ್ರಮಾಣವು 320 ಲಕ್ಷ ಟನ್‌ನಿಂದ 325 ಲಕ್ಷ ಟನ್‌ಗೆ ಮುಟ್ಟುವ ನಿರೀಕ್ಷೆಯಿದೆ' ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರವು 2025–26ನೇ ಮಾರುಕಟ್ಟೆ ವರ್ಷದಲ್ಲಿ (ಏಪ್ರಿಲ್-ಮಾರ್ಚ್) 312 ಲಕ್ಷ ಟನ್ ಗೋಧಿ ಖರೀದಿಗೆ ಗುರಿ ನಿಗದಿಪಡಿಸಿದೆ. 2024–25ನೇ ಮಾರುಕಟ್ಟೆ ವರ್ಷದಲ್ಲಿ 265 ಲಕ್ಷ ಟನ್ ಗೋಧಿ ಖರೀದಿಸಲಾಗಿದೆ ಎಂದರು.

2024–25ನೇ ಬೆಳೆ ವರ್ಷದಲ್ಲಿ (ಜುಲೈ-ಜೂನ್) 1,153 ಲಕ್ಷ ಟನ್ ಗೋಧಿ ಉತ್ಪಾದನೆಯಾಗುವ ನಿರೀಕ್ಷೆಯಿದೆ. ಈ ಬಾರಿ ದಾಖಲೆ ಪ್ರಮಾಣದಲ್ಲಿ ಉತ್ಪಾದನೆಯಾಗುವುದರಿಂದ ಖರೀದಿ ಪ್ರಮಾಣದಲ್ಲೂ ಏರಿಕೆಯಾಗಲಿದೆ ಎಂದು ಹೇಳಿದರು.

ಖರೀದಿ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ದಾಸ್ತಾನು ಸ್ಥಿತಿಯನ್ನು ಅವಲೋಕಿಸಿ ಗೋಧಿ ರಫ್ತಿಗೆ ಅನುಮತಿ ನೀಡುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಿಡಿಎಸ್ ಬಲವರ್ಧನೆಗೆ ಆ್ಯಪ್ ಬಿಡುಗಡೆ

ಪಡಿತರ ವಿತರಣಾ ವ್ಯವಸ್ಥೆಯ (ಪಿಡಿಎಸ್) ಬಲವರ್ಧನೆಗಾಗಿ ಸಚಿವ ಪ್ರಲ್ಹಾದ ಜೋಶಿ ಅವರು, 'ಡಿಪೊ ದರ್ಪಣ್' ಪೋರ್ಟಲ್ ಹಾಗೂ 'ಅನ್ನ ಮಿತ್ರ', 'ಅನ್ನ ಸಹಾಯತಾ' ಹೆಸರಿನ ಆ್ಯಪ್‌ಗಳನ್ನು ಬಿಡುಗಡೆ ಮಾಡಿದರು.

ವ್ಯವಸ್ಥೆಯಲ್ಲಿ ಪಡಿತರ ಪದಾರ್ಥಗಳನ್ನು ದುರ್ಬಳಕೆ ಮಾಡಿಕೊಳ್ಳುವವರು ಇದ್ದಾರೆ. ಈ ಆ್ಯಪ್‌ಗಳು ಸೋರಿಕೆ ತಡೆಗಟ್ಟುವ ಜೊತೆಗೆ ಆಹಾರ ಪದಾರ್ಥಗಳು ವ್ಯರ್ಥವಾಗದಂತೆ ತಡೆಗಟ್ಟಲು ನೆರವಾಗಲಿವೆ ಎಂದರು.

ಭಾರತೀಯ ಆಹಾರ ನಿಗಮ ಮತ್ತು ಕೇಂದ್ರ ಉಗ್ರಾಣ ನಿಗಮದ ವ್ಯಾಪ್ತಿಗೆ ಬರುವ 2,278 ಗೋದಾಮುಗಳ ಮೂಲಸೌಕರ್ಯವನ್ನು ಮೇಲ್ದರ್ಜೆಗೇರಿಸಲು ಸರ್ಕಾರ ₹1,280 ಕೋಟಿ ವೆಚ್ಚ ಮಾಡಲಿದೆ ಎಂದರು.

ಪಡಿತರ ವಿತರಣೆಯಲ್ಲಿನ ಸೋರಿಕೆ ತಡೆಗಟ್ಟಲು ಮತ್ತು ಪಾರದರ್ಶಕತೆ ಕಾಯ್ದುಕೊಳ್ಳಲು ನವೀನ ತಂತ್ರಜ್ಞಾನದ ಬಳಕೆಗೆ ಸರ್ಕಾರ ಮುಂದಾಗಿದೆ ಎಂದು ಹೇಳಿದರು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಾಂತಾ ರಾಮಕೃಷ್ಣ, ಮಂಗಳೂರು

• **ಪ್ರಶ್ನೆ: ನಾನು ಪ್ರತಿ ವರ್ಷ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಿದ್ದೇನೆ. ಈಗಾಗಲೇ, ನನ್ನ ವೇತನ ಆದಾಯವು ನಮ್ಮ ತೆರಿಗೆ ಖಾತೆಯಲ್ಲಿ ದಾಖಲಾಗಿದೆ. ಆದರೆ, ನಾನು ಕೆಲವು ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿದ್ದೇನೆ. ಬ್ಯಾಂಕ್ ತೆರಿಗೆ ಕಡಿತ ಮಾಡಿಲ್ಲ. ಈ ಆದಾಯವು ಕಳೆದ ವರ್ಷ ಸುಮಾರು ₹50 ಸಾವಿರ ಆಗಿರಬಹುದು. ನನ್ನ ಯಾವುದೇ ತೆರಿಗೆ ಖಾತೆ, ಎಐಎಸ್ ಇತ್ಯಾದಿಯಲ್ಲಿ ಈ ತೆರಿಗೆ ಕಡಿತಗೊಳಿಸದೆ ಪಾವತಿಸಿರುವ ಬಡ್ಡಿ ಆದಾಯದ ಮಾಹಿತಿ ಇಲ್ಲದ ಕಾರಣ ಅಂತಹ ಆದಾಯವನ್ನು ಘೋಷಿಸುವ ಅಗತ್ಯ ಇದೆಯೇ?**

ಉತ್ತರ: ಬಡ್ಡಿ ಆದಾಯದ ಮೇಲೆ ತೆರಿಗೆ ಕಡಿತ ಆಗದೆ ಇದ್ದರೂ ತೆರಿಗೆ ಪಾವತಿದಾರ ತನ್ನ ಎಲ್ಲಾ ಆದಾಯವನ್ನು (ಅದು ಬ್ಯಾಂಕ್‌ಗಳಿಂದ ಬಂದಿರಲಿ ಅಥವಾ ಬೇರೆ ಮೂಲಗಳಿಂದ ಬಂದಿರಲಿ) ಸ್ವಯಂ ಘೋಷಿಸಿ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ವಿವರಿಸಬೇಕಿದೆ. ವಾರ್ಷಿಕ ಮಾಹಿತಿಗಳ ವರದಿ (ಎಐಎಸ್) ಅಥವಾ ಫಾರ್ಮ್ 26ಎ ಎಸ್‌ನಲ್ಲಿ ತೋರಿಸಲ್ಪಟ್ಟಿಲ್ಲವೆಂಬ ಕಾರಣಕ್ಕಾಗಿ ಆದಾಯವನ್ನು ವಿವರಿಸದಿರುವುದು ಸರಿಯಲ್ಲ.

ಆದಾಯ ತೆರಿಗೆ ಕಾಯ್ದೆ ಪ್ರಕಾರ ಹಣಕಾಸು ಸಂಸ್ಥೆಯು ಕೆಲವೊಮ್ಮೆ ಸರಿಯಾದ ಪೂರ್ಣ ಮಾಹಿತಿಯನ್ನು ವರದಿ ಮಾಡದೆ ಇದ್ದಿರಬಹುದು. ಆದರೆ, ತೆರಿಗೆದಾರ ಆದಾಯವನ್ನು ಸರಿಯಾಗಿ ಘೋಷಿಸುವುದು ಅನಿವಾರ್ಯ. ಇದರಿಂದ ದಂಡ, ಬಡ್ಡಿ ಅಥವಾ ಮುಂದಿನ ತಗಾದೆಗಳನ್ನು ತಪ್ಪಿಸಲು ಸಾಧ್ಯವಾಗಲಿದೆ.

ಶಶಿಧರ ಮೂರ್ತಿ, ಊರು ತಿಳಿಸಿಲ್ಲ.

• **ಪ್ರಶ್ನೆ: 2024-25ನೇ ಆರ್ಥಿಕ ವರ್ಷಕ್ಕೆ ನನ್ನ ಒಟ್ಟು ಆದಾಯ ₹10 ಲಕ್ಷ ಆಗಿದೆ. ವಯೋವೃದ್ಧರ ಉಳಿತಾಯ ಯೋಜನೆ (ಎಸ್‌ಸಿಎಸ್‌ಎಸ್) ಅಡಿ ಉಳಿತಾಯ ₹1.50 ಲಕ್ಷ ಮತ್ತು ಆರೋಗ್ಯ ವಿಮಾ ಪ್ರೀಮಿಯಂ ₹75 ಸಾವಿರ ಪಾವತಿಸಿದ್ದೇನೆ. ಪಿಂಚಣಿ, ಠೇವಣಿ ಬಡ್ಡಿ ಮತ್ತು ವೃತ್ತಿಪರ ಸೇವೆಗಳಿಗೆ ಪಡೆಯುವ ಸಲಹಾ ಶುಲ್ಕಗಳು ನನ್ನ ಆದಾಯದ ಮೂಲಗಳಾಗಿವೆ.**

ಅಲ್ಲದೆ, ನನ್ನ ಪತ್ನಿಯ ಒಟ್ಟು ಆದಾಯ ₹8 ಲಕ್ಷ ಇದೆ. ಎಸ್‌ಸಿಎಸ್‌ಎಸ್ ಅಡಿ ಉಳಿತಾಯ ₹1.50 ಲಕ್ಷ ಮತ್ತು ಆರೋಗ್ಯ ವಿಮಾ ಪ್ರೀಮಿಯಂ ₹15 ಸಾವಿರ ಇದೆ. ಅವರ ಆದಾಯದ ಮೂಲ- ಠೇವಣಿ ಮೇಲಿನ ಬಡ್ಡಿ ಮಾತ್ರ ಇರುತ್ತದೆ. ಜುಲೈ ಅಂತ್ಯದೊಳಗೆ ತೆರಿಗೆ ರಿಟರ್ನ್ಸ್ ಸಲ್ಲಿಸಲು ನನಗೆ ಮತ್ತು ನನ್ನ ಪತ್ನಿಗೆ ಯಾವ ತೆರಿಗೆ ಪದ್ಧತಿ ಸೂಕ್ತ ಎಂಬ ಬಗ್ಗೆ ತಿಳಿಸಿ.

2025-26ನೇ ಆರ್ಥಿಕ ವರ್ಷದಿಂದ ಜಾರಿಗೆ ಬರುವ ಹೊಸ ತೆರಿಗೆ ಪದ್ಧತಿಯು ಸಂಬಳ ಪಡೆಯುವ ವರ್ಗಕ್ಕೆ (ಪಿಂಚಣಿ ಆದಾಯ) ಈ ಹಿಂದಿನಂತೆ ಕಡಿತಗಳಿಗೆ ಸಾಮಾನ್ಯ ವಿನಾಯಿತಿಗಳು ಮತ್ತು ಮನೆ ಬಾಡಿಗೆ ಆದಾಯಕ್ಕೆ ಸಂಬಂಧಿಸಿ ದುರಸ್ತಿ ಮತ್ತು ನಿರ್ವಹಣೆಗಾಗಿ ಬಾಡಿಗೆ ಆದಾಯದಿಂದ ಶೇ 30ರಷ್ಟು ಕಡಿತವನ್ನು ಅನುಮತಿಸುತ್ತದೆಯೇ?

ಪ್ರಸಕ್ತ ಆರ್ಥಿಕ ವರ್ಷದಿಂದ ನಾನು ನನ್ನ ಮನೆಯ ಒಂದು ಭಾಗವನ್ನು ಬಾಡಿಗೆಗೆ ನೀಡಿದ್ದು, ಬಾಡಿಗೆ ಹಣವನ್ನು ನನ್ನ ಪತ್ನಿಯ ಖಾತೆಗೆ ಜಮಾ ಮಾಡಲಾಗುತ್ತಿದೆ. ದಯವಿಟ್ಟು ನಾವು ಬಾಡಿಗೆ ಆದಾಯವನ್ನು ನನ್ನ ಪತ್ನಿ ಹೆಸರಿನಲ್ಲಿ ಘೋಷಿಸಬಹುದೇ ಎಂಬ ಬಗ್ಗೆ ಪರಾಮರ್ಶಿಸಿ ತಿಳಿಸಿ.

ಉತ್ತರ: 2024–25ನೇ ಆರ್ಥಿಕ ವರ್ಷಕ್ಕೆ ನೀವು ಮತ್ತು ನಿಮ್ಮ ಪತ್ನಿ ನಿಮ್ಮದೇ ಪ್ರತ್ಯೇಕವಾದ ದುಡಿಮೆ ಹಾಗೂ ಉಳಿತಾಯದ ಮೂಲಗಳಿಂದ ಆದಾಯ ಗಳಿಸುತ್ತಿದ್ದೀರಿ. ನೀವು ಪ್ರಸ್ತುತ ಹಳೆಯ ತೆರಿಗೆ ಪದ್ಧತಿಯಡಿ ಎಸ್‌ಸಿಎಸ್‌ಎಸ್‌ನಲ್ಲಿ ₹1.50 ಲಕ್ಷ ಮತ್ತು ಆರೋಗ್ಯ ವಿಮಾ ಪ್ರೀಮಿಯಂ ₹75 ಸಾವಿರ ಪಾವತಿಸಿರುತ್ತೀರಿ. ಇಲ್ಲಿ ಇರುವ ಮೊದಲ ಪ್ರಶ್ನೆಯೆಂದರೆ ಈ ಎಸ್‌ಸಿಎಸ್‌ಎಸ್‌ನಲ್ಲಿ ಮಾಡಿರುವ ಹೂಡಿಕೆಯನ್ನು ತೆರಿಗೆ ಕಡಿತ ಪಡೆಯಲು ಮಾಡಿದ್ದೀರೆ ಅಥವಾ ಉಳಿತಾಯಕ್ಕಾಗಿ ಮಾಡಿದ್ದೀರಾ ಎಂಬುದಾಗಿದೆ. ಒಂದು ವೇಳೆ ಉಳಿತಾಯಕ್ಕಾಗಿ ಮಾಡಿರುವ ಹೂಡಿಕೆಯಾಗಿದ್ದರೆ ಅದನ್ನು ಮುಂದುವರಿಸಿ.

ಆದರೆ, ಕೇವಲ ತೆರಿಗೆ ಉಳಿತಾಯಕ್ಕಾಗಿ ಮಾಡಿರುವ ಹೂಡಿಕೆಯಾಗಿದ್ದರೆ ನಿಮಗೆ ಹೊಸ ತೆರಿಗೆ ಪದ್ಧತಿಯು ಈ ಎಲ್ಲಾ ರಿಯಾಯಿತಿ ಇಲ್ಲದೆಯೇ ಹೆಚ್ಚಿನ ತೆರಿಗೆ ಉಳಿತಾಯಕ್ಕೆ ಅನುವು ಮಾಡಿಕೊಡುತ್ತದೆ. ಹಾಗಾಗಿ, ನಿಮ್ಮ ನಿರ್ಧಾರವನ್ನು ಪರಾಮರ್ಶಿಸಿ. ಆರೋಗ್ಯ ವಿಮಾ ಪ್ರೀಮಿಯಂ ಹೇಗಿದ್ದರೂ ಆರೋಗ್ಯದ ವೆಚ್ಚದ ಸಂದರ್ಭದಲ್ಲಿ ಪ್ರಯೋಜನವಾಗುವ ಕಾರಣ ಅನಿವಾರ್ಯವಾಗಿ ಮಾಡಬೇಕಾದ ನಿಶ್ಚಿತ ಪಾವತಿಯಾಗಿದೆ. ಹೀಗಾಗಿ, ಇಲ್ಲಿ ಹೋಲಿಕೆಯ ಪ್ರಶ್ನೆ ಬರುವುದಿಲ್ಲ.

ನಿಮ್ಮ ತೆರಿಗೆ ಪದ್ಧತಿ ಆಯ್ಕೆ ಬಗ್ಗೆ ಹೇಳುವುದಾದರೆ ಹೊಸ ತೆರಿಗೆ ಪದ್ಧತಿಯಡಿ ನೀವು ಉಲ್ಲೇಖಿಸಿದ ಪಾವತಿಗಳಿಗೆ ಯಾವುದೇ ತೆರಿಗೆ ರಿಯಾಯಿತಿ ಇರುವುದಿಲ್ಲ. ಆದರೆ, ತೆರಿಗೆ ದರ ಕಡಿಮೆ ಇದೆ. ಹೀಗಾಗಿ, ಹೊಸ ತೆರಿಗೆ ಪದ್ಧತಿ ಆಯ್ಕೆಯು ಉತ್ತಮವಾಗಿದೆ. 2025-26ನೇ ಆರ್ಥಿಕ ವರ್ಷದ ತೆರಿಗೆ ವಿಚಾರವಾಗಿ ಹೇಳುವುದಾದರೆ ನಿಮಗೆ ಪಿಂಚಣಿ ವೇತನ ಇರುವ ಕಾರಣ ಸ್ಟ್ಯಾಂಡರ್ಡ್ ಡಿಡಕ್ಷನ್ ಸಹಿತ ₹12.75 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇರುವುದಿಲ್ಲ. ಇದನ್ನು ರಿಟರ್ನ್ಸ್ ಸಲ್ಲಿಸಿ ಪಡೆಯಬೇಕಾಗಿರುತ್ತದೆ.

ಇನ್ನು ಬಾಡಿಗೆ ಆದಾಯ ಇರುವ ತೆರಿಗೆದಾರರಿಗೆ, ಆಸ್ತಿ ತೆರಿಗೆ ಪಾವತಿ ಆದ ಮೇಲೆ ಉಳಿಯುವ ಬಾಡಿಗೆ ಆದಾಯದ ಮೇಲೆ ಶೇ 30ರಷ್ಟು ನಿಶ್ಚಿತ ವೆಚ್ಚ- ನಿರ್ವಹಣಾ ಕಡಿತಗಳಿಗೆ ಅವಕಾಶ ಇದೆ. ನೀವು ನಿಮ್ಮ ಮಾಲೀಕತ್ವದ ಮನೆಯ ಭಾಗವನ್ನು ಬಾಡಿಗೆಗೆ ನೀಡಿದ್ದು ಅದರ ಆದಾಯವನ್ನು ನಿಮ್ಮ ಪತ್ನಿಯ ಹೆಸರಿನಲ್ಲಿ ಗಳಿಸುತ್ತಿದ್ದೀರಿ. ಇಲ್ಲಿ ಕಾನೂನಾತ್ಮಕವಾಗಿ ನೋಡುವುದಾದರೆ ಮಾಲೀಕತ್ವ ಬದಲಾಗದೆ ಅದಕ್ಕೆ ಸಂಬಂಧಿತ ಆದಾಯ ಮಾತ್ರ ಅವರ ಹೆಸರಲ್ಲಿ ಸ್ವೀಕರಿಸುವುದಕ್ಕೆ ಅವಕಾಶವನ್ನು ನೀವು ಪರಸ್ಪರ ಮಾಡಿ ಕೊಟ್ಟಿದ್ದರೂ, ಬಾಡಿಗೆ ಆದಾಯವು ನಿಮ್ಮ ತೆರಿಗೆ ರಿಟರ್ನ್ಸ್‌ನಲ್ಲೇ ಸಲ್ಲಿಕೆ ಆಗಬೇಕಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Cook

ಅನುಭವವುಳ್ಳ ಸೌತ್ ಇಂಡಿಯನ್ ಚೆಫ್ ಬೇಕಾಗಿದ್ದಾರೆ. ಸಂಪರ್ಕಿಸಿ: +91 9019793857, +91 9986666778. ಗ್ರೀನ್ ಪಾತ್ ರೆಸ್ಟೋರೆಂಟ್, ಮಂತ್ರಿಮಾಲ್ ಮೆಟ್ರೋಸ್ಟೇಷನ್ ಮುಂಭಾಗ, ಮಲ್ಲೇಶ್ವರಂ.

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಪುರುಷ ಸಹಾಯಕರು ತಕ್ಷಣ ಬೇಕಾಗಿದ್ದಾರೆ. ರಾಮನಗರ ಬಳಿಯಿರುವ ರೆಸಾರ್ಟ್‌ಗೆ ಊಟ ವಸತಿಯೊಂದಿಗೆ. ಉತ್ತಮ ಸಂಬಳ. ಸಂಪರ್ಕಿಸಿ: 9663497356/ 8884811114

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್`ಸೌಲಭ್ಯವಿದೆ. 6366625808, 6366627808.

Wanted

ಬೇಕಾಗಿದ್ದಾರೆ: ಮಂಗಳೂರಿನ ಯೆಯ್ಯಾಡಿಯಲ್ಲಿರುವ ಫ್ಯಾಕ್ಟರಿಗೆ ITI (Turners, Machinists, Fitters)C.N.Cಮತ್ತು V.M.C operators ವಸತಿ ಉತ್ತಮ ವೇತನ, PF, ESI ಸೌಲಭ್ಯವಿದೆ- 9448143377

ಲೇಡಿಸ್ ಬ್ಯೂಟಿ ಪಾರ್ಲರ್ ನಲಿ ಲೇಡಿಸ್ ಬ್ಯೂಟಿಷಿಯನ್ಸ್ ಬೇಕಾಗಿದ್ದರೆ. ತಿಂಗಳಿಗೆ ವೇತನ 25000/- Full ಟೈಮ್ & Part ಟೈಮ್ ಶೇಷಾದ್ರಿಪುರಂ ಬೆಂಗಳೂರು, ಸಂಪರ್ಕಿಸಿ: 7349494852

ಪ್ರವಾಸ

Travel

28.05.2025 05.06.2025 ಚಾರ್‌ಧಾಮ್ ಸಮೇತ ಪ್ರವಾಸ 08.06.2025 ನೈಮಿಷಾರಣ್ಯ ಬುದ್ಧಗಯಾ ಕಾಶಿ,ಅಯೋಧ್ಯ ಅಲಹಾಬಾದ್ ನೇಪಾಳ ಪೋಖ್ರಾ,ಮುಕ್ತಿನಾಥ. 23.06.2025 ಸೋಮನಾಥ್ ದ್ವಾರಕಾ ಮಹಾಕಾಳೇಶ್ವರ ಓಂಕಾರೇಶ್ವರ್. 29.06.2025 ಅಮರನಾಥ್‌ಯಾತ್ರೆ ಇತ್ಯಾದಿ. ಏಷ್ಯನ್ ಟ್ರಾವೆಲ್ಸ್ ಏಜೆನ್ಸಿ ಬೆಂಗಳೂರು.04 26574131 8431888138 8317446683

Holiday Package Tours

12.6.2025, 4 ದಿನಗಳು ಬೀದರ್ ಝರಣಿನರಸಿಂಹಸ್ವಾಮಿ,ಕೂಡಲಸಂಗಮ, ಗಾಣಗಾಪುರ,108 ಅಡಿ ಬಸವೇಶ್ವರ ಪ್ರತಿಮೆ,ಅನುಭವಮಂಟಪ, ವೈಷ್ಣೋದೇವಿಇತ್ಯಾದಿ. 9481433157

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424
+91 9731810277 | +91 9900428036
*Conditions apply

ಕ್ಯಾಂಡರೆಗೆ ಶಾರುಕ್ ಖಾನ್ ರಾಯಭಾರಿ



ಮುಂಬೈ (ಪಿಟಿಐ): ಕಲ್ಯಾಣ್ ಜ್ಯುವೆಲರ್ಸ್ ಇಂಡಿಯಾದ ಬ್ರ್ಯಾಂಡ್ ಆದ 'ಕ್ಯಾಂಡರೆ'ಗೆ ಬಾಲಿವುಡ್ ನಟ ಶಾರುಕ್ ಖಾನ್ ಅವರು, ಪ್ರಚಾರ ರಾಯಭಾರಿಯಾಗಿದ್ದಾರೆ.

ಭಾರತೀಯರು ತಮ್ಮ ವ್ಯಕ್ತಿತ್ವ, ಜೀವನ ಶೈಲಿ ಹಾಗೂ ವಿಶೇಷ ಕಾರ್ಯಕ್ರಮಗಳ ಸಂದರ್ಭದಲ್ಲಿ ಧರಿಸಲು ಆಕರ್ಷಕ ಆಭರಣಗಳಿಗೆ ಹುಡುಕಾಟ ನಡೆಸುತ್ತಾರೆ. ಕ್ಯಾಂಡರೆಯು ಇಂತಹ ಆಭರಣಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿದೆ. ಜೆನ್ ಝೀ ತಲೆಮಾರಿನವರ ಬೇಡಿಕೆ ಈಡೇರಿಸುವಲ್ಲಿ ಯಶಸ್ವಿಯಾಗಿದೆ ಎಂದು ಕ್ಯಾಂಡರೆ ನಿರ್ದೇಶಕ ರಮೇಶ್ ಕಲ್ಯಾಣರಾಮನ್ ತಿಳಿಸಿದ್ದಾರೆ.

ನಟ ಶಾರುಕ್ ಖಾನ್ ಪ್ರಚಾರ ರಾಯಭಾರಿಯಾಗಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದ್ದಾರೆ.

ಭಾರತದ ಪರ್ವತಾರೋಹಿ ಸಾವು: ವರದಿ

ಕಠ್ಮಂಡು (ಪಿಟಿಐ): ಹಿಮಾಲಯ ಪರ್ವತ ಶ್ರೇಣಿಯಲ್ಲಿರುವ, ಜಗತ್ತಿನ ನಾಲ್ಕನೇ ಅತಿ ಎತ್ತರದ ಮೌಂಟ್ ಲೋಟ್ಸೆ ತುತ್ತತುದಿ ತಲುಪಿದ ನಂತರ ಭಾರತೀಯ ಪರ್ವತಾರೋಹಿಯೊಬ್ಬರು ಮೃತಪಟ್ಟಿದ್ದಾರೆಂದು ವರದಿಯಾಗಿದೆ.

ರಾಜಸ್ಥಾನದ ರಾಕೇಶ್ ಬಿಷ್ಣೋಯಿ ಅವರು ಲೋಟ್ಸೆ ತುತ್ತತುದಿ ತಲುಪಿ, ಸೋಮವಾರ ವಾಪಸ್ ಇಳಿಯುವಾಗ ಕ್ಯಾಂಪ್–4ರ ಸಮೀಪದ ಯೆಲ್ಲೊ ಬ್ಯಾಂಡ್‌ನಲ್ಲಿ ಮೃತಪಟ್ಟಿದ್ದಾರೆ ಎಂದು 'ಹಿಮಾಲಯನ್ ಟೈಮ್ಸ್' ಪತ್ರಿಕೆಯು ವರದಿ ಮಾಡಿದೆ.

ಲೋಟ್ಸೆ ಪರ್ವತವು ಸಮುದ್ರಮಟ್ಟದಿಂದ 8,516 ಮೀಟರ್ ಎತ್ತರವಿದೆ.

ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯಾದ ಬೆಂಗಳೂರು ಘಟಕವು ಎಂಟನೇ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ದಿ ಪ್ರಿಂಟರ್ಸ್ ಮೈಸೂರು ಪ್ರೈವೆಟ್ ಲಿಮಿಟೆಡ್‌ನ ತಂಡವು ಉತ್ಪಾದನೆ ಗುಣಮಟ್ಟಕ್ಕೆ ಸಂಬಂಧಿಸಿದ ಸ್ಪರ್ಧೆಗಳಲ್ಲಿ ಮೂರು ಚಿನ್ನದ ಪದಕಗಳನ್ನು ಪಡೆದಿದೆ. ತಂಡದ ಸದಸ್ಯರಾದ ಗಣೇಶನ್, ಸುರೇಶ್ ಕುಪ್ಪುಸ್ವಾಮಿ, ಫ್ರಾಂಕ್ಲಿನ್ ಪ್ರಭು, ಬಸವರಾಜು, ಪ್ರಕಾಶ್, ಮಂಜುನಾಥ, ರಾಜಾರಾಮ್ ಹಾಗೂ ರಾಘವೇಂದ್ರ ಚಿತ್ರದಲ್ಲಿದ್ದಾರೆ

ವಿಶ್ವದ ಮಹಾದಾನಿಗಳ ಪಟ್ಟಿ: ಮುಕೇಶ್ ಅಂಬಾನಿ, ಅಜೀಂ ಪ್ರೇಮ್‌ಜಿಗೆ ಸ್ಥಾನ

ನ್ಯೂಯಾರ್ಕ್ (ಪಿಟಿಐ): ಸಮಾಜಸೇವೆ, ಪರೋಪಕಾರ ಕಾರ್ಯಗಳಿಂದ ಮನ್ನಣೆ ಗಳಿಸಿರುವ 2025ನೇ ಸಾಲಿನ ವಿಶ್ವದ 100 ಮಂದಿ ಮಹಾದಾನಿಗಳ ಪಟ್ಟಿಯನ್ನು 'ಟೈಮ್' ನಿಯತಕಾಲಿಕ ಮಂಗಳವಾರ ಅನಾವರಣಗೊಳಿಸಿದೆ. ಭಾರತದ ಉದ್ಯಮಿ ಮುಕೇಶ್ ಅಂಬಾನಿ ಹಾಗೂ ಅವರ ಪತ್ನಿ ನೀತಾ ಅಂಬಾನಿ, ವಿಪ್ರೊದ ಮಾಜಿ ಅಧ್ಯಕ್ಷ ಅಜೀಂ ಪ್ರೇಮ್‌ಜಿ, ಜೆರೋದಾ ಸಹ ಸಂಸ್ಥಾಪಕ ನಿಖಿಲ್ ಕಾಮತ್ ಅವರು ಈ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

'ಟೈಮ್' ನಿಯತಕಾಲಿಕ ಪ್ರಕಾರ, ಮುಕೇಶ್ ಹಾಗೂ ನೀತಾ ಅಂಬಾನಿ ಅವರು 2024ರಲ್ಲಿ ₹407 ಕೋಟಿಯನ್ನು ಪರೋಪಕಾರಕ್ಕೆ ವಿನಿಯೋಗಿಸಿದ್ದಾರೆ. ಈ ಮೂಲಕ ದೇಶದ ಅತಿದೊಡ್ಡ ದಾನಿಗಳು ಎನಿಸಿಕೊಂಡಿದ್ದಾರೆ.

ಭಾರತದಲ್ಲಿ ಶಿಕ್ಷಣ ವ್ಯವಸ್ಥೆಗೆ ಕೊಡುಗೆ ನೀಡಲು ಶ್ರಮಿಸುತ್ತಿರುವ ಅಜೀಂ ಪ್ರೇಮ್‌ಜಿ 2023–24ರಲ್ಲಿ ಶಿಕ್ಷಣ ಆಧರಿತವಾದ 940 ಸಂಸ್ಥೆಗಳಿಗೆ ₹932 ಕೋಟಿ ದೇಣಿಗೆ ನೀಡಿದ್ದಾರೆ. ಜೆರೋದಾ ಸಹ ಸಂಸ್ಥಾಪಕ ನಿಖಿಲ್ ಪರೋಪಕಾರದ ಕಾರ್ಯಗಳಿಗಾಗಿ ₹855 ಕೋಟಿ ಮೀಸಲಿಟ್ಟಿದ್ದಾರೆ ಎಂದು ವರದಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಜೆನ್ಸೋಲ್ ಕಂಪನಿ ವಿರುದ್ಧ ತನಿಖೆ

ನವದೆಹಲಿ (ಪಿಟಿಐ): ಕಂಪನಿ ಕಾನೂನು ಉಲ್ಲಂಘಿಸಿದ ಆರೋಪ ಎದುರಿಸುತ್ತಿರುವ ಜೆನ್ಸೋಲ್ ಎಂಜಿನಿಯರಿಂಗ್ ಲಿಮಿಟೆಡ್ ಹಾಗೂ ಇತರೆ 18 ಕಂಪನಿಗಳ ವಿರುದ್ಧದ ತನಿಖೆಯನ್ನು ಮುಂದಿನ ಮೂರು ಅಥವಾ ಐದು ತಿಂಗಳೊಳಗೆ ಪೂರ್ಣಗೊಳಿಸಲಾಗುವುದು ಎಂದು ರಾಷ್ಟ್ರೀಯ ಹಣಕಾಸು ವರದಿ ಪ್ರಾಧಿಕಾರದ ಮುಖ್ಯಸ್ಥರಾದ ರವನೀತ್ ಕೌರ್ ತಿಳಿಸಿದ್ದಾರೆ.

ಆ್ಯಪ್ ಆಧರಿತ ಟ್ಯಾಕ್ಸಿ ಸೇವೆ ಒದಗಿಸುವ ಬ್ಲೂಸ್ಮಾರ್ಟ್ ಕಂಪನಿಯ ಒಡೆತನಕ್ಕೆ ಸೇರಿದ ಜೆನ್ಸೋಲ್ ಕಂಪನಿಯ ಪ್ರವರ್ತಕರಾದ ಅನ್ಮೋಲ್ ಸಿಂಗ್ ಜಗ್ಗಿ ಮತ್ತು ಪುನೀತ್ ಸಿಂಗ್ ಜಗ್ಗಿ ಅವರು, ಕಂಪನಿಯ ಹಣವನ್ನು ದುರ್ಬಳಕೆ ಮಾಡಿಕೊಂಡ ಆರೋಪ ಹೊತ್ತಿದ್ದಾರೆ. ಈ ಕಂಪನಿ ವಿರುದ್ಧ ಈಗಾಗಲೇ ಪ್ರಾಧಿಕಾರವು ಪ್ರಾಥಮಿಕ ವಿಚಾರಣೆಯನ್ನು ಆರಂಭಿಸಿದೆ ಎಂದು ತಿಳಿಸಿದ್ದಾರೆ. ಹಣ ದುರ್ಬಳಕೆ ಮತ್ತು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಸಂಬಂಧ ಜೆನ್ಸೋಲ್ ಕಂಪನಿಯ ಪ್ರವರ್ತಕರನ್ನು ಷೇರುಪೇಟೆ ವಹಿವಾಟಿನಿಂದಲೂ ನಿಷೇಧಿಸಲಾಗಿದೆ.

ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಏಪ್ರಿಲ್ ತಿಂಗಳಲ್ಲಿ ಎಂಟು ತಿಂಗಳ ಕನಿಷ್ಠ ಮಟ್ಟವಾದ ಶೇ 0.5ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ.

ಕಚ್ಚಾ ತೈಲ, ಸಂಸ್ಕರಿಸಿದ ಉತ್ಪನ್ನಗಳು ಮತ್ತು ರಸಗೊಬ್ಬರದ ಉತ್ಪಾದನೆಯಲ್ಲಿ ಇಳಿಕೆಯಾಗಿದೆ. ಹೀಗಾಗಿ, ಪ್ರಗತಿ ಕುಂಠಿತವಾಗಿದೆ ಎಂದು ಹೇಳಿದೆ.

ಮಾರ್ಚ್‌ನಲ್ಲಿ ಈ ವಲಯದ ಉತ್ಪಾದನೆಯು ಶೇ 4.6ರಷ್ಟಿತ್ತು. ಕಳೆದ ವರ್ಷದ ಏಪ್ರಿಲ್‌ನಲ್ಲಿ ಶೇ 6.9ರಷ್ಟಿತ್ತು ಎಂದು ತಿಳಿಸಿದೆ.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನ, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಎಂಟು ವಲಯಗಳಾಗಿವೆ.

ಯುಪಿಎಸ್ ಕ್ಯಾಲ್ಕುಲೇಟರ್ ಬಿಡುಗಡೆ

ನವದೆಹಲಿ (ಪಿಟಿಐ): ಸರ್ಕಾರಿ ನೌಕರರು ಏಕೀಕೃತ ಪಿಂಚಣಿ ಯೋಜನೆಯಡಿ (ಯುಪಿಎಸ್) ತಮ್ಮ ಪಿಂಚಣಿ ಮೊತ್ತವನ್ನು ಲೆಕ್ಕಾಚಾರ ಮಾಡಲು ಅನುವಾಗುವಂತೆ ಕ್ಯಾಲ್ಕುಲೇಟರ್ ಅನ್ನು ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಸೇವೆಗಳ ಇಲಾಖೆಯು (ಡಿಎಫ್‌ಎಸ್) ಮಂಗಳವಾರ ತಿಳಿಸಿದೆ.

ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಟ್ರಸ್ಟ್‌ನ ವೆಬ್‌ಸೈಟ್‌ನಲ್ಲಿ ಈ ಸೌಲಭ್ಯ ಲಭ್ಯವಿದೆ. ಸರ್ಕಾರಿ ನೌಕರರು ತಮ್ಮ ಜನ್ಮ ದಿನಾಂಕ, ಕೆಲಸಕ್ಕೆ ಸೇರಿದ ದಿನ ಸೇರಿ ಅಗತ್ಯ ಮಾಹಿತಿಯನ್ನು ನಮೂದಿಸಿ ನಿವೃತ್ತಿ ವೇಳೆಗೆ ಎಷ್ಟು ಪಿಂಚಣಿ ದೊರೆಯಲಿದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ ಎಂದು ಇಲಾಖೆಯು 'ಎಕ್ಸ್'ನಲ್ಲಿ ತಿಳಿಸಿದೆ.

ಎನ್‌ಪಿಎಸ್ ಮತ್ತು ಯುಪಿಎಸ್‌ನಡಿ ಎರಡರಲ್ಲೂ ಎಷ್ಟು ಪಿಂಚಣಿ ಮೊತ್ತ ದೊರೆಯಲಿದೆ ಎಂಬುದನ್ನು ಲೆಕ್ಕ ಹಾಕಬಹುದಾಗಿದೆ. ಇದರಿಂದ ಚಂದಾದಾರರಿಗೆ ಸೂಕ್ತ ಪಿಂಚಣಿ ಯೋಜನೆಯ ಆಯ್ಕೆಗೆ ಸಹಕಾರಿ ಯಾಗಲಿದೆ ಎಂದು ಹೇಳಿದೆ.

ಜನವಿರೋಧಿ ಕಾಯ್ದೆ ಹಿಂಪಡೆಯಲು ಒತ್ತಾಯ

ದೆಹಲಿ ಮಾದರಿಯ ಹೋರಾಟ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭೂ ತಿದ್ದುಪಡಿ ನೀತಿ, ಎಪಿಎಂಸಿ ತಿದ್ದುಪಡಿ ನೀತಿ, ಜಾನುವಾರು ನೀತಿ ಸೇರಿದಂತೆ ನಾಲ್ಕು ಕಾರ್ಮಿಕ ವಿರೋಧಿ ನೀತಿಗಳನ್ನು ಹಿಂಪಡೆಯದಿದ್ದರೆ ರಾಜ್ಯದ ಎಲ್ಲ ರೈತ, ಕಾರ್ಮಿಕ, ದಲಿತ, ವಿದ್ಯಾರ್ಥಿ ಸಂಘಟನೆಗಳನ್ನು ಒಟ್ಟುಗೂಡಿಸಿ ದೆಹಲಿ ಮಾದರಿಯ ಹೋರಾಟ ರೂಪಿಸಿ ಬೆಂಗಳೂರಿಗೆ ಮುತ್ತಿಗೆ ಹಾಕಲಾಗುವುದು' ಎಂದು 'ಸಂಯುಕ್ತ ಹೋರಾಟ ಕರ್ನಾಟಕ' ಎಚ್ಚರಿಕೆ ನೀಡಿದೆ.

ರಾಜ್ಯ ಸರ್ಕಾರದ 'ಸಾಧನಾ ಸಮಾವೇಶ'ದ ನೈತಿಕತೆಯನ್ನು ಪ್ರಶ್ನಿಸಿ, ಸಂಯುಕ್ತ ಹೋರಾಟವು ನಗರದಲ್ಲಿ ಮಂಗಳವಾರ ಸಮಾವೇಶ ಹಮ್ಮಿಕೊಂಡಿತ್ತು.

'ಬಲವಂತದ ಭೂ ಸ್ವಾಧೀನ ಕೈಬಿಡಬೇಕು. ಬಗರ್ ಹುಕುಂ ರೈತರಿಗೆ ಹಕ್ಕು ಪತ್ರ ನೀಡಬೇಕು ಹಾಗೂ ರಾಜ್ಯದ ಬಡ ಕುಟುಂಬಗಳಿಗೆ ಸೂರು ಒದಗಿಸಲು ಬೃಹತ್ ನಿವೇಶನ ಅಭಿಯಾನ ಹಮ್ಮಿಕೊಳ್ಳಬೇಕು. ಕಾರ್ಮಿಕರ ದುಡಿಮೆ ಅವಧಿಯನ್ನು 8 ಗಂಟೆಯಿಂದ 12 ಗಂಟೆಗೆ ಹೆಚ್ಚಿಸಿರುವುದನ್ನು ಹಿಂಪಡೆಯಬೇಕು' ಎಂದು ಒತ್ತಾಯಿಸಲಾಯಿತು.

'ಕೇಂದ್ರ ಸರ್ಕಾರ ಜಾರಿಗೆ ತಂದಿದ್ದ ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಭರವಸೆ ನೀಡಿದ್ದ ಕಾಂಗ್ರೆಸ್ ಸರ್ಕಾರ, ಕೊಟ್ಟ ಮಾತು ಮರೆತಿದೆ. ರೈತರ, ದಲಿತರ, ಕಾರ್ಮಿಕರ ಯಾವುದೇ ಸಮಸ್ಯೆಗಳನ್ನು ಬಗೆಹರಿಸಿಲ್ಲ. ರೈತರ ಬೆಳೆಗಳಿಗೆ ಬೆಂಬಲ ಬೆಲೆ ನೀಡಿಲ್ಲ' ಎಂದು ಮುಖಂಡರು ಬೇಸರ ವ್ಯಕ್ತಪಡಿಸಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ಚನ್ನರಾಯಪಟ್ಟಣದ ಹೋರಾಟಗಾರರಿಗೆ ಕೊಟ್ಟ ಮಾತಿಗೆ ದ್ರೋಹ ಬಗೆದು, ಬಲವಂತದ ಭೂಸ್ವಾಧೀನ ಮಾಡಲು ಹೊರಟಿದ್ದೀರಿ. 15 ಲಕ್ಷ ಬಗರ್ ಹುಕುಂ ರೈತರ ಅರ್ಜಿಗಳನ್ನು ತಿರಸ್ಕರಿಸಲು ಹೊರಟಿದ್ದೀರಿ. ಬಡವರ ಮನೆಗಳನ್ನು ಸಕ್ರಮಗೊಳಿಸದೆ ಕಾಡಿಸುತ್ತಿದ್ದೀರಿ. ನೆಲೆ ಇಲ್ಲದವರಿಗೆ ನಿವೇಶನ ಹಂಚುವ ಮಾತೇ ಸರ್ಕಾರದಿಂದ ಬರುತ್ತಿಲ್ಲ. ಕಾರ್ಪೋರೇಟ್‌ಗಳ ಭೂದಾಹವನ್ನು ತೃಪ್ತಿಗೊಳಿಸಲು ಭೂಬ್ಯಾಂಕ್ ರೂಪಿಸಲು ಹೊರಟಿದ್ದೀರಿ' ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಜನಶಕ್ತಿಯ ನೂರ್ ಶ್ರೀಧರ್ ಮಾತನಾಡಿ, 'ದೇವನಹಳ್ಳಿಯ ಚನ್ನರಾಯಪಟ್ಟಣದ ರೈತರು ನಡೆಸುತ್ತಿರುವ ಸುದೀರ್ಘ ಹೋರಾಟವನ್ನು ಸೋಲುವುದಕ್ಕೆ ಬಿಡುವುದಿಲ್ಲ. ಅಧಿಕಾರಕ್ಕೆ ಬಂದರೆ ಬಿಜೆಪಿ ತಂದ ಎಲ್ಲ ಕಾಯ್ದೆಗಳನ್ನು ರದ್ದು ಮಾಡುವುದಾಗಿ ಕಾಂಗ್ರೆಸ್ ನಾಯಕರು ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದರು. ಎರಡು ವರ್ಷವಾದರೂ ಬಿಜೆಪಿ ತಂದಿದ್ದ ನೀತಿಗಳನ್ನೇ ಕಾಂಗ್ರೆಸ್ ಸರ್ಕಾರ ಮುಂದುವರಿಸುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಸಂಯುಕ್ತ ಹೋರಾಟ ಕರ್ನಾಟಕ ಆಯೋಜಿಸಿದ್ದ ಜನಾಗ್ರಹ ಸಮಾವೇಶದಲ್ಲಿ ಬಡಗಲಪುರ ನಾಗೇಂದ್ರ, ವೆಂಕಟಾಚಲಯ್ಯ, ಚಾಮರಸಮಾಲೀ ಪಾಟೀಲ್, ಎಸ್. ವರಲಕ್ಷ್ಮಿ, ಹನುಮಂತಪ್ಪ, ಕಾರಹಳ್ಳಿ ಶ್ರೀನಿವಾಸ್, ನೂರ್ ಶ್ರೀಧರ್, ದೇವಿ ಅವರು ಭಿತ್ತಿಪತ್ರ ಬಿಡುಗಡೆ ಮಾಡಿದರು ಪ್ರಜಾವಾಣಿ ಚಿತ್ರ

ಜನಾಗ್ರಹ ನಿರ್ಣಯಗಳು

- ಬಲವಂತದ ಭೂಸ್ವಾಧೀನ ಕೈಬಿಡಬೇಕು. ಎಲ್ಲ ಬಗರ್ ಹುಕುಂ ರೈತರಿಗೆ ಹಕ್ಕುಪತ್ರ ನೀಡಬೇಕು
- ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆ ಒದಗಿಸಲು ಸೂಕ್ತ ಕಾಯ್ದೆ ಮತ್ತು ಕ್ರಮ ರೂಪಿಸಬೇಕು
- ಶ್ರಮಜೀವಿಗಳ ವಿರೋಧಿಯಾದ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ತಿರಸ್ಕರಿಸಬೇಕು
- ಎಲ್ಲ ಮಕ್ಕಳಿಗೂ ಉಚಿತ ಸಮಾನ ಗುಣಮಟ್ಟದ ಶಿಕ್ಷಣ ಒದಗಿಸಬೇಕು
- ನರೇಗಾ ಯೋಜನೆಯನ್ನು ಉಳಿಸಲು ಮತ್ತು ವಿಸ್ತರಿಸಲು ಕ್ರಮವಹಿಸಬೇಕು
- ಬೆಳಗಾವಿಯಲ್ಲಿರುವ ಸರ್ಕಾರಿ ಎಪಿಎಂಸಿಯನ್ನು ಖಾಸಗಿ ಮಾರುಕಟ್ಟೆಯಾಗಿ ಬದಲಾಯಿಸುವ ತೀರ್ಮಾನ ಕೈ ಬಿಡಬೇಕು

ಗಾಜಾದಲ್ಲಿ 60 ಜನ ಸಾವು

ದೀರ್ ಅಲ್-ಬಲಾಹ್, ಗಾಜಾಪಟ್ಟಿ, ಜೆರುಸಲೇಂ (ಎಪಿ): ಸೋಮವಾರ ರಾತ್ರಿಯಿಡೀ ಗಾಜಾ ಪಟ್ಟಿ ಮೇಲೆ ಇಸ್ರೇಲ್ ಸೇನೆಯು ವಾಯುದಾಳಿ ಮುಂದುವರಿಸಿದೆ. ಮನೆ ಹಾಗೂ ನಿರಾಶ್ರಿತರ ನೆಲೆಯೂ ದಾಳಿಗೆ ಒಳಗಾಗಿದ್ದು, 60 ಮಂದಿ ಮೃತಪಟ್ಟಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಟೀಕೆಯ ಹೊರತಾಗಿಯೂ, ಹಮಾಸ್ ವಿರುದ್ಧ ಯುದ್ಧವನ್ನು ತೀವ್ರಗೊಳಿಸಲು ಇಸ್ರೇಲ್ ಒತ್ತು ನೀಡಿದೆ.

ಕಳೆದೊಂದು ವಾರದ ಸೇನಾ ಕಾರ್ಯಾಚರಣೆಯಲ್ಲಿ 300ಕ್ಕೂ ಅಧಿಕ ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ.

ವಿರೋಧ ಪಕ್ಷಗಳಿಂದ ಟೀಕೆ: ಗಾಜಾ ಪಟ್ಟಿ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಅಲ್ಲಿನ ವಿರೋಧ ಪಕ್ಷದ ಮುಖಂಡರು ಟೀಕಿಸಿದ್ದಾರೆ.

'ವಿವೇಕ ಹೊಂದಿದ ರಾಷ್ಟ್ರವು ನಾಗರಿಕರ ಮೇಲೆ ದಾಳಿ ನಡೆಸುವುದು, ಮಕ್ಕಳನ್ನು ಕೊಲ್ಲುವುದನ್ನೇ ಅಭ್ಯಾಸ ಮಾಡಿಕೊಳ್ಳುವುದಿಲ್ಲ' ಎಂದು ನಿವೃತ್ತ ಜನರಲ್ ಹಾಗೂ ವಿರೋಧ ಪಕ್ಷವಾದ ಡೆಮಾಕ್ರಟ್ಸ್ ಪಕ್ಷದ ನಾಯಕ ಯಾಯಿರ್ ಗೋಲನ್ ಟೀಕಿಸಿದ್ದಾರೆ.

ಸ್ವಲ್ಪ ನೆರವು ನೀಡಲು ಒಪ್ಪಿಗೆ: ಕಳೆದ ಎರಡೂವರೆ ತಿಂಗಳ ನಂತರ, ಗಾಜಾಪಟ್ಟಿಗೆ ಅಗತ್ಯ ಔಷಧ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಆಹಾರ ಪೂರೈಸಲು ಇಸ್ರೇಲ್ ಸರ್ಕಾರವು ಅನುಮತಿ ನೀಡಿದೆ. ಯುದ್ಧಪೀಡಿತ ಈ ಜಾಗದಲ್ಲಿ 20 ಲಕ್ಷಕ್ಕೂ ಅಧಿಕ ಮಂದಿ ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ.

'ಹಫೀಜ್, ಲಖ್ವಿಯನ್ನು ಭಾರತಕ್ಕೆ ಹಸ್ತಾಂತರಿಸಲಿ'

ಜೆರುಸಲೇಂ (ಪಿಟಿಐ): 'ಮುಂಬೈ ಭಯೋತ್ಪಾದಕ ದಾಳಿಯ ಆರೋಪಿ ತಹವ್ವುರ್ ಹುಸೇನ್ ರಾಣಾನನ್ನು ಅಮೆರಿಕವು ಭಾರತಕ್ಕೆ ಹಸ್ತಾಂತರಿಸಿತು. ಹಾಗೆಯೇ ಪಾಕಿಸ್ತಾನವು ಭಯೋತ್ಪಾದಕ ಹಫೀಜ್ ಸಯೀದ್, ಸಾಜಿದ್ ಮೀರ್, ಝಕಿಉರ್ ರೆಹಮಾನ್ ಲಖ್ವಿಯನ್ನು ಹಸ್ತಾಂತರ ಮಾಡಬೇಕು' ಎಂದು ಇಸ್ರೇಲ್‌ನ ಭಾರತದ ರಾಯಭಾರಿ ಜೆ.ಪಿ.ಸಿಂಗ್ ಒತ್ತಾಯಿಸಿದ್ದಾರೆ.

'ಭಯೋತ್ಪಾದನೆಯು ಜಾಗತಿಕ ಪಿಡುಗಾಗಿದ್ದು, ಅದನ್ನು ನಿಗ್ರಹಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಘಟಿತರಾಗಬೇಕಾದ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಇಸ್ರೇಲ್‌ನ 'ಐ24' ಸುದ್ದಿವಾಹಿನಿಗೆ ಸೋಮವಾರ ಸಂದರ್ಶನ ನೀಡಿ ಮಾತನಾಡಿದ ಅವರು, 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ, ಮುಗಿದಿಲ್ಲ' ಎಂದರು.



‘ಟೂರಿಸ್ಟ್ ಫ್ಯಾಮಿಲಿ’ಗೆ ರಾಜಮೌಳಿ ಶ್ಲಾಘನೆ

ನಿರ್ದೇಶಕ ರಾಜಮೌಳಿ ಸಣ್ಣ ಬಜೆಟ್‌ನ ತಮಿಳಿನ ‘ಟೂರಿಸ್ಟ್ ಫ್ಯಾಮಿಲಿ’ ಚಿತ್ರವನ್ನು ಶ್ಲಾಘಿಸಿದ್ದಾರೆ. ‘ಹೃದಯಕ್ಕೆ ಬೆಚ್ಚನೆ ಅನುಭವ ಕೊಡುವ, ಕಚಗುಳಿ ಇಡುವ ಹಾಸ್ಯಮಯ ಸಿನಿಮಾ. ಅತ್ಯುತ್ತಮ ಸಿನಿಮ್ಯಾಟಿಕ್ ಅನುಭವ’ ಎಂದು ಅವರು ‘ಎಕ್ಸ್’ನಲ್ಲಿ ಬರೆದಿದ್ದಾರೆ.

ಉಪ್ಪಿಗೆ ನವನೀತ್ ಆ್ಯಕ್ಷನ್ ಕಟ್

“ಸುಮಾರು ಎಂಟು ತಿಂಗಳಲ್ಲಿ ಈ ಸಿನಿಮಾವನ್ನು ಪೂರ್ಣಗೊಳಿಸುವ ಯೋಜನೆಯಿದೆ. ಹೆಚ್ಚಿನ ವಿಎಫ್‌ಎಕ್ಸ್ ಚಿತ್ರದಲ್ಲಿರಲಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲೂ ಚಿತ್ರೀಕರಣ ನಡೆಸುವ ಪ್ಲ್ಯಾನ್ ಇದೆ. ಸಾಧ್ಯವಾಗದೇ ಇದ್ದಲ್ಲಿ ಶ್ರೀಲಂಕಾದ ಕ್ರಿಕೆಟ್ ಮೈದಾನಗಳಲ್ಲಿ ಚಿತ್ರೀಕರಣ ನಡೆಯಲಿದೆ.”
–**ನವನೀತ್**, ನಿರ್ದೇಶಕ

‘ಯುಐ’ ಸಿನಿಮಾ ಬಳಿಕ ನಟ ಉಪೇಂದ್ರ ತಮಿಳಿನಲ್ಲಿ ‘ಕೂಲಿ’ ಚಿತ್ರ ಪೂರ್ಣಗೊಳಿಸಿ ಸದ್ಯ ರಾಮ್ ಪೋತಿನೇನಿ ನಟನೆಯ ತೆಲುಗು ಪ್ರಾಜೆಕ್ಟ್‌ನಲ್ಲಿ ತೊಡಗಿಸಿಕೊಂಡಿದ್ದಾರೆ. ಇದರ ಬೆನ್ನಲ್ಲೇ ಉಪೇಂದ್ರ ಅವರಿಗೆ ಆ್ಯಕ್ಷನ್ ಕಟ್ ಹೇಳಲು ‘ಕರ್ವ’ ಖ್ಯಾತಿಯ ನಿರ್ದೇಶಕ ನವನೀತ್ ಸಜ್ಜಾಗಿದ್ದಾರೆ. ಸಿನಿಮಾ ಜುಲೈನಲ್ಲಿ ಸೆಟ್ಟೇರಲಿದ್ದು ಮುಂದಿನ ವರ್ಷ ತೆರೆಗೆ ಬರಲಿದೆ.

ಹಾರರ್ ಜಾನರ್ ಮೂಲಕ ಗುರುತಿಸಿಕೊಂಡಿರುವ ನವನೀತ್ ಈ ವರ್ಷದ ಆರಂಭದಲ್ಲೇ ಶರಣ್ ಮುಖ್ಯಭೂಮಿಕೆಯಲ್ಲಿದ್ದ ‘ಛೂ ಮಂತರ್’ ಮೂಲಕ ಸದ್ದು ಮಾಡಿದ್ದರು. ಇದೀಗ ತಮ್ಮ ಹಳೆಯ ಜಾನರ್ ಬಿಟ್ಟು ತಿಳಿ ಹಾಸ್ಯದ ಮಿಶ್ರಣವಿರುವ ಸ್ಪೋರ್ಟ್ಸ್ ಡ್ರಾಮಾ ಕಥಾಹಂದರವನ್ನು ತೆರೆ ಮೇಲೆ ತರಲು ಮುಂದಾಗಿದ್ದಾರೆ. ಇದು ಇವರ ನಾಲ್ಕನೇ ಪ್ರಾಜೆಕ್ಟ್.

ಉಪ್ಪಿಯೇ ಸ್ಫೂರ್ತಿ

‘ನನ್ನ ಮೊದಲ ಸಿನಿಮಾ ಹಾರರ್ ಜಾನರ್‌ನಲ್ಲಿತ್ತು. ಇದಕ್ಕೆ ‘ಶ್’ ಸಿನಿಮಾವೇ ಸ್ಫೂರ್ತಿ. ಉಪೇಂದ್ರ ಅವರ ಸಿನಿಪಯಣದ ಹಾದಿಯಲ್ಲೇ ನಾನು ಹೆಜ್ಜೆ ಹಾಕುತ್ತಿದ್ದೇನೆ. ಸಿನಿಮಾದಲ್ಲಿ ಅವರು ತೆಗೆದುಕೊಳ್ಳುವ ಭಿನ್ನ ವಿಷಯಗಳು, ಕಥೆಯೊಳಗೆ ನೀಡುವ ತಿರುವುಗಳು ಹೀಗೆ ಅವರನ್ನೇ ಸ್ಫೂರ್ತಿಯಾಗಿಟ್ಟುಕೊಂಡು ನಾನು ನಿರ್ದೇಶನ ಮಾಡುತ್ತಿದ್ದೇನೆ. ಇದೀಗ ಅವರಿಗೇ ಆ್ಯಕ್ಷನ್ ಕಟ್ ಹೇಳುವ ಸಂದರ್ಭ ಬಂದಿದೆ. ಇದೊಂದು ಕನಸಿನ ಪ್ರಾಜೆಕ್ಟ್. ನನಗಿಷ್ಟವಾದ ಹೀರೊ, ನಿರ್ದೇಶಕನ ಜೊತೆಗೇ ಕೆಲಸ ಮಾಡುತ್ತಿರುವ ಉತ್ಸಾಹವಿದೆ. ಇಷ್ಟು ದಿನ ಅಭಿಮಾನಿಯಾಗಿದ್ದೆ ಹೌದು. ಇದೀಗ ಅಭಿಮಾನಿಯಾಗಿ ಅಲ್ಲ, ಅಭಿಮಾನಿಗಳಿಗೆ ಏನು ಬೇಕೋ ಅದನ್ನು ಚಿತ್ರದಲ್ಲಿ ನೀಡಲಿದ್ದೇನೆ. ನಾಲ್ಕು ವರ್ಷದ ಹಿಂದೆಯೇ ಉಪೇಂದ್ರ ಅವರಿಗೆ ಈ ಕಥೆ ಹೇಳಿದ್ದೆ. ಆಗ ಅವರು ‘ಯುಐ’ ಸಿದ್ಧತೆಯಲ್ಲಿದ್ದರು. ನಾನು ನಂತರದಲ್ಲಿ ‘ಛೂ ಮಂತರ್’ ಮಾಡಿದೆ. ಇದೀಗ ಕಥೆಯನ್ನು ಕೊಂಚ ಅಪ್‌ಡೇಟ್ ಮಾಡಿಕೊಂಡಿದ್ದೇನೆ. ಶೀಘ್ರದಲ್ಲೇ ಟೀಸರ್ ಶೂಟಿಂಗ್ ಮಾಡಲಿದ್ದೇನೆ. ಇದನ್ನು ಬಿಡುಗಡೆ ಮಾಡುವ ಮೂಲಕ ಮುಹೂರ್ತ ಮಾಡಲಿದ್ದೇವೆ’ ಎಂದರು ನವನೀತ್.

ಚಿತ್ರದಲ್ಲಿ ಕ್ರಿಕೆಟ್ ಕಥೆ

‘ಕನ್ನಡ ಚಿತ್ರರಂಗದಲ್ಲಿ ಕ್ರಿಕೆಟ್‌ಗೆ ಸಂಬಂಧಿಸಿದ ಕಥೆಗಳು ಬಂದಿಲ್ಲ. ನನ್ನ ಈ ಪ್ರಾಜೆಕ್ಟ್ ಕ್ರಿಕೆಟ್ ಮೇಲೆ ಇರಲಿದೆ. ಐಪಿಎಲ್ ಮಾದರಿಯ ಟೂರ್ನಮೆಂಟ್ ಇಲ್ಲಿ ಇರಲಿದೆ. ಉಪೇಂದ್ರ ಅವರ ಪಾತ್ರದ ಬಗ್ಗೆ ಟೀಸರ್ ಸಂದರ್ಭದಲ್ಲೇ ಹೇಳುತ್ತೇನೆ. ಹಿಂದೆಂದೂ ಮಾಡದ ಪಾತ್ರದಲ್ಲಿ ಉಪೇಂದ್ರ ಕಾಣಿಸಿಕೊಳ್ಳಲಿದ್ದಾರೆ. ಶ್ರೀಮಂತ ಉದ್ಯಮಿಯಾಗಿರುವ ವ್ಯಕ್ತಿಯೊಬ್ಬರ ಕ್ರಿಕೆಟ್ ಪ್ರೀತಿ ಚಿತ್ರದಲ್ಲಿರಲಿದೆ. ಉಪೇಂದ್ರ ಅವರು ಕ್ರಿಕೆಟ್ ಆಡುವುದನ್ನೂ ಚಿತ್ರದಲ್ಲಿ ಕಾಣಬಹುದು. ಹಿಂದಿಯಲ್ಲಿ ಕ್ರಿಕೆಟ್ ಆಟಗಾರರ ಬಯೋಪಿಕ್‌ಗಳು ಬಂದಿವೆ. ಆದರೆ ಇದು ಯಾರ ಬಯೋಪಿಕ್ ಅಲ್ಲ. ಇದೊಂದು ಕಾಲ್ಪನಿಕ ಕಥೆ. ರಾಜ್‌ಕುಮಾರ್ ಹಿರಾನಿಯವರ ಸಿನಿಮಾಗಳಂತೆ ಲೈಟ್ ಹಾರ್ಟೆಡ್ ಕಾಮಿಡಿ ಸಿನಿಮಾವಿದು. ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇರಲಿದೆ. ಬಹುತೇಕ ಎಲ್ಲರೂ ಕನ್ನಡದವರೇ ಆಗಿರುತ್ತಾರೆ’ ಎನ್ನುತ್ತಾರೆ ನವನೀತ್.

ನಾಲ್ಕು ವರ್ಷದ ಹಿಂದೆಯೇ ಉಪೇಂದ್ರಗೆ ಕಥೆ ಹೇಳಿದ್ದ ನವನೀತ್

ಟೀಸರ್ ಬಿಡುಗಡೆಯ ಜೊತೆಗೇ ಶೀರ್ಷಿಕೆ ಘೋಷಣೆ

ಉಪೇಂದ್ರ

‘ಕರಿಮಣಿ ಮಾಲೀಕ ನೀನಲ್ಲ’ ಟೀಸರ್

‘ಉಪೇಂದ್ರ’ ಸಿನಿಮಾದ ‘ಏನಿಲ್ಲ ಏನಿಲ್ಲ ಕರಿಮಣಿ ಮಾಲೀಕ ನೀ ನಲ್ಲ’ ಹಾಡು ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ಜನಪ್ರಿಯವಾಗಿತ್ತು. ಸಾಮಾಜಿಕ ಮಾಧ್ಯಮಗಳಲ್ಲಿ, ರೀಲ್ಸ್‌ಗಳ ಮೂಲಕ ಈ ಹಾಡು ಸಾಕಷ್ಟು ಹರಿದಾಡಿತ್ತು. ಈ ಜನಪ್ರಿಯ ಸಾಲನ್ನೇ ಶೀರ್ಷಿಕೆಯಾಗಿಸಿಕೊಂಡು ‘ಕರಿಮಣಿ ಮಾಲಿಕ ನೀನಲ್ಲ’ ಚಿತ್ರ ಸೆಟ್ಟೇರಿದ್ದು ಗೊತ್ತೇ ಇದೆ. ಇದೀಗ ಚಿತ್ರದ ಚಿತ್ರೀಕರಣ ಮುಕ್ತಾಯಗೊಂಡಿದ್ದು, ಇತ್ತೀಚೆಗಷ್ಟೇ ಟೀಸರ್ ಬಿಡುಗಡೆಗೊಂಡಿದೆ. ಚಂದ್ರು ಓಬಯ್ಯ ಈ ಚಿತ್ರದ ನಿರ್ದೇಶಕರು. ಅವರು ಈ ಹಿಂದೆ ‘ಯು ಟರ್ನ್ 2’ ಚಿತ್ರ ನಿರ್ದೇಶಿಸಿದ್ದರು. ಯುವ ನಟ ಮಾರುತಿಗೆ ರಮಿಕ ಸುತಾರ ಜೋಡಿಯಾಗಿದ್ದಾರೆ.

‘ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಇದು ನನ್ನ ನಿರ್ದೇಶನದ ಒಂಬತ್ತನೆ ಚಿತ್ರ. ಬೆಂಗಳೂರಿನಲ್ಲಿಯೇ ನಡೆದ ನೈಜಘಟನೆ ಆಧಾರಿತ ಚಿತ್ರ. ಎಳನೀರು ಮಾರುವ ಹುಡುಗ, ಹೂ ಮಾರುವ ಹುಡುಗಿ ನಡುವಿನ ನಡೆಯುವ ವಿಭಿನ್ನ ಪ್ರೇಮಕಥೆ ಇದಾಗಿದ್ದು, ಇವರಿಬ್ಬರ ನಡುವೆ ಮತ್ತೊಬ್ಬನ ಎಂಟ್ರಿ ಆಗುತ್ತೆ. ಇಲ್ಲಿ ನಾಯಕಿಯ ಕರಿಮಣಿ ಮಾಲೀಕ ಯಾರಾಗ್ತಾರೆ ಎಂಬುದೇ ಚಿತ್ರಕಥೆ. ನನ್ನ ಕಥೆಗೆ ಇದೇ ಟೈಟಲ್ ಸೂಕ್ತ ಎನಿಸಿ ಈ ಶೀರ್ಷಿಕೆ ಇಟ್ಟಿದ್ದೇನೆ. ಬೆಂಗಳೂರು ಸುತ್ತಮುತ್ತ 35 ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ. ಚಿತ್ರದ ಶೀರ್ಷಿಕೆ ಗೀತೆಯನ್ನು ಪಾವಗಡದ ನಿಡಗಲ್ ಬೆಟ್ಟದಲ್ಲಿ ಚಿತ್ರೀಕರಣ ಮಾಡಿದ್ದೇವೆ. ಮೂರು ಹಾಡುಗಳಿದ್ದು ಸಂಗೀತ ನಿರ್ದೇಶನ ಹಾಗೂ ಚಿತ್ರದ ನಿರ್ಮಾಣದ ಹೊಣೆ ನನ್ನದೇ’ ಎಂದರು ನಿರ್ದೇಶಕರು.

ಕಾಕ್ರೋಚ್ ಸುಧೀ, ಮೀನಾಕುಮಾರಿ, ಮೂಗು ಸುರೇಶ್, ರೇಖಾದಾಸ್ ಮುಂತಾದವರು ಚಿತ್ರದಲ್ಲಿದ್ದಾರೆ.

‘ವಾರ್ 2’ನಲ್ಲಿ ಖಳನಾದ ಜೂ.ಎನ್‌ಟಿಆರ್

2019ರಲ್ಲಿ ಹೃತಿಕ್ ರೋಷನ್ ಅಭಿನಯದ ‘ವಾರ್’ ಸಿನಿಮಾ ತೆರೆಕಂಡು ಭರ್ಜರಿ ಯಶಸ್ಸು ಗಳಿಸಿತ್ತು. ಇದೀಗ ‘ವಾರ್ 2’ ಚಿತ್ರ ಸಿದ್ಧಗೊಂಡಿದ್ದು, ಜೂನಿಯರ್ ಎನ್‌ಟಿಆರ್ ಜನ್ಮದಿನದ ಪ್ರಯುಕ್ತ ಚಿತ್ರದ ಟೀಸರ್ ಬಿಡುಗಡೆಗೊಂಡಿದೆ. ಅಂದಹಾಗೆ ಜೂನಿಯರ್ ಎನ್‌ಟಿಆರ್ ಈ ಚಿತ್ರದಲ್ಲಿ ಪ್ರಮುಖ ಖಳನಟನಾಗಿ ಗಮನ ಸೆಳೆದಿದ್ದಾರೆ. ಈತನಕ ನಾಯಕನಾಗಿ ಕಾಣಿಸಿಕೊಂಡಿದ್ದ ಜೂನಿಯರ್, ಮೊದಲ ಸಲ ವಿಲನ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಇದು ‘ವಾರ್’ ಚಿತ್ರದ ಮುಂದುವರಿದ ಭಾಗವಾಗಿದ್ದು, ಬಾಲಿವುಡ್‌ನ ಈ ವರ್ಷದ ಬಹುನಿರೀಕ್ಷಿತ ಚಿತ್ರ. ಯಶ್ ರಾಜ್ ಫಿಲ್ಮ್ಸ್ ಈ ಚಿತ್ರವನ್ನು ನಿರ್ಮಾಣ ಮಾಡಿದೆ. ‘ವಾರ್’ಗೆ ಸಿದ್ಧಾರ್ಥ್ ಆನಂದ್ ಆ್ಯಕ್ಷನ್ ಕಟ್ ಹೇಳಿದ್ದರು. ಈ ಚಿತ್ರಕ್ಕೆ ಅಯಾನ್ ಮುಖರ್ಜಿ ನಿರ್ದೇಶನವಿದೆ. ಟೀಸರ್‌ನಲ್ಲಿ ಭರಪೂರ ಆ್ಯಕ್ಷನ್ ದೃಶ್ಯಗಳಿವೆ. ಒಂದೂವರೆ ನಿಮಿಷದ ಟೀಸರ್‌ನಲ್ಲಿ ಹೃತಿಕ್ ಹಾಗೂ ಜೂನಿಯರ್ ಎನ್‌ಟಿಆರ್ ನಡುವಿನ ಹಣಾಹಣಿ ದೃಶ್ಯಗಳನ್ನೇ ಹೆಚ್ಚು ತೋರಿಸಲಾಗಿದೆ.

‘ಇದು ಆರಂಭ. ಸಿದ್ಧರಾಗಿರಿ. ಕರುಣೆಗಿಲ್ಲಿ ಜಾಗವಿಲ್ಲ, ನರಕಕ್ಕೆ ಸ್ವಾಗತ. ಆ.14ರಂದು ಚಿತ್ರ ತೆರೆಗೆ ಬರಲಿದೆ’ ಎಂದು ಹೃತಿಕ್ ರೋಷನ್ ತಮ್ಮ ಎಕ್ಸ್‌ನಲ್ಲಿ ಬರೆದಿದ್ದಾರೆ.

ಈ ಚಿತ್ರದಲ್ಲಿ ರಾ ಏಜೆಂಟ್ ಪಾತ್ರದಲ್ಲಿ ಹೃತಿಕ್ ರೋಷನ್ ಕಾಣಿಸಿಕೊಂಡಿದ್ದು, ಕಿಯಾರಾ ಅಡ್ವಾಣಿ ಅವರಿಗೆ ಜೋಡಿಯಾಗಿದ್ದಾರೆ. 2024ರಲ್ಲಿ ಚಿತ್ರ ಸೆಟ್ಟೇರಿತ್ತು. 150 ದಿನಗಳ ಕಾಲ 6 ದೇಶಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ವಿವಿಧ ದೇಶಗಳಲ್ಲಿ ಸಿನಿಮಾದ ಕಥೆ ಸಾಗಲಿದೆ ಎಂದಿದೆ ಚಿತ್ರತಂಡ.

ಕಿಯಾರಾ

ಮದ್ದು ಪರೀಕ್ಷೆಯಲ್ಲಿ ಸಿಲುಕಿದ ಜಾವೆಲಿನ್ ಎಸೆತಗಾರ ಶಿವಪಾಲ್

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ (2020) ಭಾಗವಹಿಸಿದ್ದ ಜಾವೆಲಿನ್ ಥ್ರೊ ಸ್ಪರ್ಧಿ ಶಿವಪಾಲ್ ಸಿಂಗ್ ತಮ್ಮ ವೃತ್ತಿಜೀವನದಲ್ಲಿ ಎರಡನೇ ಬಾರಿ ಡೋಪಿಂಗ್ ಪರೀಕ್ಷೆಯಲ್ಲಿ ಸಿಲುಕಿದ್ದಾರೆ. ಅವರು ದೋಷಿ ಎಂದು ಸಾಬೀತಾದಲ್ಲಿ ಗರಿಷ್ಠ ಎಂಟು ವರ್ಷಗಳ ನಿಷೇಧ ಅನುಭವಿಸಬೇಕಾಗುತ್ತದೆ.

29 ವರ್ಷ ವಯಸ್ಸಿನ ಶಿವಪಾಲ್ ಅವರಿಂದ ಈ ವರ್ಷದ ಆರಂಭದಲ್ಲಿ ಪಡೆದ ಮಾದರಿಯ ಫಲಿತಾಂಶ ‘ಪಾಸಿಟಿವ್’ ಆಗಿದೆ ಎನ್ನಲಾಗಿದೆ. ಮಾದರಿ ಪಡೆದಿದ್ದ ವೇಳೆ ಯಾವುದೇ ಸ್ಪರ್ಧೆಯಿರಲಿಲ್ಲ. ಆ ವೇಳೆ ಅವರು ಪಾಟಿಯಾಲದ ಎನ್‌ಐಎಸ್‌ನಲ್ಲಿ ತರಬೇತಿಯಲ್ಲಿದ್ದರು.

ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕವು (ನಾಡಾ) ಅವರ ಮೇಲೆ ತಾತ್ಕಾಲಿಕ ನಿಷೇಧ ಹೇರಿದೆ. ‘ಶಿವಪಾಲ್ ಅವರು ಮದ್ದು ಪರೀಕ್ಷೆಯಲ್ಲಿ ಸಿಲುಕಿರುವುದು ನಿಜ. ಡೋಪಿಂಗ್ ಪರೀಕ್ಷೆಯಲ್ಲಿ ಎರಡನೇ ಸಲ ಸಿಲುಕಿದ್ದಾರೆ’ ಎಂದು ಈ ಬೆಳವಣಿಗೆ ಬಲ್ಲ ಮೂಲವೊಂದು ಪಿಟಿಐಗೆ ತಿಳಿಸಿದೆ.

ಎರಡನೇ ಸಲದ ತಪ್ಪಿಗೆ ನಾಡಾ ಮತ್ತು ವಾಡಾ (ವಿಶ್ವ ಡೋಪಿಂಗ್ ತಡೆ ಘಟ) ನಿಯಮಗಳ ಪ್ರಕಾರ ಗರಿಷ್ಠ ಎಂಟು ವರ್ಷ ನಿಷೇಧ ವಿಧಿಸಲು ಅವಕಾಶವಿದೆ. ಈ ಹಿಂದೆ 2021ರಲ್ಲಿ ಅವರು ಮದ್ದುಸೇವನೆ ಮಾಡಿದ್ದು ಪತ್ತೆಯಾಗಿತ್ತು. ಆದರೆ ಇದು ತಮ್ಮಿಂದ ಆದ ತಪ್ಪಲ್ಲ ಎಂದು ಅವರ ಮನವಿ ಪರಿಗಣಿಸಿದ ನಾಡಾದ ಅಪೀಲು ಸಮಿತಿ ಈ ಶಿಕ್ಷೆಯನ್ನು ನಾಲ್ಕು ವರ್ಷದಿಂದ ಒಂದು ವರ್ಷಕ್ಕೆ ಇಳಿಸಿತ್ತು.

2019ರಲ್ಲಿ ದೋಹಾ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಶಿವಪಾಲ್ 86.23 ಮೀ. ಎಸೆತದೊಡನೆ ಬೆಳ್ಳಿ ಗೆದ್ದಿದ್ದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆ.

ವಿಶ್ವ ಟಿಟಿ ಚಾಂಪಿಯನ್‌ಷಿಪ್: ಠಕ್ಕರ್, ಮಣಿಕಾ, ಚಿತಳೆ ನಿರ್ಗಮನ

ಸಿಂಗಲ್ಸ್‌ನಲ್ಲಿ ಭಾರತದ ಸವಾಲು ಅಂತ್ಯ

ದೋಹಾ (ಪಿಟಿಐ): ಭಾರತದ ತಾರೆಯರಾದ ಮಾನವ್ ಠಕ್ಕರ್, ಮಣಿಕಾ ಬಾತ್ರಾ ಮತ್ತು ದಿಯಾ ಚಿತಳೆ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಹೊರಬಿದ್ದರು. ಈ ಮೂಲಕ ಸಿಂಗಲ್ಸ್ ಸ್ಪರ್ಧೆಯಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ.

ವಿಶ್ವದ 48ನೇ ಕ್ರಮಾಂಕದ ಮಾನವ್ 64ನೇ ಘಟ್ಟದ ಪಂದ್ಯದಲ್ಲಿ 11-13, 3-11, 11-9, 6-11, 11-9, 3-11 (2–4)ರಿಂದ ವಿಶ್ವದ 4ನೇ ರ‍್ಯಾಂಕ್‌ನ ಹರಿಮೊಟೊ ಟೊಮೊಕಾಜು ಅವರಿಗೆ ಪ್ರಬಲ ಪೈಪೋಟಿ ನೀಡಿ ಸೋಲೊಪ್ಪಿಕೊಂಡರು.

ಜಪಾನ್ ಆಟಗಾರ ಒಂದು ಹಂತದಲ್ಲಿ 2–0 ಗೇಮ್‌ಗಳ ಮುನ್ನಡೆ ಪಡೆದಿದ್ದರು. ಆದರೆ, ಮೂರನೇ ಮತ್ತು ಐದನೇ ಗೇಮ್‌ನಲ್ಲಿ 25 ವರ್ಷ ವಯಸ್ಸಿನ ಠಕ್ಕರ್ ಪಾರಮ್ಯ ಮೆರೆದು, ವಿರೋಚಿತ ಹೋರಾಟ ತೋರಿದರು.

ಮಹಿಳೆಯರ ಸಿಂಗಲ್ಸ್‌ನ ಪಂದ್ಯದಲ್ಲಿ ಅನುಭವಿ ಆಟಗಾರ್ತಿ ಮಣಿಕಾ ತನಗಿಂತ ಕೆಳ ಕ್ರಮಾಂಕದ ಆಟಗಾರ್ತಿಯ ಎದುರು ಮುಗ್ಗರಿಸಿದರು. 46ನೇ ಕ್ರಮಾಂಕದ ಮಣಿಕಾ 8-11, 7-11, 5-11, 8-11 (0–4)ರಿಂದ 130ನೇ ರ‍್ಯಾಂಕ್‌ನ ಪಾರ್ಕ್ ಗಹಿಯೋನ್ ಅವರಿಗೆ ಮಣಿದರು. ಮಣಿಕಾ ಅವರ ಬ್ಯಾಕ್‌ಹ್ಯಾಂಡ್ ಹೊಡೆತವನ್ನು ಸಲೀಸಾಗಿ ಎದುರಿಸಿದ ದಕ್ಷಿಣ ಕೊರಿಯಾ ಆಟಗಾರ್ತಿ ಗೆದ್ದು, 32ರ ಘಟ್ಟಕ್ಕೆ ಮುನ್ನಡೆದರು.

ಭಾರತದ ಮತ್ತೊಬ್ಬ ಆಟಗಾರ್ತಿ, 88ನೇ ರ‍್ಯಾಂಕ್‌ನ ದಿಯಾ 3-11, 7-11, 6-11, 11-6, 5-11 (1–4)ರಿಂದ ಚೀನಾ ತೈಪೆಯ ಚೆಂಗ್ ಐ ಚಿಂಗ್ ಅವರಿಗೆ ಶರಣಾದರು.

ಮಹಿಳೆಯರ ಡಬಲ್ಸ್‌ನಲ್ಲಿ ಕರ್ನಾಟಕದ ಯಶಸ್ವಿನಿ ಘೋರ್ಪಡೆ ಮತ್ತು ದಿಯಾ ಚಿತಳೆ ಪ್ರಿ ಕ್ವಾರ್ಟರ್ ಫೈನಲ್ ತಲುಪಿದ್ದು, ಟೂರ್ನಿಯಲ್ಲಿರುವ ಭಾರತದ ಕೊನೆಯ ಭರವಸೆಯಾಗಿದ್ದಾರೆ.

ಮಾನವ್ ಠಕ್ಕರ್

ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ

ಮುಖ್ಯಸುತ್ತಿಗೆ ಕಿದಂಬಿ ಅರ್ಹತೆ

ಕೌಲಾಲಂಪುರ (ಪಿಟಿಐ): ಭಾರತದ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮುಖ್ಯ ಸುತ್ತಿಗೆ ಅರ್ಹತೆ ಪಡೆದರು. ಆದರೆ, ಎಸ್.ಶಂಕರ್ ಮುತ್ತುಸಾಮಿ ಸುಬ್ರಮಣಿಯನ್ ಮತ್ತು ತರುಣ್ ಮನ್ನೇಪಲ್ಲಿ ಅವರು ಕ್ವಾಲಿಫೈಯರ್ ಹಂತವನ್ನು ದಾಟಲು ವಿಫಲವಾದರು.

32 ವರ್ಷ ವಯಸ್ಸಿನ ಕಿದಂಬಿ ಕ್ವಾಲಿಫೈಯರ್ ಹಂತದ ಎರಡನೇ ಪಂದ್ಯದಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 9-21, 21-12, 21-6 ರಿಂದ ಚೀನಾ ತೈಪೆಯ ಹುವಾಂಗ್ ಯು ಕೈ ಅವರನ್ನು ಮಣಿಸಿದರು.

2021ರ ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಕಿದಂಬಿ ಆರಂಭಿಕ ಸುತ್ತಿನಲ್ಲಿ ಚೀನಾ ತೈಪೆಯ ಮತ್ತೊಬ್ಬ ಆಟಗಾರ ಕುವೋ ಕುವಾನ್ ಲಿನ್ 21-8, 21-13 ಅವರನ್ನು ಹಿಮ್ಮೆಟ್ಟಿಸಿದ್ದರು. ಭಾರತದ ಆಟಗಾರನಿಗೆ ಪ್ರಧಾನ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಚೀನಾದ ಎಲ್.ಯು. ಗುವಾಂಗ್ ಜು ಎದುರಾಳಿಯಾಗಿದ್ದಾರೆ.

ತರುಣ್ 13-21, 21-23ರಿಂದ ಥಾಯ್ಲೆಂಡ್‌ನ ಪಣಿಚ್ಚಫೋನ್ ತೀರರತ್ಸಕುಲ್ ವಿರುದ್ಧ ಪರಾಭವಗೊಂಡರು. ಶಂಕರ್ ಮುತ್ತುಸಾಮಿ 20-22, 20-22ರಿಂದ ಚೀನಾದ ಝು ಕ್ಸುವಾನ್ ಚೆನ್ ವಿರುದ್ಧ ಸೋಲಿ ಅನುಭವಿಸಿದರು.

ಕಿದಂಬಿ ಶ್ರೀಕಾಂತ್

ಮಹಿಳೆಯರ ಸಿಂಗಲ್ಸ್ ಕ್ವಾಲಿಫೈಯರ್ ಸುತ್ತಿನಲ್ಲಿ ಯುವ ಆಟಗಾರ್ತಿ ಅನ್ಮೋಲ್ ಖಾರ್ಬ್ 14-21, 18-21 ರಿಂದ ತೈಪೆಯ ಹಂಗ್ ಯಿ-ಟಿಂಗ್ ವಿರುದ್ಧ ಮುಗ್ಗರಿಸಿದರು.

ನಗಾಲ್ ಶುಭಾರಂಭ



ಪ್ಯಾರಿಸ್ (ಪಿಟಿಐ): ಭಾರತದ ಟೆನಿಸ್ ತಾರೆ ಸುಮಿತ್ ನಗಾಲ್ ಅವರು ಫ್ರೆಂಚ್ ಓಪನ್‌ನ ಕ್ವಾಲಿಫೈಯರ್ ಸುತ್ತಿನಲ್ಲಿ ಶುಭಾರಂಭ ಮಾಡಿದ್ದಾರೆ.

27 ವರ್ಷ ವಯಸ್ಸಿನ ನಗಾಲ್ ಮಂಗಳವಾರ ನಡೆದ ಅರ್ಹತಾ ಸುತ್ತಿನ ಮೊದಲ ಪಂದ್ಯದಲ್ಲಿ 6–1, 6–1ರಿಂದ ಅಮೆರಿಕದ ಮಿಚೆಲ್ ಕ್ರೂಗರ್ ಅವರನ್ನು ಮಣಿಸಿದರು. ನಗಾಲ್‌ಗೆ ಗುರುವಾರ ನಡೆಯುವ ಅರ್ಹತಾ ಸುತ್ತಿನ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾದ ಜುರಿಜ್ ರೋಡಿಯೊನೊವ್ ಎದುರಾಳಿ.

ಅಡ್ರಿಯಾನ್ ಕರ್ಮಾಕರ್‌ಗೆ ಬೆಳ್ಳಿ

ಜೂನಿಯರ್ ವಿಶ್ವಕಪ್ ಶೂಟಿಂಗ್: ಯೊಹಾನ್ಸನ್‌ಗೆ ಚಿನ್ನ

ಝೂಲ್ (ಜರ್ಮನಿ), (ಪಿಟಿಐ): ಭಾರತದ ಅಡ್ರಿಯಾನ್ ಕರ್ಮಾಕರ್ ಅವರು ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಕಪ್ ಶೂಟಿಂಗ್ ಕೂಟದಲ್ಲಿ ಮಂಗಳವಾರ 50 ಮೀ. ರೈಫಲ್ ಪ್ರೋನ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು. ಆ ಮೂಲಕ ಭಾರತ ಈ ಕೂಟದಲ್ಲಿ ಸಕಾರಾತ್ಮಕ ಆರಂಭ ಪಡೆಯಿತು.

ರೈಫಲ್ 3ಪೊಷಿಷನ್ ಸ್ಪರ್ಧೆಯಲ್ಲಿ ರಾಷ್ಟ್ರೀಯ ಜೂನಿಯರ್ ಚಾಂಪಿಯನ್ ಆಗಿರುವ ಅಡ್ರಿಯಾನ್ ಇದು ಚೊಚ್ಚಲ ವಿಶ್ವಕಪ್ ಕೂಟ. 20 ವರ್ಷ ವಯಸ್ಸಿನ ಅವರು ಇಲ್ಲಿ 60 ಗುರಿಗಳ ನಂತರ 626.7 ಅಂಕ ಕಲೆಹಾಕಿದರು. ಕೇವಲ 0.3 ಪಾಯಿಂಟ್‌ಗಳಿಂದ ಅವರಿಗೆ ಚಿನ್ನ ಕೈತಪ್ಪಿತು. ಸ್ವೀಡನ್ ಜೆಸ್ಪರ್ ಯೊಹಾನ್ಸನ್ ಚಿನ್ನ ಗೆದ್ದರು. ಅಮೆರಿಕದ ಗ್ರಿಫಿನ್ ಲೇಕ್ (624.6) ಕಂಚಿನ ಪದಕ ಪಡೆದರು.

ಅಡ್ರಿಯಾನ್ ಕರ್ಮಾಕರ್

ಈ ಹಿಂದೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಜೂನಿಯರ್ ತಂಡ ಪ್ರತಿನಿಧಿಸಿದ್ದ ಅಡ್ರಿಯಾನ್, ವಿಶ್ವಕಪ್‌ನಲ್ಲಿ ಎಂದೂ ಪಾಲ್ಗೊಂಡಿರಲಿಲ್ಲ. ಆದರೆ ಇಲ್ಲಿ ಇತರ ಸ್ಪರ್ಧಿಗಳೆದುರು ವಿಶ್ವಾಸದಿಂದಲೇ ಕಣಕ್ಕಿಳಿದರು. ಇಲ್ಲಿ ಅವರ ಸಾಧನೆ ಜೂನಿಯರ್ ರಾಷ್ಟ್ರೀಯ ದಾಖಲೆ ಎನಿಸಿತು.

ಕಣದಲ್ಲಿದ್ದ ಭಾರತದ ಇತರ ಸ್ಪರ್ಧಿಗಳ ಪೈಕಿ, 15 ವರ್ಷ ವಯಸ್ಸಿನ ರೋಹಿತ್ ಕನ್ಯಾನ ಅವರು 620.2 ಸ್ಕೋರ್‌ನೊಡನೆ 12ನೇ ಸ್ಥಾನ ಗಳಿಸಿದರು. ವೇದಾಂತ ನಿತಿನ್ ವಾಗ್ಮೋರೆ (614.4) 35ನೇ ಸ್ಥಾನ ಪಡೆದರು.

ಲಖನೌ ಸ್ಪಿನ್ನರ್‌ಗೆ ದುಬಾರಿ ಆದ ಪ್ರಚೋದನಕಾರಿ ಸಂಭ್ರಮ

ಒಂದು ಪಂದ್ಯಕ್ಕೆ ದಿಗ್ವೇಶ್‌ಗೆ ಅಮಾನತು

ಲಖನೌ (ಪಿಟಿಐ): ‘ಟಿಕ್ ದಿ ನೋಟ್‌ಬುಕ್’ ಸಂಭ್ರಮವನ್ನು ಪ್ರಚೋದನಕಾರಿ ರೀತಿ ಆಚರಿಸಿದ ಲಖನೌ ಸೂಪರ್ ಜೈಂಟ್ಸ್ ಲೆಗ್ ಸ್ಪಿನ್ನರ್ ದಿಗ್ವೇಶ್ ರಾಠಿ ಅವರನ್ನು ಒಂದು ಪಂದ್ಯಕ್ಕೆ ಅಮಾನತು ಮಾಡಲಾಗಿದೆ. ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮಿಂಚಿನ ಅರ್ಧ ಶತಕ ಬಾರಿಸಿದ ಸನ್‌ರೈಸರ್ಸ್ ಆರಂಭ ಆಟಗಾರ ಅಭಿಷೇಕ್ ಶರ್ಮಾ ಅವರ ವಿಕೆಟ್ ಪಡೆದು ರಾಠಿ ಈ ಸಂಭ್ರಮ ಆಚರಿಸಿದ್ದರು.

ಇದೇ ವರ್ತನೆಗೆ ರಾಠಿ ಅವರಿಗೆ ವಾಗ್ದಂಡನೆ ವಿಧಿಸಲಾಗಿದೆ. ಜೊತೆಗೆ ಪಂದ್ಯ ಸಂಭಾವನೆಯ ಶೇ 25ರಷ್ಟು ದಂಡ ವಿಧಿಸಲಾಗಿದ್ದು, ಅವರ ಶಿಸ್ತಿನ ದಾಖಲೆಗೆ ಒಂದು ಡಿಮೆರಿಟ್ ಪಾಯಿಂಟ್ ಸಹ ಸೇರ್ಪಡೆ ಮಾಡಲಾಗಿದೆ.

25 ವರ್ಷ ವಯಸ್ಸಿನ ರಾಠಿ ಐಪಿಎಲ್ ಶಿಸ್ತುಸಂಹಿತೆ ಉಲ್ಲಂಘನೆ ಮಾಡುತ್ತಿರುವುದು ಮೂರನೇ ಸಲ. ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಐದನೇ ಡಿಮೆರಿಟ್ ಪಾಯಿಂಟ್ ಶೇಖರವಾದ ಕಾರಣ ಅವರು ಗುಜರಾತ್ ಟೈಟನ್ಸ್ ವಿರುದ್ಧ ನಡೆಯುವ ಲಖನೌದ ಮುಂದಿನ ಪಂದ್ಯಕ್ಕೆ ಅವರು ಆಡುವಂತಿಲ್ಲ ಎಂದು ಐಪಿಎಲ್ ಪ್ರಕಟಣೆ ತಿಳಿಸಿದೆ.

ದಿಗ್ವೇಶ್ ರಾಠಿ

ಈ ಋತುವಿನಲ್ಲಿ ನಿರಾಶೆ ಅನುಭವಿಸಿದ್ದ ಲಖನೌ ತಂಡಕ್ಕೆ ಅವರು ಏಕೈಕ ಬೆಳ್ಳಿರೇಖೆಯಾಗಿ ಕಂಡಿದ್ದರು. ಅವರು 12 ಪಂದ್ಯಗಳಿಂದ 8.18 ಇಕಾನಮಿ ದರದಲ್ಲಿ 14 ವಿಕೆಟ್ ಪಡೆದಿದ್ದರು.

ಅವರ ನೋಟ್‌ಬುಕ್ ಸಂಭ್ರಮ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಆದರೆ ಮ್ಯಾಚ್ ರೆಫ್ರಿಗಳು ಇದನ್ನು ಲಘುವಾಗಿ ಪರಿಗಣಿಸಿಲ್ಲ. ಸೋಮವಾರ ಅಭಿಷೇಕ್ ಕ್ಯಾಚ್ ಅನ್ನು ಶಾರ್ದೂಲ್ ಹಿಡಿದ ತಕ್ಷಣ ಪೆವಿಲಿಯನ್‌ಗೆ ಹೋಗು ಎನ್ನುವಂತೆ ಕೈಯಿಂದ ಸೂಚಿಸಿದ ದಿಗ್ವೇಶ್ ಏನೊ ಹೇಳಿದ್ದು, ಅಭಿಷೇಕ್ ಅವರನ್ನು ಕೆರಳಿಸಿತು. ಹಿಂದಕ್ಕೆ ಬಂದ ಅವರು ರಾಠಿ ಅವರತ್ತ ಗುರಾಯಿಸಿ ನೋಡಿದರು. ಅಂಪೈರ್ ಇಬ್ಬರನ್ನೂ ದೂರ ಮಾಡಿದರು.

ಏ.4ರಂದು ಆರಂಭವಾಗಿದ್ದ ‘ಫ್ರೀಸ್ಟೈಲ್ ಆನ್‌ಲೈನ್’ ಪಂದ್ಯ

ವಿಶ್ವ ತಂಡದ ಜೊತೆ ಡ್ರಾಕ್ಕೆ ಒಪ್ಪಿದ ಕಾರ್ಲ್‌ಸನ್

ಬರ್ಲಿನ್ (ಎಪಿ): ‘ಮ್ಯಾಗ್ನಸ್ ಕಾರ್ಲ್‌ಸನ್ vs ದಿ ವರ್ಲ್ಡ್’ ಹೆಸರಿನ ಹಣಾಹಣಿಯಲ್ಲಿ ನಾರ್ವೆಯ ದಿಗ್ಗಜ ಆಟಗಾರ ಸೋಮವಾರ ‘ಡ್ರಾ’ಕ್ಕೆ ಒಪ್ಪಿಕೊಳ್ಳಬೇಕಾಯಿತು. ವೆಬ್‌ಸೈಟ್ ‘ಚೆಸ್.ಕಾಮ್‌ನಲ್ಲಿ’ ನಡೆದ ಈ ‘ಫ್ರೀಸ್ಟೈಲ್ ಆನ್‌ಲೈನ್’ ಪಂದ್ಯದಲ್ಲಿ ಕಾರ್ಲ್‌ಸನ್ 1,43,000 ಜನರ ಜೊತೆ ಆಡಿದ್ದರು.

ಏ. 4ರಂದು ಈ ಪಂದ್ಯ ಆರಂಭವಾಗಿತ್ತು. ವಿಶ್ವ ತಂಡವು (ಟೀಮ್ ವರ್ಲ್ಡ್), ಕಾರ್ಲ್‌ಸನ್ ರಾಜನಿಗೆ ಮೂರನೇ ಸಲ ‘ಚೆಕ್’ ನೀಡಿದ ನಂತರ ಪಂದ್ಯವು ‘ನಡೆಗಳ ಪುನರಾವರ್ತನೆ’ (ರಿಪಿಟೇಶನ್ ಆಫ್ ಮೂವ್ಸ್) ಆಧಾರದಲ್ಲಿ ಡ್ರಾ ಆಯಿತು. ಚೆಸ್ ನಿಯಮದಂತೆ ಒಂದೇ ರೀತಿಯ ನಡೆ ಮೂರು ಸಲ ಪುನರಾವರ್ತನೆ ಆದಲ್ಲಿ ಅದನ್ನು ಡ್ರಾ ಎಂದು ಪರಿಗಣಿಸಲಾಗುತ್ತದೆ.

34 ವರ್ಷ ವಯಸ್ಸಿನ ಕಾರ್ಲ್‌ಸನ್ ಸುಲಭವಾಗಿ ಗೆಲ್ಲಬಹುದು ಎಂದು ಚೆಸ್.ಕಾಂ ಒಂದು ಹಂತದಲ್ಲಿ ಭವಿಷ್ಯ ನುಡಿದಿತ್ತು.

ವಿಶ್ವ ಚಾಂಪಿಯನ್ ಆಟಗಾರನೊಬ್ಬ ಆನ್‌ಲೈನ್‌ನಲ್ಲಿ ಫ್ರೀಸ್ಟೈಲ್ ಪಂದ್ಯ ಆಡಿದ ಮೊದಲ ದೃಷ್ಟಾಂತ ಇದು.

ಫ್ರೀಸ್ಟೈಲ್ ಚೆಸ್‌ನಲ್ಲಿ ಕೊನೆಯ ಸಾಲಿನಲ್ಲಿರುವ ಪಡೆಗಳು ಸಾಂಪ್ರದಾಯಿಕ ಸಂಯೋಜನೆಯಲ್ಲಿ (ಮಾಮೂಲಿ ಚೆಸ್ ಆಟದ) ಇರುವುದಿಲ್ಲ. ಅಂದರೆ ಬಿಷಪ್, ನೈಟ್, ರೂಕ್, ಕ್ವೀನ್, ಕಿಂಗ್ ಸ್ಥಾನಗಳು ಪಲ್ಲಟವಾಗಿರುತ್ತವೆ. ರೂಕ್ (ಆನೆ) ಸ್ಥಾನದಲ್ಲಿ ನೈಟ್ (ಕುದುರೆ), ಕ್ವೀನ್ ಸ್ಥಾನದಲ್ಲಿ ಬಿಷಪ್ (ರಥ) ಇರುತ್ತದೆ.

ಆದರೆ ಇವುಗಳ ಎದುರು ಕಾಲಾಳುಗಳ ಸಾಲು ಯಥಾಪ್ರಕಾರ ಇರುತ್ತದೆ. ಹೀಗಾಗಿ ಫ್ರೀಸ್ಟೈಲ್‌ನಲ್ಲಿ ಆಟಗಾರಿಗೆ ಸೈದ್ಧಾಂತಿಕ ಆಟದ ಬದಲು ಸೃಜನಶೀಲತೆಗೆ ಅವಕಾಶವಿದೆ. ಕಾರ್ಲ್‌ಸನ್ ಈ ರೀತಿಯ ಫ್ರೀಸ್ಟೈಲ್ ಆಟದ ಪ್ರಬಲ ಪ್ರತಿಪಾದಕರಾಗಿದ್ದಾರೆ.

ವಿಶ್ವ ತಂಡವು, ಮತದಾನದ ನೆರವು ಪಡೆದು ಉತ್ತಮ ಎನಿಸುವ ನಡೆಗಳನ್ನು ಇರಿಸುತಿತ್ತು. ಒಂದು ನಡೆಗೆ 24 ಗಂಟೆಗಳ ಅವಕಾಶವಿತ್ತು. ಕಾರ್ಲ್‌ಸನ್ ಬಿಳಿ ಕಾಯಿಗಳಲ್ಲಿ ಆಡಿದ್ದರು.

ಈ ಹಿಂದೆ 1999ರಲ್ಲಿ ರಷ್ಯಾದ ಗ್ಯಾರಿ ಕ್ಯಾಸ್ಪರೋವ್ ಅವರು ಮೈಕ್ರೊಸಾಫ್ಟ್ ನೆಟ್‌ವರ್ಕ್‌ನಲ್ಲಿ 50,000ಕ್ಕೂ ಹೆಚ್ಚು ಮಂದಿ ಜೊತೆ ಆಡಿದ್ದರು. ನಾಲ್ಕು ತಿಂಗಳ ನಂತರ ಜಯಿಸಿದ್ದರು.

2024ರಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಅವರು ‘ದಿ ವರ್ಲ್ಡ್’ ತಂಡದ ಜೊತೆ ಆಡಿದ್ದರು. ಚೆಸ್.ಕಾಂನಲ್ಲಿ ನಡೆದ ಈ ಪಂದ್ಯದಲ್ಲಿ 70,000 ಆಟಗಾರರು ಆಡಿದ್ದರು.

ಮ್ಯಾಗ್ನಸ್ ಕಾರ್ಲ್‌ಸನ್

ಹಾಕಿ ಇಂಡಿಯಾ ಲೀಗ್ ಜ.5ರಿಂದ

ನೊಯ್ಡಾ (ಪಿಟಿಐ): ಮುಂಬರುವ (2026ನೇ ಆವೃತ್ತಿಯ) ಹಾಕಿ ಇಂಡಿಯಾ ಲೀಗ್ ಜನವರಿ 5ರಂದು ಆರಂಭವಾಗಲಿದೆ ಎಂದು ಹಾಕಿ ಇಂಡಿಯಾ ಕಾರ್ಯದರ್ಶಿ ಭೋಲಾನಾಥ್ ಸಿಂಗ್ ಮಂಗಳವಾರ ಇಲ್ಲಿ ತಿಳಿಸಿದರು.

ಏಳು ವರ್ಷಗಳ ನಂತರ ಈ ಲೀಗ್ 2024ರಲ್ಲಿ ಮರುಜೀವ ಪಡೆದಿದ್ದು, ಡಿಸೆಂಬರ್ 28 ರಿಂದ ಫೆಬ್ರುವರಿ 1ರವರೆಗೆ ನಡೆದಿತ್ತು.

‘ಹಾಕಿ ಇಂಡಿಯಾ ಆಟಗಾರರ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ. ಪುರುಷರ ವಿಭಾಗದಲ್ಲಿ ಎಂಟು ತಂಡಗಳು ಭಾಗವಹಿಸಲಿವೆ. ಆದರೆ ಮಹಿಳೆಯರ ವಿಭಾಗದಲ್ಲಿ ಮುಂದಿನ ವರ್ಷದಿಂದ ಈಗಿನ ನಾಲ್ಕರ ಬದಲು ಆರು ತಂಡಗಳು ಪಾಲ್ಗೊಳ್ಳಲಿವೆ. ಪಂದ್ಯ ನಡೆಯುವ ಸ್ಥಳಗಳನ್ನು ಇನ್ನೂ ನಿರ್ಧರಿಸಿಲ್ಲ. ಭಾಗೀದಾರರ ಜೊತೆಗೆ ಚರ್ಚಿಸಿದ ನಂತರ ಇದರ ಬಗ್ಗೆ ತೀರ್ಮಾನಕ್ಕೆ ಬರಲಾಗುವುದು’ ಎಂದು ಅವರು ಹೇಳಿದರು.

ಹಾಕಿ ಇಂಡಿಯಾ ಮತ್ತು ಅಮಿಟಿ ಯುನಿವರ್ಸಿಟಿ ಆನ್‌ಲೈನ್ ಎಜುಕೇಷನ್ ನಡುವಣ ಒಡಂಬಡಿಕೆಗೆ ಸಹಿಹಾಕಿದ ನಂತರ ಅವರು ಮಾತನಾಡಿದರು.

ವಿದೇಶಿ ಆಟಗಾರರ ಭಾವನೆ, ಕ್ರಿಸ್ಮಸ್ ಆಚರಣೆ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಜನವರಿ 5ರಂದು ಎಚ್‌ಐಎಲ್ ಆರಂಭಿಸುವ ನಿರ್ಧಾರಕ್ಕೆ ಬಂದಿದ್ದೇವೆ. ಈ ಹಿಂದಿನ ಎಚ್‌ಐಎಲ್‌ನಲ್ಲಿ ಭಾಗವಹಿಸಿದ ಕೆಲವು ರಾಷ್ಟ್ರೀಯ ಮತ್ತು ವಿದೇಶಿ ಆಟಗಾರರಿಗೆ ಫ್ರಾಂಚೈಸಿಗಳಿಂದ ಬಾಕಿ ಬರಬೇಕಾಗಿದೆ ಎಂಬ ವರದಿಗಳನ್ನು ಅವರು ನಿರಾಕರಿಸಿದರು.

ಕೆಎಸ್‌ಸಿಎ ಉಪಾಧ್ಯಕ್ಷರಾಗಿ ಶ್ರೀರಾಮ್

ಪ್ರಜಾವಾಣಿ ವಾರ್ತೆ



ಕೆ. ಶ್ರೀರಾಮ್

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಉಪಾಧ್ಯಕ್ಷರಾಗಿ ಕೆ. ಶ್ರೀರಾಮ್ ಅವರು ಆಯ್ಕೆಯಾದರು.

ಈ ಮೊದಲು ಉಪಾಧ್ಯಕ್ಷರಾಗಿದ್ದ ಸಂಪತ್ ಕುಮಾರ್ ಅವರು ಈಚೆಗಷ್ಟೇ 70ನೇ ವಸಂತಕ್ಕೆ ಕಾಲಿಟ್ಟರು. ಬಿಸಿಸಿಐ ನಿಯಮಾವಳಿ ಪ್ರಕಾರ 70 ವರ್ಷ ಮೇಲ್ಪಟ್ಟವರು ಪದಾಧಿಕಾರಿಯಾಗಿ ಮುಂದುವರಿಯುವಂತಿಲ್ಲ. ಆದ್ದರಿಂದ ಸಂಪತ್ ಅವರು ಸ್ಥಾನದಿಂದ ನಿರ್ಗಮಿಸಿದರು.

‘ಉಪಾಧ್ಯಕ್ಷ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಡೆಯಿತು. ಶ್ರೀರಾಮ್ ಮತ್ತು ಉಮಾಮಹೇಶ್ವರ್ ಸ್ಪರ್ಧಿಸಿದ್ದರು. ಒಟ್ಟು 705 ಮತಗಳು ಚಲಾವಣೆಗೊಂಡವು. ಅದರಲ್ಲಿ ಶ್ರೀರಾಮ್ 516 ಮತ ಪಡೆದರೆ, ಉಮಾಮಹೇಶ್ವರ್ 189 ಮತ ಗಳಿಸಿದರು’ ಎಂದು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ‘ಪ್ರಜಾವಾಣಿ’ಗೆ ತಿಳಿಸಿದರು.

ಶ್ರೀರಾಮ್ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯ ಹಿರಿಯ ಪಿಚ್ ಕ್ಯುರೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

‘ಕೆಎಸ್‌ಸಿಎಗೂ ನನಗೂ ಬಾಲ್ಯದಿಂದಲೂ ನಂಟಿದೆ. ನನ್ನ ತಂದೆ ಕಸ್ತೂರಿರಂಗನ್ ಅವರು ಪಿಚ್ ನಿರ್ಮಾತೃವಾಗಿದ್ದರು. ಅವರು ಕೂಡ ಕೆಎಸ್‌ಸಿಎಗೆ ಉಪಾಧ್ಯಕ್ಷರಾಗಿದ್ದರು. ಈಗ ನನಗೂ ಆ ಗೌರವ ಲಭಿಸಿದೆ. ರಾಜ್ಯದ ಕ್ರಿಕೆಟ್‌ಗೆ ಮತ್ತಷ್ಟು ಉತ್ತಮ ಸೇವೆ ಸಲ್ಲಿಸಲು ನನಗೆ ಸದಸ್ಯರು ಅವಕಾಶ ಕೊಟ್ಟಿದ್ದಾರೆ’ ಎಂದು ಶ್ರೀರಾಮ್ ಸಂತಸ ವ್ಯಕ್ತಪಡಿಸಿದರು.

ಫೈನಲ್‌ಗೆ ಅಹಮದಾಬಾದ್ ಆತಿಥ್ಯ • ಮುಲ್ಲನಪುರದಲ್ಲಿ ಎರಡು ಪ್ಲೇಆಫ್ ಮುಖಾಮುಖಿ

ಬೆಂಗಳೂರು ಪಂದ್ಯ ಲಖನೌಗೆ ಸ್ಥಳಾಂತರ

ಪ್ರಜಾವಾಣಿ/ಪಿಟಿಐ

ಬೆಂಗಳೂರು: ಇಲ್ಲಿಯ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೇ 23ರಂದು ನಡೆಯಬೇಕಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ಪಂದ್ಯವನ್ನು ಲಖನೌಗೆ ಸ್ಥಳಾಂತರಿಸಲಾಗಿದೆ.

ಪಂದ್ಯದ ದಿನ ಬೆಂಗಳೂರಿನಲ್ಲಿ ಮಳೆ ಸುರಿಯುವ ಮುನ್ಸೂಚನೆ ಇರುವುದರಿಂದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಈ ನಿರ್ಧಾರ ಕೈಗೊಂಡಿದೆ. ಮೇ 17ರಂದು ಇಲ್ಲಿ ಆಯೋಜನೆಗೊಂಡಿದ್ದ ಆರ್‌ಸಿಬಿ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ಪಂದ್ಯ ಮಳೆಯಿಂದಾಗಿ ರದ್ದಾಗಿತ್ತು. ಉಭಯ ತಂಡಗಳಿಗೂ ತಲಾ ಒಂದು ಅಂಕ ಹಂಚಲಾಗಿತ್ತು.

ಈ ಕುರಿತು ಐಪಿಎಲ್ ಆಡಳಿತ ಸಮಿತಿ ಮತ್ತು ಬಿಸಿಸಿಐ ಪದಾಧಿಕಾರಿಗಳು ಸಮಾಲೋಚನೆ ನಡೆಸಿದ ನಂತರ ಈ ನಿರ್ಧಾರ ಕೈಗೊಂಡಿದ್ದಾರೆ. ಇದೇ ಸಂದರ್ಭದಲ್ಲಿ ಟೂರ್ನಿಯ ಪ್ಲೇ ಆಫ್ ಮತ್ತು ಫೈನಲ್ ಪಂದ್ಯದ ತಾಣಗಳನ್ನೂ ನಿರ್ಧರಿಸಲಾಗಿದೆ.

ಭಾರತ ಮತ್ತು ಪಾಕಿಸ್ತಾನ ಸೇನಾ ಸಂಘರ್ಷದಿಂದಾಗಿ ಮೇ 8ರಿಂದ 16ವರೆಗೆ ಐಪಿಎಲ್ ಟೂರ್ನಿಗೆ ಬಿಡುವು ನೀಡಲಾಗಿತ್ತು. ಪುನರಾರಂಭ ಹಂತದ ಮೊದಲ ಪಂದ್ಯವನ್ನು ಮೇ 17ರಂದು ಬೆಂಗಳೂರಿನಲ್ಲಿ ನಿಗದಿಪಡಿಲಾಗಿತ್ತು.

ಆರ್‌ಸಿಬಿ ತಂಡವು ಈಗಾಗಲೇ ಪ್ಲೇಆಫ್ ಹಂತಕ್ಕೆ ಪ್ರವೇಶಿಸಿದೆ. ಇನ್ನುಳಿದ ಎರಡೂ ಪಂದ್ಯಗಳಲ್ಲಿ ಗೆದ್ದು ಪಾಯಿಂಟ್ ಪಟ್ಟಿಯ ಅಗ್ರಸ್ಥಾನಕ್ಕೇರುವ ಛಲದಲ್ಲಿದೆ.

ಅಹಮದಾಬಾದ್‌ಗೆ ಫೈನಲ್: ಈ ಸಲದ ಐಪಿಎಲ್ ಟೂರ್ನಿಯ ಫೈನಲ್ ಪಂದ್ಯವನ್ನು ಅಹಮದಾಬಾದಿನಲ್ಲಿ ಜೂನ್ 3ರಂದು ನಡೆಸಲಾಗುವುದು. ಇದೇ ತಾಣದಲ್ಲಿ ಜೂನ್ 1ರಂದು ಎರಡನೇ ಕ್ವಾಲಿಫೈಯರ್ ಕೂಡ ನಡೆಯಲಿದೆ.

ಮೊದಲ ಕ್ವಾಲಿಫೈಯರ್ (ಮೇ 29) ಮತ್ತು ಎಲಿಮಿನೇಟರ್ (ಮೇ 30) ಪಂದ್ಯಗಳು ಚಂಡೀಗಡದ ಮುಲ್ಲನಪುರದಲ್ಲಿ ನಡೆಯಲಿವೆ.

2022 ಮತ್ತು 2023ರ ಆವೃತ್ತಿಯ ಫೈನಲ್‌ಗಳನ್ನು ಅಹಮದಾಬಾದಿನಲ್ಲಿ ಆಯೋಜಿಸಲಾಗಿತ್ತು.

'ಹವಾಮಾನ ಮುನ್ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಪಂದ್ಯಗಳ ತಾಣಗಳನ್ನು ನಿಗದಿಪಡಿಸಲಾಗಿದೆ. ಪ್ಲೇಆಫ್ ಹಂತ ಮತ್ತು ಮಂಗಳವಾರದಿಂದ ನಡೆಯುವ ಲೀಗ್ ಪಂದ್ಯಗಳಿಗೆ ಪ್ಲೇಯಿಂಗ್ ಕಂಡಿಷನ್ ನಿಯಮದಲ್ಲಿ ಒಂದು ಗಂಟೆ ಹೆಚ್ಚುವರಿ ಸಮಯವನ್ನು ನೀಡಲಾಗುತ್ತದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಮೊದಲಿನ ವೇಳಾಪಟ್ಟಿಯ ಪ್ರಕಾರ ಫೈನಲ್ ಪಂದ್ಯವು ಮೇ 25ರಂದು ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ನಡೆಯಬೇಕಿತ್ತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಆರ್‌ಸಿಬಿ ಹಾಗೂ ಕೆಕೆಆರ್ ತಂಡಗಳ ನಡುವಿನ ಪಂದ್ಯಕ್ಕೆ ಮಳೆ ಅಡ್ಡಿಯಾದ ಕಾರಣ ಅಭಿಮಾನಿಗಳಿಗೆ ನಿರಾಸೆಯಾಗಿತ್ತು ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- 23ರಂದು ಲಖನೌದಲ್ಲಿ ಆರ್‌ಸಿಬಿ–ಸನ್‌ರೈಸರ್ಸ್ ಮುಖಾಮುಖಿ
- ಅಹಮದಾಬಾದಿನಲ್ಲಿ ಜೂನ್ 3ರಂದು ಫೈನಲ್ ಹಣಾಹಣಿ
- ಮುಲ್ಲನಪುರದಲ್ಲಿ ಮೊದಲ ಕ್ವಾಲಿಫೈಯರ್, ಎಲಿಮಿನೇಟರ್

ಪ್ಲೇಆಫ್ ಸ್ಥಾನಕ್ಕೆ ಡೆಲ್ಲಿ, ಮುಂಬೈ ಕಣ್ಣು

ವಾಂಖೆಡೆ ಕ್ರೀಡಾಂಗಣದಲ್ಲಿ ಇಂದು ಮಹತ್ವದ ಹಣಾಹಣಿ

ಮುಂಬೈ (ಪಿಟಿಐ): ಐಪಿಎಲ್ ಟೂರ್ನಿಯ ಪ್ಲೇ ಆಫ್ ಹಂತಕ್ಕೆ ನಾಲ್ಕನೇ ತಂಡವಾಗಿ ಪ್ರವೇಶಿಸುವ ಪೈಪೋಟಿಯಲ್ಲಿರುವ ಮುಂಬೈ ಇಂಡಿಯನ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಬುಧವಾರ ಮುಖಾಮುಖಿಯಾಗಲಿವೆ.

ಐದು ಬಾರಿಯ ಚಾಂಪಿಯನ್ ಮುಂಬೈ ತಂಡವು ಸದ್ಯ 14 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ತಂಡವು 13 ಅಂಕಗಳೊಂದಿಗೆ ಐದನೇ ಸ್ಥಾನದಲ್ಲಿದೆ. ಉಭಯ ತಂಡಗಳ ಪಾಲಿಗೆ ತಲಾ ಎರಡು ಪಂದ್ಯಗಳು ಉಳಿದಿವೆ. ಅದರಲ್ಲಿ ಡೆಲ್ಲಿ ತಂಡವು ಎರಡೂ ಪಂದ್ಯಗಳನ್ನು ಗೆದ್ದರೆ ಪ್ಲೇ ಆಫ್ ಖಚಿತ. ಈ ಹಾದಿಯಲ್ಲಿ ಮೊದಲಿಗೆ ಡೆಲ್ಲಿ ತಂಡವು ಮುಂಬೈ ವಿರುದ್ಧ ನಂತರ ಪಂಜಾಬ್ ಕಿಂಗ್ಸ್ (ಮೇ 24) ವಿರುದ್ಧ ಜಯಿಸಬೇಕು. ಬುಧವಾರ ಒಂದೊಮ್ಮೆ ಡೆಲ್ಲಿ ಸೋತರೆ, ಮುಂಬೈ ಪ್ಲೇಆಫ್ ಪ್ರವೇಶ ಖಚಿತವಾಗಲಿದೆ. ಆದ್ದರಿಂದ ಮುಂಬೈ ಎದುರಿನ ಪಂದ್ಯವು ಡೆಲ್ಲಿಗೆ 'ಮಾಡು ಇಲ್ಲವೇ ಮಡಿ' ಎಂಬಂತಿದೆ.

ಡೆಲ್ಲಿ ತಂಡವು ತನ್ನ 12ನೇ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ವಿರುದ್ಧ ಗೆಲುವಿನ ಅವಕಾಶವನ್ನು ಕೈಚೆಲ್ಲಿತು. ಕೆ.ಎಲ್. ರಾಹುಲ್ ಶತಕದ ಬಲದಿಂದ 200ಕ್ಕೂ ಹೆಚ್ಚು ರನ್‌ಗಳ ಮೊತ್ತ ಗಳಿಸಿತ್ತು. ಆದರೆ ಗುಜರಾತ್ ತಂಡದ ಆರಂಭಿಕ ಜೋಡಿ ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಅವರನ್ನು ಕಟ್ಟಿಹಾಕುವಲ್ಲಿ ಡೆಲ್ಲಿ ಬೌಲರ್‌ಗಳು ವಿಫಲರಾದರು. ಅದರಿಂದಾಗಿ ಗುಜರಾತ್ 10 ವಿಕೆಟ್‌ಗಳ ಜಯ ಸಾಧಿಸಿ ಪ್ಲೇಆಫ್‌ಗೆ ಲಗ್ಗೆ ಇಟ್ಟಿತು.

ಮುಂಬೈ ವಿರುದ್ಧ ಗೆಲ್ಲಬೇಕಾದರೆ ಡೆಲ್ಲಿ ತಂಡವು ತನ್ನ ಬೌಲಿಂಗ್ ಪಡೆಯನ್ನು ಬಲಿಷ್ಠಗೊಳಿಸಿಕೊಳ್ಳುವುದು ಅನಿವಾರ್ಯ. ಏಕೆಂದರೆ; ಹಾರ್ದಿಕ್ ಪಾಂಡ್ಯ ಬಳಗದಲ್ಲಿ ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ನಮನ್ ಧೀರ್, ಜಾನಿ ಬೇಸ್ಟೊ, ರಿಚರ್ಡ್ ಗ್ಲೀಸನ್ ಮತ್ತು ಕಾರ್ಬಿನ್ ಬಾಷ್ ಅವರನ್ನು ಕಟ್ಟಿಹಾಕುವುದೇ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು. ಮುಂಬೈ ಬ್ಯಾಟಿಂಗ್ ಪಡೆ ಉತ್ತಮ ಲಯದಲ್ಲಿದೆ. ಬೌಲಿಂಗ್ ವಿಭಾಗವೂ ಚೆನ್ನಾಗಿದೆ. ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್, ಅಶ್ವಿನಿ ಕುಮಾರ್ ಮತ್ತು ದೀಪಕ್ ಚಾಹರ್ ಅವರು ವೇಗದ ವಿಭಾಗದ ಪ್ರಮುಖರು. ಅವರೊಂದಿಗೆ ಪಾಂಡ್ಯ ಕೂಡ ಇದ್ದಾರೆ. ಸ್ಪಿನ್–ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಕೂಡ ತಂಡದ ಗೆಲುವಿನ ರೂವಾರಿಯಾಗಬಲ್ಲ ಸಮರ್ಥರು.

ಡೆಲ್ಲಿ ತಂಡವು ಬೌಲಿಂಗ್‌ನಲ್ಲಿ ಸ್ಪಿನ್ನರ್ ಅಕ್ಷರ್ ಮತ್ತು ಕುಲದೀಪ್ ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ. ಟಿ. ನಟರಾಜನ್ ಮತ್ತು ಮುಸ್ತಫಿಜುರ್ ರೆಹಮಾನ್ ಅವರು ನಿರೀಕ್ಷೆಗೆ ತಕ್ಕ ಫಾರ್ಮ್‌ನಲ್ಲಿ ಇಲ್ಲ. ಆದ್ದರಿಂದ ಬ್ಯಾಟರ್‌ಗಳ ಪಾತ್ರವೇ ಪ್ರಮುಖವಾಗಲಿದೆ. ರಾಹುಲ್, ಫಾಫ್ ಡುಪ್ಲೆಸಿ, ಅಭಿಷೇಕ್ ಪೊರೆಲ್, ಟ್ರಿಸ್ಟನ್ ಸ್ಟಬ್ಸ್, ಆಶುತೋಷ್ ಶರ್ಮಾ ಹಾಗೂ ಆಲ್‌ರೌಂಡರ್ ವಿಪ್ರಜ್ ನಿಗಮ್ ಅವರ ಆಟವೇ ಪ್ರಮುಖವಾಗಲಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಕೆ.ಎಲ್. ರಾಹುಲ್

ಜಸ್‌ಪ್ರೀತ್ ಬೂಮ್ರಾ

ಇಂದು ಮುಂಬೈನಲ್ಲಿ ಮಳೆ ಸಾಧ್ಯತೆ

ಮುಂಬೈ (ಪಿಟಿಐ): ಬುಧವಾರ ಮುಂಬೈ ಮಹಾನಗರಿಯಲ್ಲಿ ಮಳೆ ಸುರಿಯುವ ಸಾಧ್ಯತೆ ಇದೆ.

'ಮಿಂಚು, ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ' ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇಲ್ಲಿ ನಡೆಯಲಿರುವ ಮುಂಬೈ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ಐಪಿಎಲ್ ಪಂದ್ಯಕ್ಕೆ ಮಳೆ ಅಡ್ಡಿಯಾಗುವ ಸಾಧ್ಯತೆ ಹೆಚ್ಚಿದೆ. ಮಂಗಳವಾರವೂ ಇಲ್ಲಿ ಮಳೆಯಾಗಿದ್ದರಿಂದ ವಾಂಖೆಡೆ ಕ್ರೀಡಾಂಗಣದಲ್ಲಿ ಉಭಯ ತಂಡಗಳ ಅಭ್ಯಾಸವನ್ನು ಮೊಟಕುಗೊಳಿಸಲಾಯಿತು.

ಮುಂಬೈಗೆ ಬೇಸ್ಟೊ, ಗ್ಲೀಸನ್, ಅಸಲಂಕ

ನವದೆಹಲಿ (ಪಿಟಿಐ): ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು, ಪ್ಲೇ ಆಫ್ ಹಂತದಿಂದ ಆಡುವ ತಂಡಕ್ಕೆ ಜಾನಿ ಬೇಸ್ಟೊ, ರಿಚರ್ಡ್ ಗ್ಲೀಸನ್ ಮತ್ತು ಚರಿತ್ ಅಸಲಂಕ ಅವರನ್ನು ಸೇರ್ಪಡೆ ಮಾಡಿಕೊಂಡಿದೆ.

ಮೇ 26ರಂದು ಪಂಜಾಬ್ ಕಿಂಗ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ ತನ್ನ ಕೊನೆಯ ಲೀಗ್ ಪಂದ್ಯ ಆಡಿದ ನಂತರ ವಿದೇಶಿ ಆಟಗಾರರಾದ– ಇಂಗ್ಲೆಂಡ್‌ನ ವಿಲ್ ಜಾಕ್ಸ್, ದಕ್ಷಿಣ ಆಫ್ರಿಕಾದ ರಿಯಾನ್ ರಿಕೆಲ್ಟನ್, ಕಾರ್ಬಿನ್ ಬಾಷ್ ಅವರು ತಮ್ಮ ತಮ್ಮ ರಾಷ್ಟ್ರೀಯ ತಂಡಗಳನ್ನು ಸೇರಿಕೊಳ್ಳಲಿದ್ದಾರೆ.

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಜಿಟಿ	12	9	3	0	18	0.795
ಆರ್‌ಸಿಬಿ	12	8	3	1	17	0.482
ಪಿಬಿಕೆಎಸ್	12	8	3	1	17	0.389
ಎಂಐ	12	7	5	0	14	1.156
ಡಿಸಿ	12	6	5	1	13	0.260
ಕೆಕೆಆರ್	13	5	6	2	12	0.193
ಎಲ್‌ಎಸ್‌ಜಿ	12	5	7	0	10	-0.506
ಎಸ್‌ಆರ್‌ಎಚ್	12	4	7	1	9	-1.005
ಆರ್‌ಆರ್	14	4	10	0	8	-0.549
ಸಿಎಸ್‌ಕೆ	13	3	10	0	6	-1.030

ಸೂರ್ಯವಂಶಿ ಬಿರುಸಿನ ಅರ್ಧಶತಕ • ಆಕಾಶ್, ಯುಧವೀರ್ ಮಿಂಚು • ಚೆನ್ನೈಗೆ ಸೋಲು

ಗೆಲುವಿನೊಂದಿಗೆ ರಾಯಲ್ಸ್ ಅಭಿಯಾನಕ್ಕೆ ತೆರೆ

ನವದೆಹಲಿ (ಪಿಟಿಐ): ಆಕಾಶ್ ಮಧ್ವಾಲ್ (29ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ಬಳಿಕ ಎಡಗೈ ಬ್ಯಾಟರ್, 14ರ ಪೋರ ವೈಭವ್ ಸೂರ್ಯವಂಶಿ (57; 33ಎ, 4x4, 6x4) ಅವರ ಬಿರುಸಿನ ಅರ್ಧಶತಕದ ನೆರವಿನಿಂದ ರಾಜಸ್ಥಾನ ರಾಯಲ್ಸ್ ತಂಡವು ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮಣಿಸಿತು.

ಈ ಪಂದ್ಯವು ಪ್ಲೇ ಆಫ್ ದೃಷ್ಟಿಯಿಂದ ಮಹತ್ವ ಹೊಂದಿರಲಿಲ್ಲ. ಆದರೆ, ಅಂಕಪಟ್ಟಿಯಲ್ಲಿ ತಳದಲ್ಲಿರುವ ತಂಡಗಳು ಕೊನೆಯ ಸ್ಥಾನವನ್ನು ತಪ್ಪಿಸಲು ನಡೆದ ಹೋರಾಟದಲ್ಲಿ ರಾಜಸ್ಥಾನ ಮೇಲುಗೈ ಸಾಧಿಸಿತು. ಹ್ಯಾಟ್ರಿಕ್ ಸೋಲು ಕಂಡಿದ್ದ ರಾಜಸ್ಥಾನ ತಂಡ ಈ ಗೆಲುವಿನೊಂದಿಗೆ ಐಪಿಎಲ್ ಹಾಲಿ ಆವೃತ್ತಿಯ ಅಭಿಯಾನವನ್ನು ಮುಗಿಸಿತು.

ಸಂಜು ಸ್ಯಾಮ್ಸನ್ ಬಳಗವು ಒಟ್ಟು 14 ಪಂದ್ಯಗಳಲ್ಲಿ ನಾಲ್ಕನ್ನು ಗೆದ್ದು, ಎಂಟು ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿ ಮುಂದುವರಿಯಿತು. ಚೆನ್ನೈ ತಂಡಕ್ಕೆ ಇನ್ನೊಂದು ಪಂದ್ಯ ಬಾಕಿಯಿದ್ದು, ಆರು ಅಂಕಗಳೊಂದಿಗೆ ಕೊನೆಯ ಸ್ಥಾನದಲ್ಲಿ ಉಳಿಯಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ರಾಯಲ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಚೆನ್ನೈ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 187 ರನ್ ಗಳಿಸಿತು. ಈ ಗುರಿಯನ್ನು ಬೆನ್ನಟ್ಟಿದ ರಾಜಸ್ಥಾನ ತಂಡವು 17 ಎಸೆತಗಳು ಬಾಕಿ ಇರುವಂತೆ 4 ವಿಕೆಟ್‌ಗೆ 188 ರನ್ ಗಳಿಸಿ ಗೆಲುವಿನ ನಗೆಬೀರಿತು.

ಆರಂಭಿಕ ಆಟಗಾರರಾದ ಯಶಸ್ವಿ ಜೈಸ್ವಾಲ್ (36;19ಎ) ಮತ್ತು ಸೂರ್ಯವಂಶಿ ಮೊದಲ ವಿಕೆಟ್‌ಗೆ 37 (22ಎಸೆತ) ರನ್ ಸೇರಿಸಿದರು. ಜೈಸ್ವಾಲ್ ನಿರ್ಗಮಿಸಿದ ಬಳಿಕ ಸೂರ್ಯವಂಶಿ ಅವರನ್ನು ಸೇರಿಕೊಂಡ ಸಂಜು (41;31ಎ, 4x3, 6x2) ಎಚ್ಚರಿಕೆಯ ಆಟವಾಡಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಅವರಿಬ್ಬರು 98 (59ಎ) ರನ್ ಗಳಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ನಂತರ ರಿಯಾನ್ ಪರಾಗ್ (3) ನಿರಾಸೆ ಮೂಡಿಸಿದರೂ ಧ್ರುವ ಜುರೇಲ್ (ಔಟಾಗದೇ 31;12ಎ, 4x2, 6x3) ಮತ್ತು ಶಿಮ್ರಾನ್ ಹೆಟ್ಮೆಯರ್ (ಔಟಾಗದೇ 12) ಕೊನೆಯಲ್ಲಿ ಅಬ್ಬರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಆಯುಷ್, ಬ್ರೆವಿಸ್ ಆಸರೆ: ಇದಕ್ಕೂ ಮೊದಲು ಆರಂಭಿಕ ಬ್ಯಾಟರ್ ಆಯುಷ್ ಮ್ಹಾತ್ರೆ (43;20ಎ, 4x8, 6x1) ಮತ್ತು ಡಿವಾಲ್ಡ್ ಬ್ರೆವಿಸ್ (42;25ಎ, 4x3, 6x3) ಅವರ ಬ್ಯಾಟಿಂಗ್ ನೆರವಿನಿಂದ ಚೆನ್ನೈ ತಂಡ ಹೋರಾಟದ ಮೊತ್ತ ಗಳಿಸಿತು.

ರಾಯಲ್ಸ್ ತಂಡದ ಯುಧವೀರ್ ಸಿಂಗ್ ಅವರು ಹಾಕಿದ ಎರಡನೇ ಓವರ್‌ನಲ್ಲಿ ಡೆವೊನ್ ಕಾನ್ವೆ ಮತ್ತು ಊರ್ವಿಲ್ ಪಟೇಲ್ ಅವರು ಔಟಾದರು. ಆಗ ತಂಡದ ಮೊತ್ತ 12 ರನ್ ಆಗಿತ್ತು. ಈ ಹಂತದಲ್ಲಿ ಆಯುಷ್ ಅವರು ಬೀಸಾಟವಾಡಿದರು. ಅದರಿಂದಾಗಿ ಪವರ್‌ಪ್ಲೇ ಹಂತದಲ್ಲಿ ತಂಡವು 68 ರನ್ ಗಳಿಸಲು ಸಾಧ್ಯವಾಯಿತು. ಆರನೇ ಓವರ್‌ನಲ್ಲಿ ತುಷಾರ್ ದೇಶಪಾಂಡೆ ಅವರು ಆಯುಷ್ ವಿಕೆಟ್ ಗಳಿಸಿ ಜೊತೆಯಾಟ ಮುರಿದರು.

ಒಂದು ಹಂತದಲ್ಲಿ 78 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಾಯಿತು. ಈ ಹಂತದಲ್ಲಿ ಜೊತೆಗೂಡಿದ ಬ್ರೆವಿಸ್ ಮತ್ತು ಶಿವಂ ದುಬೆ (39; 32ಎ, 4X2, 6X2) ಅವರು ತಂಡದ ಆತಂಕ ದೂರ ಮಾಡಿದರು. 6ನೇ ವಿಕೆಟ್ ಜೊತೆಯಾಟದಲ್ಲಿ 59 ರನ್ ಸೇರಿಸಿ ಚೇತರಿಕೆ ನೀಡಿದರು. ಬ್ರೆವಿಸ್ ಔಟಾದ ನಂತರ ದುಬೆ ತಮ್ಮ ಆಟದ ವೇಗ ಹೆಚ್ಚಿಸಿದರು. ಆಕಾಶ್ ಮಧ್ವಾಲ್ ಅವರು ಹಾಕಿದ ಕೊನೆಯ ಓವರ್‌ನಲ್ಲಿ ಶಿವಂ ಮತ್ತು ಧೋನಿ ಇಬ್ಬರೂ ಔಟಾದರು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 8ಕ್ಕೆ187 (ಆಯುಷ್ ಮ್ಹಾತ್ರೆ 43, ಡಿವಾಲ್ಡ್ ಬ್ರೆವಿಸ್ 42, ಯುಧವೀರ್ ಸಿಂಗ್ ಚರಕ್ 47ಕ್ಕೆ3, ಆಕಾಶ್ ಮಧ್ವಾಲ್ 29ಕ್ಕೆ3). ರಾಜಸ್ಥಾನ ರಾಯಲ್ಸ್: 17.1 ಓವರ್‌ಗಳಲ್ಲಿ 4ಕ್ಕೆ 188 (ಯಶಸ್ವಿ ಜೈಸ್ವಾಲ್ 36, ವೈಭವ್ ಸೂರ್ಯವಂಶಿ 57, ಸಂಜು ಸ್ಯಾಮ್ಸನ್ 41, ಧ್ರುವ ಜುರೇಲ್ ಔಟಾಗದೇ 31; ರವಿಚಂದ್ರನ್ ಅಶ್ವಿನ್ 41ಕ್ಕೆ 2). ಪಂದ್ಯದ ಆಟಗಾರ: ಆಕಾಶ್ ಮಧ್ವಾಲ್



ಅರ್ಧಶತಕ ಗಳಿಸಿದ ವೈಭವ್ ಸೂರ್ಯವಂಶಿ ಪಿಟಿಐ ಚಿತ್ರ

HONDA
The Power of Dreams
How we move you.
CREATE ▸ TRANSCEND, AUGMENT
Honda e:SWAP

Battery subscription so Lite, every ride feels right!

Get the Lite Plan
@ just ₹678*
per month
Honda. Who Else!?

ACTIVA e:
EX-showroom Price ₹ 117000/- onwards
Low ROI Starting from 6.99%**
Instant Cashback of ₹7500/-#
IDFC FIRST Bank CREDIT CARD#

*Terms and conditions apply. **The Rate of Interest, down payment and tenure options are based on the financier's assessment of the applicant's credit profile. **Approval of the loan is at the sole discretion of the financiers, and additional documentation may be required. **The above scheme can be withdrawn at any time without prior intimation. #Get Instant Cashback of Rs. 7500/- (Min transaction Rs. 75000) on all Electric Models. #Cashback Offer available on selected models for EMI transactions made using IDFC FIRST Bank credit cards through Pine Labs machines only. #Above scheme can be withdrawn at any time without prior intimation. All offers are valid until 31st May 2025. ^Avail the additional benefits of the Honda Care Plus package now priced at Rs. 9900/- including taxes. Products shown in the pictures may vary from actual products available in the market. Accessories shown in the pictures are not part of standard equipment. Available at selected dealership only.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorized Dealerships: BENGALURU: Ananda Honda (Bommanhalli) - 9035047666, 8951781219; Tansi Honda (Hoodi) - 8951185547, 7259030091; Saphire Honda (JP Nagar) - 7965003197, 8088615215; Silicon Honda (Basavangudi) - 8139905588, 9844842927; Raja Honda (Kormangala) - 9035310055, 8067329000; Dhruvdesh Honda (Mekri Circle) - 9343968414,9343968407; Haiku Honda (Intermediate Ring Road Domlur) - 9844406299, 9743111667; VFM Honda (KR Puram) - 9342107122, 8095110071; Prime Honda (Vijayanagar) - 9886729162, 8050503111; Springs Honda (Kengeri) - 9513771114, 9513777284; City Honda (St Johns Road) - 9449867082, 9449867085.
For Bulk/Institutional enquiries, please write us at: institutionalsales@honda.hmsi.in